ಸಂಪುಟ ೧೧
ಸಂಚಿಕೆ ೧

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ
೧೯೭೮

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ, ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ   ೩. ರಾಜ್ಯೋತ್ಸವ ಸಂಚಿಕೆ

೨. ಸಂಕ್ರಮಣ ಸಂಚಿಕೆ   ೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೯೦ (ಅಂಚೆವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦

(ಅಂಚೆವೆಚ್ಚ ರೂ. ೧-೩೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ)

ರಜತಮಹೋತ್ಸವ ಸಂಚಿಕೆಯ ಬೆಲೆ: ರೂ.೫-೦೦(ಅಂಚೆವೆಚ್ಚ ಪ್ರತ್ಯೇಕ)

ಹಣವನ್ನು ಡಿಮಾಂಡ್‌ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ **ಫಾಯನಾನ್ಸ್ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಿಕೊಡಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೧೧ ಸಂಚಿಕೆ : ೧

ಪ್ರಧಾನ ಸಂಪಾದಕರು
ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು
ಡಾ. ಕೆ. ಜಿ. ಶಾಸ್ತ್ರಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೧ ಸಂಚಿಕೆ : ೧

ಆಗಸ್ಟ ೧೯೭೮

ಸ್ವಾತಂತ್ರ್ಯೋತ್ಸವ ಸಂಚಿಕೆ

ಪ್ರಕಾಶಕರು :

ಶ್ರೀ ಸಿ. ಎಸ್. ಕಣವಿ

ನಿರ್ದೇಶಕರು,

ಪ್ರಸಾರಾಂಗ ವಿಸ್ತರಣ,ಪ್ರಕಟನ ವಿಭಾಗ,

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಜಿ. ಬಿ. ಮನ್ನಾಚಾರ,

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ.

ಪರಿವಿಡಿ

ಹುಟ್ಟಿನ ಬೇರು

● **ದೇವೇಂದ್ರಕುಮಾರ ಹಕಾರಿ**

ಅರಿವಳಿಕೆಗೊಂಡು, ಕಂಡರಿಯದ ಸೂಜಿ
ನಿನ್ನ ತಾಯ್ತನದ ನೆತ್ತಿಕುಕ್ಕಿ, ನೆತ್ತರುನೀರಾಗಿ ಹರಿದಾಗ
ಬೆಳ್ಳಕ್ಕಿ ಕುತ್ತಿಗೆಗೆ ಹಾವು ಕೊಕ್ಕೆಯ ಹಾಕಿ
ಮಿಸುಗುತಿರುವಂಥ ಕನಸು :
ಹಿಡಿದ ಕಾಜಿನಗಿಂಡಿ ಜಾರಿ ಫಳ್ಳೆಂದಿತ್ತು.
ತುಣುತುಣುಕು ಕನಸುಗಳ ಅಂಟಿಸುವ ಸಾಹಸವ
ನೋಡಿ ನಕ್ಕಿತ್ತು, ಮಣ್ಣುಗೂಡಿದ ಮನಸು.

ಸಿಡಿದೆದ್ದ ಸಹಸ್ರಜ್ವಾಲಾಮುಖಿ ಹೃದಯದಾಳಕ್ಕಿಳಿದು
ಕುದಿಯುತ್ತಿದೆ ನಿನ್ನ ಬಸಿರಲ್ಲಿ;
ಅಸ್ತಿತ್ವ ಅಲುಗಾಡಿ ಎದೆಬೆಂಕಿ ದ್ರವವಾಗಿ
ತುಳುಕುತ್ತಿದೆ ನಿನ್ನ ಮುಖದಲ್ಲಿ !
ಅಮೂರ್ತ ಜೀವದ ಶ್ವಾಸೋಚ್ಛ್ವಾಸ
ಬೆರೆತು ನಿನ್ನುಸಿರಲ್ಲಿ
ಬೇಗುದಿ ಹೆತ್ತ ಮುತ್ತಿನ ಮಾಲೆ ಬೋರಾಡಿ ಬಿಕ್ಕುತಿದೆ
ಉಕ್ಕುತಿದೆ ಕಡಲು, ಬಿಡು ಉಕ್ಕಲಿ !
ಎದೆಯ ಪಾತ್ರೆಯ ಹಿಡಿದು ಎಲ್ಲ ತುಂಬುತ್ತೇನೆ.
ನಿನ್ನ ನೋಡುವುದೆ ತಡ : ನನ್ನ ಅಸ್ತಿತ್ವವೇ ಒದ್ದೆ-ಮುದ್ದೆ.

ಆದಿಮಾನವ ಮೊದಲು, ನೆಲಕ್ಕ ಗುದ್ಲಿಯ ಹಾಕಿ ಮೀಟಿದಾಗಿನ
ನೋವು ಹೆಪ್ಪುಗಟ್ಟಿದೆ ನಿನ್ನ ಕಣ್ಣಲ್ಲಿ;
ಸಾವ ನುಂಗಿದ ಕರುಳಯಾತನೆಯ ದಂದಣೆ
ನಿನ್ನ ಕಣ್ಣಿನ ಸುತ್ತು ಕಪ್ಪು ಉಂಗುರಹೆಜ್ಜೆ
ಮೂಡಿ ಸುತ್ತುತ್ತಿದೆ !

ಒಡಲದಳ್ಳುರಿಯಲ್ಲಿ ದಟ್ಟಕಾಡಿನ ಹಸಿರ ಉರಿಸಬೇಡ !
ಹಸಿಬೆಂಕಿಹನಿಗಳನು ಸುರಿಸಬೇಡ !

ನನ್ನಪ್ಪ ನೀ ನನ್ನ ಅಕ್ಕ ತಂಗಿ,
ನೀನು ಹುಟ್ಟಿನ ಬೇರು !
ಮೃತ್ಯುಮೆರವಣಿಗೆಯಲಿ ವಿಜಯಕಲಶವ ಹಿಡಿದ
ಮುತ್ತೈದೆ !
ನಿಟ್ಟುಸಿರದಂಡಿಗೆಯ ಹಿಡಿದು ಭೂಮಂಡಲವ
ತೂಕಕ್ಕೆ ಇಟ್ಟರೂ.
ಹೊಸ ಹುಟ್ಟುಹಬ್ಬಕ್ಕೆ ಮನವ ತೆರೆದಿಟ್ಟವಳು !
ಕರಾಳ ಕತ್ತಲೆ ಹೂಳಿ, ನಕ್ಷತ್ರ ಸ್ವಪ್ನಗಳು ಅರಳಿ
ಕುಲುಕುಲು ನಗುವ ಮುಗಿಲಿನಂತೆ
ಕರೆವ ಮಣ್ಣಿನ ಬಸಿರ ಉಸಿರಲ್ಲಿ ಬೆರೆಯುತ್ತ
ಬೆಳಕು ಚಿಮ್ಮುವ ಬಟ್ಟಬಯಲಿನಂತೆ
ಎಲ್ಲವನ್ನೂ ನಿನ್ನ ಮೈಮನದ ಸ್ಪಂದನದಿ
ಸೆರೆಹಿಡಿದು ನಾದಿಕೋ !
ದಾರಿಯಿನ್ನೂದೂರ – ಚೆದುರಿರುವ ತುಣುಕುಗಳ
ಆಯ್ದುಕೋ ಮತ್ತೆ !
ಬದುಕು ಮಾಂತ್ರಿಕ ಗೋಲ, ಮರೆಯಬೇಡ;
ಹೆಜ್ಜೆಯಿಡು ಹೀಗೆಯೇ, ಕುರುಡು ತಿರುವುಗಳಲ್ಲಿ !
ಶಕುನ ನುಡಿಯುವ ಹಕ್ಕಿ, ಹರಳು ಮಂತ್ರಿಸಿಕೊಡುವ
'ಮುಪ್ಪಾನಮುದುಕ,'
ಏನಾದರೂ ಒಂದು, ಎಲ್ಲಾದರೂ ಒಮ್ಮೆ
ದಕ್ಕೀತು ಹಾದಿಯಲಿ !

• •

ಕರ್ನಾಟಕದಲ್ಲಿಯ ಪ್ರಾಕೃತಭಾಷಾ ಶಾಸನಗಳು

● ಎಸ್. ಕೆ. ಕೊಪ್ಪಾ

ಇಂದು ಹೊಸದೃಷ್ಟಿಕೋನದಿಂದ ಇತಿಹಾಸ ಬರೆಯುವವರಿಗೆ ನಮ್ಮ ನಾಡಿನ ಶಾಸನಗಳು ತುಂಬ ಪ್ರಯೋಜನಕಾರಿಯಾಗಿವೆ. ಬೃಹತ್ತು ಮಹತ್ತುಗಳಿಂದ ಭಾರತದಲ್ಲಿ ದ್ವಿತೀಯ ಸ್ಥಾನ ಗಳಿಸಿದ ಕರ್ನಾಟಕ ಶಾಸನಪ್ರಪಂಚದ ಇತಿಹಾಸ ಎರಡು ಸಾವಿರ ವರ್ಷಗಳಾಚೆಯಿಂದ ಪ್ರಾರಂಭವಾಗುತ್ತದೆ. ಈ ಸುದೀರ್ಘ ಕಾಲವು ಪ್ರಾಕೃತ ಸಂಸ್ಕೃತ ಮತ್ತು ಕನ್ನಡ ಶಾಸನಗಳನ್ನೊಳಗೊಂಡಿದೆ. ಅಶೋಕನಿಂದ ಈ ಚಂಯ ಹಲ್ಮಿಡಿ ಶಾಸನದ ಆಚೆಯ ಕಾಲವನ್ನು ಶಾಸನಗಳ ದೃಷ್ಟಿಯಿಂದ ಪ್ರಾಕೃತಯುಗವೆಂದು, ಕರೆಯಲಾಗುತ್ತದೆ. ಪ್ರಸ್ತುತ ಲೇಖನ ಈ ಪ್ರಾಕೃತಯುಗದ ಶಾಸನಗಳನ್ನು ಸಮೀಕ್ಷಿಸುವ ಒಂದು ಪ್ರಯತ್ನ.

ಕರ್ನಾಟಕಕ್ಕೆ ಪ್ರಾಕೃತದ ಸಂಬಂಧ ಬಹಳ ಹಳೆಯದು. ವೈಯಾಕರಣಿ ಮಾರ್ಕಂಡೇಯ ಪ್ರಾಕೃತಭಾಷೆಯ ಇಪ್ಪತ್ತೇಳು ವಿಧಗಳನ್ನು ಹೇಳುತ್ತ ಅದರಲ್ಲಿ 'ಕರ್ನಾಟ' ಎಂಬುದನ್ನು ಸೇರಿಸಿದ್ದಾನಂತೆ ![೧]. ೧೦ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ರಾಜಶೇಖರ ತನ್ನ ಕಾವ್ಯಮೀಮಾಂಸೆಯಲ್ಲಿ ಕುಂತಳ ಶಾತವಾಹನ ಅರಸನೊಬ್ಬನು ಅಂತಃಪುರದಲ್ಲಿ 'ಪ್ರಾಕೃತ ಭಾಷಾತ್ಮಕ'ವನ್ನು ಪ್ರಯೋಗಿಸಬೇಕೆಂಬ ನಿಯಮ ಜಾರಿಗೆ ತಂದನೆಂದಿದ್ದಾನೆ. ಇಲ್ಲಿ 'ಪ್ರಾಕೃತ ಭಾಷಾತ್ಮಕ'ವೆಂದರೆ ಪ್ರಾಕೃತ ಭೂಯಿಷ್ಠ ಸ್ಥಳೀಯ ಭಾಷೆಯೆಂಬ ಅರ್ಥಬರುತ್ತದೆ; ಆದ್ದರಿಂದ ಅದು ಕನ್ನಡವಾಗಿರಬೇಕೆನ್ನುವ ಅಭಿಪ್ರಾಯವೂ ಇದೆ.[೨] ಇನ್ನು ಚಾಲುಕ್ಯ ವಿಜಯಾದಿತ್ಯನಿಗೆ ಸೇರಿದ ಕ್ರಿ. ಶ. ೭ನೆಯ ಶತಮಾನದ ಬಾದಾಮಿ ಶಾಸನವೊಂದು[೩] ಸಂಸ್ಕೃತದಲ್ಲಿ ಪ್ರಾರಂಭವಾಗಿ "ಪ್ರಾಕೃತ ಭಾಷಯಾ ವರ್ಣ್ಯಾನ್ಯೇತಾನಿ ದತ್ತಾನಿ ಸುಚ್ಛಾನಿ......" ಎಂದು ಮುಂದೆ ಕನ್ನಡದಲ್ಲಿ ಮುಂದುವರೆಯುತ್ತದೆ. ಇಲ್ಲಿಯ ಕನ್ನಡ ಭಾಗವನ್ನೇ ಆ ಶಾಸನ

೧. ಡಿ. ಎಲ್. ನರಸಿಂಹಾಚಾರ್ : ಪೀಠಿಕೆಗಳು. ಲೇಖನಗಳು. ಪು. ೯೮೦.

೨. ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ (ಮೈಸೂರು), ಸಂ. ೨. ಪು. ೩೦೭.

೩. Karnatak Inscriptions, Vol. I, No. 2.

ಪ್ರಾಕೃತವೆಂದು ಕರೆದಿದೆ. ಇದರಿಂದ ಬಹುಶಃ ಸಂಸ್ಕೃತೇತರ ಅಥವಾ ಇನ್ನೂ ಗ್ರಂಥಸ್ಥವಾಗದ ಭಾಷೆಗಳನ್ನು ಅಂದು ಪ್ರಾಕೃತವೆಂದು ಕರೆಯುತ್ತಿದ್ದಂತೆ ಕಂಡುಬರುತ್ತದೆ. ಇಲ್ಲವೆ, ಪ್ರಾರಂಭದಲ್ಲಿ ಕನ್ನಡಕ್ಕೊಂದು ಪ್ರಮುಖಸ್ಥಾನ ಕಲ್ಪಿಸಿಕೊಟ್ಟ ಜೈನರ ಬಹುಮುಖ ಸಾಹಿತ್ಯ ವ್ಯವಸಾಯದ ಪರಿಣಾಮದಿಂದಾಗಿ, ದ್ರಾವಿಡಮೂಲ ಪ್ರಾರಂಭದ ಕನ್ನಡ ಶಬ್ದಗಳು ಪ್ರಾಕೃತ ಪ್ರಭಾವಕ್ಕೆ ಸಿಲುಕಿ ಅದೂ ಪ್ರಾಕೃತದ ಒಂದು ಪ್ರಭೇದವೆನ್ನುವ ಭ್ರಮೆಯನ್ನು ಅಂದಿನ ಜನರಲ್ಲುಂಟುಮಾಡಿರಲೂ ಬೇಕು. ಮುಂದೆ 'ದೇಶಿ'ಯೆಂಬ ವೇಷದಲ್ಲಿ ಮತ್ತೆ ಅವು ಮರಳಿ ಪ್ರವೇಶಪಡೆದಿದ್ದನ್ನು ಗಮನಿಸಿದಾಗ ಈ ಮಾತಿನ ಸತ್ಯ ವೇದ್ಯವಾಗುತ್ತದೆ. ಹೀಗೆ ಕನ್ನಡದೊಡನೆ ನಿಕಟ ಸಂಬಂಧ ಪಡೆದ ಪ್ರಾಕೃತಭಾಷೆ ಇಲ್ಲಿಗೆ ಯಾವಾಗ ಬಂದಿತೆಂದು ಹೇಳುವುದು ಕಷ್ಟವಾದರೂ, ದ್ರಾವಿಡ ಭಾಷೆಗಳನ್ನಾಡುವ ಮತ್ತು ಇಂಡೊ–ಆರ್ಯನ್ ಭಾಷೆಗಳನ್ನಾಡುವ ಜನರು ಪರಸ್ಪರ ಸಂಪರ್ಕ ಪಡೆದ ಕಾಲದಷ್ಟೇ ಅದು ಹಿಂದಿನದು ಎಂದು ಡಾ. ಆ. ನೆ. ಉಪಾಧ್ಯೆಯವರು ಅಭಿಪ್ರಾಯ ಪಟ್ಟಿದ್ದಾರೆ.[೪]

ಈಗ ತಿಳಿದಮಟ್ಟಿಗೆ ಕರ್ನಾಟಕದಲ್ಲಿ ದೊರಕಿರುವ ಮೊದಲ ಬರಹಗಳು ಕ್ರಿ. ಪೂ. ೩ನೆಯ ಶತಮಾನದ ಬ್ರಾಹ್ಮಿಲಿಪಿಯಲ್ಲಿರುವ ಪ್ರಾಕೃತಭಾಷೆಯ ಅಶೋಕನ ಶಿಲಾಶಾಸನಗಳು. ನೇರ ಮತ್ತು ಸರಳ ಮಾತಿನಲ್ಲಿ ವಿಶ್ವಸಂದೇಶವನ್ನು ಬೋಧಿಸುವ ಈ ಧರ್ಮಲಿಪಿಗಳ ಭಾಷೆಯನ್ನು ಗಮನಿಸಿದಾಗ ಅದು ಆ ಕಾಲಕ್ಕ ಈ ಭಾಗದಲ್ಲಿ ಸರ್ವಸಾಮಾನ್ಯವಾಗಿರಬೇಕೆನ್ನಿಸುತ್ತದೆ. ಇಂದು ದೇಶದ ತುಂಬೆಲ್ಲ ದೊರೆತ ಅಶೋಕನ ಶಾಸನಗಳನ್ನು ವಿಷಯ ವೈವಿಧ್ಯ ಮತ್ತು ಅವುಗಳ ಸ್ವರೂಪ ದೃಷ್ಟಿಯಿಂದ ವರ್ಗೀಕರಿಸಲಾಗಿದ್ದು, ಕರ್ನಾಟಕದಲ್ಲಿ ಈವರೆಗೆ ದೊರೆತ ಆತನ ಶಾಸನಗಳನ್ನು ಸಾಧಾರಣ ಶಿಲಾಲೇಖ (Minor Rock Edicts) ಗಳ ಗುಂಪಿಗೆ ಸೇರಿಸಲಾಗಿದೆ. ಅಶೋಕನ ಶಾಸನಗಳೆಲ್ಲ ಅಂಥ ಶಿಲಾಶಾಸನಗಳೇ ಮೊದಲು ಕೆತ್ತಲ್ಪಟ್ಟಿವೆಯೆಂದೂ (ಕ್ರಿ. ಪೂ. ೨೫೯–೨೫೬) ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಕರ್ನಾಟಕದಲ್ಲಿ ದೊರೆತ ಈ ಬಗೆಯ ಶಾಸನಗಳು ಇಂತಿವೆ :—

೧. ಬ್ರಹ್ಮಗಿರಿ
೨. ಸಿದ್ಧಾಪುರ
೩. ಜಟಿಂಗರಾಮೇಶ್ವರ
(ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು.)

೪. ಮಸ್ಕಿ
೫. ಗವಿಮಠ
೬. ಪಾಲ್ಕಿಗುಂಡ
(ರಾಯಚೂರು ಜಿಲ್ಲೆಯ ಲಿಂಗಸೂರು ಮತ್ತು ಕೊಪ್ಪಳ ತಾಲ್ಲೂಕು.)

---

೪. ಕರ್ನಾಟಕ ಪರಂಪರೆ, ಸಂ. ೧, ಪು. ೫೬೩.

೭. ಸಿಟ್ಟೂರು
೮. ಸಿಟ್ಟೂರು
೯. ಉದೆಗೊಲ್ಲ
೧೦. ಉದೆಗೊಲ್ಲ
} ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲ್ಲೂಕು.

ಈ ಶಾಸನಗಳ ವಿಷಯಾನುಕ್ರಮಣಿಕೆ ಹೆಚ್ಚುಕಡಿಮೆ ಒಂದೇ ರೀತಿಯಾಗಿದ್ದು, ಅವು ಅಶೋಕ ಮಹಾರಾಜನು ಎರಡೂವರೆ ವರ್ಷಗಳಿಂದ (ಶಾಸನ ಬರೆಸುವ ಮೊದಲು) ಧರ್ಮೋಪಾಸಕನಾಗಿ. ಅದರಲ್ಲಿಯೂ ಒಂದೂವರೆ ವರ್ಷಗಳಿಂದ ಸಂಘವನ್ನು ಸೇರಿ ವಿಶೇಷ ಶ್ರದ್ಧೆಯಿಂದ ೨೫೬ ದಿನಗಳನ್ನು ಧರ್ಮಪ್ರಸಾರ ಯಾತ್ರೆಯಲ್ಲಿ ಕಳೆದದ್ದನ್ನೂ. ಜೊತೆಗೆ ತನ್ನ ಗಡಿನಾಡಿನ ಉನ್ನತ ಮತ್ತು ನಿಮ್ನವರ್ಗದ ಜನಾಂಗವು ಧರ್ಮಾಸಕ್ತರಾಗಬೇಕೆನ್ನುವ ಅವನ ತೀವ್ರಹಂಬಲವನ್ನೂ ತಿಳಿಸುತ್ತವೆ. ಸದ್ಧರ್ಮಕ್ಕಾಗಿ ಕರೆಕೊಡುವ ಈ ಧರ್ಮಶಾಸನಗಳ ಪರಮೋದ್ದೇಶ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಪ್ರಸಾರ.

ಇಲ್ಲಿಯ ಶಾಸನಗಳಿಂದ ಕರ್ನಾಟಕ ಅಂದು ಮೌರ್ಯ ಸಾಮ್ರಾಜ್ಯದ ಪ್ರಮುಖ ಭಾಗವಾಗಿತ್ತೆಂಬ ಅಂಶ ಖಚಿತಗೊಳ್ಳುತ್ತದೆ. ಅಲ್ಲದೆ ಇಲ್ಲಿಯ ಶಾಸನಗಳೆಲ್ಲ ತಮ್ಮದೇ ಆದ ವೈಶಿಷ್ಟ್ಯದಿಂದ ಕೂಡಿವೆ. ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ. ಸಿದ್ದಾಪುರ ಮತ್ತು ಜಟಿಂಗರಾಮೇಶ್ವರ ಶಾಸನಗಳು[೫] "ಸುವಂಣ ಗಿರೀತೇ ಅಯಪುತಸ ಮಹಾಮಾತಾಣಂ ಚ ವಚನೇನ ಇಸಿಲಸಿ ಮಹಾಮಾತಾ ಆರೋಗಿಯಂ ವತವಿಯಾ ಹೇವಂ ಚ ವತವಿಯಾ" – ಎಂದು ಪ್ರಾರಂಭವಾಗುತ್ತದೆ. ಇಲ್ಲಿ ಅಶೋಕನ ಆಜ್ಞೆಯು ಸುವರ್ಣಗಿರಿಯಲ್ಲಿರುವ ಆರ್ಯಪುತ್ರ ಮತ್ತು ಮಹಾಮಾತ್ರರ ಮೂಲಕ ಇಸಿಲದಲ್ಲಿರುವ ಮಹಾಮಾತ್ರರಿಗೆ ತಿಳಿಸಲ್ಪಟ್ಟಿದೆ. ಈ ಅಧಿಕಾರಿಗಳ ಅಧಿಕಾರಸ್ವರೂಪ. ಕಾರ್ಯವ್ಯಾಪ್ತಿ ಎಂಥದೆಂಬುದು ಇಲ್ಲಿಯ ಶಾಸನಗಳಿಂದ ತಿಳಿಯುವುದಿಲ್ಲವಾದರೂ. ಸಾಮಾನ್ಯವಾಗಿ ರಾಜಕೀಯ ದೃಷ್ಟಿಯಿಂದ ಪ್ರಮುಖವಾದ ಸ್ಥಳಗಳಲ್ಲಿ ಆರ್ಯಪುತ್ರ ಮತ್ತು ಮಹಾಮಾತ್ರರನ್ನು ನಿಯಮಿಸಲಾಗುತ್ತಿತ್ತೆಂದು ತೋರುತ್ತದೆ. ಆರ್ಯಪುತ್ರರು ಅರಸುಪುತ್ರ ಇಲ್ಲವೆ ಅರಸುಸಂಬಂಧಿಗಳಾಗಿರಬೇಕು. ಅದೇನಿದ್ದರೂ ಅಶೋಕನ ರಾಜ್ಯದ ಅತಿ ದಕ್ಷಿಣಕ್ಕೆ ಸುವರ್ಣಗಿರಿ ಮತ್ತು ಇಸಿಲ ಎಂಬ ಪ್ರಮುಖ ಸ್ಥಳಗಳಿದ್ದುವೆಂಬುದಂತೂ ಸ್ಪಷ್ಟ. ಸುವರ್ಣಗಿರಿ ಯಾವುದೆಂಬ ಬಗ್ಗೆ ಒಮ್ಮತವಿಲ್ಲ. ಮಸ್ಕಿಯ ದಕ್ಷಿಣಕ್ಕೂ. ಹಂಪೆಯ ಉತ್ತರಕ್ಕೂ ಇರುವ ಕನಕಗಿರಿಯೇ ಅಶೋಕ ಶಾಸನದ ಸುವರ್ಣಗಿರಿಯೆಂದು ಮಲ್ಲ ಸೂಚಿಸಿದರೆ. ಅಶೋಕನ ಹದಿನಾಲ್ಕು ಶಿಲಾಶಾಸನಗಳು ಮತ್ತು ಸಾಧಾರಣ ಶಿಲಾಲೇಖನಗಳು ಒಂದೇ ಕಡೆಗೆ ದೊರೆತ ಆಂಧ್ರ ಪ್ರದೇಶದ ಎರ್ರಗುಡಿಯು

೫. E. Hultzch : Corpus Inscription Inidcurum, Vol. I (Inscriptions of Ashoka) p. 175, 178, 179.

ಆತನ ಮುಖ್ಯ ಸ್ಥಳವಾದುದರಿಂದ ಅದರ ಸಮೀಪವಿರುವ 'ಜೋನ್ನಗಿರಿ' ಸುವರ್ಣಗಿರಿಯಾಗಿರಬೇಕೆಂಬುದು ಬಹುಜನರ ವಾದ. 'ಇಸಿಲ' ಮಾತ್ರ ಕರ್ನಾಟಕದ್ದೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಮೌರ್ಯರ ಕಾಲದ 'ಇಸಿಲ'ವು ಈ ಶಾಸನಗಳ ಸಮೀಪದಲ್ಲಿಯೇ ಇರಬೇಕೆಂದು ಊಹಿಸಿದ ದಿ. ಡಾ|| ಎಂ. ಎಚ್. ಕೃಷ್ಣರವರು ವಿಸ್ತಾರವಾದ ಪಟ್ಟಣದ ಗುರುತುಗಳು ಬ್ರಹ್ಮಗಿರಿ ಶಾಸನದ ಎರಡು ಪಕ್ಕಗಳಲ್ಲೂ ತಮಗೆ ದೊರೆತುದಾಗಿ ಹೇಳಿದ್ದಾರೆ.೬ ನಂತರ ಅಲ್ಲಿ ಸರ್ ಮಾರ್ಟಿಮರ್ ವೀಲರನು ಮೆಗಾಲಿಥಿಕ್ ನಾಗರಿಕತೆಯ ಕೆಲವು ಅವಶೇಷಗಳನ್ನು ಪತ್ತೆ ಹಚ್ಚಿ, ಅವು ಅಶೋಕನ ಕಾಲಕ್ಕೆ ಸೇರಿದ್ದುವೆಂದು ಅಭಿಪ್ರಾಯಪಟ್ಟಿದ್ದಾನೆ. ಈ ಮೆಗಾಲಿಥಿಕ್ ಸ್ಮಾರಕಗಳನ್ನು ಸ್ಥಳೀಯ ಜನರು 'ಮೌರ್‍ಯರ ಅಥವಾ ಮೋರೇರ ಮನೆ' ಎಂದು ಕರೆದಿರುವುದು ಮೌರ್ಯರೊಡನಿದ್ದ ಸಂಬಂಧವನ್ನು ಸೂಚಿಸುತ್ತದೆ.೭ ಪ್ರೊ|| ಡಿ. ಎಲ್. ನರಸಿಂಹಾಚಾರ್ಯರಂತೂ 'ಇಸಿಲ'ದ ನಿಷ್ಪತ್ತಿಯನ್ನು ವಿಚಾರಿಸುತ್ತ ಅದನ್ನು 'ತೇದಿಯುಳ್ಳ ಪ್ರಾಚೀನತಮ ಕನ್ನಡ ಪದ' ಎಂದು ಕರೆದಿದ್ದಾರೆ.೮ ಬ್ರಹ್ಮಗಿರಿ ಶಾಸನ 'ಚಪಡೇನ ಲಿಖಿತೇ ಲಿಪಿಕರೇಣ' ಎಂದು ಮುಕ್ತಾಯಗೊಳ್ಳುತ್ತಿದ್ದು: 'ಲಿಪಿಕರ' ಎಂಬ ವ್ಯಕ್ತಿಸೂಚಕ ಪದ ಗಮನಾರ್ಹವಾದುದು. ಚಪಡ ಶಾಸನ ಕೊನೆಯ 'ಲಿಪಿಕರೇಣ' ಪದವನ್ನು ಖರೋಷ್ಠಿ ಲಿಪಿಯಲ್ಲಿ ಬರೆದಿದ್ದರಿಂದ ಅವನಿಗೆ ಆ ಲಿಪಿಜ್ಞಾನವೂ ಇತ್ತೆಂದು ಹೇಳಬಹುದು. ಏನಿದ್ದರೂ ಸದ್ಯ ಅತ ಕರ್ನಾಟಕದ ಪ್ರಥಮ ಲಿಪಿಕಾರ.

ರಾಯಚೂರು ಜಿಲ್ಲೆಯ ಮಸ್ಕಿ ಶಾಸನ್ ದೇವಾನಾಂ ಪ್ರಿಯನ್ ಅಶೋಕನೆಂಬ ಸಮಸ್ಯೆಯನ್ನು ಪ್ರಥಮವಾಗಿ ಬಿಡಿಸಿದ ಕೀರ್ತಿಗೆ ಒಳಗಾಗಿದ್ದನ್ನು ಬಿಟ್ಟರೆ, ಗವಿಮಠ ಮತ್ತು ಪಾಲ್ಕಿಗುಂಡು ಶಾಸನಗಳಿಂದ೧೦ ವಿಶೇಷವಾದದ್ದೇನೂ ತಿಳಿಯುವುದಿಲ್ಲ. ಕರ್ನಾಟಕಕ್ಕೇ ವಿಶಿಷ್ಟವೆನ್ನುವಂತೆ, ಇತ್ತೀಚೆಗೆ ದೊರೆತ ಬಳ್ಳಾರಿ ಜಿಲ್ಲೆಯ ನಾಲ್ಕು ಶಾಸನಗಳು ಅಶೋಕನ ಹೆಸರನ್ನು ಉಲ್ಲೇಖಿಸಿವೆ. ನಿಟ್ಟೂರಿನ ಎರಡು ಶಾಸನಗಳು೧೧

೬. ಡಾ|| ಎಂ.ಎಚ್. ಕೃಷ್ಣ : ಕರ್ನಾಟಕದ ಪೂರ್ವ ಚರಿತ್ರೆ. ಪು. ೨೨.

೭. ಕರ್ನಾಟಕ ಪರಂಪರೆ. ಸಂ. ೧. ಪು. ೧೧೮.

೮. ಸಂಗ್ರಹ–ಡಾ|| ಎಂ. ಚಿದಾನಂದಮೂರ್ತಿ : ತೇದಿಯುಳ್ಳ ಪ್ರಾಚೀನತಮ ಕನ್ನಡ ಪದ. ಸಾಧನೆ. ಸಂ. ೧–೩. ಪು. ೧೨೯.

೯. E. Hultzch : Corpus Inscription Indicurum, Vol, I (Inscriptions of Ashoka) p. 174.

೧೦. R. L. Turner; H. A. S. Vol. X. The Gavimath and Palkigundu Inscriptions of Ashoka.

೧೧. ಡಾ|| ಎಸ್. ಶೆಟ್ಟರ್. ಎಸ್. ರಾಜಶೇಖರ : 'ನಿಟ್ಟೂರಿನ ಅಶೋಕ ಶಿಲಾಶಾಸನಗಳು' ಕರ್ನಾಟಕ ಭಾರತಿ. ಸಂ. ೧೦–೧. ಪು. ೧೫೯.

ಅಶೋಕನನ್ನು 'ರಾಜಾ ಅಸೋಕೋ' ಎಂದಿದ್ದರೆ ಉದೆಗೊಲ್ಲದ ಒಂದು ಶಾಸನ[೧೨] 'ದೇವಾನಾಂಪ್ರಿಯ ಅಶೋಕ' ಎಂದು ಹೆಸರಿಸುತ್ತದೆ. ಈ ಬಗೆಯಾಗಿ ಹೆಸರಿಸುವ ಶಿಲಾಶಾಸನ ಪತ್ತೆಯಾಗಿರುವುದು ಇದೇ ಪ್ರಥಮವೆನ್ನಲಾಗಿದೆ.[೧೩] ಮತ್ತೊಂದರಲ್ಲಿ ಈವರೆಗೆ ಎಲ್ಲಿಯೂ ಕಾಣದಿರುವ ನಿರಾಮಚಿಹ್ನೆಗಳಿದ್ದುದು ತಿಳಿದುಬಂದಿದೆ.[೧೪] ಇಷ್ಟನ್ನು ಬಿಟ್ಟರೆ ಈ ಶಾಸನಗಳಿಂದ ಅಂದಿನ ಇತಿಹಾಸಕ್ಕೆ ಸಂಬಂಧಪಟ್ಟ ವಿಚಿತ್ರ ಮಾಹಿತಿಗಳೇನೂ ದೊರೆಯುವುದಿಲ್ಲ. ಕೇವಲ ಧರ್ಮಾದರ್ಶದ ಪರಿಮಿತಿಯನ್ನು ಹೊಂದಿದ ಈ ಶಾಸನಗಳಿಂದ ಐತಿಹಾಸಿಕ ವಿವರಗಳನ್ನು ಅಪೇಕ್ಷಿಸುವುದೂ ಒಂದು ದೃಷ್ಟಿಯಿಂದ ತಪ್ಪಾಗುತ್ತದೆ. ಆದಾಗ್ಯೂ ಅಶೋಕನ ಶಾಸನಗಳ ಮಟ್ಟಿಗೆ ಇದೊಂದು ತುಂಬಿಬಾರದ ಕೊರತೆಯೆಂದೇ ಹೇಳಬೇಕು.

ಅಶೋಕನ ನಂತರ ಸುಮಾರು ೩೦೦ ವರ್ಷಗಳ ಅವಧಿಯಲ್ಲಿ ನಮಗೆ ಯಾವ ಶಾಸನಗಳೂ ದೊರೆಯುವುದಿಲ್ಲ. ಈ ಮಧ್ಯೆ ಕೆಲವಾದರೂ ಶಾಸನಗಳು ಹುಟ್ಟಿಕೊಂಡಿರಬೇಕು. ಅವನ್ನು ಹುಡುಕಿ ತೆಗೆಯುವ ಕಾರ್ಯ ಇನ್ನೂ ನಡೆಯಬೇಕಾಗಿದೆ. ಈ ಅವಧಿಯನ್ನು ಬಿಟ್ಟು ಅಂದರೆ ಕ್ರಿ. ಶ. ೧ನೆಯ ಶತಮಾನದಿಂದ ೪ನೆಯ ಶತಮಾನದ ನಡುವೆ ದಕ್ಷಿಣಪ್ರಾಪ್ತಿಯ ವೈಶಿಷ್ಟ್ಯ ಹೊಂದಿದ ಕೆಲವು ಪ್ರಾಕೃತಶಾಸನಗಳು ದೊರೆತಿವೆ. ಅವುಗಳನ್ನು ಅಶೋಕನ ತರುವಾಯದ ಪ್ರಾಕೃತ ಶಾಸನಗಳೆನ್ನಬಹುದು. ಅವು ಇಂತಿವೆ :

೧. ವಡಗಾಂವ – ಮಾಧವಪೂರ — ಬೆಳಗಾಂವ ಜಿಲ್ಲೆ
೨. ಮ್ಯಾಕ್‌ದೋಣಿ — ಬಳ್ಳಾರಿ ಜಿಲ್ಲೆ*
೩. ಬನವಾಸಿ (ಶಾತವಾಹನ) — ಉತ್ತರಕನ್ನಡ ಜಿಲ್ಲೆ
೪. ಬೆಳ್ವಾಡಗಿ — ಗುಲ್ಬರ್ಗಾ ಜಿಲ್ಲೆ
೫. ಸನ್ನತಿ ಬಿಡಿಲೇಖಗಳು — ..
೬. ಬನವಾಸಿ (ಚುಟು) — ಉತ್ತರ ಕನ್ನಡ ಜಿಲ್ಲೆ
೭. ಮಳವಳ್ಳಿ (..) — ಶಿವಮೊಗ್ಗ ಜಿಲ್ಲೆ
೮. ಹಿರೇಹಡಗಲಿ — ಬಳ್ಳಾರಿ ಜಿಲ್ಲೆ
೯. ಹಂಪೆ — ..

೧೨. ಸಂಯುಕ್ತ ಕರ್ನಾಟಕ, ೬–೨–೧೯೭೮, ಪು. ೧.
೧೩. – ಅಲ್ಲೇ –
೧೪. – ಅಲ್ಲೇ –
೧೫. ಸಮಗ್ರ ಕನ್ನಡ ಸಾಹಿತ್ಯ (ಚರಿತ್ರೆ, ಬೆಂಗಳೂರು ವಿಶ್ವವಿದ್ಯಾಲಯ) ಸಂ. ೧. ಪು. ೬೫.

೧೦. ಕುರುಗೋಡು — ಬಳ್ಳಾರಿ ಜಿಲ್ಲೆ
೧೧. ಹಿರೇಮಗಳೂರು — ಚಿಕ್ಕಮಗಳೂರು ಜಿಲ್ಲೆ
೧೨. ಚಂದ್ರವಳ್ಳಿ — ಚಿತ್ರದುರ್ಗ ಜಿಲ್ಲೆ
೧೩. ಮಳವಳ್ಳಿ (ಕದಂಬ) — ಶಿವಮೊಗ್ಗ ಜಿಲ್ಲೆ

ಹೀಗೆ ಪ್ರಾದೇಶಿಕ ಭಿನ್ನತೆಯಿಂದ ಸುಮಾರು ಕರ್ನಾಟಕವನ್ನೆಲ್ಲ ವ್ಯಾಪಿಸಿದ ಇಲ್ಲಿಯ ಶಾಸನಗಳು ಮೌರ್ಯರ ತರುವಾಯ ಕರ್ನಾಟಕದ ಅಧಿಕಾರವಹಿಸಿದ ಶಾತವಾಹನ. ಚುಟು. ಪಲ್ಲವ ಮತ್ತು ಕದಂಬ ರಾಜಮನೆತನಗಳನ್ನು ಪ್ರತಿನಿಧಿಸುತ್ತವೆ. ವಿಷಯಾನುಕ್ರಮಣಿಕೆಯ ದೃಷ್ಟಿಯಲ್ಲಿ ಅಶೋಕನ ಶಾಸನಗಳಿಂದ ತೀರ ಭಿನ್ನವಾದ ಈ ಶಾಸನಗಳು ಕರ್ನಾಟಕದ ಮುಂದಿನ ಶಾಸನಗಳಿಗೆ ಮಾದರಿಯೆನಿಸಿವೆ. ಡಾ॥ ಎಂ. ಎಂ. ಕಲಬುರ್ಗಿಯವರು "ಅಶೋಕನ ಶಾಸನಗಳಲ್ಲಿ ಒಬ್ಬನೇ ವ್ಯಕ್ತಿ. ಒಂದೇ ಧರ್ಮ. ಒಂದೇ ಉದ್ದೇಶವಿದ್ದರೆ ಇಲ್ಲಿ ಹಲವು ವ್ಯಕ್ತಿ. ಹಲವು ಧರ್ಮ. ಹಲವು ಉದ್ದೇಶಗಳು ಕಂಡು ಬರುವುದು ಕರ್ನಾಟಕದ ಶಾಸನವಾಹಿನಿ ಕವಲೊಡೆಯುತ್ತಿರುವುದರ ನಿದರ್ಶನವೆನಿಸಿದೆ" ಎಂದಿರುವುದನ್ನು ಇಲ್ಲಿ ಸ್ಮರಿಸಬಹುದು.

ಕಾಲದ ದೃಷ್ಟಿಯಿಂದ ಮೊದಲು ಹುಟ್ಟಿದ ಶಾಸನ ವಡಗಾಂವ–ಮಾಧವಪುರದ್ದು.[೧೬] ಇದರ ಕಾಲ ಕ್ರಿ. ಪೂ. ೧ನೆಯ ಶತಮಾನ. ಷಟ್ಕೋಣಾಕಾರದ ಈ ಸ್ತಂಭ ಶಿಲಾಲಿಪಿಯು ಕಾಶ್ಯಪಗೋತ್ರ (ಕಸಪಸ ಗೋತಸ) ದವನೊಬ್ಬನು ಯಜ್ಞಯಾಗಾದಿಗಳನ್ನು ಮಾಡಿದ್ದನ್ನು ತಿಳಿಸುತ್ತದೆ. ಇದು ಕರ್ನಾಟಕದಲ್ಲಿ ಈವರೆಗೆ ಸಿಕ್ಕ ವೈದಿಕ ಯಜ್ಞಯಾಗಾದಿಗಳನ್ನು ಕುರಿತು ಹೇಳುವ ಅತ್ಯಂತ ಪ್ರಾಚೀನ ಯಜ್ಞಸ್ತಂಭವೆನ್ನಲಾಗಿದೆ.[೧೭] ಆದರೆ ಯೂಪಕ್ಕೆ ಸಾಮಾನ್ಯವಾಗಿ ಎಂಟು ಮುಖಗಳಿರುತ್ತಿದ್ದು. ಇಲ್ಲಿ ಅದು ಷಟ್ಕೋಣಾಕಾರವಾಗಿದ್ದುದು ಒಂದು ವಿಶೇಷವೆಂದೇ ಹೇಳಬೇಕು. ಚಿಕ್ಕಮಗಳೂರು ಜಿಲ್ಲೆಯ ಹಿರೇಮಗಳೂರಿನ ಸುಪ್ರಸಿದ್ಧ ಯೂಪಸ್ತಂಭವು ಅಷ್ಟಕೋಣಾಕೃತಿಯಾಗಿರುವುದನ್ನು ಉಲ್ಲೇಖಿಸಬಹುದು.[೧೮] ಕ್ರಿ. ಶ. ೧೩೫ ರ ಮ್ಯಾಕ್ ದೋಣಿ ಶಾಸನ* ಶಾತವಾಹನ ರಾಜ ಸಿರಿಪುಳುಮಾವಿಗೆ ಸೇರಿದ್ದು. 'ಸಾತವಾಹನಿಹಾರ' ಜನಪದದ ಮಹಾಸೇನಾಪತಿ ಸ್ಕಂದನಾಗನ ಕೆಳಗಿರುವ 'ಗುಮಿಕ' ಕುಮಾರದತ್ತನ ವೇಪೂರಕ ಗ್ರಾಮದ 'ಗಹಪತಿಕ'ನೊಬ್ಬನು ಕೆರೆ ಕಟ್ಟಿಸಿದ್ದನ್ನು ಹೇಳುತ್ತದೆ.

---

* ಮೊದಲು ಬಳ್ಳಾರಿ ಜಿಲ್ಲೆಗೆ ಸೇರಿದ ಮ್ಯಾಕ್‌ದೋಣಿ ಇಂದು ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಆದವಾನಿ ತಾಲ್ಲೂಕಿನಲ್ಲಿ ಸೇರ್ಪಡೆಯಾಗಿದೆ.

೧೬. ಆರ್. ಎಸ್. ಪಂಚಮುಖಿ: ಮುಂಬೈ ರಾಜ್ಯದಲ್ಲಿ ಕನ್ನಡ ಸಂಶೋಧನೆ. ೧೯೪೬–೪೭. ಪು. ೨.

೧೭. —ಅದೇ— ಪು. ೫.

೧೮. ಯೂಪಸ್ತಂಭಗಳ ಕುರಿತು ಹೆಚ್ಚಿನ ವಿಷಯ ತಿಳಿಯ ಬಯಸುವವರು. ನೋಡಿ – ಎಂ. ಚಿದಾನಂದಮೂರ್ತಿ: ಸಂಶೋಧನ ತರಂಗ. ಸಂ. ೨. ಪು. ೨೪೯–೨೫೩.

ಇಲ್ಲಿ ಅಧಿಕಾರ ಸೂಚಕ ಪದ ಮಹಾಸೇನಾಪತಿ ಮತ್ತು ಗುಮಿಕಿಗಳ ಸಂಬಂಧ, ಅವರ ಅಧಿಕಾರ ಪರಿಮಿತಿಯ ಜನಪದ. ಗ್ರಾಮಗಳ ಮೇಲೆ ನಿಂತಿದ್ದನ್ನು ಗಮನಿಸಬೇಕು, ಬಳ್ಳಾರಿಯ ಬಹುಭಾಗ ಅಂದು ಶಾತವಾಹನರ ಆಳ್ವಿಕೆಗೆ ಒಳಪಟ್ಟಿದ್ದು. ಅದು ಸಾತವಾಹನಿಹಾರ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿರಬೇಕು. ಹಿರೇಹಡಗಲಿಯ ತಾಮ್ರ ಶಾಸನ[೨೦] ಇದೇ ಪ್ರದೇಶವನ್ನು 'ಸಾತವಾಹನಿರಟ್ಟ' ಎಂದಿರುವುದನ್ನು ಇಲ್ಲಿ ಜ್ಞಾಪಿಸಬಹುದು. ಶಾಸನೋಕ್ತ ಪುಳುಮಾವಿಯು. ಗೌತಮೀಪುತ್ರನ ಮಗ ವಾಸಿಷ್ಠೀಪುತ್ರ ಪುಳುಮಾವಿಯೆಂದೂ. ಯಜ್ಞ ಶ್ರೀ ಶಾತಕರ್ಣಿಯ ನಂತರ ಆಳಿದ ಮುಮ್ಮಡಿ ಪುಳುಮಾವಿಯೆಂದೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಆದರೆ ಈತ ವಾಸಿಷ್ಠೀಪುತ್ರ ಪುಳುಮಾವಿಯೆಂದು ಹೇಳುವುದೇ ಹೆಚ್ಚು ಸೂಕ್ತವೆಂದು ತೋರುತ್ತದೆ. ೧೯೭೭ರಲ್ಲಿ ದೊರೆತ ಬನವಾಸಿಯ ಶಾಸನ[೨೧] ಬಹುಶಃ ಇವನದೇ ಆಗಿದ್ದು ಅದು 'ವಾಸಿಠೀಪುತಸ ಸಿವಸಿರಿಪುಳುಮಾವಿಸ'ನ ಮಹಾದೇವಿಯ ಛಾಯಾ (ಸ್ಮಾರಕ) ಶಿಲೆ ಎನ್ನುತ್ತದೆ. ನಾಸಿಕದ ಗೌತಮಿಯ ಬಾಲಶ್ರೀಯ ಶಾಸನ[೨೨] ಇವನನ್ನು ದಕ್ಷಿಣಾಪಥೇಶ್ವರನೆಂದು ಕರೆದಿದೆಯಲ್ಲದೆ. ಈತನ ತಂದೆ ಗೌತಮೀಪುತ್ರ ಸಾತಕರ್ಣಿ ಕೆಲಕಾಲ ವೈಜಯಂತಿ ನೆಲೆಬೀಡಿನಲ್ಲಿದ್ದನೆಂಬುದನ್ನೂ ತಿಳಿಸುತ್ತದೆ. ಆಂಧ್ರದ ತರಹಲ ನಾಣ್ಯಗಳು ಹಾಗೂ ಕರ್ನಾಟಕದ ವಡಗಾಂವ ನಾಣ್ಯಗಳಲ್ಲಿ ವಾಸಿಷ್ಠೀಪುತ್ರ ಪುಳುಮಾವಿಯ ಹೆಸರಿರುವುದಾಗಿ ತಿಳಿದುಬಂದಿದೆ.[೨೩] ಬಳ್ಳಾರಿಯಲ್ಲಿ ಈತನ ಆಳಿಕೆ. ಬನವಾಸಿಯವರೆಗೂ ಹಬ್ಬಿತ್ತೆಂದೂ. ಮೂಲವಂಶೀತನದ ಶಾತವಾಹನ ಅರಸರು 'ಶಾತವಾಹನಿಹಾರ'ವೆಂಬ ಈ ಪ್ರದೇಶವನ್ನು ಆಳುತ್ತಿದ್ದರೆಂದೂ ಹೇಳಲು ಬನವಾಸಿ ಶಾಸನವೊಂದು ಖಚಿತವಾದ ಆಧಾರವಾಗಿದೆ.

ಶಿಲಾಶಾಸ್ತ್ರದೃಷ್ಟಿಯಿಂದ ಕ್ರಿ. ಶ. ೨ನೆಯ ಶತಮಾನದ ಮಧ್ಯಭಾಗಕ್ಕೆ ಸೇರುವ ಈ ಸ್ಮಾರಕ ಶಿಲಾಶಾಸನ ಕರ್ನಾಟಕದ ಪ್ರಥಮ ಸ್ಮಾರಕಶಿಲಾ ಶಾಸನವೆನ್ನಿಸುತ್ತದೆ. ಗುಲ್ಬರ್ಗಾ ಜಿಲ್ಲೆಯ ವೆಡ್ಡಡಗಿಯಲ್ಲಿ ದೊರೆತ ಮತ್ತೊಂದು ಸ್ಮಾರಕ ಶಿಲಾಶಾಸನ[೨೪] ಆ ಕಲ್ಲಮೇಲೆ ಕೆತ್ತಿರುವ ಚಿತ್ರ ಕಲಶನ 'ಛಾಯಾ ಪಡಿಮೆ' (ಛಾಯಾಪ್ರತಿಮೆ) ಎನ್ನುತ್ತದೆ. ಕ್ರಿ. ಶ. ೩ನೆಯ ಶತಮಾನಕ್ಕೆ ಸೇರುವ ಈ ಶಾಸನದಲ್ಲಿ ಕಲಶನ ಜೀವನ ಪ್ರಯಾಣದ ಕೊನೆಯನ್ನು ಚಲಿಸಲಾರದ ಗಾಡಿಯ ಉಬ್ಬುಚಿತ್ರದ ಸಂಕೇತದ

---

೧೯. Ep. Ind. Vol. XVI, p. 155.

೨೦. Ep. Ind. Vol. I, p. 2.

೨೧. ಎಚ್. ಆರ್. ರಘುನಾಥ ಭಟ್ : ಕರ್ನಾಟಕ ಶಾಸನ, ಕಲೆ, ಪು. ೪.

೨೨. Ep. Ind. Vol. VIII, p. 71.

೨೩. ಎಚ್. ಆರ್. ರಘುನಾಥ ಭಟ್ : ಕರ್ನಾಟಕ ಶಾಸನಕಲೆ. ಪು. ೬.

೨೪. Ep. Ind. Vol. XXXVII, p. 131.

ಮೂಲಕ ಅಪೂರ್ವವೆನ್ನುವಂತೆ ತೋರಿಸಲಾಗಿದೆ.[೨೫] ಇಂಥ ಉಬ್ಬುಚಿತ್ರವು ಬನವಾಸಿಯ ಸ್ಮಾರಕ ಶಿಲೆಯ ಮೇಲೂ ಇದ್ದು ಸದ್ಯ ಅವುಗಳನ್ನು ಹಾರದಿಂದ ಕೆತ್ತಿ ತೆಗೆಯಲಾಗಿದೆಯೆಂದೂ, ಸ್ಮಾರಕಶಿಲೆಗಳನ್ನು ನಿಲ್ಲಿಸುವ ಪರಂಪರೆ ಆ ಕಾಲಕ್ಕಾಗಲೇ ರೂಢವಾಗಿತ್ತೆಂದೂ; ಮುಂದೆ ಈ ಪರಂಪರೆಯೇ ಕಾಲಕ್ರಮೇಣ ಇನ್ನೂ ಸ್ಪಷ್ಟವಾದ ರೂಪತಾಳಿ 'ವೀರಗಲ್ಲು', 'ನಿಸಿದಿಗೆಗಲ್ಲು'ಗಳಾಗಿರಬಹುದೆನ್ನುವ ರಘುನಾಥ ಭಟ್ಟರ ಮಾತಿನಲ್ಲಿ ಸಾಕಷ್ಟು ತಥ್ಯವಿದೆಯೆನ್ನಬಹುದು.[೨೬]

ಪ್ರಾಚ್ಯಸಂಶೋಧನೆಯ ಫಲವಾಗಿ ಇತ್ತೀಚೆಗೆ ಗುಲ್ಬರ್ಗಾ ಜಿಲ್ಲೆಯ 'ಸನ್ನತಿ' ಯೆಂಬ ಶಾತವಾಹನರ ನಿವಾಸಸ್ಥಾನವೊಂದು ಬೆಳಕಿಗೆ ಬಂದಿದೆ. ಅಲ್ಲಿ ದೊಡ್ಡ ಪ್ರಮಾಣದಲ್ಲಿ ದೊರೆತ ಐತಿಹಾಸಿಕ ಮಹತ್ವದ ಬೌದ್ಧ ಸ್ಮಾರಕ ಅವಶೇಷಗಳಲ್ಲಿ ಲಿಪಿಶಾಸ್ತ್ರ ದೃಷ್ಟಿಯಿಂದ ಕ್ರಿಸ್ತಶಕದ ಮೊದಲ ಮೂರು ಶತಮಾನದ ಬ್ರಾಹ್ಮಿಗುಣವನ್ನು ಪಡೆದ ಪ್ರಾಕೃತ ಭಾಷೆಯ ಸುಮಾರು ೩೦ ಬಿಡಿ ಲೇಖಗಳು ದೊರೆತಿವೆ.[೨೭] ಈ ಶಾಸನಗಳಲ್ಲಿ ದಾನದ (Donative) ಮತ್ತು ಸ್ಮಾರಕ (Coinmemorative) ದಾಖಲೆಗಳು ಹೆಚ್ಚಾಗಿದ್ದು. ದಾನಶಾಸನಗಳಲ್ಲಿ ಭಾಗಶಃ ತೇದುಹೋಗಿರುವ ಒಂದು ಶಾಸನದ ಉಳಿದಿರುವ ಸಾಲಿನಲ್ಲಿ ಕಂಡುಬರುವ "ರಞೊ ಸಿರಿಸಾತ......" ಎಂಬ ಅಪೂರ್ಣಪಾಠ ಸಾತವಾಹನರ ನೇರಪ್ರಭಾವಕ್ಕೆ ಗುಲ್ಬರ್ಗಾ ಪ್ರಾಂತವು ಒಳಗಾಗಿದ್ದಿರಬಹುದೆಂಬುದಕ್ಕೆ ಮೊದಲ ಪ್ರತ್ಯಕ್ಷ ಆಧಾರವಾಗುತ್ತದೆನ್ನುತ್ತಾರೆ. ಡಾ॥ ಕೊ. ವ್ಯಾ. ರಮೇಶ[೨೮] ಮತ್ತೊಂದು ಲೇಖದಲ್ಲಿ ದೊರೆಯುವ "ಮಹಾಸೇನಾಪತಿ ಸಂಬಲಿಪೂರವಾಸಿನೊ ಅಪಕುಟಿಸ......" ಎಂಬ ಭಾಗದಲ್ಲಿಯ 'ಸಂಬಲಿಪೂರ' ಎಂಬ ಸ್ಥಳನಾಮ. ಅದರಲ್ಲಿಯೂ 'ಪೂರ್' ಎನ್ನುವ ಅಚ್ಚಗನ್ನಡ ಶಬ್ದ ಗಮನಾರ್ಹವಾದುದು. ಬೌದ್ಧ ಧರ್ಮಾವಲಂಬಿಗಳು ದಾನಮಾಡಿದ್ದನ್ನು ತಿಳಿಸುವ ಒಂದೆರಡು ಸಾಲಿನ ಈ ಚಿಕ್ಕ ಲೇಖಗಳಿಂದ ದಾನಕೊಟ್ಟ ವ್ಯಕ್ತಿಯ ಹೆಸರುಗಳಾದ ಸೋಮಘೋಸಾಹಿಕ. ದೆತಿಕ. ಪುರಿಸದತಾ. ನಾಗನಿಕಾ. ಅಲಿಕಾ. ಗಿರಿಹತಿಕ. ಸಿವತಿಕ. ಸುಲಸ. ನಾಗಕೊಡುಮಸ. ಗಗನಕ. ರಾಮಸಿರಿ. ಪಥಿಲಸ. ಭೋಜಕಸ ಮುಂತಾದವುಗಳು ಮತ್ತು ಅಧಿಕಾರ ಸೂಚಕವಾದ ರಾಜಾಮಚ್ಚಯ. ಅಭಿಪಟಲಿಕ. ಮಹಾಸೇನಾಪತಿ. ಮತ್ತು ಗಹಪತಿನಗಳನ್ನು ಬಿಟ್ಟರೆ ಹೆಚ್ಚಿಗೇನೂ ಕಾಣದೊರೆಯುವುದಿಲ್ಲ.

---

೨೫. ಡಾ॥ ಕೊ. ವ್ಯಾ. ರಮೇಶ: ಕರ್ನಾಟಕ ಶಾಸನ ಸಮೀಕ್ಷೆ. ಪು. ೩೬.

೨೬. ಎಚ್. ಆರ್. ರಘುನಾಥ ಭಟ್: ಕರ್ನಾಟಕ ಶಾಸನ, ಕಲೆ. ಪು. 2, ೮.

೨೭. A, R. I. E., 1966–67, No. B 203–233.

೨೮. ಡಾ॥ ಕೊ. ವ್ಯಾ. ರಮೇಶ: ಕರ್ನಾಟಕ ಶಾಸನಸಮೀಕ್ಷೆ. ಪು. ೨೧.

ಮೌರ್ಯರ ತರುವಾಯ ಕರ್ನಾಟಕದ ಬಹುಭಾಗವನ್ನು ಶಾತವಾಹನ ಮೂಲ ಮನೆತನದವರು ಆಳಿದ್ದು ಈಗ ಸ್ಪಷ್ಟಗೊಂಡಿದೆ. ಚಂದ್ರವಳ್ಳಿ ವಡಗಾಂವ ಭೂಶೋಧನೆಯಲ್ಲಿ ದೊರೆತ ಅವರ ನಾಣ್ಯಗಳಿಂದ ಆ ಭಾಗದಲ್ಲಿ ಅವರ ಆಳ್ವಿಕೆಯ ವಿಷಯದಲ್ಲಿ ಮತ್ತಷ್ಟು ಮಾಹಿತಿಗಳು ದೊರೆತಿವೆ. ಶಾತವಾಹನರ ತರುವಾಯ ಆಳಿದವರಲ್ಲಿ ಚುಟುಗಳು ಪ್ರಮುಖರು. ಬಹುಶಃ ಇವರು ಶಾತವಾಹನರ ರಕ್ತಸಂಬಂಧಿಗಳಾಗಿದ್ದು ಮೊದಮೊದಲು ಅವರ ಸಾಮಂತರಾಗಿದ್ದುಕೊಂಡು ನಂತರ ಸ್ವತಂತ್ರರಾದರೆಂದು ಹೇಳಬಹುದು. ಇವರ ಅನೇಕ ನಾಣ್ಯಗಳು ಚಂದ್ರವಳ್ಳಿ ಕಾರವಾರ, ಬನವಾಸಿ ಉತ್ಖನನಗಳಲ್ಲಿ ಲಭ್ಯವಾಗಿದ್ದು, ಎರಡು ಶಾಸನಗಳು ಮಳವಳ್ಳಿ[೨೯] ಮತ್ತು ಬನವಾಸಿಯಲ್ಲಿ[೩೦] ದೊರೆತಿವೆ. ಲಿಪಿಶಾಸ್ತ್ರದೃಷ್ಟಿಯಿಂದ ಮೊದಲನೆಯದೆನ್ನಬಹುದಾದ ಬನವಾಸಿಯ ನಾಗರಕಲ್ಲಿನ ಶಾಸನಕ್ಕಿಂತ ನಿಜಸಂಗತಿಯಲ್ಲಿ ಹಳೆಯದು ಮಳವಳ್ಳಿ ಸ್ತಂಭಶಾಸನ. ವಿಣ್ಹುಕಡ ಚುಟುಕುಲಾನಂದ ಸಾತಕರ್ಣಿಯ ಮೊದಲನೆಯ ವರ್ಷಕ್ಕೆ ಸೇರಿದ ಈ ಸ್ತಂಭಶಾಸನ – ಮಟ್ಟಪಟ್ಟಿ ದೇವರ ಭೋಗಕ್ಕೆ 'ಗಾಮಾಹಾರಸಹಲಾಟವಿ'ಯನ್ನು ಸರ್ವಬಾಧಾಪರಿಹಾರವಾಗಿ ಬಿಡಲು ಮಹಾವಲ್ಲಭ ರಜ್ಜುಕನಿಗೆ ಅಜ್ಞಾಪಿಸಿದ್ದನ್ನೂ ತಕಿಂಚಿಯ ಮಗ ಕೌಂಡಿನ್ಯ ಗೋತ್ರದ ಹಾರಿತೀಪುತ್ರ ಕೊಂಡಮಾಣನಿಗೆ ಬ್ರಹ್ಮದತ್ತಿ ಕೊಟ್ಟಿದ್ದನ್ನೂ ತಿಳಿಸುತ್ತದೆ. ಇಲ್ಲಿಯ ಮಹಾವಲ್ಲಭ ರಜ್ಜುಕನು ಭೂಕಂದಾಯ ಮೇಲ್ವಿಚಾರಕನೆಂಬುದು ಸ್ಪಷ್ಟ. ಅಶೋಕನ ಪ್ರಮುಖಶಿಲಾಲೇಖಗಳಲ್ಲಿ (Major Rock Edicts) ಇದೇ ತರಹದ 'ರಾಜುಕಾ' ಎಂಬ ಅಧಿಕಾರ ಸೂಚಕ ಹೆಸರು ಬರುವುದನ್ನು ನೆನೆಯಬಹುದು. ವಿಣ್ಹುಕಡ ಚುಟುಕುಲಾನಂದನ ಹನ್ನೆರಡನೆಯ ವರ್ಷದಲ್ಲಿ ಹುಟ್ಟಿದ ಬನವಾಸಿ ನಾಗರಕಲ್ಲಿನ ಶಾಸನ. ಮಹಾಭೋಜಿ ಮಹಾರಾಜನ ಮಗಳೂ ಜೀವಪುತ್ರನಾದ ಯುವರಾಜನ ತಾಯಿಯೂ ಆದ ಶಿವಖಡನಾಗಸಿರಿ (ಶಿವಸ್ಕಂಧನಾಗಶ್ರೀ) ನಾಗ (ಪ್ರತಿಮೆ) ಕೆರೆ ಹಾಗೂ ವಿಹಾರವನ್ನು ಅಮಾತ್ಯ ಖಡಸಾತಿ ಮೇಲ್ವಿಚಾರಣೆಯಲ್ಲಿ ಧರ್ಮದಾನ ಕೊಟ್ಟಿದುದಾಗಿ ಹೇಳುತ್ತದೆ. ಮೊದಲನೆಯದು ಬ್ರಹ್ಮದತ್ತಿಯಾದರೆ ಇದು ಬೌದ್ಧದತ್ತಿ. ಇದು ನಮ್ಮ ರಾಜರು ಸರ್ವಧರ್ಮಸಹಿಷ್ಣುಗಳಾಗಿದ್ದರೆಂಬುದಕ್ಕೆ ನಿದರ್ಶನ. ನಾಗರಕಲ್ಲಿನ ಶಿವಖಡನಾಗಸಿರಿಯು ಅಲ್ಲಿಯ ಮಹಾರಾಜ ಹಾರಿತೀಪುತ್ರನೆಂದು ವರ್ಣಿತನಾದ ವಿಣ್ಹುಕಡಚುಟುಕುಲಾನಂದ ಸಾತಕರ್ಣಿಯ ಮಗಳೆಂದೂ. ಯುವರಾಜ ಮಳವಳ್ಳಿ ಸ್ತಂಭಶಾಸನದಲ್ಲಿ ಉಕ್ತನಾಗಿರುವ ಮತ್ತೊಬ್ಬ ವಿಣ್ಹುಕಡ ಚುಟುಕುಲಾನಂದ ಸಾತಕರ್ಣಿಯಾಗಿರಬೇಕೆಂದೂ ಪ್ರಬಲ ಊಹೆಯೊಂದಿದೆ.[೩೧] ಈ ಊಹೆಗೆ ಆಧಾರ– (೧) ಲಿಪಿಶಾಸ್ತ್ರದೃಷ್ಟಿಯಿಂದ ಬನವಾಸಿ ಶಾಸನದ ನಂತರ ಹುಟ್ಟಿರಬಹುದೆನಿಸಿದ ಮಳವಳ್ಳಿ ಶಾಸನ.

---

೨೯. E. C. Vol. VII. SK, No. 263.
೩೦. S. I. I. Vol. XX, No. 1.
೩೧. P. B. Desai and others : A History of Karnatak, p. 55.

(೨) ಶಿವಖಡನಾಗಸಿರಿಯನ್ನು ಬನವಾಸಿ ಶಾಸನದ ವಿಣ್ಹುಕಡ ಚುಟುಕುಲಾನಂದ ಸಾತಕಂಣಿಯ ಮಗಳೆಂದು ತಪ್ಪಾಗಿ ಭಾವಿಸಿದ್ದು, ಆದರೆ ಅವಳು ಮಹಾಭುವಿ(?) ಮಹಾರಾಜನ ಮಗಳೆಂಬುದು ಅಲ್ಲಿ ಸ್ಪಷ್ಟವಿದೆ. ಅಲ್ಲದೆ ವಂಶಪರಂಪರೆಯ ದೃಷ್ಟಿಯಿಂದ ಚುಟುಕುಲದ ಅರಸನೊಬ್ಬನ ಮಗಳ ಮಗನೂ ಚುಟುಕುಲದವನಾಗಿರುವುದು ಅಸಂಭವ. ಆದ್ದರಿಂದ ಅವಳು ಮಗಳಾಗಿರುವುದಕ್ಕಿಂತ ಶಾಸನೋಕ್ತ ವಿಣ್ಹುಕಡಚುಟುಕುಲಾನಂದ ಸಾತಕರ್ಣಿಯ ತಾಯಿಯಾಗಿರುವ ಸಂಭವ ಹೆಚ್ಚಾಗಿದೆ. ಇತ್ತೀಚೆಗೆ ಎಚ್. ಆರ್. ರಘುನಾಥ ಭಟ್‌ರು ನಾಗರಕಲ್ಲಿನ ಶಾಸನವನ್ನು ಪುನಃ ಸೂಕ್ಷ್ಮವಾಗಿ ಪರಿಶೀಲಿಸಿದ್ದು, "ಯುವರಾಜ ಪದದ ಹಿಂದೆ ಎರಡು ಅಕ್ಷರಗಳು ಕಾಣುತ್ತಿದ್ದು ಎರಡನೆಯ 'ಜ' ಅಕ್ಷರ ಸ್ಪಷ್ಟವಿದೆ: ಮೊದಲನೆಯದು 'ಪೂ' ಇಲ್ಲವೆ 'ರಾ' ಇಟ್ಟುಕೊಂಡು ಸದ್ಯಕ್ಕೆ ಪೂಜ (ಪೂಜ್ಯ) ಇಲ್ಲವೆ ರಾಜ(?) ಎಂದು ಓದಬಹುದಾಗಿದೆ ಎಂದಿದ್ದಾರೆ.[೩೨] ತಾಯಿಯ ದೃಷ್ಟಿಯಲ್ಲಿ ರಾಜ ಯುವರಾಜನೇ ಆಗಿರಬೇಕು. ಅವನು ಸಾಮಾನ್ಯ ಯುವರಾಜನಲ್ಲ ಜೀವಪುತ್ರ ರಾ (ಪೂ) ಜ ಯುವರಾಜ. ಇದರಿಂದ ನಾವು ಶಿವಖಡನಾಗಸಿರಿಯನ್ನು ಮಹಾಭುವಿ (ವಂಶ) ಮಹಾರಾಜನ ಮಗಳು ಜೀವಪುತ್ರನಾದ ಪೂಜ್ಯ (ರಾಜ) ಯುವರಾಜನ ತಾಯಿ ಎಂದು ಹೇಳಬೇಕಾಗುತ್ತದೆ. ಆಗ ಮಗಳೆಂಬ ಮೊದಲಿನ ಸಂಬಂಧ ತಿರುವುಮುರುವಾಗುತ್ತದೆ. ಹಾಗಾದರೆ ಮಳವಳ್ಳಿ ಶಾಸನದ ವಿಣ್ಹುಕಡ ಚುಟುಕುಲಾನಂದ ಸಾತಕಂಣಿ ಯಾರೆಂಬ ಸಮಸ್ಯೆ ಹಾಗೇ ಉಳಿಯುತ್ತದೆ. ಈ ಇಬ್ಬರೂ ಒಬ್ಬನೇ ವ್ಯಕ್ತಿಯೆಂದು ಹೇಳಲು ಆತ "ವೈಜಯಂತಿಪುರ ರಾಜಾ ಮಾನವ್ಯಸಗೋತ್ತೋ ಹಾರಿತೀಪುತ್ತೋ ವಿಣ್ಹುಕಡ ಚುಟುಕುಲಾನಂದ ಸಾತಕಂಣೀ" ಎಂದು ವರ್ಣಿತವಾದದ್ದೇ ಸಾಕು. ಮಹಾರಾಷ್ಟ್ರದ ಕನ್ಹೇರಿ ಶಾಸನದಲ್ಲಿಯೂ ಇದೇ ಹೆಸರಿನ ಚುಟುರಾಜ ಉಲ್ಲೇಖಿತನಾಗಿದ್ದು. ಈ ಮೂರು ಹೆಸರುಗಳೂ ಏಕವ್ಯಕ್ತಿಗೆ ಸಂಬಂಧಿಸಿದವೆಂದು ರ್‍ಯಾಪ್ಸನ್ ಊಹಿಸಿದುದಾಗಿ ತಿಳಿದಿದೆ[೩೩] ಅದೇನೇ ಇದ್ದರೂ ಶಾತವಾಹನರ ತರುವಾಯ ಬನವಾಸಿಯನ್ನು ಕೇಂದ್ರಸ್ಥಾನವಾಗಿ ಮಾಡಿಕೊಂಡು ಆಳಿದ ಚುಟುರಾಜರಲ್ಲಿ ಈತ ಪ್ರಮುಖನೆಂದು ಹೇಳಬಹುದು. ನಾಗಶಾಸನದ ರೂವಾರಿ ಆಚಾರ್ಯದಮೋರಕನ ಶಿಷ್ಯ ನಟಕ ಎಂಬಾತ. ಆತ ಮೂರ್ತಿಶಿಲ್ಪ ನಿಪುಣನೆಂಬುದಕ್ಕೆ ನಯವಾದ ಅಲ್ಲಿಯ ನಾಗಪ್ರತಿಮೆಯೇ ಸಾಕ್ಷಿ. ಪ್ರಾಚೀನ ಶಿಲ್ಪ ಚರಿತ್ರೆಯ ದೃಷ್ಟಿಯಿಂದಲೂ ಈ ದಾನಶಾಸನ ಮಹತ್ವಪೂರ್ಣವಾಗಿದೆ.

ಕ್ರಿ. ಶ. ೩೦೦ ರ ಬಳ್ಳಾರಿ ಜಿಲ್ಲೆಯ ಹಿರೇಹಡಗಲಿಯಲ್ಲಿ ದೊರೆತ ಪಲ್ಲವ ಶಿವಸ್ಕಂದವರ್ಮನ ಶಾಸನ[೩೪] ಭಾರತದಲ್ಲಿ ದೊರೆತ ಎರಡು ಪ್ರಾಚೀನತಮ ಶಾಸನಗಳ

---

೩೨. ಎಚ್. ಆರ್. ರಘುನಾಥಭಟ್ : ಕರ್ನಾಟಕ ಶಾಸನ. ಕಲೆ. ಪು. ೧೨.

೩೩. –ಅದೇ– ಪು. ೧೩.

೩೪. Ep. Ind., Vol. I, p. 2.

ಪೈಕಿ ಒಂದಾಗಿದ್ದು ಕರ್ನಾಟಕದ ಪ್ರಾಚೀನ ದಾನಶಾಸನಗಳಲ್ಲಿ ಒಂದೆನಿಸಿದೆ. ಮಳವಳ್ಳಿ, ಬನವಾಸಿ, ಸನ್ನತಿ ಶಾಸನಗಳು ದಾನಶಾಸನಗಳೆಂಬುದನ್ನು ಈ ಹಿಂದೆ ನೋಡಲಾಗಿದೆ. ಕರ್ನಾಟಕದ ಮುಂದಿನ ಶಾಸನಗಳಲ್ಲಿ ಸುಮಾರು ಅರ್ಧದಷ್ಟು ಭಾಗವನ್ನು ದಾನ ಶಾಸನಗಳೇ ಆಕ್ರಮಿಸಿಕೊಂಡಿವೆ. ಜಪತಪ, ಯಜ್ಞಯಾಗಗಳು ಕಠಿನವೆನ್ನಿಸಿದಂತೆ ಪುಣ್ಯವನ್ನು ದೊರಕಿಸಿಕೊಳ್ಳುವ ಈ ಸರಳ ಮಾರ್ಗವನ್ನು ನಮ್ಮ ಜನ ಹುಡುಕಿದ ರೆಂದು ಕಾಣುತ್ತದೆ. ಕಾಲ ಸಂದಂತೆ ಬಿಟ್ಟ ದತ್ತಿಗಳನ್ನು ಬೇರೆಯವರು ಅಪಹರಿಸ ತೊಡಗಿದರೆಂದು ತೋರುತ್ತದೆ. ಅದಕ್ಕಂದೇ ಹಿರೇಹಡಗಲಿಯ ಶಾಸನದಲ್ಲಿ ಆ ದಾನವನ್ನು ಅಪಹರಿಸುವವರನ್ನು "ಪಂಚಮಹಾಪಾತಕ ಸಂಜುತ್ತೋ ನರಾಧಮೋ ಹೋಜ" ಎಂದು ಕೊನೆಯಲ್ಲಿ ಎಚ್ಚರಿಸಲಾಗಿದೆ. ಇದು ಅಂದಿನ ದಾನಗಳ್ಳರ ವಿಷಯವನ್ನು ಪ್ರಸ್ತಾಪಿಸುತ್ತಿದ್ದು, ಮುಂದೆ ಬರಬರುತ್ತಾ ಅಂಥ ದಾನಗಳ್ಳರ ಸಂಖ್ಯೆ ಹೆಚ್ಚುತ್ತ ಹೋಯಿತೆಂದು ಹೇಳಲು ಮುಂದಿನ ಶಾಸನಗಳಲ್ಲಿ ಬೆಳೆಯುತ್ತ ಹೋದ ಫಲಶ್ರುತಿ ವಾಕ್ಯಗಳೇ ಸಾಕ್ಷಿ ನೀಡುತ್ತವೆ. ಈ ಸಂಖ್ಯೆ ಹಾಗೆಯೇ ಮುಂದುವರೆಯುತ್ತ ಹೋಗಿ, ವಿಜಯನಗರಕಾಲಕ್ಕೆ ಯಾವುದಕ್ಕೂ ಹೆದರದ ಭಂಡದಾನಗಳ್ಳರಿಗಾಗಿ ಶಾಸನದ ಕೊನೆಗೆ ಅಶ್ಲೀಲ ಮಾತುಗಳನ್ನೂ, ಚಿತ್ರಗಳನ್ನೂ ಬಳಸಿದ್ದನ್ನು ಕಾಣುತ್ತೇವೆ. ಕ್ರಿ. ಶ. ಸುಮಾರು ೨-ನೆಯ ಶತಮಾನಕ್ಕೆ ಸೇರಬಹುದಾದ ಹಂಪೆ,[೩೫] ಕುರುಗೋಡು[೩೬] ಮತ್ತು ಹಿರೇಮಗಳೂರು[೩೭] ಶಾಸನಗಳು ಹೆಚ್ಚು ತ್ರುಟಿತಗೊಂಡ ಪರಿಣಾಮದಿಂದಾಗಿ ಹೆಚ್ಚಿನ ಅಂಶಗಳೇನೂ ತಿಳಿಯುವುದಿಲ್ಲ. ಹಿರೇಮಗಳೂರಿನ ಯೂಪಸ್ತಂಭದ ಪಶ್ಚಿಮ ಮುಖದಲ್ಲಿ ಬರೆದ ಶಾಸನದ ೩ನೆಯ ಸಾಲಿನಲ್ಲಿ ಅಶ್ವಯೂಪ ಎಂಬ ಶಬ್ದ ಮಾತ್ರ ಸ್ಪಷ್ಟವಾಗಿ ಕಾಣದೊರೆಯುತ್ತಿದ್ದು, ಅದು ಆ ಪ್ರಾಚೀನ ಯಜ್ಞಸ್ತಂಭವನ್ನು ಉಲ್ಲೇಖಿಸುತ್ತದೆಂದು ಹೇಳಬಹುದು.

ಪಲ್ಲವರನ್ನು ಮೆಟ್ಟಿ ಕರ್ನಾಟಕದ ಆಳ್ತನವಹಿಸಿದ ಕದಂಬರು ಪ್ರಬಲರಾದಂತೆ ಕರ್ನಾಟಕದ ಚರಿತ್ರೆ ಹೆಚ್ಚು ಸ್ಫುಟವಾಗಿ ಗೋಚರಿಸತೊಡಗುತ್ತದೆ. ಕದಂಬ ಮತ್ತು ಮಯೂರಶರ್ಮರ ಹೆಸರನ್ನು ಪ್ರಪ್ರಥಮವಾಗಿ ಉಲ್ಲೇಖಿಸುವ ಚಂದ್ರವಳ್ಳಿ ಬಂಡೆಯ

---

೩೫. ಸಂಯುಕ್ತ ಕರ್ನಾಟಕ, ೨೨-೨-೧೯೭೬. ಪು. ೧.

೩೬. ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿ ರುವ ಡಾ॥ ಎಸ್. ರಾಜಶೇಖರ ವರು ಈ ಶಾಸನವನ್ನು ಸಂಶೋಧಿಸಿದ್ದು,ಅದರಲ್ಲಿ ಕ್ರಿ.ಶ. ೨-ನೆಯ ಶತಮಾನದ ಲಿಪಿಲಕ್ಷಣವನ್ನೊಳಗೊಂಡ ಬ್ರಾಹ್ಮಿ ಅಕ್ಷರಗಳು ಅಲ್ಲೊಂದು ಇಲ್ಲೊಂದು ಕಾಣುತ್ತಿದ್ದು ಅದರಿಂದ ಯಾವ ವಿಷಯವೂ- ಸ್ಪಷ್ಟವಾಗುವದಿಲ್ಲವೆಂದು ತಿಳಿಸಿದ್ದಾರೆ.

೩೭. M. A. R. 1945, No. 7, p. 110.

ಶಾಸನ[೩೮] ಕದಂಬ ರಾಜವಂಶಸ್ಥಾಪಕನಾದ ಮಯೂರಶರ್ಮನು ಒಂದು ಕೆರೆಯನ್ನು ಕಟ್ಟಿಸಿದನೆಂದು ಹೇಳುತ್ತ– ತ್ರೈಕೂಟ, ಅಭೀರಪಲ್ಲವ. ಪಾರಿಯಾತ್ರಿಕ. ಶಕಸ್ಥಾನ. ಸೇಂದ್ರಕ. ಪುನ್ನಾಟರುಗಳ ಮೇಲೆ ಸಂಪಾದಿಸಿದ ವಿಜಯವನ್ನು ನಿರ್ದೇಶಿಸುತ್ತದೆ. ಅತಿ ಉತ್ಪ್ರೇಕ್ಷೆಯಿಂದ ಕೂಡಿದ ಈ ಶಾಸನ ಕದಂಬರನ್ನು ಕುರಿತಾದ ಅತ್ಯಂತ ಪ್ರಾಚೀನ ಶಾಸನವೆಂದು ಮಹತ್ವ ಪಡೆದಿದೆ. ಕಾಲದ ದೃಷ್ಟಿಯಿಂದ ಇದೇ ಅವಧಿಯ ಮತ್ತೊಂದು ಶಾಸನ ಮಳವಳ್ಳಿ ಚುಟುಕುಲ ಸಾತಕರ್ಣಿ ಶಾಸನದ ಕೆಳಗೆ ಬರೆಯಲಾಗಿದ್ದು.[೩೯] ಶಿವಸ್ಕಂದವರ್ಮ (ಪಲ್ಲವರಾಜನಿರಬೇಕು) ಮಟ್ಟಪಟ್ಟಿ ದೇವರಿಗೆ ಪೂರ್ವದತ್ತಿ ಬಿಟ್ಟಿದ್ದನ್ನು ಕದಂಬರಾಜ(?) ಪುನಃ ಸ್ಥಿರಗೊಳಿಸಿದನೆಂದು ಹೇಳಲಾಗಿದೆ. ಬಹುಶಃ ಇಲ್ಲಿಯ ಕದಂಬರಾಜ ಮಯೂರ ಶರ್ಮನೇ ಇದ್ದಿರಬೇಕು. ಕೊಂಡಮಾಣಕುಲತಿಲಕ ಕೌಂಡಿನ್ಯಗೋತ್ರದ ಕೌಶಿಕೀಪುತ್ರ, ಸ್ಕಂದನಾಗದತ್ತನಿಗೆ ಸಂಕಸಹಿತ ಸರ್ವಬಾಧಾಪರಿಹಾರವಾಗಿ ಕೊಟ್ಟ ಸೋಮಪಟ್ಟಿ. ಕೊಂಗಿನಗರ. ಮಹಿಯಸಾ. ಕಲಿಪನೊಲಾ. ಪರಮುಚ್ಚುಂಡಿ. ಕುಂದಮುಚ್ಚುಂಡಿ. ಕಪ್ಪೆನ್ನಲಾ. ಕುಂದತಪ್ಪಕಂ. ವೆಟ್ಟಿಕ್ಕಿ ವೇಗೂರಂ. ಕೋಣತಪ್ಪಕಂ. ಏಕ್ಕದ್ದಾಹಾರ, ಸಹಲಾ ಮುಂತಾದ ಗ್ರಾಮಗಳ ಉಲ್ಲೇಖ ಅಲ್ಲಿದ್ದು, ಆ ಸ್ಥಳನಾಮಗಳ ಅಧ್ಯಯನ ಇನ್ನೂ ನಡೆಯಬೇಕಾಗಿದೆ. ಮಳವಳ್ಳಿಯ ಎರಡೂ ಸ್ತಂಭಶಾಸನದಲ್ಲಿ ಅದರ ಪ್ರಾಚೀನ ಸ್ಥಳನಾಮ ಮಟ್ಟಪಟ್ಟಿ ಎಂದೇ ಬರುತ್ತದೆ. ಇದನ್ನು ಲ್ಯೂಡರ್ಸ್ ತನ್ನ ಪ್ರಾಕೃತ ಶಾಸನಗಳ ಯಾದಿಯಲ್ಲಿ 'ಮಳಪಳಿ' ಎಂದು ಓದಿದ್ದಾನೆ.[೪೦] ಇಲ್ಲಿ ಪಟ್ಟಿ. ಪಳಿ ಎಂಬುವು ಬಹುಶಃ ದ್ರಾವಿಡ ಮೂಲದವುಗಳಾಗಿದ್ದು ಇಂದಿನ ಹಳ್ಳಿಯೆಂಬರ್ಥದಲ್ಲಿರುವುದು ಸ್ಪಷ್ಟವಿದೆ.

ಒಟ್ಟಾರೆ ಇಲ್ಲಿಯ ಎಲ್ಲ ಶಾಸನಗಳೂ ಪ್ರಾಕೃತವಾದುದರಿಂದ ಅಂದಿನ ರಾಜ್ಯದ ಅಧಿಕೃತ ಭಾಷೆ ಪ್ರಾಕೃತವಾಗಿತ್ತೆಂಬುದು ಖಚಿತವಾಗುತ್ತದೆ. ಆದರೆ ಅಂದಿನ ಸಾಮಾನ್ಯ ಪ್ರಜೆಗಳು ಅವನ್ನು ಓದಿ ಎಷ್ಟರಮಟ್ಟಿಗೆ ಅರ್ಥಮಾಡಿಕೊಳ್ಳುತ್ತಿದ್ದರೆಂಬುದು ತಿಳಿಯದಿದ್ದರೂ. ಸಾಮಾನ್ಯವಾಗಿ ಆ ಭಾಷೆ ಅಂದು ಎಲ್ಲರಿಗೂ ಅರ್ಥವಾಗುತ್ತಿತ್ತೆಂದು ಹೇಳಬಹುದು. ಸದ್ಯಕ್ಕೆ ಈ ಕಾಲದ ಕನ್ನಡ ಭಾಷೆಯ ಸ್ವರೂಪ ಯಾವ ತೆರನಾಗಿತ್ತೆಂದು ಊಹಿಸುವುದು ಕಷ್ಟವಾದರೂ. ಇಸಿಲ. ಮಟ್ಟಪಟ್ಟಿ (ಮಳಪಳಿ). ಸಂಬಲಿಪೂರ ಹಾಗೂ ಪ್ರಳಯಮಾವಿ ಮುಂತಾದ ಪದಗಳು ಕನ್ನಡದ ಅಸ್ತಿತ್ವವನ್ನು ಗುರುತಿಸುವುದರಲ್ಲಿ ಸಹಾಯಕವಾಗಿವೆ. ಅಶೋಕ. ಶಾತವಾಹನರ ಕಾಲದ ಪ್ರಾಕೃತಭಾಷೆ ಕ್ರಮೇಣ ಚುಟು, ಪಲ್ಲವರ ಕಾಲಕ್ಕೆ ಸಂಸ್ಕೃತ ಪ್ರಭಾವಕ್ಕೆ ಎಡೆಗೊಟ್ಟಿತು. ಕದಂಬರ ಕಾಲಕ್ಕಂತೂ ನಾವು ಅದರ ಕೊನೆಯ ಸ್ಥಿತಿಯನ್ನು ಕಾಣು

೩೮. M. A. R. 1929, p. 50,

೩೯. E. C. vol. VII, sk, No. 264.

೪೦. Luders : List of Prakrit inscriptions, No. 1195–96.

ತ್ತೇವೆ. ಚಂದ್ರವಳ್ಳಿ ಶಾಸನ ಭಾಷೆಯ ಧ್ವನಿಸಂಯೋಜನೆ (Orthography) ಯನ್ನು ಇಲ್ಲಿ ಗಮನಿಸಬೇಕು :[೪೧]

ಕದಂಬಾಣಾಮ್ < ಕದಂಬಾಣೊಮ್
ಮಯೂರ < ಮವೂರ (ಮೊರ್)
ಶಮ್ಮ್ರಣ < ಸಮ್ಮ್ರಣ
ತಟಾಕಮ್ < ತಡಾಕಮ್

ಇದರಂತೆ ಕದಂಬರ ಮಳವಳ್ಳಿ ಸ್ತಂಭಶಾಸನದಲ್ಲಿ 'ಬ್ರಹಂದೆಜ್ಜ'. 'ಚಾತುವೆಜ್ಜಂ ಸಿದ್ಧಿತಂ ಸಿಗಮುವಿದಿತಂ', 'ಸಿದ್ಧಿರಸ್ತು ಪ್ರೀರಸ್ತು'. ಎನ್ನುವಲ್ಲೆಲ್ಲ ಸಂಸ್ಕೃತದ ಪೂರ್ಣ ಪ್ರಭಾವವನ್ನು ಕಾಣುತ್ತೇವೆ. ಪ್ರಾಕೃತದಿಂದ ಭಿನ್ನವಾದ ಸಂಸ್ಕೃತಮಿಶ್ರಿತ ಈ ಶಾಸನಗಳ ಭಾಷೆಯನ್ನು ಗಮನಿಸಿದ ಬಿ. ಎಲ್. ರೈಸರು ಇದನ್ನು ಮಹಾರಾಷ್ಟ್ರೀ ಪ್ರಾಕೃತವೆಂದು ಕರೆದರೆಂದು ತೋರುತ್ತದೆ.[೪೨] ಮುಂದೆ ತದ್ಭವ ಶಬ್ದರೂಪಗಳನ್ನು ಸಿದ್ಧಗೊಳಿಸುವುದರಲ್ಲಿ ಪ್ರಾಕೃತ ವಿಶೇಷ ಪಾತ್ರವಹಿಸಿ ಸಂಸ್ಕೃತವನ್ನು ಕನ್ನಡಕ್ಕೆ ಬಳಸಿಕೊಳ್ಳಲು ಸಹಾಯಕಾರಿಯಾಯಿತು. ಇದೇ ಅವಧಿಯಲ್ಲಿ ಅಂದರೆ ಮಯೂರಶರ್ಮನಿಂದ ಸುಮಾರು ಅರ್ಧಶತಮಾನ ಕಳೆಯುವುದರೊಳಗಾಗಿಯೇ ಅವನ ಮೊಮ್ಮಗ ಕಾಕುಸ್ಥವರ್ಮನ ಆಳ್ವಿಕೆಯಲ್ಲಿ ಹುಟ್ಟಿರಬಹುದಾದ ಹಲ್ಮಿಡಿ ಶಾಸನದಿಂದ ಪ್ರಾರಂಭವಾದ ಕನ್ನಡ ಭಾಷೆ ಮುಂದೆ ಸಮೃದ್ಧವಾಗಿ ಬೆಳೆಯಿತು.

● ●

೪೧. M. A. R., 1929, p. 53.
೪೨. E. C. vol. VII, ಪ್ರಸ್ತಾವನೆಯಲ್ಲಿ.

ಸತ್ಯ ಮತ್ತು ಕಲ್ಯಾಣ : ಮೌಲ್ಯ ವಿವೇಚನೆ

● ಷಣ್ಮುಖಯ್ಯ ಅಕ್ಕೂರಮಠ

"ಸತ್ಯಕ್ಕಿಂತ ಕಲ್ಯಾಣವೇ ಶ್ರೇಷ್ಠ"ವೆಂಬ ಹೇಳಿಕೆ ಇದೆ. ಆದರೆ ಸತ್ಯ ಮತ್ತು ಕಲ್ಯಾಣ ಈ ಎರಡೂ ಧರ್ಮದ ಶ್ರೇಷ್ಠ ಗುಣಗಳು. ಇಂಥ ಹಲವು ಶ್ರೇಷ್ಠ ಗುಣಗಳ ಸಮಷ್ಟಿಯನ್ನು ನಾವು ಧರ್ಮವೆಂದು ಕರೆಯುತ್ತೇವೆ. ಸತ್ಯ ಮತ್ತು ಕಲ್ಯಾಣ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ: ಧರ್ಮದ ಅವಳಿ–ಜವಳಿ ಸಂತಾನ. ಒಂದರ ಗುಣ ಇನ್ನೊಂದರಲ್ಲಿದ್ದು. ಈ ಎರಡೂ ಅವಿನಾಭಾವ ಸಂಬಂಧವನ್ನು ಹೊಂದಿವೆ. ಸತ್ಯ ಮತ್ತು ಕಲ್ಯಾಣ ಗುಣಗಳು ಅಮೂರ್ತವಾದವು ಮತ್ತು ಸಮಾಜದ ಒಪ್ಪಿಗೆಯನ್ನು ಪಡೆದಿರತಕ್ಕವುಗಳಾಗಿವೆ. ಇವುಗಳಿಂದ ಹೆಚ್ಚಾಗಿ ವ್ಯಕ್ತಿ ಹಾಗೂ ಸಮೂಹಕ್ಕೆ ಒಳಿತಾಗುತ್ತದೆ. ಜೀವನದಲ್ಲಿ ಒಂದೇ ಗುರಿ–ಒಂದೇ ಮಾರ್ಗ ಯಾರಿಗೂ ಬೇಕಿಲ್ಲ. ಅವರವರ ಕಣ್ಣಿನಂತೆ-ಅವರವರ ಗುರಿ: ಅವರವರ ಕಾಲಿನಂತೆ ಅವರವರ ದಾರಿ. ಪ್ರತಿಯೊಬ್ಬ ವ್ಯಕ್ತಿ ಹಾಗೂ ಸಮಾಜ ತಮ್ಮ ಸ್ವಭಾವ–ಗುರಿ–ಉದ್ದೇಶ–ಸಂಕಲ್ಪ–ಸಂದರ್ಭಗಳಂತೆ ಈ ಎರಡು ಗುಣಗಳನ್ನು ಬಳಸಿಕೊಂಡಿರುವುದು ಕಂಡು ಬರುತ್ತದೆ.

ಲೋಕರೂಢಿ–ಗ್ರಂಥ, ಶಾಸ್ತ್ರ–ಗುರೂಪದೇಶ ಇವೆಲ್ಲ ಕಚ್ಚಾ ಸಾಮಗ್ರಿಗಳು. ಬಹುಜನ ಹಿತಾಯ–ಬಹುಜನ ಸುಖಾಯಕ್ಕೆ ಈ ಎರಡು ಗುಣಗಳು ಬಳಕೆಯಾಗಬೇಕು, ಅದು ಬಳಸುವವನ ಸತ್ವ–ಯೋಗ್ಯತೆಯನ್ನು ಅವಲಂಬಿಸಿದೆ.

‘ಸತ್’ ಧಾತು. ‘ಸತ್ಯ’ ನಾಮಪದ. ಸತ್ ಎಂದರೆ (God) ಎಂದೂ ಸತ್ಯವೆಂದರೆ (Truth) ಎಂದು ಅರ್ಥೈಸಿದರೂ–ಸತ್ ಇಲ್ಲದೆ ಸತ್ಯವಿಲ್ಲ–ಇರಲಾರದು. ಅದ್ದರಿಂದ ಸತ್ಯ ದೈವೀಗುಣ. ಸದ್ಗುಣ ಎಂದರು.

ಗೀತೆಯಲ್ಲೂ ಸಹ ‘ಸದ್ಭಾವೇ–ಸಾಧುಭಾವೇಚ ಸದಿತ್ಯೇತತ್ ಪ್ರಯುಜ್ಯತೆ.’

ಇಲ್ಲೂ ಒಳ್ಳೆಯದರ ಭಾವನೆಯೇ ಸತ್ಯವೆಂದು ಅರ್ಥ.

"ಯಾವುದಕ್ಕೆ ದೇಶ–ಕಾಲ–ಸಂದರ್ಭದ ಹಾನಿ, ವಿಕಾರವಿಲ್ಲವೋ ಅದೇ ಶಾಶ್ವತ ಸತ್ಯ. ಮತ್ತು ಯಾವ ನಡವಳಿಕೆ, ಯಾವ ತಿಳುವಳಿಕೆ, ಅನುಭವ, ಅಭ್ಯಾಸವು ಸವ್ವಸ್ತುವಿನ ಕಡೆಗೆ ಕರೆದೊಯ್ಯುವುದೋ ಅದೇ ಸತ್ಯ.

"ಸತ್ಯ ಗುಣ ಒಂದು–ಒಳ್ಳೆಯದೆಂಬುದರ ಕಾರ್ಯಗಳು ಸಾವಿರ. ಸಾವಿರ ಸತ್ಯವೇ ಒಂದು ಗುಣ "ಹೀಗೆಂದು ಡಿ. ವಿ. ಜಿ. ಅಭಿಪ್ರಾಯ.

"ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿ ಹಿತಂ ಮುಖಂ ।

ತತ್ ತ್ವಂ ಪೂಷನ್ ಅಪಾವೃಣು ಸತ್ಯ ಧರ್ಮಾಯ ದೃಷ್ಟಯೇ ॥

ಇದು ಉಪನಿಷತ್ತಿನ ಒಂದು ಪ್ರಾರ್ಥನೆ. ಸತ್ಯದ ಮುಖ ಚಿನ್ನದ ತಟ್ಟೆಯಿಂದ ಮರೆಯಾಗಿದೆ. ಸತ್ಯವನ್ನು ಧರ್ಮವನ್ನಾಗಿ ತಿಳಿದ ನಾನು ಸತ್ಯವನ್ನು ಕಾಣಲು ಬಯಸುತ್ತೇನೆ. ಸತ್ಯವನ್ನು ನಾನು ಕಾಣಲು, ಓ ಪೂಷನ್ ! ಚಿನ್ನದ ತಟ್ಟೆಯನ್ನು ಆಚೆಗೆ ತೆಗೆ ಎನ್ನುವ ಪ್ರಾರ್ಥನೆಯಲ್ಲಿ, ಸತ್ಯಾನ್ವೇಷಣೆ–ಸತ್ಯಸಾಕ್ಷಾತ್ಕಾರದ ಹಂಬಲ ವನ್ನು ಕಾಣುತ್ತೇವೆ. 'ಅಹಿಂಸಾ–ಸತ್ಯ–ಅಸ್ತೇಯ–ಬ್ರಹ್ಮಚರ್ಯ–ದಯಾ–ಕ್ಷಮಾ–ಜಪ–ಧ್ಯಾನ' ಸಿದ್ಧಾಂತ ಶಿಖಾಮಣಿ ಹೇಳುವ ಈ ಧಾರ್ಮಿಕ ಗುಣಗಳು (Religious Characters.) ಸಹೋದರ ಹಾಗು ಸಮಾನ ಗುಣಧರ್ಮಗಳಾಗಿವೆ ಒಂದೊಂದರಲ್ಲೂ ಒಂದೊಂದು ವೈಶಿಷ್ಟ್ಯವಿದೆ. ಒಂದು ಇನ್ನೊಂದಕ್ಕೆ ಪೂರಕ; ಮಾರಕವಲ್ಲ. ಇವುಗಳಲ್ಲಿ ನಮ್ಮವರು ಸತ್ಯಕ್ಕೆ ಹೆಚ್ಚು ಬೆಲೆಯನ್ನು ನೀಡಿದ್ದಾರೆ. ಇವುಗಳೆಲ್ಲ ಅಮೂರ್ತವಾದವುಗಳು. ಸಮಾಜ ನಂಬಿಕೊಂಡಂತೆ ಅವುಗಳ ಮೌಲ್ಯ. ಋತ–ಸತ್ಯ–ಧರ್ಮ–ದೇವರು ಈ ಪದಗಳನ್ನು ಕೆಲವು ಕಡೆ ಸಮಾನಾರ್ಥದಲ್ಲಿ ಬಳಸುತ್ತಾರೆ. ಅಷ್ಟೇ ಅಲ್ಲ: "ಸತ್ಯಂ ಮಾತಾ". "ಸತ್ಯವೇ ದೇವರು", "ಸತ್ಯವೇ ಧರ್ಮ"ವೆಂದು ಹೇಳುವಷ್ಟು ದೂರ ಹೋಗಿದ್ದಾರೆ. ಉಳಿದ ಗುಣಗಳಿಗೆ ಇಷ್ಟು ಮಹತ್ವ ಕಂಡು ಬರುವುದಿಲ್ಲ.

ಋಷಿಕವಿ ರಾಘವಾಂಕನು ತನ್ನ ಅಮರ ಕಲಾಕೃತಿ" ಹರಿಶ್ಚಂದ್ರ ಕಾವ್ಯ" ದಲ್ಲಿ–"ಹರನೆಂಬುದೇಸತ್ಯ : ಸತ್ಯವೆಂಬುದೆ ಹರನು."

"ಅತಿ ಮುನಿಪ ಯತಿ ಹೊಲೆಯ : ಹುಸಿಯದಿಹ ಹೊಲೆಯನು ಉನ್ನತ ಯತಿವರನು. ಹುಸಿದು ಮಾಡುವ ಮಹಾಯಜ್ಞಶತಮೆಯ್ದೆ ಪಂಚಪಾತಕ."

"ಸತ್ಯವೆರಸಿದ ಸ್ನಾಯುವದು ಲಿಂಗಾರ್ಚನೆ"–ಹೀಗೆಂದು ಸತ್ಯದ ಆರಾಧನೆ ಲಿಂಗಾರ್ಚನೆಗೆ ಸಮಾನವೆನ್ನುತ್ತಾನೆ.

ಹೀಗೆ ಸತ್ಯವನ್ನು ಎಷ್ಟು ಜನ ವೈಭವೀಕರಿಸಿ ಹೇಳಿದರೂ ಜೀವನ–ಅನುಭವ–ಆವರಣವಿಸ್ತಾರ–ಕಾಲ ಬದಲಾದಂತೆ ಸತ್ಯವೂ ಕಾಲದಿಂದ ಕಾಲಕ್ಕೆ ಬದಲಾಯಿಸುತ್ತದೆ. ಸನ್ನಿವೇಶಕ್ಕೆ ತಕ್ಕಂತೆ ಸತ್ಯ ಹುಟ್ಟಿ ಸಾರ್ಥಕವಾಗುತ್ತದೆ. ಸತ್ಯದಲ್ಲಿ ಎರಡು ಬಗೆ: (Absolute truth) ಸನಾತನ ಸತ್ಯ: 'ಸ್ಥಿತಿ ಸತ್ಯ'–ಇದು ಬದಲಾಗುವುದಿಲ್ಲ; (Relative Truth) "ಸ್ಥಿತ್ಯಂತರ–ಸತ್ಯ"–ಇದು ಬದಲಾವಣೆಯನ್ನು ಹೊಂದಬಹುದು.

ಸತ್ಯದ ನಿಲುವು ಅಗೋಚರ ಎಂದವರೇ ಹೆಚ್ಚು ಜನ.

ಸತ್ಯವನ್ನು ಪುನ: ಹೀಗೂ ವಿಂಗಡಿಸಬಹುದೆಂದು ತೋರುತ್ತದೆ:

ಸಕಾಲಿಕ ಸತ್ಯ–ತತ್ಕಾಲಿಕ ಸತ್ಯ–ಸರ್ವಕಾಲಿಕ ಸತ್ಯ; ಅಲ್ಲದೆ ಧಾರ್ಮಿಕ–ವೈಜ್ಞಾನಿಕ–ರಾಜಕೀಯ–ಕೌಟುಂಬಿಕ ಹಾಗೂ ರಾಷ್ಟ್ರ–ಸತ್ಯವೆಂದೂ ವಿಂಗಡಿಸಬಹುದೆಂದು ತೋರುತ್ತದೆ.

ಇವುಗಳೆಲ್ಲ ಸತ್ಯಾಂಶಗಳು ಮಾತ್ರ: ಆದರೆ ಪೂರ್ಣ ಸತ್ಯವಲ್ಲ.

ಸಾರ್ವಕಾಲಿಕ ಸತ್ಯ ಸನಾತನ; ಅದು ಬದಲಾಗುವುದಿಲ್ಲ.

ಉದಾ: ನ್ಯಾಯವೇ ದೇವರು.

ಸಕಾಲಿಕ–ತತ್ಕಾಲಿಕ ಸತ್ಯಕ್ಕೆ, ಉದಾ: ರಾಜನೇ ದೇವರು.

ಆದರೂ ಸತ್ಯ ಅವರವರ ನಿಲುವಿಗೆ–ಅರಿವಿಗೆ ಅನುಗುಣವಾಗಿ ಕಾಣುತ್ತದೆ.

ಶಿವಗಂಗೆಯ ಬೆಟ್ಟ ನಿಲುವಿಗೆ ಅನುಗುಣವಾಗಿ ಕಾಣುವಂತೆ ಒಂದೆಡೆಯಿಂದ ಸಿಂಹಾಚಲ, ಮತ್ತೊಂದೆಡೆಯಿಂದ ವೃಷಭಾಚಲ. ಇನ್ನೊಂದೆಡೆಯಿಂದ ಸರ್ಪಾಚಲ. ಮತ್ತೊಂದು ನಿಟ್ಟಿನಿಂದ ಗಜಾಚಲದಂತೆ ಕಾಣುತ್ತವೆ. ಆದರೆ ಈ ನೋಟ ಆಂಶಿಕವಾದ ಸತ್ಯದಿಂದ ಕೂಡಿದೆ. ಕೇವಲ ಪಾರ್ಶ್ವ ನೋಟ; ಪೂರ್ಣ ನೋಟವಲ್ಲ, ಪೂರ್ಣ ಸತ್ಯವಲ್ಲ. ಉಪನಿಷತ್ತಿನ ಕಥೆಯಂತೆ ಬ್ರಹ್ಮನು ದೇವ–ದಾನವ–ಮಾನವರಿಗೆ "ದ" ಎಂದು ಉಪದೇಶ ಮಾಡುತ್ತಾನೆ. ಅವರ ಉಪದೇಶ ಅವರವರ ಅರಿವಿಗೆ ಅನುಗುಣವಾಗಿ ಅರ್ಥವಾಯಿತು. ದೇವತೆಗಳು–ಭೋಗವನ್ನು ದಮನಿಸಬೇಕೆಂದೂ. ಮಾನುಷ್ಯರು–ಸ್ವಾರ್ಥತ್ಯಜಿಸಬೇಕೆಂದೂ. ರಾಕ್ಷಸರು–ಹಿಂಸಾಕೃತ್ಯಗಳನ್ನು ದಮನಿಸಿ ದಯಾವಂತರಾಗಬೇಕೆಂದೂ ಅರ್ಥೈಸಿಕೊಂಡರು: ಅವರವರಲ್ಲಿದ್ದ ಓರೆ–ಕೋರೆ ಲೋಪದೋಷಗಳನ್ನು ತಿದ್ದಿಕೊಳ್ಳುವ ಉಪದೇಶವೆಂದು ಬಗೆದರು. ಹಾಗೆಯೇ ಸತ್ಯವು ಬೇರೆ ಬೇರೆ ಜನಗಳಿಗೆ ಬೇರೆ–ಬೇರೆ ಅರ್ಥದಲ್ಲಿ ಕಾಣುತ್ತದೆ. ಸತ್ಯವನ್ನು ಹೀಗೆಯೇ ಎಂದು ಹೇಳಲು ಬರುವಂತಿಲ್ಲ.

ಸತ್ಯಕ್ಕೂ ಪ್ರಯೋಜನಕ್ಕೂ ಒಮ್ಮೊಮ್ಮೆ ಸಂಬಂಧವಿಲ್ಲ. ಆದರಿಂದ ಒಳಿತೂ ಆಗಬಹುದು, ಕೆಡಕೂ ಆಗಬಹುದು. ಸುಳ್ಳಿನಿಂದಲೂ ಒಳ್ಳೆಯ ಪ್ರಯೋಜನವಾಗುತ್ತದೆ-ವಿಷ್ಣೋಸಾರೆ. ಅಂತೂ, ಸತ್ಯದ ಮೌಲ್ಯ ವಿಜ್ಞಾನದಂತೆ ಸದುಪಯೋಗಪಡಿಸಿಕೊಳ್ಳುವವನ ನೈತಿಕ ಶಕ್ತಿಯ ಮೇಲೆ ನಿರ್ಧಾರವಾಗುತ್ತದೆ.

ಪಂಚೇಂದ್ರಿಯಗಳಿಗೆ ಗೋಚರವಾಗುವ ಜ್ಞಾನ ತಪ್ಪಿನಿಂದ ಕೂಡಿರುತ್ತದೆ. ಇಂದ್ರಿಯಾತೀತವಾದುದು ಸತ್ಯವೆಂದರು ಗಾಂಧೀಜಿ. ಅದರ ಅನುಭವ ಎಲ್ಲರಿಗೂ ಆಗುವುದಿಲ್ಲ, ಬಹುಶಃ ಮಹಾತ್ಮರಿಗೆ ಅದು ಸಾಧ್ಯ.

ಗಾಂಧೀಜಿಯವರೂ ಸತ್ಯವೇ ದೇವರೆಂದರು, ಅವರು ಹೇಳುವ ಈ ರೂಪಕದ ಮಾತು, ಅನುಭವ ಸತ್ಯದಿಂದ ಬಂದದ್ದು : "Truth is God· Denial of God, we have known· Denial of truth, we have not known". 'ಅಸ್ತೀತಿ ಸತ್'. 'ಸತ್' ಎಂದರೆ ವೇದಾಂತದಲ್ಲಿ ಪರಬ್ರಹ್ಮವೆಂದೇ ವ್ಯವಹಾರ. "ಸತಾಂಹಿ ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣಪ್ರವೃತ್ತಯಃ"– ಹೀಗೆಂದು ಅಭಿಜ್ಞಾನ ಶಾಕುಂತಲದಲ್ಲಿ ಕಾಳಿದಾಸ ಹೇಳುತ್ತಾನೆ. ಆ ಮಹಾಕವಿಯ ಅಭಿಪ್ರಾಯದಲ್ಲಿ ಅಂತಃಕರಣಪ್ರವೃತ್ತಿಯೇ ಸತ್ಯಸಾಕ್ಷಿಯಾಗಿದೆ. ಯಾರಿಗೆ ? ಮಹಾತ್ಮರಿಗೆ ಮಾತ್ರ.

ಇನ್ನು ಕಲ್ಯಾಣದ ವಿಷಯ :

ಇದು ಕೂಡಾ ಅಮೂರ್ತವಾದ ಗುಣ. ಸಮಾಜದ ಒಡಂಬಡಿಕೆಯ ಮೇಲೆ ಅದರ ಮೌಲ್ಯ ನಿಂತಿದೆ. ಅಮರಸಿಂಹನು ತನ್ನ ಅಮರಕೋಶದಲ್ಲಿ–"ಸ್ವಶ್ರೇಯಸಂ ಶಿವಂ–ಭದ್ರಂ–ಕಲ್ಯಾಣಂ–ಮಂಗಳಂ–ಶುಭಂ ಎಂದು ಕಲ್ಯಾಣ ಪದದ ಪರ್ಯಾಯಗಳನ್ನು ತಿಳಿಸುತ್ತಾನೆ. ಬಹುಜನಕ್ಕೆ ಸುಖ–ಬಹುಜನಕ್ಕೆ ಹಿತವಾಗುವುದೇ, ಒಳಿತಾಗುವುದೇ ಕಲ್ಯಾಣ. ಇದೂ ಕೂಡಾ–ವ್ಯಕ್ತಿ, ಸಮಾಜ, ದೇಶಗಳಲ್ಲಿ ತನ್ನ ಅರ್ಥವನ್ನು ಬದಲಾಯಿಸುವ ಸಾಧ್ಯತೆ ಇದೆ.

ದೇಶ–ಕಾಲ–ಪರಿಸ್ಥಿತಿಯನ್ನು ಅನುಸರಿಸಿ 'ಕಲ್ಯಾಣ'ದ ಆವಿರ್ಭಾವವಾಗುತ್ತದೆ. ಇಂಗ್ಲೀಷಿನಲ್ಲಿ ಇದಕ್ಕೆ ಸಮಾನ ಪದ 'Welfare' ಎಂದು ಕರೆಯುತ್ತಾರೆ. ಸತ್ಯದಂತೆ ಕಲ್ಯಾಣವೂ ಅವರವರ ದೃಷ್ಟಿಯನ್ನು ಅವಲಂಬಿಸಿದೆ. ಅದರಲ್ಲೂ ಕಾಲಗತಿಯನ್ನು ಅನುಸರಿಸಿ ಸಕಾಲಿಕ–ಅಕಾಲಿಕ–ತತ್ಕಾಲಿಕ, ಸಾರ್ವಕಾಲಿಕ ಕಲ್ಯಾಣವೆಂದು

ವಿಂಗಡಿಸಲು ಬರುತ್ತದೆ. ಅಲ್ಲದೆ–ವ್ಯಕ್ತಿಕಲ್ಯಾಣ–ಕುಟುಂಬಕಲ್ಯಾಣ–ಸಮಾಜ ಕಲ್ಯಾಣ–ರಾಷ್ಟ್ರಕಲ್ಯಾಣವೆಂದೂ ವಿಭಜಿಸಬಹುದಾಗಿದೆ, ಕುಟುಂಬ ಕಲ್ಯಾಣದ ದೃಷ್ಟಿಯಿಂದ ವ್ಯಕ್ತಿಕಲ್ಯಾಣ ಗೌಣ. ಸಮಾಜ ಕಲ್ಯಾಣದ ದೃಷ್ಟಿಯಿಂದ ಕುಟುಂಬ ಕಲ್ಯಾಣವನ್ನು ಗೌಣವಾಗಿ ಕಾಣಲಾಗುತ್ತದೆ. "ತ್ಯಜೇತ್ ಏಕಂ ಕುಲಸ್ಯಾರ್ಥೇ–ಗ್ರಾಮಸ್ಯಾರ್ಥೇ ಕುಲಂ ತ್ಯಜ್ಯೇತ್–ಗ್ರಾಮಂ ಜನಪದಸ್ಯಾರ್ಥೇ"–ಎನ್ನುವ ಸುಭಾಷಿತಗಾರನ ಅಭಿಪ್ರಾಯ ಮೇಲಿನ ವಿಷಯವನ್ನೇ ಅನುಮೋದಿಸುತ್ತದೆ. ಸತ್ಯದಂತೆ. ಕಲ್ಯಾಣವೂ ಒಂದು ಗುಣ–ಮೌಲ್ಯ. ಇದರಲ್ಲಿ ಎರಡು ದಾರಿಗಳಿವೆ; ಒಂದು ಶ್ರೇಯಸ್ಸಿನದು, ಮತ್ತೊಂದು ಪ್ರೇಯಸ್ಸಿನದು.

"ಶ್ರೇಯೋ ಹಿ ಧೀರೋ ಪ್ರೇಯಸೋ ವೃಣೀತೆ ಮಂದೋ ಯೋಗ ಕ್ಷೇಮಾದ್ವೃಣೀತೆ" ಎನ್ನುತ್ತದೆ ಉಪನಿಷತ್ತು.

ಧೀರನು ಎಷ್ಟೇ ಎಡರು ತೊಡರುಗಳು ಬಂದರೂ ಸಹ ಶ್ರೇಯಸ್ಸಿನ ದಾರಿಯನ್ನು ಹಿಡಿಯುತ್ತಾನೆ. ಮಂದಮತಿಯು ತತ್ಕಾಲ ಸುಖವನ್ನೇ ಸರಿ ಎಂದು ಪ್ರೇಯಸ್ಸಿನ ಮಾರ್ಗವನ್ನು ಆರಿಸಿಕೊಳ್ಳುತ್ತಾನೆ.

ಅಲ್ಪಸುಖ, ಅಲ್ಪತೃಪ್ತಿ ಮಾರ್ಗವೇ ಪ್ರೇಯಸ್ಸು. ಅನಂತ ಕಾಲ ನಿಲ್ಲುವ ಶಾಶ್ವತ ಸುಖ ಮೌಲ್ಯವನ್ನು ನೀಡುವುದೇ ಶ್ರೇಯಸ್ಸಿನ ದಾರಿಯಾಗಿದೆ.

ಸ್ವಾರ್ಥ ಪ್ರೇಯಸ್ಸು, ನಿಃಸ್ವಾರ್ಥ ಶ್ರೇಯಸ್ಸು.

ಭೋಗಿಯಾಗುವುದೇ ಪ್ರೇಯಸ್ಸು. ತ್ಯಾಗಿಯಾಗುವುದೇ ಶ್ರೇಯಸ್ಸು.

ಲೋಭಿಯಾಗುವುದೇ ಪ್ರೇಯಸ್ಸು; ದಾನಿ ಉದಾರಿಯಾಗುವುದೇ ಶ್ರೇಯಸ್ಸು.

ವಾಸ್ತವಿಕವಾಗಿಯೂ. ತಾತ್ವಿಕವಾಗಿಯೂ "ಸತ್ಯ. ಕಲ್ಯಾಣ" ಧರ್ಮದ ಎರಡು ನೋಟಗಳು. ಆದರೆ ಇವುಗಳ ದೃಷ್ಟಿಯೊಂದೇ ಆಗಿದೆ. ಸತ್ಯವಿಲ್ಲದ ಕಲ್ಯಾಣ ಜೀವವಿಲ್ಲದ ಶವ. ಕಲ್ಯಾಣ ದೃಷ್ಟಿಯಿಲ್ಲದ ಸತ್ಯವೂ body life without or lamp without light ಆಗಿದೆ. ಕಲ್ಯಾಣಕ್ಕೆ ಸತ್ಯದ ಹಿನ್ನೆಲೆ ಬೇಕು. ಸತ್ಯಕ್ಕೆ ಕಲ್ಯಾಣದ ದೃಷ್ಟಿ ಇರಬೇಕು. ಅಂಧ–ಪಂಗು ನ್ಯಾಯದಂತೆ (ಕುರುಡ–ಕುಂಟ ನ್ಯಾಯ) ಅವು ಪರಸ್ಪರ ಅವಲಂಬಿಗಳು. ಲೋಕಹಿತಕ್ಕೆ ಈ ಎರಡೂ ಗುಣಗಳು ಬೇಕು. (Means and ends) ಸಾಧನೆ ಉತ್ತಮವಾದರೆ ಸಿದ್ಧಿಯೂ ಉತ್ತಮ.

ಸತ್ಯಪಥದಲ್ಲಿ ಸಾಗಿದರೆ ಕಲ್ಯಾಣವಾಗುತ್ತದೆ. ಕಲ್ಯಾಣದ ಹಾದಿಯಲ್ಲಿ ಸಾಗಿದಾಗ ಸತ್ಯದ ನಿಲುವು ದೊರೆಯಬಹುದು–"ಬೀಜ ವೃಕ್ಷ ನ್ಯಾಯದಂತೆ."

ಉತ್ತಮ ಬೀಜದಿಂದ ಉತ್ತಮ ಫಲ. ಕಲ್ಯಾಣದ ಬೀಜ ಬಿತ್ತಿದರೆ ಸತ್ ಫಲ (ಸತ್ಯದ ಫಲ). ಒಳ್ಳೆಯ ಫಲ ದೊರೆಯುತ್ತದೆ. ಸತ್ಯದ ಬೀಜ ಬಿತ್ತಿದರೆ–ಕಲ್ಯಾಣದ ಫಲವೂ ದೊರೆಯುತ್ತದೆ. ನಿಜವಾಗಿಯೂ ಸತ್ಯ–ಕಲ್ಯಾಣ ಈ ಶಬ್ದಗಳ 'ಅರ್ಥ' ಸ್ಥೂಲವಾಗಿ ಒಳ್ಳೆಯದೆಂದೇ. ಸತ್ಯವೆಂದರೆ "ವಾಸ್ತವಿಕ ವಿಚಾರ…ನಡೆದ–ಘಟನೆ". ಕಲ್ಯಾಣವೆಂದರೆ–ಪ್ರಯೋಜನ–ಉಪಯೋಗ–ಉಪಕಾರ ಈ ಅರ್ಥಗಳಲ್ಲಿ ಬಳಸುವುದು ಕಂಡು ಬರುತ್ತದೆ. ಈ ಎರಡರ ಗುಣ ಮೌಲ್ಯಗಳನ್ನು ಹೀಗೆಯೇ ಎಂದು ಗೆರೆ ಎಳೆದು ಹೇಳಲಿಕ್ಕೆ ಬರುವುದಿಲ್ಲ. ಹೀಗಿರುವಾಗ ಸತ್ಯಕ್ಕಿಂತ ಕಲ್ಯಾಣ ಶ್ರೇಷ್ಠವೆಂದು ಹೇಳುವ ಮಾತು. ಅದಕ್ಕೆ ಕೊಡುವ ಯುಕ್ತಿ ಯುಕ್ತ ಉದಾಹರಣೆಗಳು ವ್ಯಾವಹಾರಿಕ ಹಾಗೂ ತತ್ಕಾಲ ಪ್ರಯೋಜನ ಉಳ್ಳ ಪ್ರೇಯೋಮಾರ್ಗವನ್ನು ಹಿಡಿದ ಮಾತುಗಳು. ಇಂಥ ಕಡೆ ಸತ್ಯಕ್ಕೆ ಮೌಲ್ಯ ಕಡಿಮೆಯಾಗುತ್ತದೆ. ಹಾಗೂ ಸತ್ಯದಿಂದ ಜಾರಿಕೊಳ್ಳುವ ದಾರಿಯೂ ಆಗಬಹುದಾಗಿದೆ. ಆದರೂ "ನಮ್ಮ ಭಾರತೀಯ ಹಿಂದೂ ದರ್ಶನ ಶಾಸ್ತ್ರದಲ್ಲಿ ಸತ್ಯಕ್ಕೆ ಅಗ್ರಸ್ಥಾನವಿದೆ. ಅದಕ್ಕಿಂತ ದೊಡ್ಡ ತತ್ವ, ಗುಣ ಬೇರೆ ಇಲ್ಲ." –ಎನ್ನುವ ಮಾತನ್ನು ಬುದ್ಧ–ಶಂಕರ–ಮಹಾವೀರ–ಗಾಂಧೀಜಿ–ವಿವೇಕಾನಂದ ಇವರೆಲ್ಲ ಒಪ್ಪಿಕೊಂಡಿದ್ದಾರೆ. ನಮ್ಮ ಕಾಲದಲ್ಲೂ ಗಾಂಧೀಜಿಯಂತಹ ಸತ್ಯಸಂಧರು–ಸತ್ಯ ಸಾಧಕರಿದ್ದರು ಎನ್ನುವ ಮಾತು ಸತ್ಯದ ಸತ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಶ್ರೇಯಸ್ಸಿನ ಮಾರ್ಗ ಕಠಿಣವೇ ಸರಿ. ಹಿಮಾಲಯ ಪರ್ವತವನ್ನೇರಲು ಕಾಲು ಗಟ್ಟಿ ಇರಬೇಕು. ಅಷ್ಟೇ–ಅಲ್ಲ: ಧೈರ್ಯ ಸಾಹಸಗುಣಗಳೂ ಇರಬೇಕು. ನಮಗೆ ಹತ್ತಲು ಸಾಧ್ಯವಿಲ್ಲದಾಗ ಹಿಮಾಲಯ ಪರ್ವತವನ್ನು ಬೈದರೆ ಪ್ರಯೋಜನವಿಲ್ಲ. ಸತ್ಯ ದೊಡ್ಡದು. ನಾವು ಅದರ ಮೌಲ್ಯ ಕಡಿಮೆ ಮಾಡಿದರೆ ನಮ್ಮ ಮೌಲ್ಯ ಕಡಿಮೆಯಾಗುತ್ತದೆ.

"ಇರುವೆ ಹತ್ತಿದರೆ ಅರಳಿಮರ ಅಲ್ಲಾಡುವುದೇ ? ನೊರಜು ಹೊಕ್ಕರೆ ಸಾಗರದ ಜಲ ಕದಡುವುದೇ ?" ಸತ್ಯ ದೊಡ್ಡದು, ನಮ್ಮ ಪ್ರಯತ್ನ ಅದರ ಮುಂದೆ ವ್ಯರ್ಥವಾಗುತ್ತದೆ. ಶ್ರೇಯಸ್ಸಿನ ಬಾಳಿಗೆ, ದಿವ್ಯ ಸಂಸ್ಕೃತಿಯ ಸತ್ವಕ್ಕೆ–ಸತ್ಯವೇ ನೆಲೆ, ಹಿನ್ನೆಲೆ. ಧರ್ಮಕ್ಕೆ ಅದೇ ದಾರಿ.

ಸತ್ಯ ಹೇಳುವವರಿಂದಲೂ ಅನೇಕ ಕಷ್ಟಗಳಿವೆ, ಸುಳ್ಳಿನಿಂದ ಅನೇಕ ಪ್ರಯೋಜನ, ಸುಖಗಳೂ ಸಿಗಬಹುದು. ಸತ್ಯ ಪ್ರಕಟವಾದಾಗ ಅದರ ಪರಿಣಾಮ ಘೋರ. ಸತ್ಯ ಧೀರರ ಸೊತ್ತು, ಸುಳ್ಳು ಹೇಡಿಗಳ ಅಳ್ಳೆದೆಯವರ ಅಸ್ತ್ರ. ಸುಳ್ಳು ದುರ್ಬಲರಿಗೆ ಪ್ರೇಯಸ್ಸಿನ ದಾರಿ. ಅದು ತಾತ್ಕಾಲಿಕ ಪ್ರಯೋಜನ ಸುಖ ನೀಡುತ್ತದೆ. 'ಸತ್ಯ' ಧೀರರ ಹಾದಿ. ಅಲ್ಲಿ ಶಾಶ್ವತ–ಅಲೌಕಿಕ ಪ್ರಯೋಜನ ಸುಖ ದೊರೆಯುತ್ತದೆ. ಅದು ಶ್ರೇಯೋಮಾರ್ಗ. ಒಂದು ದೃಷ್ಟಾಂತದಿಂದ ಈ ವಿಷಯವನ್ನು ಸ್ಪಷ್ಟಪಡಿಸುವದಾದರೆ–ಗೆಲಿಲಿಯೋ ಪೋಪರ ಎದುರಿಗೆ ಸುಳ್ಳು ಹೇಳಲೇ ಬೇಕಾಯಿತು. ಆದರೆ

ಅವನು ಸ್ವತಃ ಅಪರಾಧಿಯಾಗಿರಲಿಲ್ಲ. ಪ್ರೋಪರ ದೃಷ್ಟಿಯಲ್ಲಿ ಮಾತ್ರ ಅಪರಾಧಿಯಾಗಿದ್ದನಷ್ಟೇ. ಅವನು ಸತ್ಯಸಾಧಕನಾಗಿದ್ದ. ಇನ್ನೂ ಜಿದುಕಿ ಸತ್ಯಸಿದ್ಧಾಂತಗಳನ್ನು ಕಂಡು ಹಿಡಿದು ಲೋಕಹಿತಗೈಯುವದು ಅವನ ಅಭೀಷ್ಟವಾಗಿತ್ತು. ಅದರಲ್ಲಿ ಕಲ್ಯಾಣಭಾವನೆಯೂ ಅಡಗಿತ್ತು. ಇಲ್ಲಿ ಸತ್ಯ ಮುಳುಗಲಿಲ್ಲ. ಸತ್ಯವನ್ನು ಎತ್ತಿ ಹಿಡಿದು ಜಗತ್ತಿಗೆ ಪ್ರಕಾಶ ಪಡಿಸಲು ಸುಳ್ಳು ಹೇಳಬೇಕಾಯಿತು. ಹೀಗೆ ವ್ಯಕ್ತಿ ಪವಿತ್ರವಾಗಿ ದೋಷಮುಕ್ತನಾಗಿದ್ದು ಅವನ ದೃಷ್ಟಿ ಕಲ್ಯಾಣದ ಕಡೆಗಿದ್ದರೆ–ಅವನು ಹೇಳುವ ಸುಳ್ಳನ್ನು ಪರಿಗಣಿಸಬೇಕಾಗಿಲ್ಲ. ಆದರೆ ಕಳ್ಳನೊಬ್ಬ ಈ ಕೆಲಸ ಮಾಡಿದಾಗ ಪರಿಣಾಮ ವಿಕಾರವನ್ನು ಹೊಂದುತ್ತದೆ. ಅಷ್ಟೇ ಅಲ್ಲ. ಅವನು ಹೇಳುವ ಸುಳ್ಳು ಕ್ಷಮಾರ್ಹವಾಗುವುದಿಲ್ಲ.

ಹೀಗೆ ಸತ್ಯಾಸತ್ಯಗಳ ವಿಷಯವು ವ್ಯಕ್ತಿ–ಸಂದರ್ಭಗಳ ಹಿನ್ನೆಲೆಯಲ್ಲಿ ನಿರ್ಣೀತವಾಗುತ್ತದೆ. "ಲೋಕ ಹಿತವಾದ ಸತ್ಯವೇ ಪರಮ ಸತ್ಯ. ಯಥಾರ್ಥ ಸತ್ಯದಿಂದ ಲೋಕಕ್ಕೆ ಹಾನಿಯಾದರೆ ಅದನ್ನು ಬಿಡಬೇಕು. ಒಂದು ಭಾವನೆ ಯಥಾರ್ಥವಲ್ಲದಿದ್ದರೂ ಅದರಿಂದ ಇತರರಿಗೆ ಕ್ಷೇಮವಾಗುತ್ತದಾದರೆ ಅದು ಯಥಾರ್ಥ ಸತ್ಯಕ್ಕಿಂತ ಮೇಲಾದದ್ದು" ಎಂದು ಪಾಶುಪತರು ಭಾವಿಸುತ್ತಾರೆ. ಅದೇ ರೀತಿ ಕಲ್ಯಾಣ ಸ್ವಾರ್ಥಪೂರಿತವಾಗಿದ್ದರೆ ತ್ಯಾಜ್ಯವೇ ಸರಿ.

ಹೀಗೆ ಈ ವಿಷಯದ ಬಗ್ಗೆ ಪರ–ವಿರೋಧ ಹೇಳಿಕೆಗಳಿಗೆ ಅವಕಾಶವಿದೆ. ಆದರೂ ತಾತ್ಕಾಲಿಕ ಪ್ರಯೋಜನ. ಸುಖವನ್ನೇ ಗಮನದಲ್ಲಿರಿಸಿಕೊಂಡು ಅದನ್ನೇ ಕಲ್ಯಾಣವೆಂದು ಕರೆದು ಸತ್ಯದ ಮರೆಮಾಡಿದರೆ ಖಂಡಿತವಾಗಿಯೂ ಅಕಲ್ಯಾಣವಾಗುತ್ತದೆ ಕಾಲಾನಂತರದಲ್ಲಾದರೂ.

ಈ ದೃಷ್ಟಿಯಿಂದ ನನ್ನ ಅಭಿಪ್ರಾಯದಲ್ಲಿ ಸತ್ಯ–ಕಲ್ಯಾಣಗಳು ಸಮಾನ ಗುಣ–ಧರ್ಮಗಳು. ಆದರೂ ಅವುಗಳ ಅರ್ಥ ಮೌಲ್ಯ. ವೈಶಿಷ್ಟ್ಯ ಬೇರೆ. ಒಂದಕ್ಕಿಂತ ಮತ್ತೊಂದು ಹೆಚ್ಚು ಅಲ್ಲ; ಕಡಿಮೆಯೂ ಅಲ್ಲ.

'ಸತ್ಯ'–ಜಗತ್ತಿನ ನಾನಾ ದೇಶದ ಗಾದೆಗಳಲ್ಲಿ

ಸತ್ಯದ ಹಿರಿಮೆ–ಗರಿಮೆ

೧. ಸತ್ಯಕ್ಕೆ ಸಾವಿಲ್ಲ (ಕನ್ನಡ)

೨. ಸತ್ಯದ ಜೊತೆಗೆ ಒಬ್ಬ ಎಲ್ಲಿಗೆ ಬೇಕಾದರೂ ಹೋಗಬಹುದು–ಸೆರೆಮನೆಗೂ (ಪೋಲಿಶ್)

೩. ಸತ್ಯ ಭಾರವಾದುದು. ಆದ್ದರಿಂದ ಎಲ್ಲೋ ಕೆಲವರು ಅದನ್ನು ಹೊರು ವರು (ಹಿಬ್ರು).
೪. ಸನಾತನ ಸತ್ಯ–ಹಳೆಯ ಕಾನೂನು–ಹಳೆಯ ಮಿತ್ರರು–ಪುರಾತನ ಗ್ರಂಥ ಗಳು ಮತ್ತು ಹಳೆಯ ಮದ್ಯ ಅತ್ಯುತ್ತಮ (ಪೋಲಿಶ್).

ಸತ್ಯದ ಆಚರಣೆ ಕಷ್ಟ

೧. ಸತ್ಯ ಎಲ್ಲರನ್ನೂ ಉರುಳಿಸಿಕೊಲ್ಲುವ ಗದೆ ಅಥವಾ ದೊಣ್ಣೆ (ಫ್ರೆಂಚ್)
೨. ಒಬ್ಬ ತನ್ನ ಮುಷ್ಟಿಯ ತುಂಬ ಸತ್ಯ ಹೊಂದಿರುವಾಗ ಅದನ್ನು ಯಾವಾ ಗಲೂ ತೆರೆದು ತೋರುವುದು ವಿವೇಕವಲ್ಲ (ಫ್ರೆಂಚ್).
೩. ಸತ್ಯ ಹೇಳುವಾತನು ವಸತಿಯನ್ನು ಕಾಣಲು ಸಮರ್ಥನಾಗಲಾರ (ಜರ್ಮನ್).
೪. ಸತ್ಯ ಜಗಳಗಂಟ (ಗ್ರೀಕ್).
೫. ಸತ್ಯವೊಂದು ದವ್ವ, ಅವಿವೇಕಿಯನ್ನು ಅದು ಹೆದರಿಸುತ್ತದೆ. (ಜರ್ಮನ್)
೬. ಸತ್ಯವೂ ಸಹ ಮುಳುಗುವುದು, ಬಂಗಾರ ಮೇಲ್ಗಡೆ ಬಂದರೆ (ರಷ್ಯನ್)
೭. ಪ್ರಪಂಚದಲ್ಲೇ ಅತ್ಯಂತಕಹಿಯಾದ ವಸ್ತು ಸತ್ಯ (Yiddish)

ಸತ್ಯವನ್ನು ಗುರುತಿಸುವುದು ಕಷ್ಟ

೧. ಸತ್ಯ ಆಗಾಗ್ಗೆ ರೂಪದ ಕೊಳದಲ್ಲೇ ಅಡಗಿಕೊಳ್ಳುತ್ತದೆ (ಚೀನಾ)
೨. ಸತ್ಯ ಪರಚಿದ ಮುಖ ಹೊಂದಿದೆ (ಗ್ರೀಕ್)
೩. ಬಾವಿಯ ತಳದಲ್ಲಿ ಸತ್ಯ ಮಲಗಿರುವುದು (ಫ್ರೆಂಚ್)

ಸತ್ಯವನ್ನು ಹೇಳಲು ಯಾರು ಸಮರ್ಥರು ?

೧. ಮಕ್ಕಳು–ಅತಿ ಮೂರ್ಖರು–ಕುಡುಕರು ಸತ್ಯ ಹೇಳುತ್ತಾರೆ. (ಬಲ್ಗೇರಿಯಾ)
೨. ಬಲಶಾಲಿ ಮನುಷ್ಯ (ಗಂಡೆದೆಯುಳ್ಳವ) ಅಥವಾ ಮೂರ್ಖ. ಸತ್ಯ ಹೇಳುತ್ತಾರೆ. (ಜರ್ಮನ್)

ಸತ್ಯ–ಅಸತ್ಯದ ಅಂತರ

೧. ಸತ್ಯಕ್ಕೆ ಸೂರ್ಯನ ಕಾಂತಿ : ಸುಳ್ಳಿಗೆ ಜೇನಿನ ಝೇಂಕಾರ (ಆಲಜೀರಿಯನ್)
೨. ಸತ್ಯ ಮತ್ತು ಸುಳ್ಳು ಸಂಧಿಸಿದಾಗ ಸುಳ್ಳು ಹಾನಿಗೊಳಗಾಗುವದು (ಡ್ಯಾನಿಷ್)

೩. ಸುಳ್ಳು ಎಷ್ಟೇ ಇದ್ದರೂ ಅದು ಮೇಲಿದ್ದ ಕೂಡಲೆ ಸತ್ಯಕ್ಕೆ ಸಿಕ್ಕಿ ಹಾಕಿಕೊಳ್ಳುತ್ತದೆ (Walof)

ಕಾಲ ಮತ್ತು ಸತ್ಯ

೧. ಕಾಲ ಸತ್ಯದ ತಂದೆ.
೨. ನ್ಯಾಯಾಧೀಶನಿಗಿಂತ ಚೆನ್ನಾಗಿ ಕಾಲ ಸತ್ಯವನ್ನು ಹೊರ ತರುವುದು (ಜರ್ಮನ್).
೩. ಸತ್ಯ ಕಾಲದ ಪುತ್ರಿ (ಇಟಾಲಿಯನ್).

ಸತ್ಯವನ್ನು ಹೇಗೆ ನುಡಿಯಬೇಕು ?

೧ ಸತ್ಯವನ್ನು ಪ್ರೀತಿಯಲ್ಲಿ ನುಡಿವುದು (ಗ್ರೀಕ್)
೨. ಸತ್ಯದ ಬಾಣವನ್ನು ಪ್ರಯೋಗಿಸುವಾಗ ಮೊದಲು ಅದರ ಮೊನೆಯನ್ನು ಜೇನಿನಲ್ಲಿ ಅದ್ದು (ಅರೆಬಿಕ್).
೩. ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಯಾತ್ ಸತ್ಯಮಪ್ರಿಯಂ (ಉಪನಿಷತ್)

ಗ್ರಂಥ ಋಣ

೧. ಭಾರತಾರ್ಯರ ಸಂಸ್ಕೃತಿ : ಚಂದ್ರಶೇಖರ ಶಾಸ್ತ್ರಿ
೨. ಆಧುನಿಕ ತತ್ತ್ವಶಾಸ್ತ್ರದ ಸಮಸ್ಯೆಗಳು : ಹನುಮಂತ ರಾವ್
೩. "ಬಾಳಿಗೊಂದು ನಂಬಿಕೆ" ಹಾಗೂ "ಸಂಸ್ಕೃತಿ" : ಡಿ.ವಿ.ಜಿ.
೪. ಫೋಕ್ ಲೋರ್ : ಧವಳಶ್ರೀ
೫. Racial Proverbs.

ಕನ್ನಡ ಅನುನಾಸಿಕ ಮತ್ತು ಅನುನಾಸಿಕ್ಯಗಳು

● ವಿಲ್ಯಂ ಮಾಡ್ತ

ಕನ್ನಡದಲ್ಲಿ ನಾಮಗುಣವಾಚಕ (Adjective[೧]) ಮತ್ತು ಸಮಾಸ (Compound[೨]) ಗಳಂತೆ ಅನುನಾಸಿಕ (Nasal)ಗಳ ಬಗೆಗೂ ಗೊಂದಲವುಂಟು. ಈ ಗೊಂದಲದ ನಿವಾರಣೆಯ ಮೊದಲ ಹಂತದಲ್ಲಿ ಅನುನಾಸಿಕ ಮತ್ತು ಅನುನಾಸಿಕ್ಯ (Nasalized) ಧ್ವನಿಗಳನ್ನು ಧ್ವನ್ಯಾತ್ಮಕ (Phonetic) ಮತ್ತು ಧ್ವನಿಮಾತ್ರಕ (Phonemic) ಹಂತಗಳಲ್ಲಿ ಸ್ಪಷ್ಟವಾಗಿ ತಿಳಿದುಕೊಳ್ಳುವುದು ಅನಿವಾರ್ಯ.

ಕೇಶಿರಾಜ. ಅನುನಾಸಿಕವನ್ನು ವ್ಯಾಖ್ಯಾನಿಸಿ "ಅನುನಾಸಿಕವೆಂದೊಡೆ ಮುಖ ನಾಸಿಕವಾದೊಡನೆ ಕೂಡಿ ಉಚ್ಚರಿಪುದು" ಎಂದಿದ್ದಾನೆ. **ಅಷ್ಟಾಧ್ಯಾಯಿ**ಯಲ್ಲಿ "ಮುಖನಾಸಿಕ ವಚನೋ ಅನುನಾಸಿಕ:"[೩] ಎಂದು ಹೇಳಿದ ಪಾಣಿನಿಯ ಸೂತ್ರಕ್ಕೆ ಭಟ್ಟೋಜಿ ದೀಕ್ಷಿತನ **ವೈಯಾಕರಣ ಸಿದ್ಧಾಂತ ಕೌಮುದೀ** ಎಂಬ ಅಷ್ಟಾಧ್ಯಾಯಿಗೆ ವಿವರಣೆ ನೀಡಿದ ಗ್ರಂಥದಲ್ಲಿ "ಮುಖಸಹಿತ ನಾಸಿಕಯೋಚ್ಚಾರ್ಯಮಾಣೋ ವರ್ಣೋ ಅನುನಾಸಿಕ ಸಂಜ್ಞ: ಸ್ಯಾತ್" ಎಂದು ವ್ಯಾಖ್ಯಾನವಿದೆ. ಇವುಗಳನ್ನೆಲ್ಲ ತುಲನಾತ್ಮಕವಾಗಿ ಓದಿದಾಗ ಕೇಶಿರಾಜ "ಅಕ್ಕರಮುದಯಿಪ ತಾಣಂ"[೪] ಗಳ ವಿಷಯದಲ್ಲಿ ಎಷ್ಟರ ಮಟ್ಟಿಗೆ **ಅಷ್ಟಾಧ್ಯಾಯಿ**ಗೆ ಮತ್ತು **ವೈಯಾಕರಣ ಸಿದ್ಧಾಂತ ಕೌಮುದಿ**ಗೆ ಋಣಿಯಾಗಿದ್ದಾನೆಯೊ ಅಷ್ಟೇ ಮಟ್ಟಿಗೆ ನಾಸಿಕದ ವ್ಯಾಖ್ಯೆಯ ವಿಷಯದಲ್ಲಿಯೂ ಆಗಿದ್ದಾನೆಂಬುದು ಖಚಿತವಾಗುತ್ತದೆ.

---

೧. ನೋಡಿ: ವಿಲ್ಯಂ ಮಾಡ್ತ "ಕನ್ನಡ ನಾಮಗುಣವಾಚಕ", **ಕರ್ನಾಟಕ ಭಾರತಿ,** ೮ : ೩ (೧೯೭೬) ಪು. ೧೬–೨೬.

೨. "ಕನ್ನಡದಲ್ಲಿ ಸಮಾಸ", ಅದೇ ೪:೪ (೧೯೭೨), ಪು. ೧೧೪–೧೩೬. ಮತ್ತು **ಕನ್ನಡ ಭಾಷೆಯ ರೂಪರೇಷೆಗಳು** (೧೯೭೫ : ೭೫–೬) ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ. **ಪ್ರಬುದ್ಧ ಕರ್ಣಾಟಕ** (೧೯೭೪) ೫೬:೧. ಸಂಚಿಕೆಯ ೫೫–೬೩ ಪುಟಗಳಲ್ಲಿಯ "ಕನ್ನಡದಲ್ಲಿ ಅನುನಾಸಿಕ ನಿರನುನಾಸಿಕಗಳು" ಎಂಬ ಲೇಖನವನ್ನು ಪ್ರಸ್ತುತದಲ್ಲಿ ಪರಿಷ್ಕೃತಗೊಳಿಸಿದ್ದೇನೆ.

೩. ೧–೧–೮. ೪. ಕೇಶಿರಾಜ, **ಶಬ್ದಮಣಿದರ್ಪಣಂ** (ಸಂ: ಡಿ. ಎಲ್. ನರಸಿಂಹಾಚಾರ) ೧೯೬೪, ಸೂ. ೪೦. ಪು. ೩೮.

ಆಧುನಿಕ ಧ್ವನಿವಿಜ್ಞಾನಿ (Phonetician) ಗಳು ಹೇಳುವ ಪ್ರಕಾರ ಕೃಕ (Larynx) ದಿಂದ ಶ್ವಾಸಪ್ರವಾಹ ಆಸ್ಯದ್ವಾರ (Oral cavity)ದ ಮೂಲಕ ಬಾರದಂತೆ ನಾಸಾನಾಳ (Velic) ತಡೆದಾಗ ಅದು ನಾಸಾದ್ವಾರ (Nasal cavity)ದ ಮೂಲಕ ಹೊರಬರುತ್ತದೆ; ಆ ಸಮಯದಲ್ಲಿ ಉಚ್ಚಾರಗೊಳ್ಳುವ ಭಾಷಾಧ್ವನಿ (Phone) ಗಳು ಅನುನಾಸಿಕಗಳು. ಆಸ್ಯ ಮತ್ತು ನಾಸಾದ್ವಾರಗಳೆರಡನ್ನೂ ತೆರೆದಿಟ್ಟು ಉಚ್ಚರಿಸುವ ಭಾಷಾಧ್ವನಿಗಳೇ **ಅನುನಾಸಿಕ್ಯ**ಗಳು. ಸಾಮಾನ್ಯವಾಗಿ ವ್ಯಂಜನ ಕಲ್ಪ (Contoid)[೫] ಮತ್ತು ಸ್ವರಕಲ್ಪ (Vocoid)[೬] ಗಳು ಅನುನಾಸಿಕ್ಯಗಳಾಗಬಹುದಾದರೂ ಮೌಖಿಕ ಸ್ಪರ್ಶ (Oral stops)[೭] ಗಳು ಎಂದೆಂದಿಗೂ ಅನುನಾಸಿಕ್ಯಗಳಾಗಲಾರವು. ಈ ಸ್ಪರ್ಶಗಳ ಹುಟ್ಟುವಿಕೆಗೆ ನಾಸಾದ್ವಾರ ಸಂಪೂರ್ಣವಾಗಿ ಮುಚ್ಚಿಕೊಂಡಿರಬೇಕಾದುದೇ ಇದಕ್ಕೆ ಕಾರಣ. ಆದುದರಿಂದ ಆ ಸ್ಪರ್ಶಗಳನ್ನೂ ನಾಸಿಕಗಳನ್ನೂ ಬಿಟ್ಟು ಉಳಿದೆಲ್ಲ ಧ್ವನಿಗಳು ಅರ್ಥಾತ್ ಸತತ (Continuant) ಗಳು ಮತ್ತು ಸ್ವರಗಳು ಅನುನಾಸಿಕ್ಯಗೊಳ್ಳಬಹುದು.[೮]

ವಿರೋಧಪ್ರಸಾರ (Contrastive distribution)[೯] ದಲ್ಲಿರುವ ಅರ್ಥರಹಿತವಾದ ಕನಿಷ್ಠತಮ ಅನುನಾಸಿಕ ಧ್ವನಿಘಟಕಗಳೇ ಅನುನಾಸಿಕ ಧ್ವನಿಮಾ (Nasal Phoneme) ಗಳು.

---

೫. "ಧ್ವನ್ಯಂಗ ಮತ್ತು ಧ್ವನಿಸ್ಥಾನ ಸಂಪರ್ಕದಿಂದಾಗಿ ಉಂಟಾದ ಅಡಚಣೆಗೊಳಗಾಗಿ ಹುಟ್ಟಿದ ಧ್ವನಿಗಳೇ ವ್ಯಂಜನಕಲ್ಪಗಳು" ವಿಲ್ಯಂ ಮಾಡ್ತ (೧೯೭೫). **ಪು.** ೯. ಅವು ಅನಕ್ಷರಾತ್ಮಕ (Non-syllabic) ಗಳಾದರೆ ಅವನ್ನು ವ್ಯಂಜನ (Consonants) ಗಳೆನ್ನುತ್ತಾರೆ.

೬. "ಶ್ವಾಸವು ಯಾವ ರೀತಿಯ ಅಡಚಣೆಗೂ ಒಳಗಾಗದೆ ಹುಟ್ಟುವ ಧ್ವನಿಗಳಿಗೆ ಸ್ವರಕಲ್ಪಗಳೆಂದು ಹೆಸರು" **ಅದೇ** ಪು. ೧೬. ಅವು ಅಕ್ಷರಾತ್ಮಕ (Syllabic)ಗಳಾದರೆ ಅವನ್ನು ಸ್ವರ (Vowel) ಗಳೆಂದು ಕರೆಯುತ್ತಾರೆ.

೭. "ಶ್ವಾಸಕೋಶದಿಂದ ಹೊರಬರುತ್ತಿರುವ ಶ್ವಾಸವನ್ನು ಯಾವುದಾದರೂ ಒಂದು ಧ್ವನಿಸ್ಥಾನದಲ್ಲಿ ಸಂಪೂರ್ಣವಾಗಿ ತಡೆಗಟ್ಟಿ ಒಡನೆಯೇ ಬಿಟ್ಟಾಗ ಉಂಟಾಗುವ ಧ್ವನಿಗಳೇ ಸ್ಪರ್ಶಗಳು ಅಥವಾ ಸ್ಫೋಟಗಳು" **ಅದೇ** ಪು. ೯.

೮. ನೋಡಿ: H. A. Gleason. An Introduction to Descriptive Linguistics. (Revised eds.), 1966, p, 250.

೯. ಭಾಷಾಧ್ವನಿಗಳು ಏಕ (Identical)/ಸಾದೃಶ್ಯ ಪರಿಸರ (Analogous environment) ದಲ್ಲಿ ಬಂದು ಅರ್ಥ ವ್ಯತ್ಯಾಸಕ್ಕೆ ಕಾರಣವಾದರೆ ಅವು ವಿರೋಧ ಪ್ರಸಾರದಲ್ಲಿವೆಯೆಂದರ್ಥ: ವಿರೋಧ ಪ್ರಸಾರದಲ್ಲಿರದ ಧ್ವನಿಗಳು ಪೂರಕ (Complementary) ಪ್ರಸಾರದಲ್ಲಿರುತ್ತವೆ. ಮೊದಲನೆಯವು ಧ್ವನಿಮಾಗಳೆನಿಸಿದರೆ, ಎರಡನೆಯವು ಉಪಧ್ವನಿ (Alloplhone) ಗಳೆನಿಸಿಕೊಳ್ಳುತ್ತವೆ.

ಮೇಲೆ ಕೊಟ್ಟ ಹಿನ್ನೆಲೆಯಲ್ಲಿ ಕನ್ನಡ ಅನುನಾಸಿಕಗಳ ಬಗೆಗೆ ವೈಯಾಕರಣಿಗಳ ಅಭಿಪ್ರಾಯಗಳನ್ನು ಪರಿಶೀಲಿಸಬೇಕು.

೧

ಕೇಶಿರಾಜ ಬಿಂದು[೧೦]ವನ್ನಲ್ಲದೆ ಙ್, ನ್, ಣ್, ಞ್ ಮತ್ತು ಮ್‌ಗಳೆಂಬ ಐದು ಅನುನಾಸಿಕಗಳನ್ನು ಹೇಳಿದ್ದಾನೆ.[೧೧] "ವರ್ಗದಂತ್ಯಗಳನಱಿಯನುನಾಸಿಕಾಖ್ಯೆಯಂ ತಳೆದಿರ್ಕುಂ"[೧೨] ಎಂದು ಸೂತ್ರದಲ್ಲಿ ಹೇಳಿ ಅದರ ವೃತ್ತಿಯಲ್ಲಿ "ವರ್ಗಂಗಳಯ್ದನೆಯಕ್ಕರಂಗಳ್ ಅನುನಾಸಿಕಂಗಳಾವುವೆಂದೊಡೆ ಙ ಞ ಣ ನ ಮಂಗಳ್" ಎಂದು ಅನುನಾಸಿಕಗಳ ಬಗ್ಗೆ ಆತ ಸ್ಪಷ್ಟಪಡಿಸಿದ್ದಾನೆಯಲ್ಲದೆ, ಮುಂದಿನ ಸೂತ್ರದಲ್ಲಿ—

> ಅನುನಾಸಿಕಮುಂ ಯವಲವು
> ನನುನಾಸಿಕಮುಂ ದಲೆಂಬರ್.........

ಎಂದು ಉಲ್ಲೇಖಿಸಿ ಯವಲಗಳನ್ನು ಅನುನಾಸಿಕ ಹಾಗೂ ಅನನುನಾಸಿಕವೆಂದು ಹೊಸತಾಗಿ ಹೇಳಿ ಅವುಗಳಿಗೆ ಕೆಳಕಂಡ ಪ್ರಯೋಗಗಳನ್ನು ಕೊಟ್ಟಿದ್ದಾನೆ.[೧೩]

೧. **ಯಕಾರ:**

ಅ) ಅನುನಾಸಿಕ : ೧) ಮೇಯಿಸಿದಂ ೨) ನೋಯಿಸಿದಂ ೩) ಮಯಣಂ ೪) ನಯಣಂ ೫) ಮಾಯಂ

ಆ) ಅನನುನಾಸಿಕ : ೬) ಬಯಕೆ ೭) ಬಿಯಳಂ ೮) ದಯಕಾಱಂ, ೯) ದಾಯಿಗಂ ೧೦) ವಾಯಂ ೧೧) ಬಯಲ್

---

೧೦. ಕನ್ನಡದಲ್ಲಿ ಬಳಸುವ ಬಿಂದು/ಅನುಸ್ವಾರ ಲಿಪಿ–ಸಂಕೇತಗಳ ಸಂಕೇತ ಮಾತ್ರವಾಗಿರುವುದರಿಂದ ಅದರ ಪ್ರಸ್ತಾಪ ಇಲ್ಲಿ ಅನಗತ್ಯ.

೧೧. ಭಾಷಾಧ್ವನಿಗಳನ್ನುಚ್ಚರಿಸುವಾಗ ಅವುಗಳಿಗೆ/–ಕಾರ/ಎಂಬ ಶೂನ್ಯಾಕೃತಿ (Empty morph) ಯನ್ನು ಐಚ್ಛಿಕವಾಗಿ ಕೂಡಿಸುವ ರೂಢಿ ಕನ್ನಡ ವ್ಯಾಕರಣ ಸಂಪ್ರದಾಯದಲ್ಲಿದೆ. ಧ್ವನಿಗಳು ವ್ಯಂಜನಕಲ್ಪಗಳಾದರೆ ಧ್ವನಿ ಮತ್ತು ಶೂನ್ಯಾಕೃತಿಯ ನಡುವೆ ಅಕಾರವನ್ನು ಸೇರಿಸಲೇಬೇಕಾಗುತ್ತದೆ: ಮ (ಕಾರ) ∠ ಮ್ + ಅ + (ಕಾರ). ನೋಡಿ: ಧೋಂಡೋ ನರಸಿಂಹ ಮುಳಬಾಗಲ, **ನುಡಿಗಟ್ಟು**, ೧೯೨೪, ಪು. ೪, ಸಂ. ೫ ಮತ್ತು ಅ. ಟಿ.*

೧೨. **ಶ. ಮ. ದ.** ಸೂ. ೨೫. ಪುಟ ೨೦.

೧೩. **ಅದೇ,** ಸೂ. ೨೬. ಪುಟ ೨೧.

೨. **ವಕಾರ:**

ಅ) ಅನುನಾಸಿಕ : ೧೨) ಸೇವೆ ೧೩) ಸಾವೆ ೧೪) ಜಾವಂ
೧೫) ಮಾವಂ ೧೬) ಕೋವಣಂ ೧೭) ಕಾವಣಂ
೧೮) ಸೇವಗೆ, ೧೯) ಸೋವಿ ೨೦) ಜೀವಣಂ.

ಆ) ಅನನುನಾಸಿಕ : ೨೧) ಕವಳಂ ೨೨) ಪವಳಂ ೨೩) ತಿವಳಿ
೨೪) ತವಕಂ ೨೫) ಅವಕಂ.

೩. **ಲಕಾರ:**

ಅ) ಅನುನಾಸಿಕ : ೨೬) ಒಲ್ಲಣಿಗೆ ೨೭) ಅಲ್ಲಣಿಗೆ ೨೮) ಹಲ್ಲಣಂ.
ಆ) ಅನನುನಾಸಿಕ : ೨೯) ಹಾಲಿಗೆ ೩೦) ಪಲಸಿಗಂ ೩೧) ಹಲಗೆ
೩೨) ನೆಲಕಲಂ.

ಮೇಲಿನ ಉದಾಹರಣೆಗಳಲ್ಲಿ ೧–೫; ೧೨–೨೦; ಮತ್ತು ೨೬–೨೮ ಇವುಗಳನ್ನು ಉಚ್ಚರಿಸುವಲ್ಲಿ ಅನುಕ್ರಮವಾಗಿ ಯವಲಗಳ ಉಚ್ಚಾರಣೆಗೆ ಆಸ್ಯದ್ವಾರ ಮುಚ್ಚಿಕೊಳ್ಳದಿರುವುದರಿಂದ ಅವು ಅನುನಾಸಿಕಗಳಲ್ಲವೆಂಬುದು ಸ್ಪಷ್ಟ. ಮೌಖಿಕ ಸತತ (Oral Continuant) ಗಳಾದ ಅವುಗಳನ್ನು ಅನುನಾಸಿಕಗಳೆಂದು ಕರೆದು ಕೇಶಿರಾಜ ಎಡವಿದ್ದಾನೆ. ಆದರೆ ಅವುಗಳನ್ನು ಆಸ್ಯ ಹಾಗೂ ನಾಸಾದ್ವಾರಗಳೆರಡನ್ನು ತೆರೆದು ಉಚ್ಚರಿಸಲು ಸಾಧ್ಯವಿದೆ. ಆಗ ಯವಲಗಳು ಅನುನಾಸಿಕ್ಯ (Nasalized) ಗಳಾಗುತ್ತವೆಯೇ ಹೊರತು ಅನುನಾಸಿಕಗಳಾಗಲಾರವು.

ಕೇಶಿರಾಜ ಕೊಟ್ಟ ಉದಾಹರಣೆಗಳಲ್ಲಿ ೧–೫ ಇವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವೆಲ್ಲವೂ ಮ/ನಕಾರಗಳಾಗಿವೆ. ಅಲ್ಲಿ ಯಕಾರ ಈ ಅನುನಾಸಿಕಗಳ ಪರಿಸರದಲ್ಲಿರುವುದರಿಂದ ಅದು ಅವುಗಳಿಂದ ಪ್ರಭಾವಿತಗೊಂಡು ಅನುನಾಸಿಕ್ಯವಾಗುವುದು ಸಹಜ.[೧೪] ಒಂದಕ್ಷರದಲ್ಲಿ ಅನುನಾಸಿಕದೊಡನೆ ಕೂಡಿಕೊಂಡಿರುವ ಸ್ವರ ನಾಸಿಕ್ಯಗೊಂಡು ಪರದಲ್ಲಿ ಸ್ವರವುಳ್ಳ ಪಕ್ಕದ ಯಕಾರವನ್ನೂ ಅನುನಾಸಿಕ್ಯವಾಗಿ ಮಾರ್ಪಾಡಿಸುತ್ತದೆ:

---

೧೪. ಕೇಶಿರಾಜನು ಅನುನಾಸಿಕ್ಯ ಧ್ವನಿಗಳಿಗೆ ಕಾರಣಗಳನ್ನು ಪ್ರತ್ಯಕ್ಷವಾಗಿ ಎಲ್ಲಿಯೂ ಸೂಚಿಸಿಲ್ಲ. ಧ್ವನಿಗಳು ಪರಿಸರದ ಪ್ರಭಾವಕ್ಕೆ ಒಳಗಾಗಿ ಬದಲಾಗುತ್ತವೆ: ನೋಡಿ: ನಿಯಮ ೧–೩

ನಿಯಮ ೧: $y \rightarrow \tilde{y} / NV — V$[೧೫].

ಮೇಲಿನ ೧೨ ರಿಂದ ೨೦ರ ವರೆಗಿನ ಇರುವ ಉದಾಹರಣೆಗಳಲ್ಲಿ ಅನುನಾಸಿಕ ವಕಾರದ ಮೂಲ ಮಕಾರವೆಂದು ಕನ್ನಡ ಭಾಷಾಚರಿತ್ರೆಯ ಮೂಲಕ ತಿಳಿದುಕೊಳ್ಳಬಹುದು. ಅನುಕ್ರಮವಾಗಿ ಆ ಮೂಲಪದಗಳು ಇಂತಿವೆ: (೧೨ ಅ) ಸೇಮೆ (೧೩ಅ) ಸಾಮೆ. (೧೪ಅ) ಯಾಮ (೧೫ಅ) ಪಾಮ (೧೬ಅ) ಕೋಮಣಂ (೧೭ಅ) ಕಾಮಣಂ (?) (೧೮ಅ) ಸೇಮಿಗೆ (೧೯ಅ) ಸೋಮಿ (೨೦ಅ) ಜೇಮಣಂ.

ಒಂದು ಪದದಲ್ಲಿ ಮಕಾರ ಎರಡು ಸ್ವರಗಳ ನಡುವೆ ಇದ್ದು ಅದರ ಪೂರ್ವ ಸ್ವರ ದೀರ್ಘವಾಗಿದ್ದು ಪರ ಸ್ವರ ಹ್ರಸ್ವವಾಗಿದ್ದರೆ ಅದು ಅನುನಾಸಿಕ್ಯ ವಕಾರವಾಗಿ ಮಾರ್ಪಡುಗೊಳ್ಳಬಹುದು; ಆದರೆ ಅದು ಅನುನಾಸಿಕವಾಗಲಾರದು:

ನಿಯಮ ೨: $m \rightarrow \tilde{V} / V: — V$[೧೬]

ಮೇಲಿನ ೨೬ ರಿಂದ ೨೮ನೆಯವರೆಗಿನ ಉದಾಹರಣೆಗಳಲ್ಲಿ ಕೇಶಿರಾಜ ಅನುನಾಸಿಕ ಲಕಾರವನ್ನು ಗುರುತಿಸಿದ್ದಾನೆ. ಆ ಉದಾಹರಣೆಗಳನ್ನು ಪರಿಶೀಲಿಸಿದರೆ ಆ ಲಕಾರ ಒತ್ತಕ್ಷರವಾಗಿ ಹ್ರಸ್ವಸ್ವರಗಳ ನಡುವೆ ಬರುತ್ತದೆಯಲ್ಲದೆ ಪರಸ್ವರದ ಪಕ್ಕದಲ್ಲಿ ಅನುನಾಸಿಕ ಇದ್ದೇ ಇರುವುದು. ಇದನ್ನು ಗಮನಿಸಿದಾಗ ಅನನುನಾಸಿಕ ಲಕಾರ

---

೧೫. → ಬದಲಾವಣೆ ಸೂಚಕ./ಪರಿಸರ ಸೂಚಕ: N = ಅನುನಾಸಿಕ; V = ಸ್ವರ. – ಮಾರ್ಪಾಡಾಗುವ ಧ್ವನಿಯಸ್ಥಾನ. ಕೆಲವೊಮ್ಮೆ ಅನುನಾಸಿಕಗಳ ಸಾಹಚರ್ಯವಿಲ್ಲದಿದ್ದರೂ ಯಕಾರ ವಕಾರಗಳು ಸಾದೃಶ್ಯ ಸೃಷ್ಟಿಯಿಂದಾಗಿ ಅನುನಾಸಿಕ್ಯಗೊಳ್ಳಬಹುದು:

ಮೇಯಿಸಿದ ; ಮೇಯಿಂಸಿದ :: ಬೇಯಿಸಿದ : ಬೇಯಿಂಸಿದ
ನೋಯಿಸಿದ: ನೋಯಿಂಸಿದ :: ಸಿಹಿ : ಸೀಯಿಂ/ಸೀಂ
ಸಾಮೆ : ಸಾವೆಂ :: ಬಾವಿ : ಬಾವಿಂ
ಜಾಮ : ಜಾವಂ :: ಜೀವ : ಜೀವಂ
ಮಾಮ : ಮಾವಂ :: ಕಿವಿ : ಕಿವಿಂ

ಕೆಲವೊಮ್ಮೆ ಪುನರ್–ತಿದ್ದುಪಡಿ (over correction) ಯಿಂದಾಗಿ ಬಾಮಿ, ಕಿಮಿ ಎಂಬ ರೂಪಗಳೂ ಬರುವುದುಂಟು: ಸೇವೆಂ < ಸೇಮೆ < :: ಕಿವಿಂ < ಕಿಮಿ: ಬಾವಿಂ < ಬಾಮಿ– ಎಂಬ ಊಹೆಯೇ ಅವುಗಳಿಗೆ ಆಧಾರ. (ಪಿ. ಸೂ. ಈ ಅ. ಟಿ.ಯಲ್ಲಿ ಬರುವಂತಹ ಅನುಸ್ವಾರಯುಕ್ತ ಅಕ್ಷರಗಳನ್ನು ಅನುನಾಸಿಕ್ಯಗಳನ್ನಾಗಿ ಉಚ್ಚರಿಸಬೇಕು.)

೧೬. $\tilde{V}$ = ಅನುನಾಸಿಕ್ಯ ವಕಾರ; $V:$ = ದೀರ್ಘಸ್ವರ; V = ಹ್ರಸ್ವಸ್ವರ.

ಆಂಶಿಕ ಅಪಸರ್ಪಣೀ ಸಮರೂಪಧಾರಣೆ (Partial regressive assimilation) ಯಿಂದಾಗಿ ಅನುನಾಸಿಕ್ಯಗೊಂಡಿದೆಯೆಂಬುದು ಖಚಿತವಾಗುತ್ತದೆ:

ನಿಯಮ ೩: $l\,l \rightarrow \tilde{l}\,\tilde{l}\,/\,V—V\dot{N}$

ಒಟ್ಟಿನಲ್ಲಿ ಯವಲಗಳು ಅನುನಾಸಿಕಗಳಲ್ಲ. ಅವು ನಿರ್ದಿಷ್ಟ ಪರಿಸರಗಳಲ್ಲಿ ಅನುನಾಸಿಕ್ಯಗಳಾಗಿ ಬದಲಾಗಬಲ್ಲವು. ಆದುದರಿಂದ ಅನುನಾಸಿಕ್ಯ ಯವಲಗಳು ಅನನುನಾಸಿಕ ಯವಲಗಳ ಉಪಧ್ವನಿಗಳು ಮಾತ್ರ. ಅವುಗಳಿಗೆ ಧ್ವನಿಮಾ ಸ್ಥಾನವಿಲ್ಲ.

೨

ಕನ್ನಡ ಕೈಪಿಡಿಕಾರರು ತರ್, ಕೊಲ್, ಕೊಳ್ ಮೊದಲಾದ ಕ್ರಿಯಾಪದಗಳ ಭೂತಕಾಲ ರೂಪವನ್ನು ಗಮನಿಸಿ ಅಲ್ಲಿಯ ರಲಳಕಾರಗಳು ಅನುನಾಸಿಕಗಳಾಗಿರಬೇಕೆಂದು ಸೂಚಿಸಿದ್ದಾರೆ.

> ಕೊಳ್ ಧಾತುವಿನ ಳಕಾರವು ಅನುನಾಸಿಕವಾಗಿದ್ದಿರಬೇಕು (*ಅದ್ದರಿಂದಲೇ 'ಕೊಳ್ಳಿ' ಎಂಬುದಕ್ಕೆ ಗ್ರಾಮ್ಯವಾಗಿ 'ಕೊನ್ನಿ' ಎಂಬ ರೂಪವೂ ದೊರೆಯುತ್ತದೆ. ಉಳ್, ಉಣ್ಣು ಎಂಬುದನ್ನು ನೋಡಿ)...... ತರ್, ಬರ್ ಎಂಬವುಗಳಿಗೆ ಒರ್ ಎಂಬುದು ಒಂದು ಎಂದಾದಂತೆ ಅನುನಾಸಿಕ ವಿಧಿಯಿಂದ ತಂದ, ಬಂದ, ತನ್ನಿ, ಬನ್ನಿ, ಎಂಬ ರೂಪಗಳಾಗಿರಬಹುದು.[೧೭]

ಕೈಪಿಡಿಕಾರರು ಈ ಅಭಿಪ್ರಾಯಕ್ಕೆ ಬರಲು ಅವರಿಗಿದ್ದ ಭೂತಕಾಲ ಪ್ರತ್ಯಯದ ಕಲ್ಪನೆಯೇ ಕಾರಣವಾಗಿದ್ದಿರಬೇಕೆಂದು ನನ್ನ ವಿಚಾರ. ಅವರ ಪ್ರಕಾರ ಮೇಲಿನ ಕ್ರಿಯಾಪ್ರಕೃತಿ (ಧಾತು) ಗಳಿಗೆ ಭೂತಕಾಲದಲ್ಲಿ/–ದ್/ ಪ್ರತ್ಯಯ ಸೇರುತ್ತದೆ. ಇದು ತಪ್ಪು. ಇಲ್ಲಿ ಭೂತಕಾಲ ಪ್ರತ್ಯಯ/–ನ್ದ್/ಆಗಿರಬೇಕು.

---

೧೭. ಕನ್ನಡ ಕೈಪಿಡಿ (೧೯೩೮), ಪು. ೩೫೮–೯.

ಕ್ರಿಯಾ ಪ್ರಕೃತಿ		ಭೂತಕಾಲಪ್ರತ್ಯಯ		ಆಖ್ಯಾತ ಪ್ರತ್ಯಯ	ಕ್ರಿಯಾಪದ
ಮೀ					ಮಿನ್ದನು < ಮೀದನು >
ನೋ					ನೊನ್ದನು < ನೊಂದನು >
ಬೇ					ಬೆನ್ದನು < ಬೆಂದನು >
ತರ್	+	–ನ್ದ್[೧೮]	+	–ಅನ್→	ತನ್ದನು < ತಂದನು >
ಬರ್					ಬನ್ದನು < ಬಂದನು >
ಕೊಲ್					ಕೊನ್ದನು < ಕೊಂದನು >
ಕೊಳ್					ಕೊಣ್ಡನು < ಕೊಂಡನು >

ಭೂತಕಾಲಪ್ರತ್ಯಯ ಕ್ರಿಯಾಪ್ರಕೃತಿಗೆ ಸೇರುವಾಗ ಉಂಟಾಗುವ ಕೆಲವು ಸಂಧಿಗಳನ್ನು ಗಮನಿಸಬೇಕು :

೧. C V: ರೂಪದ ಪ್ರಕೃತಿಗಳಿಗೆ–ನ್ದ್ ಪ್ರತ್ಯಯ ಪರವಾದಾಗ ಅವು C V ಯಾಗುತ್ತವೆ.

೨. ಳಕಾರಂತ ಪ್ರಕೃತಿಗೆ ಪರವಾಗುವ –ನ್ದ್ ಪ್ರತ್ಯಯ ಮೂರ್ಧನ್ಯಗೊಳ್ಳುತ್ತದೆ: ನ್ದ್→ಣ್ಡ್/ಳ್&—

೩. ರ ಲ ಳಕಾರಾಂತ ಪ್ರಕೃತಿಗಳಿಗೆ/–ನ್ದ್/ ಪರವಾದಾಗ ರಲಳಕಾರಗಳು ಲೋಪವಾಗುತ್ತವೆ: ರ್, ಲ್, ಳ್&→ϕ/–&ನ್ದ್.

ಮೇಲಿನ ವಿಶ್ಲೇಷಣೆಯನ್ನು ಪರಿಶೀಲಿಸಿದಾಗ ಕ್ರಿಯಾಪ್ರಕೃತಿಯ ಅಂತ್ಯದಲ್ಲಿರುವ ರಲಳಕಾರಗಳು ಅನುನಾಸಿಕಗಳೂ ಅಲ್ಲ, ಅನುನಾಸಿಕ್ಯಗಳೂ ಅಲ್ಲ; ಅವು ಅನನುನಾಸಿಕಗಳು ಮಾತ್ರವೆಂಬುದು ಖಚಿತವಾಗುತ್ತದೆ.

೩

ಎ. ಪಿ. ಸೀತಾರಾಮಯ್ಯನವರು ಕೆಲವು ಪದಗಳನ್ನು ಉಲ್ಲೇಖಿಸಿ "ಹಾವು. ಕಾವು–ಈ ಪದಗಳ ವಕಾರ ಸ್ಪಷ್ಟವಾಗಿ ಅನುನಾಸಿಕ...... ಅವನು ಇವನು ಇವುಗಳ

---

೧೮. ಏಕಾಕ್ಷರೀಯ ಕ್ರಿಯಾಪ್ರಕೃತಿಗಳು ದೀರ್ಘಸ್ವರಾಂತ (*CV:*–) ಗಳಾದರೆ/ಅವು ಹ್ರಸ್ವ ಸ್ವರಯುಕ್ತವಾಗಿ ರಲಳಕಾರಂತಗಳಾದರೆ $\left(V \begin{Bmatrix} ರ್ \\ ಲ್ \\ ಳ್ \end{Bmatrix} — \right)$ ಅವುಗಳಿಗೆ ಸೇರುವ ಭೂತಕಾಲ ಪ್ರತ್ಯಯ–ನ್ದ್ (< *–ನ್ತ್) ಎಂಬುದನ್ನು ಗಮನಿಸಬೇಕು. *–ನ್ತ್ > ನ್ದ್ ಬದಲಾವಣೆ ದ. ದ್ರಾವಿಡಗಳಲ್ಲಿ ಕನ್ನಡ ಮತ್ತು ಕೊಡಗುಗಳ ವೈಶಿಷ್ಟ್ಯ. ಹೊಸ ಕನ್ನಡದಲ್ಲಿ 'ನಿಲ್ –' ಇದಕ್ಕೆ ಅಪವಾದ. *–ನ್ತ್ ಪ್ರತ್ಯಯದ ಬಗೆಗೆ ನೋಡಿ: P. S. Subrahmanyam, **Dravidian Verb Morphology** (Annamalai University, 1971) p. 198.

ಒಳಕೆಲ್ವು ರೂಪಾಂತರಗಳಾದ ಅವ, ಇವ–ಈ ಪದಗಳ ಎರಡೂ ಅಕ್ಷರಗಳು ಅನುನಾಸಿಕಗಳಾಗಿವೆ[೧೯] ಎಂದಿದ್ದಾರೆ. ಆ ಪದಗಳ[೨೦] ಮೂಲವನ್ನು ಗಮನಿಸಿ:

ಹಾವು < ಪಾವ್ಬು/ಪಾಂಬು
ತಾವು < ತಾವ್/ತಾಂ
ಅವ < ಅವನ್
ಇವ < ಇವನ್

ಮೇಲಿನ ಪದಗಳಲ್ಲಿ ಆದ ಧ್ವನ್ಯಾತ್ಮಕ ಬದಲಾವಣೆಗಳು ಇಂತಿವೆ:

೧. ಬ್ $\rightarrow \phi /$ ಮ್ $— V$

೨. *ವ್ $\rightarrow \tilde{V} / V: — V$

೩. ವ್ $\rightarrow \tilde{V} / — VN$

೪. $N \rightarrow \phi / \tilde{V}V — \#$ [೨೧]

ಮೇಲಿನ ವಿಶ್ಲೇಷಣೆ ಗಮನಿಸಿದಾಗ ಮೂಲ ಮಕಾರದ ಪೂರ್ವದಲ್ಲಿ ದೀರ್ಘಸ್ವರ ವಿದ್ದು ಪರದಲ್ಲಿ ಹ್ರಸ್ವಸ್ವರ ಬಂದಾಗ ಅದು ಅನುನಾಸಿಕ್ಯ ವಕಾರವಾಗುತ್ತದೆ; ದಂತೌಷ್ಠ್ಯ ಅನುನಾಸಿಕ್ಯ ವಕಾರದ ಪರದಲ್ಲಿ ಸ್ವರ + ಅನುನಾಸಿಕವಿದ್ದರೆ ಅದು ಅನುನಾಸಿಕ್ಯಗೊಳ್ಳು ತ್ತದೆಂಬುದಾಗಿ ತಿಳಿದು ಬರುತ್ತದೆ. ಈ ಅನುನಾಸಿಕ್ಯ ವಕಾರವನ್ನು ಕೇಶಿರಾಜ ೧೩ನೆಯ ಶತಮಾನದಲ್ಲಿಯೇ ತನ್ನದೇ ಆದ ರೀತಿಯಲ್ಲಿ ಗುರುತಿಸಿದ್ದಾನೆಯಲ್ಲವೆ? ಅನುನಾಸಿಕ್ಯ ವ್ಯಂಜನದ ಪೂರ್ವಪರ ಸ್ವರಗಳು ಅನುನಾಸಿಕ್ಯಗೊಳ್ಳುವುದು ಭಾಷೆಯ ಸಾಮಾನ್ಯ ಲಕ್ಷಣ.[೨೨]

---

೧೯. ಎಂ. ವಿ. ಸೀತಾರಾಮಯ್ಯ: "ಕೆಲವು ಅಕ್ಷರಗಳ ಅನುನಾಸಿಕೋಚ್ಚಾರ", **ಹೊಸಗನ್ನಡ ಸಾಹಿತ್ಯ ಮತ್ತು ಇತರ ಲೇಖನಗಳು.** (೧೯೫೮) ಪು. ೧೪೮–೯.

೨೦. ಪ್ರಸ್ತುತದಲ್ಲಿ ಇಲ್ಲಿಯ ವಕಾರಗಳನ್ನು ಅನುನಾಸಿಕ್ಯಗಳನ್ನಾಗಿ ಉಚ್ಚರಿಸಬೇಕು.

೨೧. $—\#$ = ಪದಾಂತ್ಯ.

೨೨. ನೋಡಿ: H. M. Nayak, **Kannada: Literary and Colloquial** Mysore (1967), pp. 47–8; **Etiam, K. L. Pike, loc. cit.**

೪

ವಿಷ್ಣುಸುತರು "ಯ, ವ ಲಗಳಂತೆ 'ಹ' ಕಾರವೂ ಕೆಲವೆಡೆ ಅನುನಾಸಿಕ ಧ್ವನಿ ಕೊಡುತ್ತದೆಂದು ನನ್ನ ವಿಚಾರ. 'ಸಿಹಿ' ಇದರ 'ಹಿ' ಕಾರ 'ಸಿಂಹ' ಇಲ್ಲವೆ 'ಸೀಂ' ಎಂದು ಅನುನಾಸಿಕದಂತೆ ಉಚ್ಚರಿಸಲ್ಪಡುತ್ತದೆ"[೨೩] ಎಂದು ಹೇಳಿದ್ದಾರೆ.

'ಸಿಹಿಂ' ಎಂಬುದು 'ಕಹಿ'ಯ 'ಕಹಿಂ' ಎಂಬ ರೂಪದಿಂದ ಸಾದೃಶ್ಯ ಸೃಷ್ಟಿ (Analogical Creation) ಯಾಗಿ ಬಂದಿರಬಹುದು. ಕಹಿಗೆ ತಮಿಳಿನಲ್ಲಿ 'ಕಯ್‌ಪ್ಪು' ಎಂಬ ಜ್ಞಾತಿಪದ (Cognate word) ಇದೆ. ಅಲ್ಲಿಯ/ಪ್/ವ್ಯಂಜನಗುಚ್ಛದ ಮೂಲ**N*ಪ್ಪ್[೨೪] ಕನ್ನಡದಲ್ಲಿ **N*ಪ್ಪ್→*N*ಪ್ / (ಪ್) ಪ್ ಆಗಿದೆ.

*ಕೊಮ್‌ಫ್ಪ್ > ಕೊಮ್ಪು, ಕೊಪ್ಪ
*ಕತ್Vಮ್‌ಪ್ಪ್ > ಕದಮ್ಪು, ಕದಪು
*ಚಿಮ್‌ಪ್ಪ್ > ಚಿಮ್ಪು[೨೫]

ಇವುಗಳ ಆಧಾರದ ಮೇಲೆ ಕನ್ನಡದ ಕಹಿ ~ ಕಹಿಂ ರೂಪಕ್ಕೆ *ಕಹಿಮ್ (ಪು) ~ ಕಯಿಮ್ (ಪು) – ಎಂಬ ಪ್ರಾಕ್ ರೂಪವನ್ನು ಸೂಚಿಸಬಹುದು. ಆಗ 'ಸಿಹಿಂ'ಯಲ್ಲಿಯ ಹಕಾರದ ಅನುನಾಸಿಕ್ಯತೆಯನ್ನು ಅಪಸರ್ಪಿಣೀ ಸಮರೂಪಧಾರಣೆಯ ಮೂಲಕ ವಿವರಿಸಬಹುದು. ಹಕಾರದ ಮುಂದೆ ಸ್ವರ + ಅನುನಾಸಿಕವಿದ್ದರೆ ಹಕಾರ ಅನುನಾಸಿಕ್ಯಗೊಳ್ಳುತ್ತದೆ; ಆ ಬಳಿಕ ಆ ಅನುನಾಸಿಕ ಲೋಪಗೊಳ್ಳುತ್ತದೆ. 'ಕಹಿಂ' ಎಂಬ ಪದದ ಸಾದೃಶ್ಯ ಸೃಷ್ಟಿಯಿಂದಾಗಿ ಸಿಹಿ > 'ಸಿಹಿಂ'ಯಾಗಿ ಬಳಕೆಯಲ್ಲಿ ಬರುವ ಸಾಧ್ಯತೆಯಿದೆ.

'ಸಿಂಹ'ದಲ್ಲಿಯ ಹಕಾರ ದಂತೋಷ್ಠ್ಯ ಅನುನಾಸಿಕದ ಪರದಲ್ಲಿ ಬರುವುದರಿಂದ ಅದು ಅನುನಾಸಿಕ್ಯವಾಗಿ ಉಚ್ಚಾರಗೊಳ್ಳುವುದು ಸ್ವಾಭಾವಿಕ.

ಒಟ್ಟಿನಲ್ಲಿ ಯವರಲಳಹಕಾರಗಳು ನಿರ್ದಿಷ್ಟ ಪರಿಸರಗಳಲ್ಲಿ ಅಥವಾ ಸಾದೃಶ್ಯ ಸೃಷ್ಟಿಯಿಂದಾಗಿ ಅನುನಾಸಿಕ್ಯವಾಗಿ ಉಚ್ಚಾರಗೊಳ್ಳುವ ಸಾಧ್ಯತೆಯನ್ನು ಇಲ್ಲಿಯವರೆಗೆ ಚರ್ಚಿಸಲಾಯಿತು. ಅವು ಎಂದೆಂದಿಗೂ ಅನುನಾಸಿಕಗಳು ಆಗಲಾರವು ಎಂಬುದನ್ನು ಗಮನಿಸಬೇಕು.

---

೨೩. ವಿಷ್ಣುಸುತ, "ಅನುನಾಸಿಕ – ಯುವಲ," **ಕರ್ನಾಟಕ ಭಾರತಿ** (1973), ೬:೨, ಪು. ೩೯.

೨೪. N. Kumaraswami Raja, **Post Nasal Voicless Plosives jn Dravidian** (Annamalainagar : 1969).

೨೫. ಅದೇ.

೫

ಕನ್ನಡಲ್ಲಿ ಹಾಗಾದರೆ ಅನುನಾಸಿಕಗಳಾವುವು ?

ಕೇಶಿರಾಜನ ಪ್ರಕಾರ ಅವು "ಙ ಞ ಣ ನ ಮಂಗಳ್":

ಙ	ಬಿಙ್ಙಮ್
ಞ	ಅಞ್ಚೆ
ಣ	ತೊಣ್ಡು
ನ	ಬಲವನ್ದು
ಮ್	ಗಾಳಿಯುಮ್[೨೬]

ಕನ್ನಡದಲ್ಲಿ ಈ ಪಂಚ ಅನುನಾಸಿಕಗಳನ್ನು ಬಿಟ್ಟು ಇನ್ನೂ ಎರಡು ಅನುನಾಸಿಕಗಳನ್ನು ಗುರುತಿಸಿದ್ದಾರೆ.[೨೭] ಒಂದು, ದಂತೋಷ್ಠ (Siṁha) (ಸಿಂಹ): ಇನ್ನೊಂದು ಜಿಹ್ವಾಗ್ರೀಯ ದಂತ್ಯ ಅನುನಾಸಿಕ: (ಸನ್ತೆ) (ಸಂತೆ). ಹೀಗೆ ಅನುನಾಸಿಕ್ಯಗಳನ್ನು ಬಿಟ್ಟರೆ, ಕನ್ನಡದಲ್ಲಿ ಅನುನಾಸಿಕಗಳು ಏಳು :[೨೮]

ಉಭಯೋಷ್ಠ್ಯ	ಮ್
೨. ದಂತೋಷ್ಠ್ಯ	ಮ್
೩. ದಂತ್ಯ	ನ್
೪. ವರ್ತ್ಸ್ಯ	ನ್
೫. ಮೂರ್ಧನ್ಯ	ಣ್
೬. ತಾಲವ್ಯ	ಞ್
೭. ಕಂಠ್ಯ	ಙ್

೨೬. ಶ. ಮ. ದ. ಸೂ. ೨೫. ಪ್ರಯೋಗಂ, ಪು. ೨೦–೨೧.

೨೭. H. M. Nayak, **Op. cit.**, p. 49 and R. C. Hiremath, **Structure of Kannada** (Dharwar : 1961), p. 16; ವಿಲ್ಯಂ ಮಾಡ್ತ (೧೯೭೫), ಪು. ೧೪.

೨೮. ಬಿಳಿಗಿರಿಯವರು (೧೯೫೫ : ೩೦೬) ಫಲಕ – ವರ್ತ್ಸ್ಯ ಅನುನಾಸಿಕವೊಂದನು 'ಹೆಂಚು 'ಮಂಜು' ಎಂಬ ಪದಗಳಲ್ಲಿ ಚಕಾರ ಮತ್ತು ಜಕಾರಗಳ ಪೂರ್ವದಲ್ಲಿ ಗುರುತಿಸಿದರೂ ತನ್ನ **ವರ್ಣನಾತ್ಮಕ ವ್ಯಾಕರಣದ ಮೂಲ ತತ್ವಗಳು** ಎಂಬ (೧೯೭೦) ಗ್ರಂಥದಲ್ಲಿ ಕನ್ನಡ ಅನುನಾಸಿಕಗಳನ್ನು ವಿವರಿಸಿ (ಪು. ೧೮) "ತಕಾರ ದಕಾರಗಳ ಪೂರ್ವದಲ್ಲಿ ದಂತ್ಯ ನಕಾರವೂ (ಸಂತೆ. ಮುಂದೆ), ಚಕಾರ ಜಕಾರಗಳ ಪೂರ್ವದಲ್ಲಿ ಞಕಾರವೂ (ಪಂಚೆ, ಸಂಜೆ), ಕಕಾರ ಗಕಾರಗಳ ಪೂರ್ವದಲ್ಲಿ ಙಕಾರವೂ (ಸುಂಕ, ತಂಗಿ), ಇತರ ಪರಿಸರಗಳಲ್ಲಿ ವರ್ತ್ಸ್ಯ ನಕಾರವೂ (ನಾನು, ಮನೆ) ಬರುತ್ತದೆ" ಎಂದು ಹೇಳುವಲ್ಲಿ ಫಲಕ–ವರ್ತ್ಸ್ಯ ಅನುನಾಸಿಕದ ಪ್ರಸ್ತಾಪವಿಲ್ಲದಿರುವುದನ್ನು ಗಮನಿಸಬೇಕು.

ಈ ಸಪ್ತ ಅನುನಾಸಿಕಗಳಲ್ಲಿ ವಿರೋಧಪ್ರಸಾರದಲ್ಲಿ ಬರುವ ಮ್ ನ್ ಣ್ ಙ್‌ಗಳು ಮಾತ್ರ ಧ್ವನಿಮಾಗಳು ಉಳಿದವು ಪೂರಕ ಪ್ರಸಾರದಲ್ಲಿರುವುದರಿಂದ ಅವು ಉಪ ಧ್ವನಿಗಳು :

ವಿರೋಧ ಪ್ರಸಾರ :

೧. ಮರ	೨. ಆಮೆ	೩. ಪಙ್ಕ್ತಿ (ಪಂಕ್ತಿ)	೪. ವಾಙ್ಮಯ
ನರ	ಆನೆ	ಜಿಂಙ್ಕೆ (ಜಿಂಕೆ)	ಮಙ್ಗ (ಮಂಗ)
	ಆಣೆ		

ಪೂರಕ ಪ್ರಸಾರ :

೧. ದಂತೋಷ್ಠ್ಯ ಅನುನಾಸಿಕ[೨೯], ಸತತಗಳ ಪೂರ್ವದಲ್ಲಿ ಬರಬಹುದು; ಆದರೆ ಅವು ಸ್ಪರ್ಶಗಳ ಪೂರ್ವದಲ್ಲಿ ಬರಲಾರವು : ಮಾಂಸ (ಮಾಂವ್‌ಸ), ಸಂಶಯ (ಸಂವ್‌ಶಯ), ಸಿಂಹ (ಸಿಂವ್‌ಹ), ಸಂರಕ್ಷಣೆ (ಸಂವ್‌ರಕ್ಷಣೆ), ಸಂಲಗ್ನ (ಸಂವ್‌ಲಗ್ನ) ಇತ್ಯಾದಿ.

೨. ದಂತ್ಯಅನುನಾಸಿಕ ದಂತ್ಯಸ್ಪರ್ಶಗಳ ಜೊತೆಯಲ್ಲಿ ಮಾತ್ರ ಬರುತ್ತದೆ : ಸನ್‌ತೆ (ಸಂತೆ), ಗೋನ್‌ದು (ಗೋಂದು) ಒನ್‌ದು (ಒಂದು), ಪತ್‌ನಿ (ಪತ್ನಿ), ಯತ್‌ನ (ಯತ್ನ).

೩. ತಾಲವ್ಯಅನುನಾಸಿಕ ತಾಲವ್ಯಗಳ ಪೂರ್ವದಲ್ಲಿ ಬರುತ್ತದೆ :

ಇಞ್‌ಚು (ಇಂಚು) ಹುಞ್ಜ (ಹುಂಜ) ಸಞ್ಜೆ (ಸಂಜೆ).

ದಂತೋಷ್ಠ್ಯ ಅನುನಾಸಿಕ. ಉಭಯೋಷ್ಠ್ಯ ಅನುನಾಸಿಕದ ಉಪಧ್ವನಿಯಾಗಿಯೂ ದಂತ್ಯ ಮತ್ತು ತಾಲವ್ಯ ಅನುನಾಸಿಕಗಳು ವರ್ತ್ಸ್ಯ ಅನುನಾಸಿಕದ ಉಪಧ್ವನಿಗಳಾಗಿಯೂ ಕಂಡು ಬರುತ್ತದೆ.

ಅನುನಾಸಿಕ ಧ್ವನಿಮಾಗಳಾದ ಮ್ ನ್ ಣ್ ಙ್‌ಗಳ ವಿತರಣೆ (Distribution) ಇಂತಿದೆ :

೧. ಪದಾದಿಯಲ್ಲಿ ಮನಕಾರಗಳು ಮಾತ್ರ ಬರುತ್ತವೆ : ಮಳೆ, ನಾಡು.

೨. ಸ್ವರಗಳ ನಡುವೆ ಮನಣಕಾರಗಳು ಮಾತ್ರ ಬರುತ್ತವೆ : ಮಾಮ, ಮಾನ, ಮಣ.

---

೨೯. ದಂತೋಷ್ಠ್ಯ ಅನುನಾಸಿಕಕ್ಕೂ [ɱ] ಅನುನಾಸಿಕ್ಯ ವಕಾರಕ್ಕೂ [Ṽ] ಕನ್ನಡದಲ್ಲಿ ವ್ಯತ್ಯಾಸ ವುಂಟೆ? ವಿಚಾರಿಸಬೇಕು. ಕನ್ನಡದಲ್ಲಿ ದಂತೋಷ್ಠ್ಯ ಅನುನಾಸಿಕಗಳೆಂದು ಹೇಳಲಾದ ಧ್ವನಿಗಳೆಲ್ಲವೂ ಅನುನಾಸಿಕ್ಯ ವಕಾರಗಳೆಂದು ನನ್ನ ಅನಿಸಿಕೆ.

೩. ಸಜಾತಿ ಸ್ಪರ್ಶಗಳ ಜೊತೆಗೆ: ಸಮ್ಪಿಗೆ. ಮನ್ದಿ, ಗಣ್ಡು, ಮಙ್ಗ, ಚೆಞ್ಚು.

೪. ವಿಜಾತಿ ವ್ಯಂಜನ ಗುಚ್ಛ (Cluster) ಗಳಲ್ಲಿರುತ್ತವೆ.
ಹಮ್ಸ, ಅಮ್ಲ, ತಾಮ್ರ. ಗ್ರಾಮ್ಯ, ಅನ್ಯ, ನಾಣ್ಯ, ವಾಙ್ಮಯ.

೫. ಸಜಾತಿ ವ್ಯಂಜನ ಗುಚ್ಛಗಳಲ್ಲಿರುತ್ತವೆ. (ಙಕಾರ ಬರುವುದಿಲ್ಲ): ಅಮ್ಮ, ಅನ್ನ, ಅಣ್ಣ.

೬. ಪದಾಂತ್ಯದಲ್ಲಿ ಅನುನಾಸಿಕಗಳು ಬರುವುದಿಲ್ಲ.

೭. ಙಕಾರದ ವಿತರಣೆ ವ್ಯಾಪಕವಾಗಿಲ್ಲ.

ಕನ್ನಡ ಅನುನಾಸಿಕಗಳ ಬಗ್ಗೆ ಸಂಗ್ರಹವಾಗಿ ಈ ಕೆಳಗಿನಂತೆ ಹೇಳಬಹುದು:

೧. ಅನುನಾಸಿಕಗಳನ್ನು **ಅನುನಾಸಿಕ್ಯಗಳಿಂದ ಬೇರ್ಪಡಿಸಬೇಕು.**

೨. ಸ್ಪರ್ಶಗಳನ್ನು (ಮೌಖಿಕ ಮತ್ತು ಅನುನಾಸಿಕ) ಬಿಟ್ಟು ಉಳಿದ ಭಾಷಾ ಧ್ವನಿಗಳು ಅರ್ಥಾತ್ ಸತತಗಳು (ಮತ್ತು ಸ್ವರಗಳು)[೩೦] ಅನುನಾಸಿಕ್ಯಗೊಳ್ಳಬಹುದೇ ಹೊರತು **ಅನುನಾಸಿಕಗಳಾಗಲಾರವು.**

೩. ಅನುನಾಸಿಕ ವ್ಯಂಜನ ಧ್ವನಿಮಾಗಳು ಕೇವಲ ನಾಲ್ಕು: **ಮನಣ ಙಕಾರಗಳು.**[೩೧]

೪. **ಕ್ರಿಯಾ ಪ್ರಕೃತ್ಯಾಂತ ರಲಳಕಾರಗಳು ಭೂತಕಾಲ ಪ್ರಕೃತಿಯನ್ನು** ಸ್ವೀಕರಿಸುವಾಗ ಅನುನಾಸಿಕಗಳೂ ಆಗುವುದಿಲ್ಲ, ಅನುನಾಸಿಕ್ಯಗಳೂ ಆಗುವುದಿಲ್ಲ. ಅವು ಈ ಪರಿಸರದಲ್ಲಿ **ಸದಾ ಅನನುನಾಸಿಕಗಳಾಗಿಯೇ ಉಳಿಯುತ್ತವೆ.**

ಸಾಹಿತ್ಯ ಋಣ

1. ಕೃಷ್ಣಭಟ್ಟ, ಸೇಡಿಯಾಪು:
೧೯೭೩ "ಪಾಂಡಿ ಮತ್ತು ಪಾಂಡ್ಯರು". **ಮಾನವಿಕ ಕರ್ಣಾಟಕ,** ೩:೨ ಮೈಸೂರು: ಮೈಸೂರು ವಿಶ್ವವಿದ್ಯಾಲಯ.

2. ಕೇಶಿರಾಜ:
೧೯೬೪ ಡಿ.ಎಲ್. ನರಸಿಂಹಾಚಾರ್ (ಸಂ). **ಶಬ್ದಮಣಿ ದರ್ಪಣಂ,** ಮೈಸೂರು: ಶಾರದ ಮಂದಿರ

3. ಬಿಳಿಗಿರಿ, ಎಚ್. ಎಸ್.:
೧೯೭೦ **ವರ್ಣನಾತ್ಮಕ ವ್ಯಾಕರಣದ ಮೂಲತತ್ತ್ವಗಳು,** ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.

---

೩೦. ವಿಲ್ಯಂ ಮಾಡ್ತ (೧೯೭೫), ಪು. ೨೧.

೩೧. ಹವ್ಯಕ ಕನ್ನಡದಲ್ಲಿ ಅನುನಾಸಿಕ್ಯ ಯಕಾರ ವಕಾರಗಳಿಗೂ ಧ್ವನಿಮಾಸ್ಥಾನವಿದೆ: ನೋಡಿ: K. G. Shastri, The Havyaka Dialect of North Kanara (Dharwar : 1971 : 13).

4. ಮುಳಬಾಗಲ, ಧೋಂ. ನ.

೧೯೭೪ **ನುಡಿಗಟ್ಟು,** ಧಾರವಾಡ : ಧೋಂ. ನ. ಮುಳಬಾಗಲ.

5. ವಿಲ್ಯಂ ಮಾಡ್ತ :

೧೯೬೫ **ಕನ್ನಡ ಭಾಷೆಯು ರೂಪರೇಷೆಗಳು,**

ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ.

6. ವಿಷ್ಣುಸುತ :

೧೯೬೩ "ಅನುನಾಸಿಕ – ಯುವಲ". **ಕರ್ನಾಟಕ ಭಾರತಿ,** ೬:೨;

ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ.

7. ಸೀತಾರಾಮಯ್ಯ, ಎಂ. ವಿ.

೧೯೫೮ "ಕೆಲವು ಅಕ್ಷರಗಳ ಅನುನಾಸಿಕೋಚ್ಚಾರ" **ಹೊಸಗನ್ನಡಸಾಹಿತ್ಯ ಮತ್ತು ಇತರ ಲೇಖನಗಳು,** ಬೆಂಗಳೂರು : ರಾಘವ ಪ್ರಕಾಶನ.

8. Biligiri, H. S.

Nov. 1955 "The Nasal Phonemes of Kannada",
Indian Linguistics. Vol. XVI.

9. Bright, William

1958 **An Outline of Coloquial Kannada**, Poona : Deccan College.

10. Gleason, H. A.

1966 **An Introduction to Descriptive Linguistics,** Delhi : Oxford & IBH Publishing Co.,

11. Hiremath R. C.

1961 **The Structure of Kannada**, Dharwad : Karnatak University.

12. Kumaraswami Raja, N.

1969 **Post Nasal Voiceless Plosives in Dravidian**
Annamalainagar : Annamalai University.

13. Nayak H. M.

1967 **Kannada Literary and Colloquial,** Mysore :
Rao and Raghawan.

14. Pike, Kenneth

1947 **Phonemics**, Ann Arbor : University of Michigan Press.

15. Shastri, K. G.

1971 **The Havyaka Dialect of North Kanara**, Dharwad : Karnatak University.

ದೈವೀ ಆರಾಧನೆಗೆ ಸಂಬಂಧಿಸಿದ ಕೆಲವು ಜನಪದ ಆಚರಣೆಗಳು

● ಎಚ್. ಎಸ್. ಸಿದ್ದಗಂಗಪ್ಪ

ಜನಪದರು ಹುಟ್ಟಿನಿಂದ ಹಿಡಿದು ಮಣ್ಣಲ್ಲಿ ಮಣ್ಣಾಗುವವರೆಗೂ. ನಂಬಿಕೆ, ಆಚರಣೆ, ಸಂಪ್ರದಾಯಗಳಿಗೆ ಅಂಟಿಕೊಂಡು ಬಂದಿದ್ದಾರೆ. ಬರುತ್ತಿದ್ದಾರೆ. ಇವುಗಳು ಸಂಸ್ಕೃತಿಯನ್ನು ಪೋಷಿಸುವಲ್ಲಿ, ಮಾನವನ ಜೀವನವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾ ಬಂದಿವೆ. ಸಮಾಜವನ್ನು ಒಂದುಗೂಡಿಸುವ. ತಿದ್ದುವ ಹಾಗೂ ವ್ಯಕ್ತಿಗಳು ಅಡ್ಡದಾರಿಗೆ ಹೋಗದಂತೆ ನಿಯಂತ್ರಿಸುವ ಸಾಮರ್ಥ್ಯವನ್ನು ಪಡೆದಿವೆ. ಆಚರಣೆ, ಸಂಪ್ರದಾಯಗಳು ಒಬ್ಬ ವ್ಯಕ್ತಿಯ, ಒಂದು ಗುಂಪಿನ ಸ್ವತ್ತಾಗದೆ ಇಡೀ ಸಮಾಜದ ಸ್ವತ್ತಾಗಿರುತ್ತವೆ. ಇವುಗಳನ್ನು ಸಮಾಜ ನಿರ್ದಿಷ್ಟವಾದ ಕಾಲದಲ್ಲಿ ಆಚರಿಸುತ್ತಾ ಬಂದಿವೆ.

ಆಚರಣೆಗಳು ಆದಿವಾಸಿಗಳ ಕಾಲದಿಂದ ಬೆಳೆದು ಬಂದಿವೆ. ಅವರು ಅಗೋಚರವಾದ ಶಕ್ತಿಗಳನ್ನು ವಶಪಡಿಸಿಕೊಳ್ಳಲು ಅವುಗಳ ಕ್ರೂರದೃಷ್ಟಿಯಿಂದ ಪಾರಾಗಲು. ಅವುಗಳನ್ನು ಅನೇಕ ವಿಧಗಳಿಂದ ತೃಪ್ತಿಪಡಿಸುತ್ತಾ ಬಂದಿದ್ದಾರೆ. ಇವುಗಳ ಹಿನ್ನೆಲೆಯಲ್ಲಿ ಆಚರಣೆಗಳು ಬೆಳೆದು ಬಂದಿವೆ. ಆದಿವಾಸಿಗಳು ಅವುಗಳನ್ನು ನಿರ್ದಿಷ್ಟ ಕಾಲದಲ್ಲಿ ಆಚರಿಸುತ್ತಾ ಬಂದಿದ್ದಾರೆ. ಇಂದು ಆಚರಿಸುವ ರೀತಿಯಲ್ಲಿ. ವಿಧಾನದಲ್ಲಿ ವ್ಯತ್ಯಾಸವಾಗಿರಬಹುದಾದರೂ ಮೂಲ ಉದ್ದೇಶ ಒಂದೇ. ಜನರಿಗೆ ಅಗೋಚರ ಶಕ್ತಿಯ ಬಗ್ಗೆ ಇರುವ ನಂಬಿಕೆ. ಭಯ. ಭಕ್ತಿಯಿಂದ ಇಂದಿಗೂ ಸಹ ಆಚರಣೆಗಳು ಜೀವಂತವಾಗಿವೆ. ದೈವೀ ಆರಾಧನೆಗೆ ಸಂಬಂಧಪಟ್ಟ ಕೆಲವು ಆಚರಣೆಗಳನ್ನು ಪರಿಚಯ ಮಾಡಿಕೊಡುವುದು ಪ್ರಸ್ತುತ ಲೇಖನದ ಉದ್ದೇಶ.

ಉಟ್ಲುಮರ

ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಒಂದೆರಡು ಕಡೆ ಕಂಡುಬರುವ ವಿಶಿಷ್ಟವಾದ ಆಚರಣೆ ಉಟ್ಲುಮರ ಹತ್ತುವುದು. ಗಂಡು ದೇವರ ಆರಾಧನೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿರುವ ಈ ಆಚರಣೆ ಬಹುತೇಕವಾಗಿ ಗೊಲ್ಲರಲ್ಲಿ. ನಾಯಕ ಜನಾಂಗದಲ್ಲಿ ಕಂಡುಬರುತ್ತದೆ. ಇದನ್ನು 'ಉಟ್ಲಾಟ.' 'ಉಟ್ಲಾಟ' ಎಂದು ಕರೆಯುವುದುಂಟು.

'ಉಟ್ಲು' ಎಂಬ ಶಬ್ದ 'ಅಟ್ಲು' ಎಂಬ ಶಬ್ದದಿಂದ ಬಂದಿರಬಹುದು. 'ಅಟ್ಲು' ಎಂದರೆ 'ಕೆಸರು'. ಈ ಆಟಕ್ಕಾಗಿ ಹೂತಿರುವ ಎತ್ತರವಾದ ಮರದ ಬುಡದಲ್ಲಿ ಸುತ್ತ ಕೆಸರಿರುತ್ತದೆ. ಈ ಮರವನ್ನು ಏರುವುದರಿಂದ ಇದಕ್ಕ ಈ ಹೆಸರು ಬಂದಿರಬೇಕು. ಗೊಲ್ಲರು ಗೋಕುಲಾಷ್ಟಮಿಯ ಕೊನೆಯದಿನ ಎತ್ತರದಲ್ಲಿ ತೆಂಗಿನ ಕಾಯಿಯನ್ನು ಮರಕ್ಕೆ ಕಟ್ಟಿ ಹೊಡೆಯುತ್ತಾ 'ಉಟ್ಬಾಟ' ಆಟವಾಡುತ್ತಾರೆ.

ವರ್ಷಕ್ಕೊಮ್ಮೆ ಗ್ರಾಮ ದೇವರ ಜಾತ್ರೆಯಲ್ಲಿ ಈ ಆಚರಣೆಯನ್ನು ಕಾಣಬಹುದು. ಹಿಂದೆ ಗ್ರಾಮಕ್ಕೆ ಮಳೆಬಾರದೆ ಬೆಳೆಯಾಗದಿದ್ದಾಗ. ದನಕರುಗಳಿಗೆ ರೋಗಬಂದಾಗ. ಊರಿನ ಹಿತರಕ್ಷಣೆಯ ದೃಷ್ಟಿಯಿಂದ 'ಉಟ್ಲುಪರ್ಸೆ' ಮಾಡುತ್ತಿದ್ದುದಾಗಿ ಗ್ರಾಮದ ಹಿರಿಯರು ಹೇಳುತ್ತಾರೆ. ಹೀಗೆ ಮಾಡುವುದರಿಂದ ದೇವರು ಸಂತೃಪ್ತಿಗೊಂಡು ರೋಗರುಜಿನಗಳನ್ನು ನಿವಾರಿಸುತ್ತಾನೆ ಎಂಬ ನಂಬಿಕೆ ಈಗಲೂ ಇದೆ.

ಉಟ್ಲುಮರದ ರಚನೆ ವಿಶಿಷ್ಟವಾದುದು. ದೇವಸ್ಥಾನದ ಮುಂಭಾಗದ ಬಯಲಿನಲ್ಲಿ ಸುಮಾರು ೪೦ ಅಥವಾ ೫೦ ಅಡಿ ಎತ್ತರವಿರುವ. ಮತ್ತು ಒಬ್ಬ ವ್ಯಕ್ತಿ ತಬ್ಬಿಕೊಳ್ಳುವಷ್ಟು ದಪ್ಪವಿರುವ ನಯವಾದ ಮರವನ್ನು ಹೂಳಲಾಗುತ್ತದೆ. ಮರದ ತುದಿಯಲ್ಲಿ ಒಬ್ಬಿಬ್ಬರು ಕುಳಿತುಕೊಳ್ಳಲು ಅನುಕೂಲವಾಗುವಂತೆ ಚೌಕಾಕಾರದ ಅಟ್ಟವನ್ನು ಕಟ್ಟಲಾಗುತ್ತದೆ. ಅಟ್ಟದ ನಾಲ್ಕು ತುದಿಗಳಿಗೂ ಎಳನೀರನ್ನು ಕಟ್ಟಿರುತ್ತಾರೆ. ಅಟ್ಟದ ಮೇಲೆ ಹರವಿಯಲ್ಲಿ ಲೋಳಿಸರ. ನೀರು. ಎಣ್ಣೆ. ಕೆಸರು ಕಲಸಿ ಇಟ್ಟಿರುತ್ತಾರೆ. ನಯವಾದ ಕಂಬಕ್ಕೂ ಸಹ ಇವುಗಳ ಮಿಶ್ರಣವನ್ನು ಬಳಿದಿರುತ್ತಾರ. ಮರದ ಬುಡದಲ್ಲಿ ಸುತ್ತಲೂ ನೆಲವನ್ನು ಅಗೆದು ನೀರು ಹಾಕಿ ಕೆಸರು ಮಾಡಿರುತ್ತಾರೆ.

ಉಟ್ಲುಮರವನ್ನು ವಂಶಪಾರಂಪರ್ಯವಾಗಿ ಬಂದ ನಿರ್ದಿಷ್ಟ ಮನೆತನದವರು ಮಾತ್ರ ಹತ್ತಬೇಕು. ಮರ ಹತ್ತುವವರು ಮೂರುದಿನಗಳ ಕಾಲ ಮಡಿಯಿಂದ ಉಪವಾಸವಿರಬೇಕು, ಹಾಗೆ ಪಥ್ಯವಿರಬೇಕು. ಮರಹತ್ತುವ ದಿನ ಬಾವಿಯಲ್ಲಿ ಮುಳುಗಿ ಒದ್ದೆಯ ಬಟ್ಟೆಯಲ್ಲಿ ತಮಟೆ. ಅರೆ. ಕಹಳೆ. ಮುಂತಾದ ಜನಪದ ವಾದ್ಯಗಳ ಸಮೇತ ಬಂದು ಮರಕ್ಕೆ ಪೂಜೆ ಮಾಡಿ ಒಬ್ಬರಾದ ಮೇಲೆ ಒಬ್ಬರು ಹತ್ತಲು ಪ್ರಯತ್ನ ಮಾಡುತ್ತಾರೆ. ಇವರು ಮರ ಏರಲು ಪ್ರಯತ್ನಿಸುತ್ತಿದ್ದಂತೆ ಅಟ್ಟದ ಮೇಲೆ ಕುಳಿತವರು ಮೊದಲೇ ಸಿದ್ಧಪಡಿಸಿಕೊಂಡ ಕೆಸರಿನ ಮಿಶ್ರಣವನ್ನು ಮೇಲಿನಿಂದ ಸುರಿಯುತ್ತಾರೆ. ಆಗ ಸಹಜವಾಗಿಯೇ ಮರಹತ್ತುವವರಿಗೆ ಕಷ್ಟವಾಗಿ ಜಾರಿ ಬೀಳುತ್ತಾರೆ. ಆದರೂ ಮತ್ತೆ ಏರಲು ಪ್ರಯತ್ನಿಸುವುದು. ಜಾರಿ ಬೀಳುವುದು. ಹಾಗೆ ಬಿದ್ದಾಗ ಕೆಸರು ಚಿಮ್ಮುವುದು ಪ್ರೇಕ್ಷಕರಿಗೆ ಮನರಂಜನೆ.

ಹೀಗೆ ಮತ್ತೆ ಮತ್ತೆ ಪ್ರಯತ್ನಿಸಿ ಕೊನೆಗೆ ಇವರಲ್ಲಿ ಯಾರಾದರೊಬ್ಬ ಮರ ಹತ್ತಿ ತುದಿಯಲ್ಲಿ ಕಟ್ಟಿರುವ ಎಳೆ ನೀರನ್ನು ಕಿತ್ತು ಹಾಕಬೇಕು. ಇಲ್ಲವೆ. ಅಟ್ಟದ ಮೇಲಿ

ನಿಂತು ಚಪ್ಪಾಳೆ ತಟ್ಟಬೇಕು. ಅಲ್ಲಿಗೆ ಅವನು ಗೆದ್ದಂತೆ. ಹಿಂದೆ ಆದಿವಾಸಿಗಳಲ್ಲಿ ವಿವಾಹ ವಿಧಾನಗಳು ಬಂದಾಗ ಅರ್ಹತೆ ಪರೀಕ್ಷಾನಂತರ ವಿವಾಹವಾಗುವ ಪದ್ಧತಿಯಲ್ಲಿ ಇದೇ ರೀತಿಯ ಸ್ಪರ್ಧೆ ಕಂಡುಬರುತ್ತದೆ. ಹೋಳಿಹಬ್ಬದ ಸಂದರ್ಭದಲ್ಲಿ ಸಾಮೂಹಿಕ ನೃತ್ಯ ನಡೆಯುತ್ತದೆ. ಒಂದು ಮರದ ಮೇಲೆ ಅಥವಾ ಒಂದು ಮರದ ಸುತ್ತಲೂ ಕನ್ಯೆಯರು, ಯುವಕರು ನೃತ್ಯ ಮಾಡುತ್ತಾರೆ. ಕಂಬದ ತುದಿಯಲ್ಲಿ ತೆಂಗಿನ ಕಾಯಿ ಮತ್ತು ಬೆಲ್ಲವನ್ನು ಕಟ್ಟಿರುತ್ತಾರೆ. ಅವಿವಾಹಿತ ಕನ್ಯೆಯರು ಒಳಸುತ್ತಿನಲ್ಲಿಯೂ ಯುವಕರು ಹೊರಸುತ್ತಿನಲ್ಲಿಯೂ ನರ್ತಿಸುತ್ತಾರೆ. ಆಗ ಒಬ್ಬ ಯುವಕ ಒಳಸುತ್ತು ದಾಟಿಹೋಗಿ ಕಂಬದ ತುದಿಯಲ್ಲಿ ಕಟ್ಟಿರುವ ಬೆಲ್ಲವನ್ನು ತಿಂದು ಕಾಯನ್ನು ಒಡೆಯಬೇಕು. ಹೀಗೆ ಮಾಡಲು, ಆತ ಸುಲಭವಾಗಿ ಕಂಬ ಹತ್ತಲು, ಕನ್ಯೆಯರು ಬಿಡುವುದಿಲ್ಲ. ಅವರೆಲ್ಲರೂ ಸೇರಿ ಆತನ ಬಟ್ಟೆಗಳನ್ನು ಹರಿಯುತ್ತಾರೆ; ಕೂದಲನ್ನು ಕೀಳುತ್ತಾರೆ; ಪೊರಕೆಯಿಂದ ಹೊಡೆಯುತ್ತಾರೆ. ಕೆಲವು ವೇಳೆ ಅವನ ಮಾಂಸಖಂಡ ಕಿತ್ತುಬರುವ ಹಾಗೆ ಪರಚುತ್ತಾರೆ. ಈ ಎಲ್ಲಾ ಕಷ್ಟಗಳನ್ನು ಸಹಿಸಿಕೊಂಡು ಯಾವ ಯುವಕ ಈ ಪ್ರಯತ್ನದಲ್ಲಿ ಯಶಸ್ವಿಯಾಗುವನೋ ಆತ ಈ ಗುಂಪಿನಲ್ಲಿ ತನಗೆ ಬೇಕಾದ ಕನ್ಯೆಯನ್ನು ಆರಿಸಿಕೊಂಡು ತನ್ನೊಂದಿಗೆ ಕರೆದುಕೊಂಡು ಹೋಗಬಹುದು. ಆದಿವಾಸಿಗಳಲ್ಲಿ ಇದು ವ್ಯಕ್ತಿಯ ಪೌರುಷದ ತೀರ್ಮಾನಕ್ಕಾಗಿ, ಅವನು ಲೈಂಗಿಕ ಜೀವನದಲ್ಲಿ ಕಾಲಿಡುವದಕ್ಕೆ ಅರ್ಹನೋ, ಅನರ್ಹನೋ ಎಂಬ ನಿರ್ಣಯಕ್ಕಾಗಿ ನಡೆದವರೆ. ಇವರಲ್ಲಿ ದೈವೀ ಆರಾಧನೆಗಾಗಿ ನಡೆಯುತ್ತಿದೆ. ಇದರಲ್ಲಿ ಮನರಂಜನೆಯೂ ದೊರೆಯುತ್ತದೆ. ಅಟ್ಟದ ಮೇಲೆ ನಿಂತು ಚಪ್ಪಾಳೆ ತಟ್ಟಿದಾಗ, ಜನ ಸಂತೋಷದಿಂದ ಚಪ್ಪಾಳೆ ತಟ್ಟುತ್ತಾ, ಕೇಕೆ–ಸಿಳ್ಳೆ ಹಾಕುತ್ತಾ ಸಂತೋಷವನ್ನು ಸೂಚಿಸುತ್ತಾರೆ. ಮರ ಹತ್ತುವವರು ಮೋಜಿಗಾಗಿ ಪ್ರೇಕ್ಷಕರಿಗೆ ಕಸರನ್ನು ಎರಚುವುದುಂಟು. ಆದರೂ ಜನ ಕೋಪಗೊಳ್ಳದೆ ಸಂತೋಷದಿಂದ ಪ್ರದರ್ಶನದಲ್ಲಿ ಪಾಲುಗೊಳ್ಳುತ್ತಾರೆ.

ಕೋಲಾರ ಜಿಲ್ಲೆಯಲ್ಲಿ ಇದನ್ನು 'ಅಟ್ಲು ಹೊಡೆಯುವುದು' ಎಂದು ಕರೆಯುತ್ತಾರೆ. ಅಲ್ಲಿ ಬಳಕೆಯಲ್ಲಿರುವ ವಿಧಾನದಲ್ಲಿ ಮೂರು ಬಗೆಗಳಿವೆ:

೧. ಜೋಡಿ ಉಟ್ಲು ಹೊಡೆಯುವುದು.
೨. ಹಾಲು ಉಟ್ಲು ಹೊಡೆಯುವುದು.
೩. ಎಣ್ಣೆ ಸಹಿತ ಹಾಲು ಉಟ್ಲು ಹೊಡೆಯುವುದು.

ಜೋಡಿ ಉಟ್ಲು ಹೊಡೆಯುವುದು

ನೆಲಕ್ಕೆ ಹೂಳಿದ ಸುಮಾರು ೧೫ ರಿಂದ ೨೦ ಅಡಿ ಉದ್ದವಿರುವ ಮರದ ಕಂಬ. ಕಂಬದ ಮಧ್ಯ ಭಾಗದಲ್ಲಿ ಒಂದು, ತುದಿಯ ಸ್ವಲ್ಪ ಕೆಳಭಾಗದಲ್ಲಿ ಮತ್ತೊಂದು–ಹೀಗೆ

ಎರಡು ಚಕ್ರಗಳನ್ನು ಜೋಡಿಸಿರುತ್ತಾರೆ. ಈ ಎರಡು ಚಕ್ರಗಳು ಸಮಾನಾಂತರವಲ್ಲಿರಲು ಎರಡೆರಡು ಕಟ್ಟಿಗೆಯನ್ನು ಬಂಧಿಸಿ ಬಿಗಿಮಾಡಿರುತ್ತಾರೆ. ಕೆಳಗಿನ ಚಕ್ರದ ಮೇಲೆ ಸ್ವಲ್ಪ ಅಡ್ಡವಾಗಿ ಇಬ್ಬರು ಕುಳಿತುಕೊಳ್ಳುವಂತಹ ಒಂದು ಹಲಗೆಯನ್ನು ಕಟ್ಟಿರುತ್ತಾರೆ. ಕೆಳಗಿನ ಚಕ್ರದ ಒಂದು ತುದಿಗೆ ಉದ್ದವಾದ ದಾರದಿಂದ ಕಟ್ಟಿದ ತೆಂಗಿನಕಾಯಿಯನ್ನು ಇಳಿಬಿಟ್ಟಿರುತ್ತಾರೆ. ಹಲಗೆಯ ಮೇಲೆ ಕುಳಿತವರು ಅದನ್ನು ಒಂದೇ ಏಟಿಗೆ ಹೊಡೆದರೆ ಗೆದ್ದಂತೆ. ಸೋತರೆ ವಚನಭ್ರಷ್ಟರಾದಂತೆಂದು ತೀರ್ಮಾನಿಸುತ್ತಾರೆ.

ಹಾಲು ಉಟ್ಲು ಹೊಡೆಯುವುದು

ಸಾಮಾನ್ಯವಾಗಿ ಈ ಪ್ರದರ್ಶನದಲ್ಲಿ ಸುಮಾರು ೪೦ ರಿಂದ ೫೦ ವರ್ಷದವರು ಭಾಗವಹಿಸುತ್ತಾರೆ.

ಎರಡು ಎತ್ತರವಾದ ಕಂಬಗಳನ್ನು ನಿಲ್ಲಿಸಿ ಅದಕ್ಕೆ ಅಡ್ಡವಾಗಿ ತೊಲೆಯಂತೆ ಮತ್ತೊಂದು ಮರವನ್ನು ಕಟ್ಟಿರುತ್ತಾರೆ. ಮಧ್ಯಭಾಗದಲ್ಲಿ ಒಂದು ಕೊಕ್ಕೆಯನ್ನು ಹಾಕಿ ಅದಕ್ಕೆ ಚಿಕ್ಕ ಚಕ್ರವೊಂದನ್ನು ಜೋಡಿಸಿರುತ್ತಾರೆ. ಸುಮಾರು ೪೦ರಿಂದ ೫೦ ಅಡಿ ಉದ್ದವಿರುವ ಹಗ್ಗವನ್ನು ಈ ಚಕ್ರದ ಮೂಲಕ ಹಾಕಿ ಅದರ ತುದಿಗೆ 'ಉಟ್ಲುಗಂಟ'ನ್ನು ಕಟ್ಟಿರುತ್ತಾರೆ. ಇನ್ನೊಂದು ತುದಿಯನ್ನು ಹಿಡಿದುಕೊಂಡು ಕೆಳಗೆ ಒಬ್ಬ ನಿಂತಿರುತ್ತಾನೆ. 'ಉಟ್ಲುಗಂಟೆ'ನಲ್ಲಿ ಒಂದುಗಜ ಹೊಸಬಟ್ಟೆ, ಬಾಳೆಹಣ್ಣು, ಹೊಂಬಾಳೆ ಹೂ, ತಿಂಡಿ ಪದಾರ್ಥಗಳನ್ನು ಕಟ್ಟಿರುತ್ತಾರೆ. ಇವೆಲ್ಲವೂ ಉಟ್ಲು ಹೊಡೆಯುವವನಿಗೆ ಸಿಗುತ್ತವೆ.

ಉಟ್ಲು ಹೊಡೆಯುವವನು ಗಂಟನ್ನು ಹೊಡೆಯಲು ಪ್ರಾರಂಭಿಸಿದಾಗ, ಹಗ್ಗ ಹಿಡಿದಿರುವವನು ಹಗ್ಗವನ್ನು ಕೆಳಕ್ಕೆ ಮೇಲಕ್ಕೆ ಎಳೆಯುತ್ತಿದ್ದರೆ. ದೂರದಿಂದ ಕೆಲವರು ಉಟ್ಲು ಹೊಡೆಯುವವನಿಗೆ ಕಂಬದ ಪಕ್ಕದಲ್ಲಿ ತುಂಬಿಟ್ಟ ಕೊಪ್ಪರಿಗೆಗಳಿಂದ ನೀರು ಎರಚುತ್ತಾರೆ. ಇದೆಲ್ಲವರಿಂದ ತಪ್ಪಿಸಿಕೊಂಡು ಆ ಗಂಟನ್ನು ಹೊಡೆಯಬೇಕು. ಗಂಟು ಸಿಕ್ಕಿದರೆ ಅವನು ಗೆದ್ದಂತೆ. ಗೆದ್ದವರಿಗೆ ಬಹುಮಾನವನ್ನು ಕೊಟ್ಟು ಗೌರವಿಸುವುದೂ ಉಂಟು.

ಎಣ್ಣೆ ಸಹಿತ ಹಾಲು ಉಟ್ಲು ಹೊಡೆಯುವದು

ಎತ್ತರವಾದ ಎರಡು ಕಂಬಗಳನ್ನು ಹೂಳಿ ಅದಕ್ಕೆ ಅಡ್ಡವಾಗಿ ಮತ್ತೊಂದು ಕಂಬವನ್ನು ಕಟ್ಟಿರುತ್ತಾರೆ. ಅಡ್ಡಕಂಬಕ್ಕೆ ಹಾಲು ತುಂಬಿದ ಚಿಕ್ಕಚಿಕ್ಕ ಮಣ್ಣಿನ ಕುಡಿಕೆಗಳನ್ನು ಕಟ್ಟಿರುತ್ತಾರೆ. ಕುಡಿಕೆಯಲ್ಲಿ ಕಾಸನ್ನು ಹಾಕುವುದೂ ಉಂಟು. ಉಟ್ಲು

ಹೊಡೆಯುವವರು ಹಾಲು ತುಂಬಿರುವ ಎಲ್ಲಾ ಕುಡಿಕೆಗಳನ್ನು ಒಂದೇ ಸಲ ಹೊಡೆದು ಗೆದ್ದರೆ ಅವರಿಗೆ ಜನರಿಂದ ಗೌರವ ಸತ್ಕಾರ ದೊರೆಯುತ್ತದೆ.

ಗಾವು ಸಿಗಿಯುವುದು

ಗ್ರಾಮ ದೇವತೆಯ ಜಾತ್ರೆಯಲ್ಲಿ ಆಚರಿಸುವ ವಿಶಿಷ್ಟವಾದ ಆಚರಣೆ 'ಗಾವು ಸಿಗಿಯುವುದು'. ದಕ್ಷಿಣ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಈ ಆಚರಣೆ ಕಂಡು ಬರುತ್ತದೆ. ಮಾನವ ಪ್ರಕೃತಿಯಲ್ಲಿ ಕಾಣುವ ಕೆಲವು ಅತಿಮಾನುಷ ಶಕ್ತಿಗಳಿಂದ ರಕ್ಷಣೆ ಪಡೆಯಲು, ಅವುಗಳನ್ನು ಒಲಿಸಿಕೊಳ್ಳುವ ಉದ್ದೇಶದಿಂದ ಪೂಜಿಸತೊಡಗಿದ. ಅತಿ ಮಾನುಷ ಶಕ್ತಿಗಳಿಗೆ ಮೊರೆ ಹೊಕ್ಕು, ಅವುಗಳಿಂದ ತೊಂದರೆಯಾಗದಿರಲೆಂದು ವರ್ಷ ಕ್ಕೊಮ್ಮೆ ಕ್ಲುಪ್ತಕಾಲದಲ್ಲಿ ಪೂಜೆ, ಬಲಿಗಳನ್ನು ಕೊಡುತ್ತಾ ಬಂದನು. ಇವರ ಹಿನ್ನೆಲೆ ಯಲ್ಲಿ ಗಾವು ಸಿಗಿಯುವುದು ಆಚರಣೆಯಲ್ಲಿ ಬಂದಿದೆ.

ತುಮಕೂರು ಜಿಲ್ಲೆಯಲ್ಲಿ ನಾನು ಕೆಲವು ಗ್ರಾಮಗಳಿಗೆ ಭೇಟಿಕೊಟ್ಟು. ಅಲ್ಲಿನ ಹಿರಿಯರಿಂದ ಪಡೆದ ಮಾಹಿತಿಯನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಿದ್ದೇನೆ. ಕೆಲವು ಪ್ರದೇಶ ಗಳಲ್ಲಿ ನಾನು ಹೇಳುವ ವಿಷಯಕ್ಕಿಂತ ಭಿನ್ನವಾಗಿರುವ ಸಾಧ್ಯತೆಯೂ ಉಂಟು. ಇಂದಿಗೂ ಇಂತಹ ಆಚರಣೆಗಳು ಉಳಿದಿರುವುದು ಗ್ರಾಮೀಣರಲ್ಲಿ ಅಚಲವಾಗಿರುವ ನಂಬಿಕೆಯಿಂದ. ಕೆಲವು ಹಿರಿಯರಲ್ಲಿ ಭೇಟಿಮಾಡಿದ ಸಂದರ್ಭದಲ್ಲಿ ಈ ಆಚರಣೆ ಉಳಿದು ಬರಲು ಕಾರಣವನ್ನು ಕೇಳಿದಾಗ ಅವರು ಕೊಟ್ಟ ದೃಷ್ಟಾಂತ: "ನಾವು ಆದಿ ಕಾಲದಿಂದಲೂ ಪರಿಷೆ ಮಾಡ್ತಾಇದ್ದು. ಪರ್ಷೆಯಲ್ಲಿ ಅಮ್ಮನಿಗೆ ಗಾವು ಸಿಗ್ತಿದ್ವಿ. ಆ ನಮ್ಮ ತಾಯಿ ಹಳ್ಳೀರ್ನೆಲ್ಲಾ ಪಸಂದಾಗಿಟ್ಟಿದ್ಲು. ನೋಡಿ ಸ್ವಾಮಿ. ಐವತ್ತು ವರ್ಷದ ಹಿಂದಿನ ಮಾತು. ನಮ್ಮೂರ್ನಾಗೆ ಎರಡು ಪಾರ್ಟಿಗಳಾಗಿ ಪರ್ಷೆ ನಿಂತೋಯ್ತು. ಆಗ ಊರಿನ ಹಿರಿಯರು ಆ ಎರಡು ಪಾರ್ಟೀನು ಕರ್ಸಿ ಬುದ್ದಿ ಹೇಳಿ ಪರ್ಷೆ ನಿಲ್ಲಿಸ ಬ್ಯಾಡಿ ಎಂತ ಹೇಳಿದ್ರೂ ಕೇಳ್ಲಿಲ್ಲ. ಇದೆಲ್ಲ ಆಗಿ ಒಂದ್ ಹದಿನೈದು ದಿನ ಕೂಡ ಆಗಿರ್ಲಿಲ್ಲ. ಊರ್ನಾಗೆ ಒಂದೊಂದೇ ದನಗಳು ಸಾಯೋಕೆ ಹತ್ವು. ಜನರಿಗೆಲ್ಲ ವಾಂತಿ ಭೇದಿ ಶುರುವಾಯ್ತು. ಕೆಲವರು ಸತ್ತರು. ಆಗ್ನೋಡಿ ಜನಕ್ಕೆ ಬುದ್ದಿಬಂತು. ಎಲ್ಲರೂ ಸೇರಿ ಆ ನಮ್ಮ ತಾಯಿಗೆ ಹರಕೆ ಮಾಡಿಕೊಂಡು ಪರ್ಷೆಮಾಡಿ ಗಾಬುಸಿಗಿಸಿದೊ. ಆಗ ಎಲ್ಲ ಕಾಯಿಲೆ ವಾಸಾಯ್ತು. ಅವತ್ನಿಂದ ವರ್ಷ ವರ್ಷವೂ ತಪ್ಪದೆ ಮಾಡ್ಕೊಂಡು ಬಂದಿದ್ದೀವಿ" ಎಂದರು. ಅವರ ಮಾತನ್ನು ಗುರುತಿಸಿದಾಗ ಅವರಲ್ಲಿ ದೇವರ ಬಗ್ಗೆ ಬೇರೂರಿರುವ ನಂಬಿಕೆಯು ಸ್ಪಷ್ಟವಾದ ಕಲ್ಪನೆ ಬರುತ್ತದೆ. ಆದರೆ ಅವರು ಹೇಳಿದ ಸಂಗತಿ ಕಾಕತಾಳೀಯವಾಗಿರಬಹುದು.

ಗಾವು ಸಿಗಿಯುವುದು ವಂಶಪಾರಂಪ್ಯರವಾಗಿ ಬಂದಿದೆ. ಸಾಮಾನ್ಯವಾಗಿ ಗಂಗೆ ಮತದವರಲ್ಲಿ (ನಾಯಕರು) ಕಂಡುಬರುತ್ತಾನೆ. ವ್ಯಕ್ತಿಗೆ ೫೦ ವರ್ಷ ಆಗುವವರೆಗೆ ಗಾವು ಸಿಗಿಯುವುದರಲ್ಲಿ ಪಾಲುಗೊಳ್ಳುತ್ತಾನೆ. ಇವನು ಕೆಂಪು ಬಣ್ಣದ ಪಂಚೆ ಉಟ್ಟು, ಬರೀ ಮೈಯಲ್ಲಿರುತ್ತಾನೆ. ಸೊಂಟಕ್ಕೆ ಕೆಂಪುವಸ್ತ್ರ ಬಿಗಿದಿರುತ್ತಾನೆ. ಹಣೆಯಲ್ಲಿ ಕುಂಕುಮ. ಕೊರಳಿಗೆ ಕೆಂಪುಹೂವಿನ ಹಾರವನ್ನು ಹಾಕಿದ್ದು, ನೋಡಲು ರೌದ್ರಾಕಾರವಾಗಿ ಕಾಣುತ್ತಾನೆ.

ಗಾವು ಸಿಗಿಯುವುದಕ್ಕ ಮೂರು ದಿನ ಮುಂಚಿತವಾಗಿ, ಗಾವು ಸಿಗಿಯುವ ವ್ಯಕ್ತಿ ಉಪವಾಸವಿದ್ದು, ದಿನಕ್ಕೆ ಮೂರು ಎಲಕ್ಕಿಯನ್ನು ತಿನ್ನಬೇಕೆಂಬ ನಿಯಮ. ಆ ಸಂದರ್ಭದಲ್ಲಿ ಮನೆಯಲ್ಲಿ ಅಂಟು ಮುಂಟು ಸೋಕುವಂತಿಲ್ಲ. ಈ ಮೂರುದಿನದ ಅವಧಿಯಲ್ಲಿ ಹೆಂಡತಿಯಿಂದ ದೂರವಿದ್ದು, ಮಡಿಯಿಂದ ದೇವರಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾನೆ. ಮನಶ್ಶಾಸ್ತ್ರೀಯ ದೃಷ್ಟಿಯಿಂದ ನೋಡಿದಾಗ, ವ್ಯಕ್ತಿ ಉಪವಾಸವಿದ್ದಾಗ ಅವನಿಗೆ ರೋಷ, ಆವೇಶ ಹೆಚ್ಚಾಗುತ್ತದೆ. ಆ ವೇಳೆಯಲ್ಲಿ ಏನು ಸಿಕ್ಕಿದರೂ ತಿಂದು ಬಿಡುವಷ್ಟು ರೋಷ, ಕೆಚ್ಚು ಇರುತ್ತದೆ. ಬಹುಶಃ ಈ ಹಿನ್ನೆಲೆಯಲ್ಲಿ ಗಾವುಸಿಗಿಯುವ ವ್ಯಕ್ತಿಯ ಶಕ್ತಿಸಂಚಯನಕ್ಕಾಗಿಯೇ ಉಪವಾಸವಿರುವ ನಿಯಮವನ್ನು ಅನುಸರಿಸಿಕೊಂಡು ಬಂದಿರಬೇಕು.

ಗಾವು ಸಿಗಿಯುವ ದಿನ ಬಲಿಕೊಡಬೇಕಾದ ಮೇಕೆಮರಿಯ ಕೊರಳಿಗೆ ಬೇವಿನ ಸೊಪ್ಪನ್ನು ಕಟ್ಟಿ ಗ್ರಾಮದೇವತೆಯ ಮುಂದೆ ಎಳೆದು ತರುತ್ತಾರೆ. ಈ ಮರಿಯನ್ನು ಊರಿನಲ್ಲಿ ಮೇಕೆ ಹಿಂಡು ಇರುವವರು. ವರ್ಷಕ್ಕೊಬ್ಬರಂತೆ ಸರದಿ ಮೇಲೆ ಕೊಡಬೇಕೆಂಬ ನಿಯಮ. ಗ್ರಾಮದೇವತೆಯ ಜಾತ್ರೆಯನ್ನು 'ಸಾರು' ಇಕ್ಕುವಾಗಲೇ ಇಂಥವರು ಈ ವರ್ಷ ಗಾವು ಸಿಗಿಯಲು ಮರಿಯನ್ನು ಕೊಡಬೇಕೆಂದು ತಿಳಿಸುತ್ತಾರೆ. ಪೂಜಾರಿ ದೇವರಿಗೆ ಪೂಜೆಮಾಡಿ ತೀರ್ಥವನ್ನು ಅದರ ಮೇಲೆ ಚಿಮುಕಿಸುತ್ತಾನೆ. ನಂತರ ಮರಿಯನ್ನು ವಾದ್ಯದೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ. ಈ ಸಮಯದಲ್ಲಿ ಹುಡುಗರು ಕೇಕೆಹಾಕುತ್ತಾ, ಕುಣಿಯುತ್ತಾ ಭಾಗವಹಿಸುತ್ತಾರೆ. ಊರೆಲ್ಲ ಸುತ್ತಿಸಿದ ಮೇಲೆ ದೇವರ ಗುಡಿಯ ಮುಂದಿನ ಕಂಬಕ್ಕೆ ಕಟ್ಟುತ್ತಾರೆ.

ಕೊಂಬು. ಕಹಳೆ. ತಮಟೆ. ಹರೆ, ಓಲಗ ಮುಂತಾದ ಜನಪದ ವಾದ್ಯಗಳೊಂದಿಗೆ ಗಾವು ಸಿಗಿಯುವ ವ್ಯಕ್ತಿಯನ್ನು ಅವನ ಮನೆಯಿಂದ ಅಗಸರು ಹಾಸುವ ಮಡಿಬಟ್ಟೆ ಮೇಲೆ ಕರೆದುತರುತ್ತಾರೆ. ದೇವರಿಗೆ ಪೂಜೆಮಾಡಿ ತೀರ್ಥಕೊಡುತ್ತಾನೆ ಪೂಜಾರಿ. ದೇವರಿಗೆ ಹಾಕಿದ ಹೂವಿನ ಹಾರವನ್ನು ಅವನ ಕೊರಳಿಗೆ ಹಾಕಿ. ಹಣೆಗೆ ದೇವರ ಮೇಲಿನ ಕುಂಕುಮವನ್ನು ಪ್ರಸಾದವೆಂದು ಇಡುತ್ತಾರೆ. ನಂತರ ಗಾವು ಸಿಗಿಯುವ

ಸ್ಥಳಕ್ಕೆ ಕರೆದು ತರುತ್ತಾರೆ. ವಾದ್ಯಗಳ ಮೊಳಗು ಘೋಷಗೊಳ್ಳುತ್ತದೆ. ಆ ಮೊಳಗಿಗೆ ಅವನು ಆವೇಶಭರಿತನಾಗುತ್ತಾನೆ. ಜನರ ಜಯಕಾರ ಅವನ ಮೇಲೆ ವಿಶೇಷವಾಗಿ ಪರಿಣಾಮ ಬೀರುತ್ತದೆ. ಆಗ ತಾನೊಬ್ಬ ಅತಿಮಾನುಷ ವ್ಯಕ್ತಿ, ದೇವರ ಬಂಟನೆಂದು ಭಾವಿಸುತ್ತಾನೆ. ಜನ ಗಾವು ಸಿಗಿಯುವುದನ್ನು ಕುತೂಹಲದಿಂದ ಮೂಕರಾಗಿ ನೋಡುತ್ತಿರುತ್ತಾರೆ. ಕ್ಷಣ ಕ್ಷಣಕ್ಕೂ ಅವನಿಗೆ ಆವೇಶ ಹೆಚ್ಚಾಗುತ್ತದೆ. ಇದನ್ನು ಕಂಡ ಜನ, ಅವನ್ನು ದೈವ ಮೇಲೆ ಬಂದವನೆನ್ನುತ್ತಾರೆ. ಆಯುಧದ ಸಹಾಯವಿಲ್ಲದೇ ತನ್ನ ಬಾಯಿಂದಲೇ ಮರಿಯನ್ನು ಸೀಳಿಹಾಕುತ್ತಾನೆ. ಆ ದೃಶ್ಯ ನೋಡಲು ಭಯಂಕರವಾಗಿರುತ್ತದೆ. ಅವನ ಕಟಬಾಯಿಂದ ರಕ್ತ ಹರಿಯುತ್ತಿರುತ್ತದೆ. ಮೈ ಮೇಲೆಲ್ಲ ರಕ್ತ ಬಿದ್ದಿರುತ್ತದೆ. ಮೊದಲೇ ಅವನು ಧರಿಸಿರುವ ವಸ್ತ್ರ, ಹಣೆಗೆ ಇಟ್ಟಿರುವ ಕುಂಕುಮ, ಕೊರಳಿಗೆ ಹಾಕಿರುವ ಕೆಂಪು ಹೂವಿನ ಹಾರ; ಇದರ ಮೇಲೆ ಸುರಿದ ರಕ್ತ. ಆಗ ಅವನನ್ನು ನೋಡುವುದಕ್ಕೆ ಭಯವಾಗುತ್ತದೆ. ಆವೇಶದಿಂದ ಕುಣಿಯುತ್ತಾ ಮೂರ್ಛೆ ಬೀಳುತ್ತಾನೆ. ಆಗ ದೇವರಿಗೆ ಮಂಗಳಾರತಿ ಮಾಡಿ ತೀರ್ಥಹಾಕಿ ಹೊತ್ತುಕೊಂಡು ಹೋಗಿ ಮಲಗಿಸುತ್ತಾರೆ. ಅಲ್ಲಿಗೆ ಗಾವು ಸಿಗಿಯುವ ಆಚರಣೆ ಮುಗಿಯುತ್ತದೆ.

ಕೆಂಡ ಹಾಯುವುದು

ಗ್ರಾಮದೇವರ ಜಾತ್ರೆಯಲ್ಲಿ ಜಾತ್ರೆ ಪ್ರಾರಂಭವಾದ ಮೊದಲದಿನ, ಕೆಲವು ಕಡೆ ಎರಡನೇ ದಿನ, ಕೆಂಡ ಹಾಯುವ ಸಂಪ್ರದಾಯವಿದೆ. ದೇವಸ್ಥಾನದ ಮುಂಭಾಗದಲ್ಲಿ ಬೆಂಕಿ ಹಾಕಲು ಕೊಂಡ ಮಾಡುತ್ತಾರೆ. ಕೆಲವು ಗ್ರಾಮಗಳಲ್ಲಿ, ಶಾಶ್ವತವಾಗಿರುವಂತೆ ಕಲ್ಲಿನಿಂದ ಕಟ್ಟಿರುತ್ತಾರೆ. ಮತ್ತೆ ಕೆಲವು ಕಡೆ ಪ್ರತಿವರ್ಷವೂ ಸುಮಾರು ಮೂರು ನಾಲ್ಕು ಮಾರು ಉದ್ದದ ಹಾಗೂ ೪-೫ ಅಡಿ ಅಗಲದ ಗುಂಡಿಯನ್ನು ತೋಡಿ ಗೋಮಯದಿಂದ ಸಾರಿಸಿ ರಂಗೋಲಿ ಬಿಡುತ್ತಾರೆ. ಕೊಂಡ ತೆಗೆಯುವ ಮುನ್ನ ದೇವರಿಗೆ ಪೂಜೆ ಮಾಡಿ ತೀರ್ಥ ಹಾಕಿದ ನಂತರವೇ ತೆಗೆಯುವುದು. ಶಾಶ್ವತವಾಗಿರುವ ಕೊಂಡ ಇರುವ ಕಡೆ ಸುಗ್ಗಿ ಹೊಡೆದು, ಗೋಮಯದಿಂದ ಸಾರಿಸಿ ರಂಗೋಲಿ ಬಿಡುತ್ತಾರೆ. ಸೌದೆಯನ್ನು ಕೆಲವು ಕಡೆ ಮನೆಗೆ ಒಂದು ತುಂಡಿನಂತೆ ಹಾಕಿದರೆ, ಮತ್ತೆ ಕೆಲವು ಕಡೆ ಮನೆಗೊಬ್ಬರಂತೆ ಕಾಡಿಗೆ ಹೋಗಿ ಸೌದೆಯನ್ನು ತರುತ್ತಾರೆ. ಸೌದೆಯನ್ನು ತಂದು ಒಂದು ಕಡೆ ಹಾಕಿ ಪೂಜಿಸಿ, ದೇವರ ತೀರ್ಥಹಾಕಿ ಕೊಂಡಕ್ಕೆ ಹಾಕಿ, ಪೂಜಾರಿ ಅಥವಾ ಊರಿನ ಯಜಮಾನ ಬೆಂಕಿ ಹಚ್ಚುತ್ತಾನೆ. ಬಹುತೇಕ ಕಡೆಗಳಲ್ಲಿ ಮಂಗಳವಾರ, ಶುಕ್ರವಾರ ಕೊಂಡ ಹಾಯುವ ಸಂಪ್ರದಾಯ ಬೆಳೆದುಬಂದಿದೆ ಕೆಲವು ಕಡೆ ಬುಧವಾರ, ಮತ್ತು ಶನಿವಾರ ಹಾಯುವುದುಂಟು.

ಕೆಂಡ ಹಾಯುವುದು ಬಹುತೇಕ ರಾತ್ರಿವೇಳೆ ನಡೆಯುತ್ತದೆ. ಸಂಜೆ ದೇವರ ಉತ್ಸವದೊಂದಿಗೆ ಮನೆಮನೆಯ ಹತ್ತಿರ ಹೋಗಿ ಆರತಿ ಹೊರಡಿಸಿ ಕೊಂಡು ಬರುತ್ತಾರೆ. ಹಿತ್ತಾಳೆ ಪಾತ್ರೆಯಲ್ಲಿ ಮಡಿಯಿಂದ ಹೊಸಭತ್ತವನ್ನು ಕುಟ್ಟಿ ಅಕ್ಕಿಯನ್ನು ಹಿಂಗಡಿಸಿ, ಕುಟ್ಟಿ, ಬೆಲ್ಲದ ಪಾಕ ತೆಗೆದು ಕಲಸಿ ಬೆನಕನಾಕಾರವಾಗಿ ತಂಬಿಟ್ಟು ಮಾಡಿ, ಮೇಲೆ ತುಪ್ಪದ ದೀಪವನ್ನು ಹಚ್ಚಿ, ಹೊಂಬಾಳೆ ಇಟ್ಟು, ಪೂಜಿಸಿ ಹೆಣ್ಣುಮಕ್ಕಳು ಹೊತ್ತುಕೊಂಡು ಬರುತ್ತಾರೆ. ಮುಂದೆ ವಾದ್ಯಗಾರರು, ಪತ್ತಿನವರು, ನಂತರ ದೇವರು, ದೇವರ ಹಿಂದೆ ಆರತಿ ಹೊತ್ತ ಹೆಣ್ಣುಮಕ್ಕಳು ಬರುತ್ತಾರೆ.

ಅಗ್ನಿಕೊಂಡದ ಹತ್ತಿರ ಬಂದಾಗ ದೇವರಿಗೆ ಮಂಗಳಾರತಿ ಮಾಡುತ್ತಾರೆ. ನಂತರ ದೇವರನ್ನು ಕೊಂಡದ ಸುತ್ತಾ ಮೂರು ಸುತ್ತು ಪ್ರದಕ್ಷಿಣೆ ಮಾಡಿಸಿ, ಕೊಂಡದ ಮೇಲೆ ಹಾದು ಹೋಗುತ್ತಾರೆ. ಅವರ ಹಿಂದೆ ಆರತಿ ಹೊತ್ತವರು ಹಾದು ಹೋಗುತ್ತಾರೆ. ನಂತರ ಊರಿನವರು ಹಾಯುತ್ತಾರೆ. ಈ ಸಂದರ್ಭದಲ್ಲಿ ಅವರಿಗೆ ಕಾಲು ಸುಡುವುದಿಲ್ಲ ಎಂದು ಹೇಳುತ್ತಾರೆ. ಬಹುಶಃ ಹೀಗಾಗುವುದಕ್ಕೆ ಕಾರಣ, ಅವರು ದೇವರ ಮೇಲೆ ಇಟ್ಟಿರುವ ನಂಬಿಕೆ ಹಾಗು ದೇವರ ಹಿಂದೆ ಹೋದರೆ ಕಾಲು ಸುಡುವುದಿಲ್ಲ ಎಂಬ ಮಾನಸಿಕ ಸ್ಥೈರ್ಯ.

ಸಿಡಿ

ಗ್ರಾಮದೇವತೆಗಳ ಜಾತ್ರೆಯಲ್ಲಿ ಆಚರಿಸುವ ಆಚರಣೆಗಳಲ್ಲಿ 'ಸಿಡಿ' ಮಹತ್ವವಾದುದು. ವರ್ಷಕ್ಕೊಮ್ಮೆ ನಿರ್ದಿಷ್ಟ ಅವಧಿಯಲ್ಲಿ ನಿಯಮಬದ್ಧವಾಗಿ ನಡೆಯುತ್ತದೆ. ಸಾಮಾನ್ಯವಾಗಿ ಆಯಾ ಊರಿನ ದೇವತೆಗಳ ಹೆಸರಿನಲ್ಲಿಯೇ ಸಿಡಿಯನ್ನು ಹೆಸರಿಸುತ್ತಾರೆ. "ಘಟ್ಟದಲಮ್ಮನ ಸಿಡಿ", "ದುರ್ಗಮ್ಮನ ಸಿಡಿ" ಇತ್ಯಾದಿ. ದಕ್ಷಿಣ ಕರ್ನಾಟಕದ ತುಮಕೂರು, ಚಿತ್ರದುರ್ಗ, ಹಾಸನ, ಮೈಸೂರು, ಮಂಡ್ಯ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರಚಲಿತವಿದೆ ಎಂದು ತಿಳಿದು ಬರುತ್ತದೆ. ಆಚರಣೆಯ ವಿಧಾನದಲ್ಲಿ ಪ್ರಾದೇಶಿಕತೆಗನುಗುಣವಾಗಿ ವ್ಯತ್ಯಾಸವಿದೆ.

ಸಿಡಿಕಂಬ ಸಾಮಾನ್ಯವಾಗಿ ಗ್ರಾಮದೇವತೆಯ ದೇವಸ್ಥಾನದ ಮುಂದಿರುತ್ತದೆ. ದೇವರು ತಾವು ಮಾಡುವ ಎಲ್ಲಾ ಕೆಲಸಗಳನ್ನು, ಪೂಜೆ ಇತ್ಯಾದಿಗಳನ್ನು ನೋಡುತ್ತಾನೆ ಎಂಬ ನಂಬಿಕೆ ಆದಿವಾಸಿಗಳ ಕಾಲದಿಂದಲೂ ಬೆಳೆದು ಬಂದಿದೆ. ಬಹುಶಃ ಈ ದೃಷ್ಟಿಯ ಹಿನ್ನೆಲೆಯಲ್ಲಿ ತಾವು ಸಲ್ಲಿಸುವ ಸೇವೆ ದೇವರಿಗೆ ತಿಳಿಯಲಿ, ನೋಡಲಿ ಎಂಬ ಅಭಿಪ್ರಾಯದಿಂದ ದೇವಸ್ಥಾನದ ಮುಂದೆ ಸಿಡಿ ಆಡುವ ಪದ್ಧತಿಯನ್ನು ಆಚರಣೆಯಲ್ಲಿ ಬೆಳೆಸಿಕೊಂಡು ಬಂದಿರಬೇಕು.

ಸಿಡಿಕಂಬ ಕಾಯಂ ಆಗಿ ಇದ್ದರೂ ಆಗತ್ಯವಾದ ಎಲ್ಲಾ ಪರಿಕರಗಳು ಸದಾ ಕಾಲ ಇರುವುದಿಲ್ಲ. ವರ್ಷಕ್ಕೊಮ್ಮೆ. ಸಿಡಿ ನಡೆಯುವಾಗ ಸಿಡಿಕಂಬಕ್ಕೆ ಉಳಿದ ಪರಿಕರಗಳನ್ನು ಜೋಡಿಸಿ ಸಿದ್ಧಗೊಳಿಸುತ್ತಾರೆ. ಕಲ್ಲಿನಿಂದ ಮಾಡಿದ ಸಿಡಿಕಂಬದ ತುದಿಯಲ್ಲಿ ಒಂದು ಕಬ್ಬಿಣದ ಸರಳನ್ನು ಜೋಡಿಸಿರುತ್ತಾರೆ. ಸಿಡಿಗೆ ಸಾಮಾನ್ಯವಾಗಿ ಉದ್ದನಾಗಿರುವುದರಿಂದ, ಕೊಂಕಾಗಿರದೆ ಸುಲಭವಾಗಿ ದೊರೆಯುವುದರಿಂದ ಅಡಿಕೆ ಮರವನ್ನೇ ಬಳಸುತ್ತಾರೆ. ಅದನ್ನು ತರುವ ಮುನ್ನ, ಮರ ಕಡಿಯುವವನು ಸ್ನಾನ ಮಾಡಿ ಮಡಿಯುಟ್ಟು, ಪೂಜೆ ಮಾಡಿ, ಕಡಿದು ತರುತ್ತಾನೆ.

ಸಿಡಿಮರವನ್ನು. ಕಂಬಕ್ಕೆ ಬಂಧಿಸಲು. ಕಿಟಿಕಿಯ ಸಿಲುಬಿನಾಕಾರದ ಮರದ ಚೌಕಟ್ಟನ್ನು ಮಾಡಿ. ತುದಿಯಲ್ಲಿರುವ ಕಬ್ಬಿಣದ ಸರಳಿಗೆ ಸೇರಿಸಿ ರಾಟೆಯಂತೆ ಸುತ್ತಲೂ ತಿರುಗುವಂತೆ ಮಾಡುತ್ತಾರೆ. ಅದಕ್ಕೆ. ಅಡಿಕೆ ಮರಕ್ಕೆ ಮಧ್ಯೆ, ಉರುಳು ಹಾಕಿ ಚೌಕಟ್ಟಿನ ಕೀಲುಗಳಿಗೆ ಸೇರಿಸಿ ಭದ್ರಪಡಿಸುತ್ತಾರೆ. ಅಡಿಕೆಮರದ ಮೇಲು ತುದಿಯನ್ನು ಬಣ್ಣದ ಬಟ್ಟೆಯಿಂದ ಅಲಂಕಾರ ಮಾಡುತ್ತಾರೆ. ಇದಕ್ಕೆ ಸಿಡಿಯಾಡುವವನನ್ನು ಕಟ್ಟುತ್ತಾರೆ. ಕೆಳಭಾಗದಲ್ಲಿ ಮತ್ತು ಮೇಲುಭಾಗದಲ್ಲಿ ಸಿಡಿಯಾಡುವ ವ್ಯಕ್ತಿಯನ್ನು ಕೆಳಗಿಳಿಸಲು ಹಾಗು ಮೇಲೇರಿಸಲು ಅನುಕೂಲವಾಗುವಂತೆ ಹಗ್ಗವನ್ನು ಕಟ್ಟುತ್ತಾರೆ.

ಸಿಡಿಯಾಡುವವರು ನಿರ್ದಿಷ್ಟವಾದ ಮನೆತನದವರು. ಅವರಿಗೆ ಇದು ಹಿರಿಯರಿಂದ ಬಂದ ಬಳುವಳಿ. ಕೆಲವು ಕಡೆ ನಾಯಕರು ಮತ್ತೆ ಕೆಲವು ಕಡೆ ಮಡಿವಾಳರು, ಹರಿಜನರು. ಹೀಗೆ ಆಯಾ ಊರಿನಲ್ಲಿ ಹಿಂದಿನಿಂದ ನಡೆದು ಬಂದ ಸಂಪ್ರದಾಯದಂತೆ ಸಿಡಿಯಾಡುವರು ಯಾರೆಂಬುದು ನಿರ್ಧರಿತವಾಗಿರುತ್ತದೆ. ಸಿಡಿಯಾಡುವವನ ಮನೆಯಲ್ಲಿ ಸೂತಕವಾದರೆ ಆ ವರ್ಷ ಅವನು ಸಿಡಿ ಆಡುವಂತಿಲ್ಲ. ಆಗ ಅದೇ ಬಣದಲ್ಲಿ ಇಂಥವನು ಕಟ್ಟಬಹುದು ಎಂದು ಹಿರಿಯರು ತೀರ್ಮಾನಿಸುತ್ತಾರೆ. ಅಂತಹವನು ಆ ವರ್ಷ ಸಿಡಿಯಾಡಬೇಕಾಗುತ್ತದೆ.

ಸಿಡಿಯಾಡುವವನು ಮೂರು ದಿನ ಉಪವಾಸವಿರಬೇಕು. ಆ ಸಮಯದಲ್ಲಿ ಅವನು ಹಾಸಿಗೆ ಪಥ್ಯವಿರಬೇಕು. ಸೂತಕ ಸೋಕಬಾರದು. ಅವನು ಸಿಡಿ ಆಡುವ ದಿನ ಕೆಂಪು ಬಣ್ಣದ ಪಂಜೆಯನ್ನು ಕಚ್ಚೆಹಾಕಿ ಉಟ್ಟಿಕೊಳ್ಳುತ್ತಾನೆ. ಸೊಂಟಕ್ಕೆ ಕೆಂಪು ಬಣ್ಣದ ವಸ್ತ್ರವನ್ನು ಬಿಗಿದಿದ್ದು. ಬರಿ ಮೈಯಲ್ಲಿರುತ್ತಾನೆ: ಕಾಲಿಗೆ ಗೆಜ್ಜೆ ಕಟ್ಟಿಕೊಳ್ಳುವುದುಂಟು. ತಲೆಗೆ ಪೇಟ. ಬಲಕೈಯಲ್ಲಿ ಚಾವಟಿ. ಎಡಗೈಯಲ್ಲಿ ಬೇವಿನ ಸೊಪ್ಪು. ಹಣೆಗೆ ಕುಂಕುಮ—ಇವಿಷ್ಟು ಅವನ ವೇಷ-ಭೂಷಣಗಳು. ಇವನು ಮನೆಯಿಂದ

ದೇವಸ್ಥಾನಕ್ಕೆ ಬರುವಾಗ. ಮನೆಯಲ್ಲಿ ಕಳಸವನ್ನು ಪೂಜೆ ಮಾಡುತ್ತಾನೆ. ಅದನ್ನು ಮನೆಯ ಹೆಣ್ಣುಮಕ್ಕಳು ಹೊತ್ತುಕೊಂಡು ಮುಂದೆ ಹೊರಡುತ್ತಾರೆ. ಪರೆ, ತಮಟೆ. ಓಲಗ. ಕೊಂಬು. ಕಪಳೆ. ಜಾಗಟೆ, ವಾದ್ಯಗಳೊಡನೆ ಸಿಡಿಯಾಡುವವನು ಕುಣಿಯುತ್ತಾ ಬರುತ್ತಾನೆ. ಕೆಲವು ಕಡೆ ಕಳಸ ಹೊತ್ತವರು ಕುಣಿಯುವುದುಂಟು.

ದೇವಸ್ಥಾನವನ್ನು ಮೂರು ಸುತ್ತು ಸುತ್ತಿ ದೇವರ ಮುಂದೆ ಬಂದು ನಿಲ್ಲುತ್ತಾರೆ. ಕೆಲವು ಕಡೆ ಸಿಡಿ ಹಗಲುವೇಳೆ ನಡೆದರೆ. ಕೆಲವು ಕಡೆ ರಾತ್ರಿಯ ವೇಳೆ ನಡೆಯುತ್ತದೆ. ನಾನು ಸಂದರ್ಶಿಸಿದ ಊರಿನಲ್ಲಿ (ತುರುವೇಕೆರೆ ತಾಲ್ಲೂಕು – ತುಮಕೂರು ಜಿಲ್ಲೆ) ರಾತ್ರಿ ೧೨ ಗಂಟೆಗೆ ಸರಿಯಾಗಿ ಸಿಡಿಯಾಡುವ ಸಂಪ್ರದಾಯ ಬೆಳೆದು ಬಂದಿದೆ. ಸಿಡಿ ತರುವ ಮುನ್ನ ಸಿಡಿ ಕಂಬವನ್ನು ಪೂಜೆ ಮಾಡಿ ಮರಿಯನ್ನು ಬಲಿಕೊಡುತ್ತಾರೆ. ನಂತರ ಮಂಗಳಾರತಿ ಮಾಡಿ ಸಿಡಿ ಆಡುವವನಿಗೆ ತೀರ್ಥಕೊಟ್ಟು ಕೊರಳಿಗೆ ಹೂವಿನ ಹಾರ ಹಾಕುತ್ತಾರೆ.

ನಂತರ. ಹಗ್ಗದ ಸಹಾಯದಿಂದ ಸಿಡಿ ಕಂಬವನ್ನು ಕೆಳಕ್ಕೆ ಬಗ್ಗಿಸಿ, ತುದಿಗೆ. ಸಿಡಿ ಆಡುವವನನ್ನು ಕೆಳಮುಖವಾಗಿ ಮಾಡಿ ಅವನ ಬೆನ್ನಿಗೆ ವಸ್ತ್ರದಿಂದ ಬಿಗಿಯುತ್ತಾರೆ. ಮೊದಲು ಆತನ ಬೆನ್ನಿನ ಮೂಳೆಗೆ ಕಬ್ಬಿಣದ ಕೊಕ್ಕೆಯನ್ನು ಸಿಕ್ಕಿಸುತ್ತಾರೆ. ಮೇಲಕ್ಕೆ ಎತ್ತಿ ಮೂರು ಸುತ್ತು ತಿರುಗಿಸುತ್ತಾರೆ. ಪ್ರೇಕ್ಷಕರು ಪುರಿ ಉಗ್ಗುತ್ತಾರೆ. ಆ ವೇಳೆಗಾಗಲೇ ಅವನಿಗೆ ಪ್ರಜ್ಞೆ ತಪ್ಪಿರುತ್ತದೆ. ಈ ಸಂದರ್ಭದಲ್ಲಿ ಬಾಳೆಹಣ್ಣನ್ನು ಮೇಲಕ್ಕೆ ಎಸೆಯುತ್ತಾರೆ. ಇದನ್ನು 'ಸೂರು' ಎಸೆಯುವುದು ಎಂದು ಕರೆಯುತ್ತಾರೆ ದೇವರಿಗೆ ಮಂಗಳಾರತಿ ಮಾಡಿ ತೀರ್ಥವನ್ನು ಅವನ ಮೇಲೆ ಪ್ರೋಕ್ಷಣೆ ಮಾಡಿ ಮನೆಗೆ ಕರೆದುಕೊಂಡು ಹೋಗುತ್ತಾರೆ. ಮಹಾಮಂಗಳಾರತಿಯೊಂದಿಗೆ ಸಿಡಿ ಆಚರಣೆ. ಮುಕ್ತಾಯವಾಗುತ್ತದೆ.

ಕಳಸ ಕೀಳುವುದು

ಗೊಲ್ಲರಲ್ಲಿ ಪ್ರಚಲಿತವಿರುವ ಒಂದು ವಿಶಿಷ್ಟವಾದ ಆಚರಣೆ 'ಕಳಸ ಕೀಳುವುದು'. ಕ್ಯಾತಪ್ಪ ದೇವರನ್ನು ಒಲಿಸಿಕೊಳ್ಳಲು ಇದನ್ನು ಆಚರಿಸುತ್ತಾ ಬಂದಿದ್ದಾರೆ. ಇವರಲ್ಲಿ ಈ ಆಚರಣೆ ಬೆಳೆದು ಬಂದ ಬಗ್ಗೆ ಒಂದು ದಂತ ಕಥೆ ಇದೆ: "ಹಿಂದೆ ಕ್ಯಾತಪ್ಪ ದೇವರು ಕುಂಚಟಿಗ ಒಕ್ಕಲಿಗನೊಬ್ಬನಿಗೆ ಒಲಿದಿತ್ತು. ಕ್ರಮೇಣ ಅವನಿಗೆ ದೇವರ ಮೇಲಿನ ಭಕ್ತಿ ಕಡಿಮೆಯಾದುದರಿಂದ. ಅವನ ಮನೆಯಲ್ಲಿಯೇ ಇದ್ದು ಗೊಲ್ಲ ಜಾತಿಗೆ ಸೇರಿದ ಜೀತದವನ ಭಕ್ತಿಗೆ ಮೆಚ್ಚಿ ಒಲಿಯುತ್ತದೆ. ಅಂದಿನಿಂದ ಕುಂಚಟಿಗರ ದೈವವಾಗಿದ್ದ ಕ್ಯಾತಪ್ಪ ಗೊಲ್ಲರ ದೈವವಾಯಿತು" ಎಂಬ ಪ್ರತೀತಿ.

ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯಲ್ಲಿ ಈ ಆಚರಣೆ ನಡೆಯುತ್ತದೆ. ವಿಶಾಲವಾದ ಪ್ರದೇಶದಲ್ಲಿ ಒಂದು ಗುಡಿಸಲನ್ನು ನಿರ್ಮಿಸಿ. ಅದರಲ್ಲಿ ದೇವರನ್ನು ಪ್ರತಿಷ್ಠಾಪಿಸಿ, ಗುಡಿಸಲಿನ ಸುತ್ತಲೂ ಕಳ್ಳಿಯ ರಾಶಿ ಹಾಕುತ್ತಾರೆ. ಆ ರಾಶಿಯಲ್ಲಿ ಬಾರೆ ಮುಳ್ಳು, ಜಾಲಿಮುಳ್ಳು, ಕಾಕಿಮುಳ್ಳುಗಳ ಗಿಡಗಳನ್ನು ಹಾಕಿ, ತುದಿಯಲ್ಲಿ ತಾಮ್ರದ ಕಳಸವನ್ನು ಇಟ್ಟಿರುತ್ತಾರೆ.

ಗೊಲ್ಲರ ಜಾತಿಗೆ ಸೇರಿದ ಭಕ್ತರು ಸ್ನಾನ ಮಾಡಿ ಮಡಿಯುಟ್ಟು. ಭಕ್ತಿಯಿಂದ ದೇವರಿಗೆ ಕೈಮುಗಿದು, ಬರಿಗಾಲಿನಲ್ಲಿ ಮುಳ್ಳುರಾಶಿಯ ಮೇಲೆ ನಡೆದು ತಾಮ್ರದ ಕಳಸವನ್ನು ಕಿತ್ತು ತರುತ್ತಾರೆ. ಆ ಸಂದರ್ಭದಲ್ಲಿ ಹಲಗೆ, ಉರಿಮೆ ವಾದ್ಯ ಮೊಳಗುತ್ತದೆ. ಬರಿಗಾಲಿನಲ್ಲಿ ಮುಳ್ಳಿನ ಮೇಲೆ ನಡೆದರೂ ಚುಚ್ಚುವುದಿಲ್ಲ ಎನ್ನುತ್ತಾರೆ. ಕಳಸಕೀಳುವ ಸಮಯದಲ್ಲಿ ಏನು ಮಾಡುತ್ತಾರೆ ಎಂಬ ಪ್ರಜ್ಞೆಯೇ ಇರುವುದಿಲ್ಲವೆಂದು ಹೇಳುತ್ತಾರೆ. ದೇವರು ಮೈಮೇಲೆ ಬರುತ್ತದೆ ಎಂಬ ಪ್ರತೀತಿ.

ಈ ಆಚರಣೆಯಿಂದ ದೇವರು ಸಂತೃಪ್ತನಾಗಿ ತಮಗೆಲ್ಲ ಒಳ್ಳೆಯದನ್ನು ಮಾಡುತ್ತಾನೆಂಬ ನಂಬಿಕೆ. ಕಳಸ ಕಿತ್ತು, ಪೂಜೆಯಾದ ಮೇಲೆ ಎಲ್ಲರೂ ಊರಿಗೆ ಹಿಂದಿರುಗುತ್ತಾರೆ.

ಜನಪದರು ಇಂತಹ ನೂರಾರು ಆಚರಣೆಗಳನ್ನು ಆಚರಿಸುತ್ತಾ ಬಂದಿದ್ದಾರೆ. ನಾಗರಿಕತೆಯ ಪ್ರಭಾವದಿಂದ ಎಷ್ಟೋ ಆಚರಣೆಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿವೆ. ಇವುಗಳ ಬಗ್ಗೆ ವ್ಯಾಪಕವಾದ ಅಧ್ಯಯನ ನಡೆಯಬೇಕು. ಇದರಿಂದ ನಮ್ಮ ಸಂಸ್ಕೃತಿಯನ್ನು ಪರಿಚಯಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಸಮಂತಭದ್ರಾಚಾರ್ಯರು

ಎಸ್. ಬಿ. ಪಾಟೀಲ

ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ–ಈ ಮೂವರು ಕನ್ನಡದ ಪಂಪ,[೧] ಚಾವುಂಡರಾಯ,[೨] ನಾಗಚಂದ್ರ,[೩] ನೇಮಿಚಂದ್ರ,[೪] ಪುಷ್ಪದಂತ, ಅಗ್ಗಳ,[೫] ಜನ್ನ[೬] ಸಾಳ್ವ ಮಂಗರಸ, ಬೊಮ್ಮಣ ಮೊದಲಾದ ಕವಿಗಳಿಂದ ಸ್ಮರಿಸಲ್ಪಟ್ಟು ನಿತ್ಯವಂದಿತರಾಗಿದ್ದಾರೆ. ಇವರಲ್ಲಿ ಆಚಾರ್ಯಪ್ರವರ ಸಮಂತಭದ್ರರು ಕದಂಬ ರಾಜವಂಶದಲ್ಲಿ ಜನಿಸಿದ್ದರೆಂದು ಇತಿಹಾಸಜ್ಞರ ಮತವಾಗಿದೆ.[೭] ಆದರೆ ನಮ್ಮ ನಾಡಿನ ಕವಿಶ್ರೇಷ್ಠರ ವಿಷಯದಲ್ಲಿರುವಂತೆ ಸಮಂತಭದ್ರಾಚಾರ್ಯರ ತಂದೆಯ ವಿಷಯ, ಅವರ ಜನನ ಬಾಲ್ಯ ಕುರಿತು ವಿವರ ಲಭ್ಯವಿರುವದಿಲ್ಲ. ಅವರ ಜೀವನದ ಹಲವಾರು ಸಂಗತಿಗಳ ಕುರಿತು ಅಲ್ಪಪ್ರಮಾಣದ ಉಲ್ಲೇಖಗಳು ಲಭ್ಯವಾಗುತ್ತಿದ್ದರೂ ಬಹಳಷ್ಟು ಅಂಶಗಳಲ್ಲಿ ಐತಿಹ್ಯಗಳನ್ನೇ ನಾವು ಅವಲಂಬಿಸಬೇಕಾಗುವದು. ಅದರೊಂದಿಗೆ ಭಾರತೀಯ ಜೈನ ಸಾಹಿತ್ಯದಲ್ಲಿ ಇವರ ಬಗೆಗೆ ದೊರೆಯುವ ಉಲ್ಲೇಖ, ಕನ್ನಡ ಕವಿಗಳ ಸ್ತುತಿಪದ್ಯ

---

೧. ಶ್ರೀ ಸಮಂತಭದ್ರ । ಸ್ವಾಮಿಗಳ ಜಗತ್ಪ್ರಸಿದ್ಧ ಕವಿಪರಮೇಷ್ಠಿ
ಸ್ವಾಮಿಗಳ ಪೂಜ್ಯಪಾದ । ಸ್ವಾಮಿಗಳ ಪದಂಗಳೀಗೆ ಶ್ವಾಶತ ಪದಮಂ ॥ – ಆ.ಪು. ೧–೧೧.

೨. ಅಭಿಮತಮಾಗಿರೆ ತತ್ತ್ವಾ । ರ್ಥ ಭಾಷ್ಯಮಂ ತರ್ಕಶಾಸ್ತ್ರಮಂ ಬರೆದು ವಚೋ
ವಿಭವದಿನಿಳಿಗೆಸೆದಂ ಸಮಂ । ತಭದ್ರದೇವರ ಸಮಾನಮೆಂಬರುಮೊಳರೆ ॥ – ಚಾ. ಪು. ೧–೫.

೩. ಭೂತಬಲಿ ಪುಷ್ಪದಂತ । ಖ್ಯಾತರ ಜಿನಸೇನ ವೀರಸೇನ ಮುನೀಂದ್ರ
ಖ್ಯಾತರ ಸಮಂತಭದ್ರ । ಖ್ಯಾತರ ಪದಪಾಂಸು ಕಿಡಿಸುಗಘಪಾಂಶುಗಳಂ ॥ – ಮ.ಪು. ೧–೧೩.

೪. ನೇಮಿಗೆ ಸಮಂತಭದ್ರ । ಸ್ವಾಮಿಯ ಸಮವಿಷಯ ಕವಿತೆ(ಯ)ಕಲಂಕನ ವಿ
ದ್ಯಾಮಹಿಮೆ ಪೂಜ್ಯಪಾದ । ಸ್ವಾಮಿಯ ವಾಣೀವಿಳಾಸಮೀಗಭಿಮತಮಂ ॥ – ನೇ.ಪು. ೧–೨೪.

೫. ಸಮಸಿಕೆ ಮನ್ಮಾನಸದೊಳ್ । ಸಮಂತಭದ್ರಾಂಘ್ರಿನಖರಕಾಂತಿಜಳಂ ಮ
ತ್ತಮಳಿನ ಕವಿಪರಮೇಷ್ಠಿ । ಕಮಮಳಂ ಪೂಜ್ಯಪಾದ ಪದನಖಕುಮುದಂ ॥
ಚಂದ್ರ. ಪು. ೧–೨೦.

೬. ಗಣಧರರೋ ಸ್ವಾಮಿಗಳೋ । ಗುಣದಿಂದಾವಜಿಯಿಮೆಜಗೆ ಶುದ್ಧರೆಪ್ಪೆಮ್ಮಂ
ತಣಿಪುಗೆ ಸಮಂತಭದ್ರರ । ಗುಣಭದ್ರರ ಪೂಜ್ಯಪಾದರಾಖ್ಯಾನಂಗಳ್ ॥ ಅ. ನ. ಪು. ೧–೧೫.

೭. ಕೆ. ಭುಜಬಲಿ ಶಾಸ್ತ್ರಿ 'ಸಂಸ್ಕೃತ ವಾಙ್ಮಯಕ್ಕೆ ಜೈನಕವಿಗಳ ಕಾಣಿಕೆ; ಪು. ೨೬.

ಗಳು ಹಾಗೂ ಶಾಸನ ಸಾಹಿತ್ಯ ಇವುಗಳ ಆಧಾರದಿಂದ ಅವರ ಕುರಿತು ಸ್ಥೂಲವಾಗಿಯಾದರೂ ತಿಳಿದುಕೊಳ್ಳಲು ಸಾಧ್ಯವಾಗುವದು.

ಜಿನಸೇನರು (೭೮೩) ಸಮಂತಭದ್ರರನ್ನು ಗೌರವದಿಂದ ಸ್ಮರಿಸಿದ್ದಾರೆ.[೮] ಆದುದರಿಂದ ಸಮಂತಭದ್ರರು ಜಿನಸೇನರಿಗಿಂತ ಹಿಂದಿನವರೆಂಬುದು ಸ್ಪಷ್ಟವಾಗುವದು. ಪೂಜ್ಯಪಾದರು (ಸು. ೬೦೦) ತಮ್ಮ ಜೈನೇಂದ್ರ ವ್ಯಾಕರಣದಲ್ಲಿ ಸಮಂತಭದ್ರರ ಹೆಸರನ್ನು ಉಲ್ಲೇಖಿಸುವದರಿಂದ. ಇವರಿಗಿಂತಲೂ ಪೂರ್ವದವರೆಂದು ತಿಳಿಯಲಡ್ಡಿಯಿಲ್ಲ. ಈ ಆಧಾರದಿಂದಾಗಿ ಇವರು ಸು. ೪೦೦ ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ ಎಂದು ಕವಿಚರಿತೆಕಾರರು ಅಭಿಪ್ರಾಯಪಡುತ್ತಾರೆ.[೯] ಆದರೆ ಮತ್ತೆ ಅನುಬಂಧದಲ್ಲಿ 'ಸಮಂತಭದ್ರನ ಕಾಲವು ಎರಡನೆಯ ಶತಮಾನವಿರಬಹುದೆಂದು ವಿದ್ವಾಂಸರ ಅಭಿಪ್ರಾಯ'ವೆಂದೂ ಹೇಳಲಾಗಿದೆ.[೧೦] ಹೀಗಾಗಿ "ಈ ದಿಗಂಬರ ಯತಿಯ ಕಾಲ ೨ ಮತ್ತು ೭ನೆಯ ಶತಮಾನಗಳ ಮಧ್ಯ ತೂಗುತ್ತದೆ".[೧೧] ಎಂಬ ಅಭಿಪ್ರಾಯದಂತೆ ಅನಿರ್ಣೀತವಾಗಿ ಉಳಿಯುತ್ತದೆ.

ಸಮಂತಭದ್ರರು ಕ್ಷತ್ರಿಯ ವಂಶದಲ್ಲಿ ಜನಿಸಿದ ರಾಜಪುತ್ರರಾಗಿದ್ದರು. 'ಫಣಿಮಂಡಲಾಂತರ್ಗತ ಉರಗಪುರದ ರಾಜನು ಇವರ ತಂದೆ.[೧೨] "ಇತಿ ಫಣಿಮಂಡಲಾಲಂಕಾರಸ್ಯೋರಗಪುರಾಧಿಪ ಸೂನುನಾ ಶಾಂತಿವರ್ಮನಾಮಾ ಶ್ರೀ ಸಮಂತಭದ್ರೇಣ" –ಎಂಬುದರಿಂದ ಇವರ ಮೂಲ ಹೆಸರು ಶಾಂತಿವರ್ಮನೆಂದೂ. ತಂದೆ ಫಣಿಮಂಡಲದ ಉರಗಪುರಕ್ಕೆ ಅಧಿಪತಿಯೆಂದೂ ತಿಳಿದು ಬರುತ್ತದೆ. ಪಾಂಡ್ಯದೇಶದ ಪ್ರಾಚೀನ ರಾಜಧಾನಿಯಾಗಿದ್ದ ಈ ಉಗರಪುರವು ಈಗಿನ ತ್ರಿಚಿನಾಪಳ್ಳಿಯ ಸಮೀಪದ 'ಉರೈಯೂರು' ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದರೆ ದೇವಚಂದ್ರನ 'ರಾಜಾವಳಿ ಕಥೆ'ಯಲ್ಲಿ ಈ ಉರಗಪುರಕ್ಕೆ ಬದಲು "ಭೀಮರಥಿ ಕೃಷ್ಣವೇಣೀ ತೊರೆಗಳ ಮಧ್ಯೆ ವಿಷಯದಲ್ಲಿರುವ 'ಉತ್ಕಲಿಕಾ' ಗ್ರಾಮದೊಳುದ್ಭವಿಸಿದ ಸಮಂತಭದ್ರಾಚಾರ್ಯರೆಂಬ ಯತಿಪತಿಗಳು"[೧೩] ಎಂದಿದೆ. ಆದುದರಿಂದ ಉರಗಪುರವೇ ತನ್ನ

---

೮. ನಮಸ್ಸಮಂತಭದ್ರಾಯ ಮಹತೇ ಕವಿವೇಧಸೇ
ಯದ್ವಚೋವಜ್ರಪಾತೇನ ನಿರ್ಭಿನ್ನಾಃ ಕುಮತಾದ್ರಯಃ ॥ – ಪೂರ್ವಪುರಾಣ.

೯. ಕವಿಚರಿತೆ ಭಾಗ–೧, ಪು. ೪.

೧೦. ಅದೇ, ಅನುಬಂಧ–೨, ಪು. ೪೦.

೧೧. ಡಾ॥ ಎಂ. ಎಂ. ಕಲಬುರ್ಗಿ : 'ಕವಿರಾಜಮಾರ್ಗ ಪರಿಸರದ ಕನ್ನಡ'. ಪು. ೨೬೬.'

೧೨. "ಇತಿಶ್ರೀ...... ಫಣಿಮಂಡಲಂಕಾರಸ್ಯೋರಗಪುರಾಧಿಪ ಸೂನೋಃ
ಶ್ರೀ ಸ್ವಾಮಿ ಸಮಂತಭದ್ರಮುನೇಃ ಕೃತಾ ಆಪ್ತಮೀಮಾಂಸಾಯಾಮ್" –
ನೋಡಿ : ರತ್ನಕರಂಡಶ್ರಾವಕಾಚಾರ (ಅನು : ಮಿರ್ಜಿ ಅಣ್ಣಾರಾಯರು) ಪ್ರಸ್ತಾವನೆ. ಪು. vii

೧೩. ಕವಿಚರಿತೆ, ಭಾಗ–೧, ಪು. ೨–೩.

ಗ್ರಾಮವೆಂದು ಹೇಳುವ ಸಮಂತಭದ್ರರ ಹೇಳಿಕೆ ಹಾಗೂ ರಾಜಾವಳಿ ಕಥೆಯ ಹೇಳಿಕೆಗಳ ಬಗೆಗೆ ಸಂದೇಹವುಂಟಾಗುತ್ತದೆ. ದೇವಚಂದ್ರನು ಹೇಳುವ ಭೀಮರಥಿ–ಕೃಷ್ಣಾ ನದಿಗಳ ಮಧ್ಯೆ ಇರುವ ಉತ್ಕಲಿಕಾ (ಉಕ್ಕಲಿ–ವಿಜಾಪೂರ ಜಿಲ್ಲೆ) ಹಾಗೂ ತ್ರಿಚನಾಪಳ್ಳಿಯ ಸಂಬಂಧವೇನು? ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

ಸಮಂತಭದ್ರಾಚಾರ್ಯರ ಗೃಹಸ್ಥಾಶ್ರಮ ಪ್ರವೇಶದ ಕುರಿತು ಖಚಿತವಾಗಿ ಏನೂ ತಿಳಿದುಬರುವುದಿಲ್ಲ. ಆದರೆ ಅವರು ವಿವಾಹ ಮಾಡಿಕೊಂಡಿದ್ದರೂ, ದೀರ್ಘ ಕಾಲದವರೆಗೆ ಗೃಹಸ್ಥಾಶ್ರಮದಲ್ಲಿ ಇರಲಿಲ್ಲವೆಂಬುದು ನಿರ್ವಿವಾದ ಮಾತು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.[೧೪] 'ಕಾಂಚ್ಯಾಂ ನಗ್ನಾಟಕೋಽಹಂ' ಎಂಬುದರಿಂದ ಅವರು ದಕ್ಷಿಣದ ಕಾಶಿಯೆನಿಸಿದ ಕಾಂಚಿಯಲ್ಲಿ ದಿಗಂಬರ ದೀಕ್ಷೆಯನ್ನು ಸ್ವೀಕರಿಸಿದುದಾಗಿಯೂ ಆ ನಗರದೊಂದಿಗೆ ಅವರ ಸಂಬಂಧವು ಸ್ಪಷ್ಟವಾಗುವದು.

'ಕೃಷ್ಣವೇಣೀ ತೊಱೆಗಳ ಮಧ್ಯ ವಿಷಯದಲ್ಲಿರುವ ಉತ್ಕಲಿಕಾಗ್ರಾಮದೊಳುದ್ಭವಿಸಿದ ಸಮಂತಭದ್ರಾಚಾರ್ಯರೆಂಬ ಯತಿಪತಿಗಳು ಮಣುವಕಹಳ್ಳಿಯೊಳನಶನಾದಿತಪದಿಂ......' ಎಂಬ ವಿವರಣೆ ರಾಜಾವಳಿ ಕಥೆಯಲ್ಲಿ ಬರುತ್ತದೆ. ಸಮಂತಭದ್ರರು ತಪಸ್ಸು ಮಾಡಿದ ಈ 'ಮಣುವಕಹಳ್ಳಿ'ಯ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಬೆಳಗಾವಿ ಜಿಲ್ಲೆಯ ಮುನವಳ್ಳಿಯೇ ಈ ಮಣುವಕಹಳ್ಳಿ ಎಂಬುದಾಗಿ ಡಾ॥ ದ.ರಾ. ಬೇಂದ್ರೆ ಅವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಕೃಷ್ಣಾ ಹಾಗೂ ಭೀಮಾ ನದಿಗಳ ಮಧ್ಯದ ಹಳ್ಳಿ ಇದಾದುದರಿಂದ ಇದು ವಿಜಾಪುರ ಜಿಲ್ಲೆಯ ಮುನವಳ್ಳಿಯೇ ಆಗಿರಬಹುದು.[೧೫] ಅವರ ಜನ್ಮಸ್ಥಳವಾದ ಉಕ್ಕಲಿ ಹಾಗೂ ಮುನವಳ್ಳಿ ಒಂದೇ ಪ್ರದೇಶಕ್ಕೊಳಪಟ್ಟ ಹಳ್ಳಿಗಳಾಗಿರಬೇಕು. ಉಕ್ಕಲಿ ಹಾಗೂ ಮುನವಳ್ಳಿಗಳು ಸಮೀಪದ ಹಳ್ಳಿಗಳಾಗಿರುವುದರಿಂದ ಇದೇ ಹೆಚ್ಚು ಸಂಭವನೀಯವಾಗಿ ತೋರುವದು.

ಈ 'ಮಣುವಕಹಳ್ಳಿಯೊಳನಶನಾದಿ ತಪದಿಂ ಕ್ರಿಯಾಯುಕ್ತರಾಗಿರಲೊಂದು ಕಾರಣವಾಗೆ ಭಸ್ಮಕವ್ಯಾಧಿ ಪುಟ್ಟಿಯದಕ್ಕೆ ಪ್ರತಿಕಾರವಿಲ್ಲದುದಱಿಂ ಸ್ವಗುರುವ ಸಮೀಪನೆಯ್ದು', ಸಲ್ಲೇಖನ ವ್ರತವನ್ನು ಸ್ವೀಕರಿಸುವುದಾಗಿ ನಿವೇದಿಸಿಕೊಳ್ಳುವರು. ಆದರೆ ಅವರಿಂದ ಮುಂದೆ ಧರ್ಮೋದ್ಧಾರವಾಗುವದೆಂದು ಅರಿತ ಗುರುಗಳು ಆ ಉಪಸರ್ಗ ನಿವಾರಣೆಯಾಗುವವರೆಗೆ ತೃಪ್ತಿಯಾಗುವವರೆಗೆ ಆಹಾರ ಸ್ವೀಕರಿಸಿ ಮತ್ತೆ

---

೧೪. ಕೆ. ಭುಜಬಲಿಶಾಸ್ತ್ರಿ : 'ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕಾಣಿಕೆ' ಪು. ೨೬–೨೭.

೧೫. ಈ ವಿಷಯದತ್ತ ನನ್ನ ಗಮನ ಸೆಳೆದವರು ಮಾನ್ಯ ಡಾ॥ ಎಂ. ಎಂ. ಕಲಬುರ್ಗಿ ಅವರು.

ದೀಕ್ಷೆ ಸ್ವೀಕರಿಸಬೇಕೆಂದು ಸೂಚಿಸಿದರು. ಈ ರೋಗವನ್ನು ಜಾಣ್ಮೆಯಿಂದ ಶಮನ ಗೊಳಿಸಿದರು. ಪದ್ಮಾವತಿಯು ಶಕ್ತಿಯಿಂದ ಅವರಿಗೆ ಉದಾತ್ತ ಪದವಿ ಲಭಿಸಿತು. ಸ್ವಯಂಭೂಮಂತ್ರದ ರಚನೆಯಿಂದ ಚಂದ್ರಪ್ರಭ ಬಿಂಬವನ್ನು ಆಕರ್ಷಿಸಿದರು. ರಾಜಾ ವಳಿ ಕಥೆಯು ಈ ವಿವರಣೆಯನ್ನು ಶಾಸನೋಕ್ತ ಉಲ್ಲೇಖಗಳೂ ಪುಷ್ಟೀಕರಿಸುವುದನ್ನು ಕಾಣಬಹುದು.[೧೬] ಇದರಿಂದ ಅವರ ಜೀವನದ ಮಹತ್ವದ ಘಟನೆಗಳ ಮೇಲೆ ಪ್ರಕಾಶಬಿದ್ದಿದೆ.

ಸಮಂತಭದ್ರಾಚಾರ್ಯರು ಪಾಟಲೀಪುತ್ರ, ಮಾಳವ, ಸಿಂಧ. ಪಂಜಾಬ, ಕಾಂಚೀ ಪುರ, ವೈದಿಶ ಮೊದಲಾದ ದೇಶಗಳಲ್ಲಿ ಸಂಚರಿಸಿದರು. ಅಲ್ಲೆಲ್ಲ ವಾದ–ವಿವಾದಕ್ಕೆ ತಮ್ಮ ಸಿದ್ಧತೆಯನ್ನು ಘೋಷಿಸಿ ಆಹ್ವಾನಿಸಿದರು. ಅವರೊಂದಿಗೆ ವಾದ ಮಾಡಲು ಯಾರಿಗೂ ಧೈರ್ಯವಿರಲಿಲ್ಲವೆಂಬುದಾಗಿ ತಿಳಿಯುವದು.[೧೭]

ಸಮಂತಭದ್ರ ಹೆಸರಿನ ಆರು ಜನ ವಿದ್ವಾಂಸರು ಆಗಿಹೋದ ಕುರಿತು ಉಲ್ಲೇಖ ಗಳು ದೊರೆಯುವವು :

೧. 'ಅಷ್ಟಸಹಸ್ರೀ'ಯ ಮೇಲೆ 'ವಿಷಮಪದತಾತ್ಪರ್ಯಟೀಕಾ' ಎಂಬ ವೃತ್ತಿ ಯನ್ನು ಬರೆದವರು ಲಘುಸಮಂತಭದ್ರರು.

೨. ಜೈನ ಸಿದ್ಧಾಂತಭವನ ಆರಾದ ಪುಸ್ತಕ ಸೂಚಿಯಲ್ಲಿ 'ಚಿಕ್ಕಸಮಂತ–ಭದ್ರಸ್ತೋತ್ರ' ಎಂಬ ಹೆಸರನ್ನು ಕಾಣಿಸಲಾಗಿದೆ. ಈ ಸ್ತೋತ್ರಗ್ರಂಥವನ್ನು 'ಜೈನಸಿದ್ಧಾಂತ ಭಾಸ್ಕರ'ದಲ್ಲಿ ಪ್ರಕಟಿಸಲಾಗಿದೆ.[೧೮] ಆದರೆ ಈ ಸ್ತೋತ್ರವನ್ನು ರಚಿಸಿ ದವನಿಗೆ 'ಮಾಘನಂದಿವ್ರತಿ' ಎಂಬ ಹೆಸರೂ ಇದೆ. ಆದುದರಿಂದ ಮಾಘನಂದಿ ವ್ರತಿಗೇ ಚಿಕ್ಕಸಮಂತಭದ್ರನೆಂಬ ಹೆಸರಿರಬೇಕು. ಅಲ್ಲದೆ ಲಘುಸಮಂತಭದ್ರ ಹಾಗೂ ಚಿಕ್ಕಸಮಂತಭದ್ರ (ಸು. ೧೫೫೦) ಒಂದೇ ವ್ಯಕ್ತಿಯಾಗಿರುವ ಸಾಧ್ಯತೆಯಿದೆ.

---

೧೬. ವಂದ್ಯೋ ಭಸ್ಮಕ ಭಸ್ಮಸಾತ್ಕೃತಿ ಪಟುಃ ಪದ್ಮಾವತೀ ದೇವತಾ
ದತ್ತೋದಾತ್ತ ಪದಸ್ವಮಂತ್ರವಚನವ್ಯಾಹೂತ ಚಂದ್ರಪ್ರಭಃ
ಆಚಾರ್ಯಃಸ ಸಮಂತಭದ್ರ ಗಣಭೃದ್ಯೇನೇಹ ಕಾಲೇ ಕತಾ
ಜೈನಂ ವರ್ತ್ಮ ಸಮಂತಭದ್ರಮಭವದ್ಭದ್ರಂ ಸಮಂತಾನ್ಮುಹುಃ ॥
ಶ್ರ. ಬೆ. ಶಾ. ನಂ. ೫೪ (೬೭)

೧೭. ಪೂರ್ವಂ ಪಾಟಲೀಪುತ್ರ, ಮಧ್ಯನಗರೇ ಭೇರೀ ಮಯಾ ತಾಡಿತಾ
ಪಶ್ಚಾನ್ಮಾಲವ, ಸಿಂಧು. ಠಕ್ಕ ವಿಷಯೇ ಕಾಂಚೀಪುರೇ ವೈದಿಶೇ
ಪ್ರಾಪ್ತೋಽಹಂ ಕರಹಾಟಕಂಬಹುಭಟಂ ವಿದ್ಯೋತ್ಕಟಂ ಸಂಕಟಂ
ವಾದಾರ್ಥೀ ವಿಚರಾಮ್ಯಹಂ ನರಪತೇ ಶಾರ್ದೂಲ ವಿಕ್ರೀಡಿತಂ – ಶ್ರ. ಬೆ. ಶಾ. ನಂ. ೫೪.

೧೮. ಭಾಗ–೧, ಕಿರಣ ೪.

೩. ಕಡೂರ ಜಿಲ್ಲೆಯ ಕೊಪ್ಪ ತಾಲೂಕಿನ ಎಡಹಳ್ಳಿಯ ಜೈನಬಸ್ತಿಯಲ್ಲಿ ದೊರೆತ ತಾಮ್ರಶಾಸನದಿಂದ[೧೯] 'ಗೇರುಸೊಪ್ಪೆ ಸಮಂತಭದ್ರದೇವ'ರ ಉಲ್ಲೇಖ ದೊರೆಯುತ್ತದೆ. ಗೇರುಸೊಪ್ಪೆ ಕರ್ನಾಟಕದ ಪ್ರಸಿದ್ಧ ಜೈನಕೇಂದ್ರ.

೪. ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಶಾಸನ[೨೦]ದಲ್ಲಿ 'ಅಭಿನವ ಸಮಂತಭದ್ರ'ರ ಉಲ್ಲೇಖವಿದೆ. ಈ ಶಾಸನದ ಕಾಲ ಸು. ೧೫೬೦ ಎಂದು ನಿರ್ಧರಿಸಲಾಗಿದೆ.

೫. ಅಭಿನವ ಸೋಮಸೇನ ಭಟ್ಟಾರಕನ ಪಟ್ಟ ಶಿಷ್ಯನಾದ 'ಜಿನಸೇನ' ಭಟ್ಟಾರಕರ ಪಟ್ಟವನ್ನು ಅಲಂಕರಿಸಿದವನು 'ಸಮಂತಭದ್ರ ಭಟ್ಟಾರಕ'ನೆಂಬುದಾಗಿ ಸೇನಸಂಘದ ಪಟ್ಟಾವಲಿಯಿಂದ ತಿಳಿಯುತ್ತದೆ. ಇವನ ಕೃತಿ 'ತ್ರೈವರ್ಣಿಕಾಚಾರ'ವು ಕ್ರಿ. ಶ. ೧೬೨೪ ರಲ್ಲಿ ಬರೆದು ಮುಗಿಸಲ್ಪಟ್ಟಿದೆ.

೬. ೧೮ನೆಯ ಶತಮಾನದ ಸಮಂತಭದ್ರನು ಗೃಹಸ್ಥನು. 'ಪ್ರತಿಷ್ಠಾತಿಲಕ'ವನ್ನು ರಚಿಸಿದ ನೇಮಿಚಂದ್ರನ ತಮ್ಮನ ಮಗ, 'ಪೂಜಾವಿಧಿ' ಎಂಬ ಗ್ರಂಥವನ್ನು ರಚಿಸಿದಂತೆ ತಿಳಿಯುತ್ತದೆ.

ಆದರೆ ಪೂರ್ವದ ಕನ್ನಡ ಕವಿಗಳು ಸ್ತುತಿಸಿದ ಹಾಗೂ ರತ್ನಕರಂಡವನ್ನು ರಚಿಸಿದ ವ್ಯಕ್ತಿ ಮೊದಲನೆಯ ಸಮಂತಭದ್ರರೆಂಬ ವಿಷಯದಲ್ಲಿ ವಿದ್ವಾಂಸರಲ್ಲಿ ಸಾಕಷ್ಟು ಒಮ್ಮತ ಕಂಡುಬರುವದು.[೨೧] ಇವರನ್ನು ಲಘು. ಚಿಕ್ಕ. ಗೇರುಸೊಪ್ಪೆ, ಅಭಿನವ, ಭಟ್ಟಾರಕ ಮೊದಲಾದ ಯಾವ ವಿಶೇಷಣದಿಂದಲೂ ಗುರುತಿಸಿರದೆ 'ಸ್ವಾಮೀ' ಎಂಬ ಗೌರವ ಪದದಿಂದ ಉಲ್ಲೇಖಿಸಲಾಗಿದೆ. ಇದು ಅವರ ಮಹಾಪ್ರತಿಭೆ ಹಾಗೂ ಆತ್ಮಧರ್ಮ-ಪ್ರಭಾವನೆಯ ವೈಶಿಷ್ಟ್ಯವನ್ನು ಎತ್ತಿ ತೋರುವದು.

ಶ್ರೀವಿಜಯ ಎಂದರೆ ಸಮಂತಭದ್ರ, ಕವೀಶ್ವರ ಎಂದರೆ ಕವಿಪರಮೇಷ್ಠಿ ಮತ್ತು ಪಂಡಿತ ಎಂದರೆ ಪೂಜ್ಯಪಾದ ಎಂಬುದಾಗಿ ಡಾ॥ ದ. ರಾ. ಬೇಂದ್ರೆ ಅವರು ಅಭಿಪ್ರಾಯ ಪಟ್ಟಿದ್ದಾರೆ.[೨೨] ಆದರೆ ವಿದ್ವಾಂಸರಲ್ಲಿ ಈ ಬಗೆಗೆ ಒಮ್ಮತ ಕಂಡುಬರುವದಿಲ್ಲ.

---

೧೯. ಎಪಿಗ್ರಾಫಿಯಾ ಕರ್ನಾಟಕ ಸಂ. ೬. (೧೯೦೧): ಕೊಪ್ಪ ತಾಲ್ಲೂಕಿನ ಶಿಲಾ ಲೇಖನಗಳು.

೨೦. ಅದೇ ಸಂ. ೮.

೨೧. ಮಿರ್ಜಿ ಅಣ್ಣಾರಾಯರು : ರ. ಶ್ರಾ. ಪ್ರಸ್ತಾವನೆ. ಪು. xix ಹಾಗೂ
ಡಾ॥ ಎಂ. ಎಂ. ಕಲಬುರ್ಗಿ : 'ಕವಿರಾಜಮಾರ್ಗ ಪರಿಸರದ ಕನ್ನಡ.' ಪು. ೨೭೬.

೨೨. ಡಾ॥ ದ. ರಾ. ಬೇಂದ್ರೆ : 'ಸಾಹಿತ್ಯದ ವಿರಾಟ್ ಸ್ವರೂಪ.' ಪು. ೩೫೫.

ಬೇಂದ್ರೆ ಅವರ ಅಭಿಪ್ರಾಯ 'ಅಂತರದಲ್ಲಿ ನಿಂತ ಮಾತು'[೨೩] ಎಂಬುದನ್ನು ಗಮನಿಸ ಬಹುದು.

ಸಮಂತಭದ್ರರು ದರ್ಶನ, ತರ್ಕ, ವ್ಯಾಕರಣ, ಛಂದಸ್ಸು, ಅಲಂಕಾರ, ಕಾವ್ಯ ಮತ್ತು ಕೋಶ ಮೊದಲಾದ ವಿಷಯಗಳಲ್ಲಿ ಪರಿಣತರು. ಈ ಪಾಂಡಿತ್ಯವನ್ನು ಅವರು ಈ ಕೆಳಗಿನ ತಮ್ಮ ಕೃತಿಗಳನ್ನು ರಚಿಸುವುದರಲ್ಲಿ ತೋರಿದ್ದಾರೆ:

೧. **ಆಪ್ತಮೀಮಾಂಸಾ** ಸಮಂತಭದ್ರರ ಉಪಲಬ್ಧ ಕೃತಿಗಳಲ್ಲಿ ತುಂಬ ಮಹತ್ವಪೂರ್ಣವಾದುದು. ಇದು 'ದೇವಾಗಮ' ಪದದಿಂದ ಆರಂಭವಾಗುವದ ರಿಂದ ಇದನ್ನು 'ದೇವಾಗಮ'ವೆಂದೂ ಕರೆಯುವರು. ೧೧೪ ಸಂಸ್ಕೃತ ಪದ್ಯಗಳ ಈ ಕೃತಿಯ ಮೇಲೆ ಆಚಾರ್ಯ ಅಕಲಂಕದೇವರು ಎಂಟುಸಾವಿರ ಶ್ಲೋಕಗಳ 'ಅಷ್ಟ ಸಹಸ್ರೀ' ಎಂಬ ಟೀಕಾ ಗ್ರಂಥವನ್ನು ರಚಿಸಿದ್ದಾರೆ.

೨. **'ಯುಕ್ತ್ಯನುಶಾಸನ'**ದ ೬೪ ಪದ್ಯಗಳಲ್ಲಿ ಭಗವಾನ್ ಮಹಾವೀರರ ಸ್ತುತಿ ಯನ್ನು ಮಾಡುವದರೊಂದಿಗೆ ವಿವಿಧ ದರ್ಶನಗಳ ಕುರಿತು ವಿವೇಚಿಸಿದ್ದಾರೆ. ಇವನ್ನು 'ವೀರಜಿನಸ್ತೋತ್ರ'ವೆಂದೂ ಕರೆಯುವರು. ಆಚಾರ್ಯ ವಿದ್ಯಾನಂದರು ಈ ಗ್ರಂಥಕ್ಕೆ ಸಂಸ್ಕೃತ ಟೀಕೆಯನ್ನು ಬರೆದಿದ್ದಾರೆ.

೩. **'ಸ್ವಯಂಭೂ ಸ್ತೋತ್ರ'**ವು ನ್ಯಾಯಶಾಸ್ತ್ರ ಶೈಲಿಯ ಸ್ತುತಿಗ್ರಂಥ. ೧೪೩ ಪದ್ಯಗಳಲ್ಲಿ ಇಪ್ಪತ್ತನಾಲ್ಕು ತೀರ್ಥಂಕರರ ಸ್ತುತಿ ಮಾಡಲಾಗಿದೆ. ಕಾವ್ಯಕ್ಕೆ ಉಚಿತ ವಾದ ರಸ, ಭಾವ ಅಲಂಕಾರ, ವ್ಯಂಗ್ಯವೆಲ್ಲವು ಇಲ್ಲಿದೆ.

೪. 'ಜಿನಸ್ತುತಿ ಶತಕ'ದಲ್ಲಿಯೂ ಇಪ್ಪತ್ತನಾಲ್ಕು ತೀರ್ಥಂಕರರ ಸ್ತುತಿಯು ಕಲಾತ್ಮಕವಾಗಿ ಮೂಡಿದೆ. ಪ್ರತಿಯೊಂದು ಶ್ಲೋಕವು 'ಚಿತ್ರಬದ್ಧ'ಕಾವ್ಯವಾಗಿದೆ ಇದನ್ನು 'ಸ್ತುತಿವಿದ್ಯಾ' ಎಂದೂ ಗುರುತಿಸುವರು.

೫. **'ರತ್ನಕರಂಡಕ ಶ್ರಾವಕಾಚಾರ'**ವು ೧೫೦ ಶ್ಲೋಕಗಳಲ್ಲಿ ಗೃಹಸ್ಥನ ಆಚಾರ ವನ್ನು ವಿವರಿಸುವ ಸರಳ, ಸುಂದರ ಗ್ರಂಥವಾಗಿದೆ. ಮೊದಲನೆಯ ದರ್ಶನಾಧಿಕಾರ ದಲ್ಲಿ–ಆಪ್ತ, ಆಗಮ, ಗುರುಗಳ ಸ್ವರೂಪ, ಸಮ್ಯಗ್ದರ್ಶನದ ಮಹತ್ವವನ್ನು ವಿವರಿಸ ಲಾಗಿದೆ. ಎರಡನೆಯ ಅಧಿಕಾರದಲ್ಲಿ–ಸಮ್ಯಕ್ ಜ್ಞಾನದ ಲಕ್ಷಣವನ್ನು ಹೇಳಿ ನಾಲ್ಕು ಅನುಯೋಗಗಳ (ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ, ಮತ್ತು ದ್ರವ್ಯಾನುಯೋಗ) ಸಾಮಾನ್ಯ ಸ್ವರೂಪವನ್ನು ವಿವರಿಸಲಾಗಿದೆ. ಮೂರನೆಯ

೨೩. ಡಾ॥ ಎಂ. ಎಂ. ಕಲಬುರ್ಗಿ : 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ.' ಪು. ೨೭೭.

ಅಧಿಕಾರದಲ್ಲಿ–ಸಮ್ಯಕ್ ಚಾರಿತ್ರದ ಸ್ವರೂಪವನ್ನು ವಿವರವಾಗಿ ನಿರೂಪಿಸಿ, ಅಣುವ್ರತ ಗುಣವ್ರತ, ಶಿಕ್ಷಾವ್ರತ. ಗೃಹಸ್ಥನ ಅಷ್ಟಮೂಲಗುಣಗಳ ಬಗೆಗೆ ತಿಳಿಸಲಾಗಿದೆ. ನಾಲ್ಕನೆಯ ಅಧಿಕಾರದಲ್ಲಿ–ಸಲ್ಲೇಖನಾವ್ರತವನ್ನು ಆಚರಿಸುವ ರೀತಿ, ಸ್ವರೂಪ, ಹಾಗೂ ಅದರ ಮಹತ್ವವನ್ನು ಸ್ಪಷ್ಟಪಡಿಸಲಾಗಿದೆ.

ಇವಲ್ಲದೆ ೬) ಜೀವಸಿದ್ಧಿ ೭) ತತ್ತ್ವಾನುಶಾಸನ. ೮) ಪ್ರಾಕೃತ ವ್ಯಾಕರಣ ೯) ಪ್ರಮಾಣ ಪದಾರ್ಥ ೧೦) ಕರ್ಮಪ್ರಾಭೃತಟೀಕಾ ಹಾಗೂ ೧೧) ಗಂಧಹಸ್ತಿ–ಮಹಾಭಾಷ್ಯ – ಈ ಕೃತಿಗಳನ್ನೂ ರಚಿಸಿದ್ದಾರೆ. ಆದರೆ ಇವು ಈವರೆಗೂ ಉಪಲಬ್ಧವಾಗಿಲ್ಲ. ಇವರಲ್ಲಿಯ 'ಗಂಧಹಸ್ತಿಮಹಾಭಾಷ್ಯ'ವು ಆಚಾರ್ಯ ಉಮಾಸ್ವಾಮಿಗಳ 'ತತ್ತ್ವಾರ್ಥಸೂತ್ರಕ್ಕೆ' ಬರೆದ ಮಹಾಭಾಷ್ಯವೆಂದೂ, ಇದು ೮೪೦೦೦ ಶ್ಲೋಕಗಳಷ್ಟು ವಿಸ್ತಾರವಾಗಿದೆಯೆಂದೂ. ಇನ್ನು ಕೆಲವೆಡೆ ೯೬೦೦೦ ಶ್ಲೋಕಗಳಷ್ಟು[೨೪] ವಿಸ್ತಾರವಾಗಿದೆಯೆಂದೂ ಅಭಿಪ್ರಾಯಗಳು ವ್ಯಕ್ತವಾಗಿವೆ.

ಸಮಂತಭದ್ರಾಚಾರ್ಯರ ಯಾವ ಕನ್ನಡ ಕೃತಿಯೂ ಈವರೆಗೆ ದೊರೆಯದಿದ್ದರೂ "......ಅವರು ಸಂಸ್ಕೃತ. ಪ್ರಾಕೃತ. ಕನ್ನಡ ಮತ್ತು ತಮಿಳು ಮೊದಲಾದ ಹಲವು ಭಾಷೆಗಳಲ್ಲಿ ಪಾರಂಗತರು"[೨೫] ಎಂಬ ಅಭಿಪ್ರಾಯವಿದೆ. "ಈತನು ಕೆಲವು ಕಾಲ ಕರ್ನಾಟಕದಲ್ಲಿ ವಾಸಮಾಡಿರಬಹುದು. ಈತನ ಸಂಸ್ಕೃತ–ಪ್ರಾಕೃತ ಗ್ರಂಥಗಳಿಗೆ ಹಳಗನ್ನಡ ವ್ಯಾಖ್ಯಾನಗಳು ದೊರೆತಿವೆ. ಈತ ಕನ್ನಡದಲ್ಲಿ ಯಾವ ಕೃತಿಯನ್ನು ಬರೆದಂತೆ ಕಾಣುವದಿಲ್ಲ"[೨೬] ಎಂದೂ ಹೇಳಲಾಗಿದೆ. ಅದರಂತೆ,

"ಚಿತ್ತರಮಾಗೆ ಸೂತ್ರಗತಿಯಿಂ ಮಿಗೆ ಪಣ್ಣಿದ ಗಂಧಹಸ್ತಿತೊಂ
ಬತ್ತಱುಸಾಸಿರಕ್ಕೆ ಶಿವಕೋಟಿಯಕೋಟಿವಿಪಕ್ಷವಿದ್ವದು
ನ್ಮತ್ತಗಜಂ ಮದಂಬಟಿತು ಕೆಯ್ಯೆಡೆಗೊಟ್ಟುದೆನಲ್ಕೆ ಪೇೞ್ವುದೇಂ
ಮತ್ತೆ ಸಮಂತಭದ್ರ ಮುನಿರಾಜನುದಾತ್ತಜಯಪ್ರಶಸ್ತಿಯಂ||[೨೭]

ಎಂಬ ಪದ್ಯವು "ಸಮಂತಭದ್ರನ ಸಾಹಿತ್ಯಶಕ್ತಿಯನ್ನು ಸಾರುತ್ತಿದ್ದರೂ ಈತನು ಕನ್ನಡ ಕವಿಯೆನ್ನಲು ಆಧಾರಗಳಿಲ್ಲ"[೨೮] ಎಂಬ ಅಭಿಪ್ರಾಯವೇನೋ ಸರಿ. ಆದರೂ "ಸಮಂತ ಭದ್ರ. ಕವಿಪರಮೇಷ್ಠಿ ಮತ್ತು ಪೂಜ್ಯಪಾದರು ಕನ್ನಡದಲ್ಲಿ ಗ್ರಂಥಗಳನ್ನು ರಚಿಸಿರಬಹುದೇ ಎಂಬ ಊಹೆಗೆ ಅವಕಾಶವಿದೆ"[೨೯] ಎಂಬುದನ್ನು ಮರೆಯುವಂತಿಲ್ಲ.

---

೨೪. 'ಪುಷ್ಪದಂತಪುರಾಣ , ೧–೨೨.

೨೫. ಕೆ. ಭುಜಬಲಿ ಶಾಸ್ತ್ರಿ : ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕಾಣಿಕೆ; ಪು. ೩೧.

೨೬. ಡಾ|| ಸಿ. ಓಂಕಾರಪ್ಪ : (ಸಮಗ್ರ ಸಾಹಿತ್ಯ ಚರಿತ್ರೆ – ಬೆಂಗಳೂರು, ವಿ. ವಿ.) 'ಕವಿರಾಜಮಾರ್ಗದಲ್ಲಿ ಚರಿತ್ರೆ – ವ್ಯಾಕರಣ ಮುಂತಾದ ವಿಚಾರಗಳು ಪು. ೧೧೪.

೨೭. ಪುಷ್ಪದಂತಪುರಾಣ, ೧–೨೨.

೨೮. ಡಾ|| ಎಂ. ಎಂ. ಕಲಬುರ್ಗಿ : 'ಕವಿರಾಜಮಾರ್ಗಪರಿಸರದ ಕನ್ನಡ ಸಾಹಿತ್ಯ . ಪು. ೨೭೭.

೨೯. ಡಾ|| ಪಿ.ಬಿ. ಬಡಿಗೇರ : ('ಇತರ ಭಾಷೆಗಳಲ್ಲಿ ಕನ್ನಡಿಗರ ಕೃತಿಗಳು). ಸಮಗ್ರ ಸಾಹಿತ್ಯ ಚರಿತ್ರೆ, ಬೆಂಗಳೂರು, ವಿ. ವಿ.) ಪು. ೧೧೬–೧೧೭.

ಸಮಂತಭದ್ರಾಚಾರ್ಯರ ಬಹುಮುಖ ಪ್ರತಿಭೆಯನ್ನು ಪ್ರತಿಬಿಂಬಿಸುವ ಶ್ಲೋಕವೊಂದು 'ಸ್ವಯಂಭೂಸ್ತೋತ್ರ'ದ ಹಳೆಯ ಪ್ರತಿಯಲ್ಲಿದ್ದು ಅದನ್ನು ಪಂಡಿತ ಜುಗಲಕಿಶೋರ ಮುಖ್ತಾರರು ಪ್ರಕಟಿಸಿದ್ದಾರೆ. ಇದರಿಂದ ಸಮಂತಭದ್ರಾಚಾರ್ಯರು ೧) ಆಚಾರ್ಯ ೨) ಕವಿ ೩) ವಾದಿರಾಜ್ ೪) ಪಂಡಿತ (ಗಮಕ) ೫) ದೈವಜ್ಞ ೬) ಭಿಷಕ್ (ವೈದ್ಯ), ೭) ಮಾಂತ್ರಿಕ (ಮಂತ್ರ ವಿಶೇಷಜ್ಞ), ೮) ತಾಂತ್ರಿಕ ೯) ಆಜ್ಞಾಸಿದ್ಧ ಹಾಗೂ ೧೦) ಸಿದ್ಧಸಾರಸತ್ವ ಮುಂತಾದ ವಿಶೇಷಣಗಳಿಗೆ ಪಾತ್ರರಾದುದು ಕಂಡು ಬರುತ್ತಿದೆ. ಸ್ವಾಮಿ ಸಮಂತಭದ್ರಾಚಾರ್ಯರು ಸರ್ವಪ್ರಾಣಿಗಳ ಹಿತವನ್ನು ಗುರಿಯಾಗಿಟ್ಟುಕೊಂಡ ಅನೇಕಾಂತ ದೃಷ್ಟಿಯ ಕಾರಣದಿಂದಲೇ ಸರ್ವೋದಯ ತೀರ್ಥವೆಂದು[೩೦] ಹೇಳಿರುವುದೂ ತುಂಬ ಔಚಿತ್ಯಪೂರ್ಣವಾಗಿದೆ.

● ●

---

೩೦. ಸರ್ವಾನ್ತವತ್ತದ್ಗುಣ ಮುಖ್ಯಕಲ್ಪಂ ಸರ್ವಾನ್ತಶೂನ್ಯಂ ಚ ಮಿಥೋನಪೇಕ್ಷಂ
ಸರ್ವಾಪದಾಮನ್ತಕರಂ ನಿರನ್ತಂ **ಸರ್ವೋದಯಂ ತೀರ್ಥ**ಮಿದಂ ತವೈವಂ ॥
ಯುಕ್ತ್ಯನುಶಾಸನ; ೬೨.

ಜನಪದ ಕವಿಚರಿತೆ

● ಎಂ. ಎಸ್. ಲಠ್ಠೆ

೬೧ ಸಲ್ಗರದ ಲಕ್ಷ್ಮಣ : (೧೯೧೩–೧೯೭೩)

ವಜ್ರಸಲ್ಗರದ ಇನ್ನೊಬ್ಬ ಪ್ರಸಿದ್ಧ ಕವಿ ಈತ. ೧೯೧೩ರಲ್ಲಿ ಹುಟ್ಟಿದ ನಾಟಕಕಾರ ಅಂದಪ್ಪನ ಮಗನೇ ಈ ಲಕ್ಷ್ಮಣ. ಮೂಲ ಉದ್ಯೋಗ ಒಕ್ಕಲುತನ. ಆಗಾಗ ಹಾಡು ರಚಿಸುವುದು. ಹಾಡುವುದು. ಅಲ್ಲದೆ ಬಯಲಾಟಗಳಲ್ಲಿ ಸೋಗು ಹಾಕುವುದು ಈತನ ಹವ್ಯಾಸವಾಗಿತ್ತು.

ಲಕ್ಷ್ಮಣ ಕಲಿತಿದ್ದು ಮೋಡಿ. ಅದೂ ಅಲ್ಪ–ಸ್ವಲ್ಪ. ಹಿಂದಿ–ಉರ್ದು ಬಲ್ಲವನು. ಕನ್ನಡದಲ್ಲಿ ಹಾಡು ಕಟ್ಟಿದರೂ ಬರೆಯುವ ಲಿಪಿ ಮಾತ್ರ ಮೋಡಿಯಲ್ಲಿ. ಹಾಡು ರಚಿಸುವುದು ಹೇಗೆ ಎನ್ನುವ ಗುಟ್ಟನ್ನು ಕವಿ ಹಲವಾರು ಜನರಿಗೆ ತಿಳಿಸಿಕೊಡುತ್ತಿದ್ದನು, ಪ್ರಾಮಾಣಿಕ ಪ್ರವೃತ್ತಿಯ ಕವಿ ಆಸೆ ಆಮಿಷಗಳ ಬಲೆಯಲ್ಲಿ ಬೀಳಲಿಲ್ಲ. ಸೋಶಾಲಿಸ್ಟ ಪಾರ್ಟಿಗೆ ಅಂಟಿಕೊಂಡಿದ್ದನು. ತನಗಾದ ಅನುಭವವನ್ನು ಬಿಚ್ಚುಮನಸ್ಸಿನಿಂದ ಹಾಡುಗಳಲ್ಲಿ ಎರಕಹೊಯ್ಯುತ್ತಿದ್ದನು.

ತನ್ನಲ್ಲಿ ಇದ್ದುದನ್ನು ಸಮಾಜದ ಉದ್ಧಾರಕ್ಕಾಗಿ ಹಣ ವಿನಿಯೋಗ ಮಾಡುತ್ತ ಹೊರಟ ಈತನಿಗೆ ಕಡುಬಡತನದ ಅನುಭವವೂ ಆಗಿತ್ತು. ಭಜನೆ ಹಾಡು. ರಿವಾಯ್ತು, ಕೋಲಿನ ಪದ. ಲಾವಣಿ ಮೊದಲಾದ ನೂರಾರು ಹಾಡು ರಚಿಸಿದ್ದಾನೆ. 'ಮೌನೇಶ್ವರ' (ಮೌನದೀನ) ಎಂಬುದು ಈ ಹಾಡುಗಳಲ್ಲಿ ಬರುವ ಅಂಕಿತವಾಗಿದೆ. ಅದೇ ಊರ ಸಾಂಬಶಿವನ ಮೇಲೂ ಹಾಡು ಕಟ್ಟಿದ್ದಾನೆ. ಕವಿ ಸ್ವರ್ಗವಾಸಿಯಾದುದು ೧೯–೧–೧೯೭೩ ರಲ್ಲಿ.

"ನಿಜಾಮನ ಕಾಲಕ್ಕ ಸರಕಾರ ಜಬರ ।
ದವಡ ಮಾಡಿ ಬಂದ ಇಳದ ಮಾಂಬ್ಲೆದಾರ ।
ಚಕಿಂಗ ಮಾಸ್ತರಗ ಕರಸಿ ಎದರ ।
ಚವಕಶಿ ಮಾಡಿ ಪೂರ ।

ಸಲಗರ ಸ್ವಾಮಿಗೆ ನೂಕಿ ಜವಾನರ ।
ಭಜನಾ ಮಾಡುತ ಕುಂತಾರೊ ಸ್ವಾಮಿ ಅವರಾ ।
ಶರಣಾಗತರಾದರೊ ರೇಲ ಜನರಾ ।
....
....
....
ದೇಶದೊಳಗ, ವಜ್ರಸಲ್ಗರ ಆದ ರತನ ।
ಮೌನದೀನ ದೇವರ ಆಗಿ ಸ್ಥಾಪನ ।
ಕವಿ ಮಾಡಿ ಲಕ್ಷ್ಮಣ ನುಡಿದಂಗೆ ನವಿನ ನಾಣ್ಯ ।
ಹೊಸ ಹೊಸ ಕವಿಗಳು ಮಾಡಿ ರಚನ ।
ಅಂಬಿಗಾರ ಸಂಘ ಸೇವಾದಲ್ಲಿ ನೀ ಮಗ್ನ ।
ಜಯಗಂಗಾ ಎಂದು ಜಯಘೋಷ ಹೊಡ್ದಾನ ।"

೬೨ ಧಂಗಾಪುರದ ಶಿವಶರಣಪ್ಪ : (೧೯೧೬-)

ಪ್ರಸಿದ್ಧ ಜನಪದ ಕವಿಯೆನಿಸಿದ ಧಂಗಾಪುರದ ಬಸವಣ್ಣೆಪ್ಪನ ಮಗನೇ ಈ ಶಿವಶರಣಪ್ಪ. ಈತನೂ ಕವಿ. ತನ್ನ ೧೨ನೇ ವಯಸ್ಸಿನಲ್ಲಿ ಹಾಡು ಹಾಡುತ್ತ ಹೊರಟ ಈ ಕವಿ ಸಣ್ಣಾಟಗಳಲ್ಲೂ ಭಾಗವಹಿಸುತ್ತಿದ್ದನು. ಈತನ ಗತಿಯನ್ನು ಅರಿತುಕೊಂಡ ತಂದೆ ಅಕ್ಷರ ಜ್ಞಾನವಿಲ್ಲದ ಈ ಶರಣಪ್ಪನಿಗೆ ಓದು ಬರೆಯಲು ಕಲಿಸಿದ ಹಾಡಿನ ಗತ್ತುಗಳನ್ನೂ, ರಚಿಸುವ ಕಲೆಯನ್ನೂ ತಿಳಿಸಿಕೊಟ್ಟ. ಇದರಿಂದಾಗಿ ಮಗ ಶಿವ ಶರಣಪ್ಪನೂ ತಂದೆಯಂತೆ ಹಾಡು ರಚಿಸಿ, ಪ್ರಸಿದ್ಧ ಹಾಡುಗಾರನೂ ಎನಿಸಿದ.

ಅರವತ್ತರ ಅಂಚನ್ನು ದಾಟಿದ ಈ ಕವಿ ಪ್ರತಿವರುಷವೂ ಶ್ರೀ ಶರಣಬಸವೇಶ್ವರ ಜಾತ್ರೆಗೆ ಬರುತ್ತಿದ್ದನು. ತನ್ನ ಆಳಿಲು ಸೇವೆ ಸಲ್ಲಿಸುತ್ತಿದ್ದನು. ತಂದೆ ನಾಗೇಶಿ ಹಾಡು ರಚಿಸಿದರೆ ಈತ ಪರದೇಶಿ ಹಾಡು ರಚಿಸಿದವನು. ಹಂತಿಯ ಪದ, ಭಜನಿ ಹಾಡು ಹರದೇಶಿ ಹಾಡು, ಮೊಹರಮ್ ಹಾಡು ರಚಿಸಿದ್ದಾನೆ. ಊರ ಮಾರುತಿದೇವರನ್ನು ತನ್ನ ಹಾಡುಗಳಲ್ಲಿ ಸ್ಮರಿಸಿದ್ದಾನೆ. 'ಮರ್ಜಿ ಧಡಿ ಧಂಗಾಪುರ ಮಾರುತಿ ದೇವರ' ಎಂಬ ಮುದ್ರಿಕೆಯೂ ಈತನ ಹಾಡುಗಳಲ್ಲಿ ಬಂದಿದೆ. 'ಕಂದ ಶಿವಶರಣ' ಎಂಬ ಹೆಸರೂ ಇಲ್ಲಿ ಬರುತ್ತಿದೆ.

"ಇಡಿ ಹಿಂದೂಸ್ತಾನಕೆಲ್ಲ ಹಿಂದ ಕೆಡವಿ ಹಿಂತವರೆ
ಕುಂದ ತಂದು ಇಟ್ಟಾರ ಈ ಕರ್ನಾಟಕಕ
ಈ ಹಿಂದಿನ ಮಹಾತ್ಮಾ ಬಂದ ಉಳಿಯಲಿಲ್ಲ ತಟಕ ।
ಸರಿಯಾಗಿ ಬಂದು ಕೂಡತಾರ ಊಟಕ ।

"ಮರ್ಜಿಥಡಿ ಥಂಗಾಪೂರ ಮಾರುತಿ ದೇವರ
ಮತಿಕೊಟ್ಟು ನಡಸಿದಾರ ಕವಿ ಕಟ್ಟುದಕ ।
'ಕಂದ ಶಿವಶರಣ' ಕೈಮುಗಿದ ದೈವದ ಪಾದಕ" ।

೬೩ ಬೆಡಜುರಗಿ ಬಕ್ಸಾರಿ (೧೯೧೭–)

ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಬೆಡಜುರಗಿ ಒಂದು ಹಳ್ಳಿ. ಅಲ್ಲಿಯ ಬಕ್ಸಾರಿ ಪರಿಜನ ಎನ್ನುವ ಅರವತ್ತು ವರುಷದ ಅನುಭಾವಿ ಕವಿ. ನೂರಾರು ಭಜನೆ ಹಾಡುಗಳನ್ನು ರಚಿಸಿದ್ದಾನೆ. ಆ ಊರ ಮಠದ ಸ್ವಾಮಿಗಳೇ ತನ್ನ ಕಾವ್ಯಸ್ಫೂರ್ತಿಗೆ ಮೂಲಕಾರಣಕರ್ತರೆಂದು ಹೇಳಿ ಅವರ ಆಶೀರ್ವಾದದಿಂದಲೇ ಹಾಡು ರಚಿಸುತ್ತ ಬಂದದ್ದು ಎನ್ನುತ್ತಾರೆ. ಅವರ ಶಿಷ್ಯನಾಗಿ ಆ ಮಠದ 'ಕೊಮರಾಯ ಸ್ವಾಮಿ' ಯವರನ್ನು ಹಾಡುಗಳಲ್ಲಿ ಸ್ಮರಿಸಿದ್ದಾನೆ.

ಗೊತ್ತ ಮಾಡಿಕೊ ಗೊತ್ತಮಾಡಿಕೊ ।
ಸತ್ತೆಮ್ಮಿ ಹಾಲ ನೀ ಹಿಂಡಕೊ । ॥ ಪಲ್ಲ ॥
ಸಹಸ್ರ ನಾಮ ನಿನ್ನ ಬಾಯಲ್ಲಿ ನುಡಿಕೊ ।
ನೇತ್ರಧಾರಿ ಎಮ್ಮಿ ಹಾಲ ನೀ ಹಿಂಡಿಕೊ ।
ಖಾತ್ರಿ ಎಮ್ಮಿ ಕಡಿಗಣ್ಣಿಲಿ ನೋಡಿಕೊ ।
ಹಳಿ ಬಾಜಾರದೊಳು ಹಾಲು ಮಾರಿಕೊ ।
....

ಕೊಮರಾಯ ಮುತ್ಯಾ*ಗ ಸಿರಬಾಗಿ ಬೇಡಿಕೊ ।
ಲೆಕ್ಕಿಲ್ಲದ ಹಣಕೊಟ್ಟು ನೀ ಲೆಕ್ಕ ಮಾಡಿಕೊ ।
ಹರಿಜನ ಶಿಷ್ಯ ಎಂದು ಹೇಳ್ತಾನ ತಿಳಕೊ
ಕನಸಿನೊಳಗ ಬಂದು ಹೊಡಿತಾನ ಜೋಕ್ಯೋ । ॥ ೨ ॥

೬೪ ಕರಲಗಿ ಶರಣಪ್ಪ : (೧೯೧೯–)

ಕರಲಗಿ ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ಒಂದು ಹಳ್ಳಿ. ಇಲ್ಲಿಯ ಒಕ್ಕಲು ಮನೆತನದ ಗುರುಲಿಂಗಪ್ಪ ಮತ್ತು ಶಿವಮ್ಮ ಅವರ ಮಗನೇ ಈ ಶರಣಪ್ಪ. ಮೂಲಗೆ ಮನೆಯ ಹೆಸರು. ಸಾತ್ವಿಕ ವೃತ್ತಿಯ ಶಾಂತ ಸ್ವಭಾವದ ಸುಸಂಸ್ಕೃತ ಜನರಿವರು. ಲಿಂಗಪೂಜೆ. ಗುರುಧ್ಯಾನದತ್ತ ಚಿಕ್ಕಂದಿನಿಂದಲೂ ಒಲವು. ಮುರು

* ಮುತ್ಯಾ ಎಂದರೆ ಈ ಭಾಗದಲ್ಲಿ ಸ್ವಾಮಿ ಎನ್ನುವ ಅರ್ಥ.

ಘೇಂದ್ರಸ್ವಾಮಿ ಮಠದ ಸದ್ಭಕ್ತನಾದ ಈ ಶರಣಪ್ಪ ಸಂಘಜೀವಿ. ಸಾಮಾಜಿಕ ಕಾರ್ಯಗಳಲ್ಲೆಲ್ಲ ಈತನನ್ನೇ ಜನ ಮುಂದು ಮಾಡುವುದುಂಟು. ಅದಕ್ಕೆ ಕಾರಣ ಈತನ ಪ್ರಾಮಾಣಿಕತನ, ನಿಷ್ಪಕ್ಷಪಾತದೃಷ್ಟಿ ಹಾಗೂ ನಿಸ್ವಾರ್ಥ ಸೇವೆ.

ಶರಣಪ್ಪ ಕಲಿತಿದ್ದು ನೋಡಿ ೪ನೇ ಈಯತ್ತೆ. ಸುಶ್ರಾವ್ಯವಾಗಿ ಹಾಡಲೂ ಬಲ್ಲನು, ಸುಂದರವಾಗಿ ಹಾಡೂ ರಚಿಸಬಲ್ಲನು. ರೇಲು ಕಂಡಾಗ–ಮೊದಲು ಹತ್ತಿದಾಗ, ಬಸ್ಸು ಏರಿದಾಗ, ದೀಪ ಹೊತ್ತಿದಾಗ ಅದರ ಅನುಭವವನ್ನು ತನ್ನ ಹಾಡುಗಳಲ್ಲಿ ಎರಕ ಹೊಯ್ದಿದ್ದಾನೆ. ಆಶುಕವಿತ್ವ ಶಕ್ತಿಯಿಂದ ಜನರನ್ನು ಅಚ್ಚರಿಗೊಳಿಸಿದ್ದಾನೆ.

'ಚಿತ್ತೂರ ಚಂದ್ರಶೆಟ್ಟಿ ಸಾಹುಕಾರ' ಎಂಬ ಡಪ್ಪಿನಾಟ ಬರೆದಿದ್ದಾನೆ. ನೂರಾರು ಭಜನೆ ಹಾಡು, ಜೋಗುಳ ಹಾಡು ರಚಿಸಿದ್ದಾನೆ. ಸಲ್ಗರದ ಸಾಂಬಶಿವಯೋಗಿಗಳ ಮೇಲೆ ಅತೀವ ಭಕ್ತಿ. ಅವರನ್ನು ತನ್ನ ಹಾಡುಗಳಲ್ಲೂ ಸ್ಮರಿಸಿದ್ದಾನೆ. ತಾನು ರಚಿಸಿದ ಹಾಡುಗಳಲ್ಲಿ ತನ್ನ ಹೆಸರು ಸೇರಿಸದೆ ಒಮ್ಮೆ ಊರಿನ. ಒಮ್ಮೆ ಗುರುವಿನ ಇಲ್ಲವೆ–ಮುರುಘೇಂದ್ರ ಶಿವಯೋಗಿಗಳ ಹೆಸರನ್ನು ಸೇರಿಸಿದ್ದಾನೆ. ಅಧ್ಯಾತ್ಮ. ಲೋಕಾನುಭವ ಈತನ ಹಾಡುಗಳ ಹೆಗ್ಗುರಿ. ಹೆಣ್ಣು ಹೆಚ್ಚೆಂದು ಸಾರುವ ಹಾಡುಗಳನ್ನು ರಚಿಸಿದ್ದಾನೆ.

•

ಭಜನಿ ಹಾಡು:

"ಹಾರಿ ಹೋಗ್ತಾದೊ ಪಕ್ಕಿ । ಬಿಡಬ್ಯಾಡ ಮಾಡ ಜ್ವಾಕಿ ॥ ಪಲ್ಲ ॥
ಅಳತಿಯಿಲ್ಲದೆ ಅನ್ನವ ಹಾಕಿ । ಘಳಿಕಿ ಇಲ್ಲದೆ ಈ ಹಕ್ಕಿ ಸಾಕಿ ।
ಕಳ್ಳತನದೊಳು ಆಯಿತ ಸೇರ್ಕಿ । ಸುಳ್ಳತನದಲ್ಲಿ ಸುಳಿಯುವ ಪಕ್ಕಿ ।
॥ ೧ ॥

ಲಕ್ಷ ತೇರಾಬಂಸಿ ಹಾಕಿತ ಫಿರಕಿ । ಭಿಕ್ಷಾ ಬೇಡಿ ತಿನ್ನುವ ಪಕ್ಕಿ ।
ಸಾಕ್ಷಿಭೂತಗೆ ಸಿಲ್ಕಿದ ಪಕ್ಕಿ । ಮೋಕ್ಷಕೆ ಏರಿದ ಪಕ್ಕಿ । ॥ ೨ ॥

ಬ್ರಹ್ಮಗಿದ್ದಿಡಿಲ್ಲ ಬ್ಯಾಸರಕಿ । ಮೂವತ್ತೆರಡ ತಾರಿನ ಪೇಟಿ ।
ಏನ ಛಂದ ಆವ ಒಂಬತ್ತ ಕಿಡಕಿ । ಕೊಟ್ಟ ಹೊಡದ ಹೋಗಾದ
ಧಕ್ಕಿ । ॥ ೩ ॥

ಪಂಜರದಾನ ಪಕ್ಷಿ ಮಾಬೆರಕಿ । ನೀತಿಗುಣ ಇಲ್ಲ ಒಂದು ಎಣಿಕಿ ।
ಭಕ್ತಿ ಎಂಬ ಸೂಲಿ ತಂತಿಗಿ ಥಾಕಿ । ಕರಲಗಿಯಲ್ಲಿ ಐಕ್ಯಾದ ಪಕ್ಕಿ । ॥ ೪ ॥

ಡಪ್ಪಿನಾಟದ ಹಾಡು :

"ನೋಡು ನೋಡಮ್ಮ ಸಖಿ ಮಹಾಲಾ ಏಷ್ಟು ಸೇಲಾ ।
ಪಲೇಟಾ ಹಾಕಿ ಕಟ್ಟಿದಾಂವಾ ಅಸಲಾ ।

ಸಾಧು ಸಂತರ ಗುಂಪ ।
ವೃಕ್ಷದ ನೆರಳಿನ ತಂಪ । ಸುಸ್ವಾರವ ಗಾನದ ಇಂಪ" ।

೬೫ ಬಿಲಗುಂದಿಯ ಮಾರ್ತಂಡಪ್ಪ : (೧೯೨೪–೧೯೭೪)

ಬಿಲಗುಂದಿ ಆಳಂದ ತಾಲೂಕಿನ ಒಂದು ಹಳ್ಳಿ. ಬೆಣ್ಣೆತೊರಾಯಿ ಹಳ್ಳದ ಮಡಿಲಲ್ಲಿ ನಿಂತ ಈ ಹಳ್ಳಿ ತೋಟ–ಪಟ್ಟಿಗಳಿಂದ ಸಮೃದ್ಧವಾದುದು. ಯಾವ ದಿಕ್ಕಿನಿಂದಲೂ ವಾಹನಮಾರ್ಗದ ಸೌಕರ್ಯವಿಲ್ಲ. ಹಳ್ಳ ದಾಟಿ ನಡದೇ ಹೋಗಬೇಕು. ಮೂರು ವರ್ಷಗಳ ಹಿಂದೆ ತೀರಿಕೊಂಡ ಜನಪದ ಕವಿಯಾದ ಮಾರ್ತಂಡಪ್ಪ ಕಾಳಪ್ಪ ಸುತಾರನನ್ನು ಈಗಲೂ ಅಲ್ಲಿಯ ಜನ ನೆನೆಸಿಕೊಳ್ಳುತ್ತಾರೆ. ಮಾರ್ತಂಡಪ್ಪ ತೀರಿಕೊಂಡಾಗ ಅವನಿಗೆ ೫೦ ವರುಷಗಳಿದ್ದವಂತೆ. ಅಕ್ಷರಜ್ಞಾನವಿರಲಿಲ್ಲದ ಈ ಕವಿ ಮೋಹರಮ್ ಹಾಡು. ಗೀಗೀ, ಭಜನೀಹಾಡುಗಳನ್ನು ಕಟ್ಟಿದ್ದಾನೆ. ಉದ್ಯೋಗ ಬಡಿಗತನವಾಗಿತ್ತು. ಪಂಚಾಳರವ. ಬಿಲಗುಂದಿಯ ಸಂಗಮನಾಥ ದೇವನನ್ನು ಹಾಡುಗಳಲ್ಲಿ ಸ್ಮರಿಸಿದ್ದಾನೆ.

"ಬಿಲಗುಂದಿ ಕವಿಗಾರ ಕೂಗಿ ಹೇಳಿದಾ
ಮಾರ್ತಂಡಪ್ಪ ಪದ ಮಾಡಿ ಹಾಡಿದಾ"

ಇದು ಕವಿಯ ಹಾಡುಗಳಲ್ಲಿ ಬರುವ ಮುದ್ರಿಕೆಯಾಗಿದೆ. ಈಗಲೂ ಈತನ ಹಾಡುಗಳನ್ನು ಹಾಡುತ್ತಾರೆ:

ಪಂಚತತ್ತ್ವ ಪರಮಾತ್ಮನ ಲೀಲಾ ।
ತಿಳಕೊಂಡವರು ಭಾಳ ಮಂದಿ ಹಾರ ಜಗದಲ್ಲಿ ।
ಕೈಲಾಸಕ ಭೀಮಗದಾ ಒಗದ ಕೈಲಿ ।
ಗದ ನೋಡಿ ಈಶನ ವಿಚಾರ ತಪ್ಪಿ ಆದೋ ಹುಚ್ಚಪ್ಯಾಲಿ । ॥ ೧ ॥

ಮೀರಗಾಲ ಹೊಡದು ಬಡಕ ಕೊಟ್ಟಾನೊ ತಲಿ ।
ಮೂರು ವರ ಪಡಕೊಂಡು ಶಿರ ಹಾರಸಿ ಕೀಚಕನ ತಲಿ
ಬಕಾಸುರನ ವಧಾ ಆಗ್ಯಾದೊ ಭೀಮನ ಕೈಯಲ್ಲಿ
ನಾ ಹೊಡದಿದೆಂದು ಬರೆದು ಬಿಟ್ಟ ಅದೆ ರಕ್ತದಲ್ಲಿ । ॥ ೨ ॥

ಪಶುಪತಿ ಬಾಣಗೆದ್ದ ಅರ್ಜುನ ದ್ವಾಪರ ಯುಗದಲ್ಲಿ ।
ದ್ರೋಣಾಚಾರಿ ಗುರುಗೋಳ ಬಳ್ಳಿ ಕಲಿತು ಶಾಲಿ ।
ಸುಳ್ಳ ಅಲ್ಲ ಶಾಹಿರ ಬರೆದ ಶಾಸ್ತ್ರದಲ್ಲಿ ।
ಆತನಿಗಿ ಏರಡ ಹ್ಯಾಂಗ ಮೂರ ಆವ ಕಾಜಿನ ಬಾವಲಿ ॥ ೩ ॥

ಪುಟಗಿಲಿಂದ ಹುಟಗಿ ಸ್ವಾಮಿ ಪರಸೇವೆಯಲಿ ।
ಮುಚ್ಚಿದ ಬಾಗಿಲ ಬಿಚ್ಚಿ ಇಟ್ಟಾರೊ ತೆರೆದು ಕೀಲಿ ।
ಮಹಾತ್ಮಾ ಅಂದರ ಪರ ಮಹಾತ್ಮಾ ತಿಳಕೋರಿ ಮನದಲಿ ।
ಆತ್ಮದ ವಿಚಾರ ತಿಳಿದು ಹಸರ ಕೆಂಪ ನೀಲಿ ರಂಗೀಲಿ ॥ ೪ ॥

ಮಹಾತ್ಮರ ಪದಾ ಮಾಡಿ **ಮಾರ್ತಂಡಪ್ಪ** ಹಾಡ್ಯಾನ ಸಭೆದಲ್ಲಿ ।
ಪಂಡಿತರ ಕೇಳಿ ಪುಷ್ಪದ ಮಾಲಿ ಅರ್ಪಿಸಿ ಕೊರಳಲ್ಲಿ ।
ದೇಶದೊಳು ಬಿಲಗುಂದಿ ಸಣ್ಣ ಹಳ್ಳಿ ರಿ ನಿತ್ಯ ಸಂಗಮನಾಥನ
ಭಜನಿ ನೇಮರಿ । ॥ ೫ ॥

೬೬ ಬೋನಾಳದ ಮಲ್ಲೇಶಯ್ಯ: (೧೯೨೭–)

ಕಲಬುರಗಿ ಜಿಲ್ಲೆಯ ಸುರಪುರ ತಾಲೂಕಿನ ಬೋನಾಳ ಗ್ರಾಮದಲ್ಲಿ ಮಲ್ಲೇಶಯ್ಯ ಒಳ್ಳೆಯ ಹಾಡುಗಾರ. ೫೦ ವರುಷಗಳ ಹಿಂದೆ ಪರ್ವತಯ್ಯ ಮತ್ತು ಶರಬಮ್ಮ ದಂಪತಿಗಳಿಗೆ ಹಿರಿಯ ಮಗನಾಗಿ ಹುಟ್ಟಿದ ಈ ಕವಿ ಹುಟ್ಟು ಕಲಾಕಾರ. ಚಿಕ್ಕಂದಿನಿಂದಲೂ ಹಾಡುಗಾರಿಕೆಯನ್ನು ಮೈಗೂಡಿಸಿಕೊಂಡು ಬಂದ ಮಲ್ಲೇಶಿಗೆ ಡಪ್ಪು ಬಾರಿಸುವ ಕಲೆಯೂ ಗೊತ್ತು. ಗೀಗೀ ಲಾವಣಿ. ಹಂತಿಪದ. ಭಜನೆ ಹಾಡುಗಳನ್ನು ಸರಾಗವಾಗಿ ಹಾಡುತ್ತಾನೆ. ಕೆಲವೊಂದನ್ನು ಸ್ವತಃ ರಚಿಸಿದ್ದಾನೆ. ಏನೂ ಕಲಿಯದ ಈತನಿಗೆ ಜನಪದ ಹಾಡುಗಳ ಧಾಟಿ. ಗತ್ತು. ತಾಳ, ಲಯಗಳೇ ಸಂಪತ್ತು, ಬಂಡವಲು. ಅದೇ ರಾಗದಲ್ಲಿ ಎಂಥ ವಿಷಯವನ್ನೂ ಎತ್ತಿಕೊಂಡು ಹೊಸ ಹೊಸ ಹಾಡು ರಚಿಸುತ್ತಾನೆ. ಉದ್ಯೋಗ ಒಕ್ಕಲುತನವಾದರೂ ಹವ್ಯಾಸ ಹಾಡುಗಾರಿಕೆ: ಅಷ್ಟೇ ಅಲ್ಲ ಆಟ–ಪಾಟಗಳಲ್ಲಿ ಪಾತ್ರವಹಿಸುವುದು. ಅಮ್ಮಾಪುರದ ಪ್ರಸಿದ್ಧ ಜನಪದ ಕವಿಯೆನಿಸಿದ ಹನುಮಂತಪ್ಪನ ಪಟ್ಟದ ಶಿಷ್ಯನಿವ. ಇವನಿಗೆ ಸಾತಿದಾರ ಅದೇ ಊರ ನಬಿ ಸಾಹೇಬ. ತನ್ನ ಹಾಡುಗಳ ಕೊನೆಗೆ 'ಮಲ್ಲ ನಬಿಸಾ' ಎಂಬ ಮುದ್ರಿಕೆಯನ್ನು ಇಟ್ಟಿದ್ದಾನೆ. ಅನೇಕ ಒಗಟು ರೂಪದ ಹಾಡುಗಳನ್ನು ಈಗಲೂ ರಚಿಸುವುದುಂಟು. ಹಂತಿಯ ಹಾಡುಗಳಲ್ಲಿ ಈತ ಹಾಕಿದ ಒಗಟನ್ನು ಒಡೆಯುದಲೇ ಸೋತು ಹೋದವರು ಅನೇಕರುಂಟು.

ಮಲ್ಲೇಶಯ್ಯ ಪರದೇಸಿ–ನಾಗೇಶಿ ಹಾಡೂ ರಚಿಸಿದ್ದಾನೆ.

ಹಂತಿಯ ಸವಾಲ ಪದ:

ಎಲಿ ವ್ಯಾಲ ಎಲಿಯಾಗಿ ಎಲಿ ವ್ಯಾಲ ಕಾಯಾಗಿ ।
ಕಾಯಿಯ ವ್ಯಾಲ ಹೂವಾಗಿ । ಕಣದಾಗ ।
ವಾದ ಮಾಡಣ್ಣ ಒಡದ್ಹೇಳೊ ॥

ಉತ್ತರ: ದಬಗಳ್ಳಿ ಹಣ್ಣ

ಈಗಿಂದೀಗಲೇ ಕಂಡೆ ಒಂದು ವಿಚಿತ್ರದ ಮಾಲ ।
ಇಬ್ಬರ ನಡುವ ಕಿವಿವೊಂದ । ಕಣದಾಗ ।
ವಾದ ಮಾಡಂಣ ಒಡದ್ಹೇಳ

ಉತ್ತರ: ಕಪ್ಪು, ಬಸಿ.

೬೭. ರಾಯಕೋಡಿ ಭೀಮಣ್ಣ: (೧೯೩೨–೧೯೬೭)

ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನಲ್ಲಿರುವ ರಾಯಕೋಡಿ ಗ್ರಾಮದ ಭೀಮಣ್ಣ ಕಬ್ಬಲಿಗರ ಮನೆತನದವನು. ಚಿಕ್ಕಂದಿನಿಂದಲೂ ಧರ್ಮ, ದೇವರ ಕಡೆ ಹೆಚ್ಚಿನ ಒಲವು ಇತ್ತು. ಹಾರಕೂಡದ ಚೆನ್ನಬಸವೇಶ್ವರ ಸ್ವಾಮಿಗಳ ಪರಮ ಶಿಷ್ಯ ನಾಗಿದ್ದ. ಯಾವಾಗಲೂ ಸ್ವಾಮಿಗಳ ಸಹವಾಸದಲ್ಲಿಯೇ ಇರುತ್ತಿದ್ದನು. ಈ ಸ್ವಾಮಿಗಳ ಕೃಪಾಶೀರ್ವಾದದ ಬಲದಿಂದ ಭೀಮಣ್ಣ ಜನಪದ ಕವಿಯಾಗಿ ಮೆರೆದನು.

ಭೀಮಣ್ಣ ಕಲಿತವನಲ್ಲ. ಆದರೆ ಕಲಿತವರೂ ತಲೆದೂಗಿಸುವಂತಹ ಪ್ರತಿಭೆ ಅವನಲ್ಲಿತ್ತು. ಸಹಜವಾಗಿ ಆಶುಕವಿಯಾಗಿ ಹಾಡು ಕಟ್ಟುತ್ತಿದ್ದನು. ಸ್ವತಃ ಹಾಡು ಗಾರನೂ ಆಗಿದ್ದನು. ಭಜನಿ ಹಾಡು, ಲಾವಣಿ ಹಾಡು. ಹಂತಿ ಹಾಡು, ಸೋಬಾನ ಹಾಡು. ಜೋಗುಳ ಹಾಡು ಮೊದಲಾದ ಹಾಡುಗಳನ್ನು ರಚಿಸಿ ಕೃತಕೃತ್ಯನಾಗಿದ್ದಾನೆ. ಹಾರಕೂಡ 'ಮುತ್ಯಾ' ಅವರ ಮೇಲೆ ರಚಿಸಿದ ಹಾಡುಗಳಂತೂ ಅಪ್ರತಿಮವಾಗಿವೆ.

'ಹಾರಕೂಡ ಊರಾ ಚೆನ್ನಬಸವೇಶಾ' ಎಂಬುದು ಕವಿಯ ಹಾಡುಗಳಲ್ಲಿ ಬರುವ ಮುದ್ರಿಕೆಯಾಗಿದೆ. ಹಾರಕೂಡ ಮುತ್ಯಾ ಅವರು ಲಿಂಗೈಕ್ಯರಾದ ಮೇಲೆ ತನ್ನ ಊರಿಗೆ ಹಿಂತಿರುಗಿ ಅಲ್ಲಿಯೆ ಕಾಲಕಳೆದನು. ತೀರಿಕೊಂಡು ಈಗ ೧೧ ವರುಷಗಳಾಗಿರ ಬೇಕು. ಆಗ ಆತನಿಗೆ ೩೫ ವರುಷ. ಈತನ ಹಾಡುಗಳನ್ನು ಸ್ವತಃ ಕೇಳಿದ ಚಿತಾಪುರದ ಶ್ರೀ ಕಲ್ಲಪ್ಪಜ್ಜ ರೆಡ್ಡಿ ಅವರಿಂದ ಕೆಲ ಹಾಡುಗಳನ್ನು ಸಂಗ್ರಹಿಸಲಾಗಿದೆ.

"ಎಷ್ಟು ವರ್ಣಿಸಲಿ ಅಗಾಧ ಗುರುವಿನ ಲೀಲಾ । ಗುರುವಿನ ಲೀಲಾ ॥
ಅಂತರಂಗದೊಳಗ ಶಿವಲಿಂಗ ನೀರೊಳಗ । ಜ್ಯೋತಿ ಉರದ್ಹಾಂಗ ।
ನೀ ತಿಳಿದುಳಿಯೋ ಅಗಾಧ ಗುರುವಿನ ಲೀಲಾ ॥

ಬೋಧಿಸಿ ಪಾವನ ಮಾಡಿದ ಗುರು ಹಗಲಿರಳು ಭಜನಿ ಮಾಡುವರು ।
ನೀ ತಿಳಿಯೋ ಆತ್ಮನ ಖೂನ ತಪ್ಪಿಸಿಕೊಂಡ ತನ್ನ ಮರಣ ।
ಅವಗಿಲ್ಲೋ ಜನನ–ಮರಣ ।
ಧರಿಯೊಳು ಹಾರಕೂಡ ಊರ ಅಲ್ಲಿ ಹಾಸ ಗುರುಚೆನ್ನಬಸವೇಶಾ ।

೬೮ ಕಮಲಾನಗರದ ಶಿವರುದ್ರಪ್ಪ: (೧೯೩೨–)

ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಕಮಲಾನಗರಕ್ಕೆ ಮೊದಲಿನ ಹೆಸರು ಕಂವಟಗಿ ಎಂದಿದೆ. ಇಲ್ಲಿಯ ಶರಣಪ್ಪ ಮತ್ತು ರತನಮ್ಮರ ಪುತ್ರನೇ ಈ ಶಿವರುದ್ರಪ್ಪ ಕವಿ. ಕನ್ನಡ ೭ನೇ ಈಯತ್ತೆವರೆಗೆ ಕಲಿತ ಕವಿ–ಮರಾಠಿ, ಉರ್ದು ಭಾಷೆಗಳನ್ನೂ ಬಲ್ಲವ. ಅದೇ ಊರ ಗುರುಲಿಂಗಪ್ಪ ಖಾನಾಪುರ ಇವರ ಪ್ರಭಾವ ಬಿದ್ದು ಹಾಡಲು ಕಲಿತವನು. ಪೇಟಿ ಬಾರಿಸುವಲ್ಲೂ ಪಳಗಿದವ. ಸಣ್ಣಾಟಗಳಲ್ಲಿ ಪಾತ್ರ ಹಾಕಿದವ. ಸ್ವತಃ ಹಾಡುಗಳನ್ನು ಕಟ್ಟಿ ಊರೂರಿಗೆ ಭಜನಿ ಮೇಳದೊಂದಿಗೆ ಆಡ್ಯಾಡುವನು. ಸ್ಪರ್ಧೆಯೂ ನಡೆಯುವುದು.

ಬೆಣ್ಣೆತೊರೆ ಬದಿಗಿರುವ ಬಸವಣ್ಣ ದೇವರನ್ನು ತನ್ನ ಹಾಡುಗಳಲ್ಲಿ ಸ್ಮರಿಸಿದ್ದಾನೆ. ಈತನ ಹಾಡುಗಳು ನೂರಾರು: ತಾರಕಾಸುರವಧಾ. ವಿದ್ಯಾರ್ಥಿ. ಕಮಲದ ಹೂ. ಅದೇ ಊರ ಸಹಕಾರಿ ಸಂಘವೊಂದರಲ್ಲಿ ಸೆಕ್ರೆಟರಿ ಕೆಲಸಕ್ಕೆ ಸೇರಿದ್ದಾನೆ. ಗಂಡು ಹೆಚ್ಚೆಂದು ಹಾಡು ಹೇಳುತ್ತಾನೆ.

"ದೇಶದೊಳಗ ನಮ್ಮ ವಾಸುಳ್ಳ ಕಮಲಾನಗರ
ಬಸವನ ಮರಕೆಲ್ಲಾ ।" –ಎಂಬುದು ಮುದ್ರಿಕೆಯಾಗಿದೆ.

ಕಲಬುರಗಿಯ ಭವಾನಿರಾವ್ ಚವ್ಹಾಣ : (೧೯೩೫–)

ಕಲಬುರಗಿ ನಾಡು ಗೋಂಧಳಿಗರ ಕಥೆಗಳಿಂದ ಸಮೃದ್ಧವಾಗಿದೆ. ನರಸಿಂಗರಾವ ಗೋಂಧಳಿ ಈ ಭಾಗದಲ್ಲೆಲ್ಲ ಪ್ರಸಿದ್ಧಿಪಡೆದ ಹಾಡುಗಾರ. ಗೋಂಧಳಿ ಸಮಾಜದ ಈ ನರಸಿಂಗರಾವನ ಮಗ ಭವಾನಿರಾವ. ತಾಯಿ ದೇವಕಿಬಾಯಿ. ೧೯೩೫ರಲ್ಲಿ ಮೂರನೇ ಮಗುವಾಗಿ ಜನಿಸಿದ ಭವಾನಿರಾವನು ಚಿಕ್ಕಂದಿನಿಂದಲೇ ತಂದೆಯ ಜೊತೆಗೆ ಹಾಡಲು ಹೋಗುತ್ತಿದ್ದನು. ಮನೆಮಾತು ಮರಾಠಿಯಾದರೂ ಹಾಡುವ ಹಾಡುಗಳೆಲ್ಲ ಕನ್ನಡ. ಆಗಾಗ ಮರಾಠಿಯಲ್ಲೂ ಹಾಡುತ್ತಿದ್ದನು. ಕಲಿತಿದ್ದು ಮರಾಠಿ. ಹಾಡು ರಚಿಸುವುದು ಮಾತ್ರ ಕನ್ನಡದಲ್ಲಿ.

ಭವಾನಿ ಹಾಡುವ ಕಲೆಯನ್ನು ತಂದೆಯಿಂದಲೇ ಕಲಿತುಕೊಂಡಿರುವನು. ಹಾಡು ರಚಿಸುವ ಪ್ರೇರಣೆ ಮಾತ್ರ ಜಂಬಗಿ ಶರಣರಿಂದ ಎಂದು ಅಭಿಮಾನದಿಂದ ಹೇಳುತ್ತಾನೆ. ಮೊದ ಮೊದಲಿಗೆ ಗುರುವಿನ ಜೊತೆ ಸೇರಿಯೇ ಹಾಡು ರಚಿಸಿದ್ದಾನೆ.

ಭವಾನಿ ಸ್ಥಳೀಯ ಬಟ್ಟೆಗಿರಣಿಯೊಂದರಲ್ಲಿ ನವಕರಿ ಮಾಡುತ್ತಿದ್ದನು. ಅದು ಬಂದ್ ಆದುದರಿಂದ ಅತೀವ ಕಷ್ಟದ ದಿನಗಳನ್ನು ಕಳೆದನು. ಮಹಾದೇವಪ್ಪ ರಾಮಪುರೆ ಅವರು ಈತನ ಹಾಡುಗಾರಿಕೆಯನ್ನು ಕಂಡು ಬದುಕಿಸಿದರೆಂದು ಹೇಳುತ್ತಾನೆ. ಅವರ ಪುಣ್ಯದಿಂದಲೇ ವಾರ್ತಾ ಇಲಾಖೆಯಲ್ಲಿ ಸೇವೆ ಸಲ್ಲಿಸುವ ಭಾಗ್ಯ ಈತನಿಗೆ. ೪೨ ವರುಷದ ಭವಾನಿ ಅಣ್ಣ ಮಗನ ಜೊತೆಗೂಡಿ ಮೇಳ ಕಟ್ಟಿಕೊಂಡು ಹಾಡುತ್ತಾನೆ. ಅಲ್ಲಲ್ಲಿ ಹಾಡುಹಾಡುತ್ತ ಜನತೆಗೆ ಒಳ್ಳೆಯದರ ತಿಳುವಳಿಕೆ ಮಾಡಿಕೊಡುತ್ತ ಕಲೆಯ ಬೆನ್ನುಹತ್ತಿದ್ದಾನೆ. ಆದರೂ ಇದರಲ್ಲಿ ಸುಖವಿಲ್ಲವೆಂದು ನಿರಾಶೆಗೊಳ್ಳುವುದೂ ಉಂಟು. ಲಾವಣಿ, ಗೀಗೀ, ಭಜನೆ ಪದಗಳನ್ನು ರಚಿಸಿದ್ದಾನೆ. 'ಕಲಬುರ್ಗಿ ಭವಾನಿ ಜಂಬಗಿ ಶರಣನ ಶಿಷ್ಯ' ಎಂದು ಅಂಕಿತ ಇದೆ. ೧೯೭೨ರಲ್ಲಿ ಕವಿ ಕಟ್ಟಿ ಹಾಡಿದ ಬರಗಾಲದ ಲಾವಣಿ ಮೈನವಿರೇಳಿಸುವಂತಿತ್ತು.

"ದೇಶದೊಳು ನಡದ ಮಾತ । ನೋಡಿ ನಿಮ್ಮಗ ಹೇಳ್ತೀನು ।
ಈತನ ಮಹಿಮೆ ಮಹಾತ್ಮರೆ ಬಲ್ಲರು । ನಮಗ್ಯಾಂಗ ತಿಳದೀತು ।
ನಮ್ಮ ಕರ್ಮ ಧರ್ಮದ ಬೀಜ । ನಮ್ಮ ಕೈಯಲ್ಲಿ ಉಳಿದಿತ್ತು ।
ಸಧ್ಯ ಧರ್ಮಾಲಯಕ್ಕೆ ಹೋಗಿ । ಕರ್ಮದ ಬೆಳಿ ಬೆಳದಿತ್ತು ।
ಕಾಶಿ ತೀರ್ಥ ಮಾಡಿ ಬಂದದ್ದು । ದೇಶಕ್ಕೆಲ್ಲ ಹೇಳತೀನಿ ।
ಕೂಸಿನ ಕೊಲ್ಲೋದು । ಯಾರಿಗಿ ಹೇಳೋಲ್ರಿS ಈ ಮಾತ ಹಳಿದಾಯ್ತು
ಫಾಸಿ ಕೆಲ್ಸ ಮಾಡವ್ರ ಕತಿ ಕೇಳ್ರಿ ತಿಳದೀತುS…ಗೀ…ಗೀ" ।

"ಸಮತಾಭಾವನೆ ಬರುತನಕ ಬಡತನ ಎಂದಿಗೂ ಹೋಗಲಾರದು ।
ಸನ್ಮತಿ ಇರಲಿ ಹಾಡವ್ರ ಮೇಲೆ ಕೊಡಬಾರದ್ದು ದೋಷಾ ।
ಸರ್ವರು ಸಮಾನ ಇರಬೇಕೆಂಬೋದು ಮಹಾತ್ಮಾ ಗಾಂಧಿ ಅಭಿಲಾಷ ।
ಪ್ರಚಾರ ಮಾಡವ್ರ 'ಕಲ್ಬುರ್ಗಿ ಭವಾನಿ ಜಂಬಗಿ ಶರಣನ ಶಿಷ್ಯ ।"

೨೦ ಡಿಕ್ಸಂಗಿಯ ಸಿದ್ಧರಾಮ: (೧೯೪೧–)

ಡಿಕ್ಸಂಗಿ (ಬಿ) ಅಫಜಲಪುರ ತಾಲೂಕಿನ ಒಂದು ಹಳ್ಳಿ. ಇಲ್ಲಿಯ ಶರಣಪ್ಪ ಮತ್ತು ತಾರಾಬಾಯಿಯವರ ಮಗನೇ ಈ ಸಿದ್ಧರಾಮ. ಪೋಲಿಸ ಪಾಟೀಲರ ಮನೆತನ. ಓದಿದ್ದು ತಾಂತ್ರಿಕ ಅಭ್ಯಾಸ. ಬಿ. ಇ. ಪದವೀಧರ. ಈಗ ರಾಯಚೂರ ಜಿಲ್ಲೆಯ ಯರಮರಸ್ ಕ್ಯಾಂಪಿನಲ್ಲಿ ಸರಕಾರಿ ಸೇವೆ. ಚಿಕ್ಕಂದಿನಿಂದಲೂ ಸಿದ್ಧರಾಮರಿಗೆ ಬರೆಯುವ ಗೀಳು. ಲಿಂಗಪ್ಪ ಬನ್ನೂರ ಮಾಸ್ತರರ ಪ್ರಭಾವ ಇವರ ಮೇಲಾಗಿ ಗುರುವಿನ ಹಾಗೆಯೇ ಬರೆಯಲು ಪ್ರಾರಂಭಿಸಿದ್ದರು.

ಇವನು ನೂರಾರು ಭಜನಿ ಹಾಡು, ಲಾವಣಿ, ಗೀಗೀ, .ಲಾಲಾ ಪದಗಳನ್ನೂ, ಹಂತಿ ಹಾಡುಗಳನ್ನೂ ರಚಿಸಿದ್ದಾನೆ. ಅಲ್ಲದೆ ಶಿಷ್ಟ–ಸಾಹಿತ್ಯದಲ್ಲಿಯೂ ಇವನದು ಕೃಷಿ. ಸರ್ವಜ್ಞನ ವಚನಗಳಂತೆಯೇ ತ್ರಿಪದಿಯಲ್ಲಿ ಸತ್ಯಜ್ಞನ ವಚನಗಳನ್ನು ಬರೆದಿದ್ದಾನೆ. ಹಲವಾರು ಜನರ ವ್ಯಕ್ತಿ ಚಿತ್ರಗಳನ್ನು, ಕಾದಂಬರಿ ಹಾಗೂ ಸಣ್ಣಕಥೆಗಳನ್ನು ರಚಿಸಿದ್ದಾನೆ. ಆಧ್ಯಾತ್ಮದತ್ತ ಒಲವು ಉಳ್ಳ ಕವಿಗೆ ಜನಪದ ಹಾಡು ಸೃಷ್ಟಿಸುವಲ್ಲಿ ಆಸಕ್ತಿ. ಇವನ ಭಜನೆಯ ಹಾಡುಗಳನ್ನು ಈಗಲೂ ಭಜನೆ ಮೇಳದವರು ಹಾಡುತ್ತಾರೆ. 'ಕಾಡಸಿದ್ಧೇಶ' ಎಂಬುದು ಕವಿಯ ಅಂಕಿತವಾಗಿದೆ. ಜ್ಯೋತಿಷ ಶಾಸ್ತ್ರ ಬಲ್ಲವ, ಜಾದೂ ಕಲೆಗಿಟ್ಟಿಸಿಕೊಂಡವ, ಆಯುರ್ವೇದ ಶಾಸ್ತ್ರದಲ್ಲೂ ಬಲ್ಲಿದ, ಬಡಬಗ್ಗರಿಗ ಪುಕ್ಕಟೆ ಔಷಧ ಕೊಟ್ಟು ಉಪಚಾರ ಮಾಡುವ ವಿಶಾಲ ಹೃದಯಿ. ಅಷ್ಟೇ ಪ್ರಾಮಾಣಿಕ, ಸಾತ್ವಿಕ ಜೀವನ ನಿರ್ವಾಹಕ.

ಲಾಲಾ ಪದ :

"ಭಕ್ತಿಯ ಕಥೆಯೊಂದ ಸಿಸ್ತೀಲಿ ಹೇಳ್ತೀನಿ ।
ಕೇಳ್ರಿ ಕುಂತ ಜನಾ ಚಿತ್ತಯಿಟ್ಟು ।
ಕೇಳ್ರಿ ಜನರೆಲ್ಲಾ ಲಾ–ಲಾ–ಲಾ ॥ ೧ ॥

ದುಷ್ಟ ಬುದ್ಧಿ ಬಿಟ್ಟು ಈಶನ ಸ್ಮರಿಸುತ
ಕಷ್ಟ ಪಡಬೇಕಲ್ಲಾ ಕೆಲಸದಿ
ಕಷ್ಟ ಪಡಬೇಕಲ್ಲ ಲಾ–ಲಾ–ಲಾ ॥ ೨ ॥

ಶ್ರದ್ಧೆಯಿಂದ ಅವರುದ್ಧಾರ ಮಾಡಲು
ಬುದ್ಧಿ ಹೇಳ್ಯಾರಲ್ಲಾ ಅಬದ್ಧರಿಗೆ
ಬುದ್ಧಿ ಹೇಳ್ಯಾರಲ್ಲಾ ಲಾ–ಲಾ–ಲಾ ॥ ೩ ॥

ಶುದ್ಧ ಮನದಿ ಕಾಡಸಿದ್ಧನ ಸ್ಮರಿಸುತ
ಮುಕ್ತಿ ಪಡೆಯರೆಲ್ಲಾ ನೀವು ।
ಮುಕ್ತಿ ಪಡೆಯರಿ ಎಲ್ಲಾ ಲಾ–ಲಾ–ಲಾ ॥ ೪ ॥

ಹಂತಿ ಹಾಡು :

ಹಳ್ಳಿಗಳು ಎಂದರೆ ಹಾಳು ಸ್ಥಳಗಳು ಅಲ್ಲ ।
ಹಾಳು ಬಿದ್ದಿಹ ಹೊಲವಲ್ಲೋ । ಹಳ್ಳಿಗಳು
ದೇಶದೇಳಿಗೆಯ ತಳಪಾಯೊ ॥ ॥ ೧ ॥

ಭಾರತ ಸರ್ಕಾರ ತರತರದಿ ಯೋಜನದಿ ।
ತರುತಿದೆ ಕಾರ್ಯಕೃತಿಯಲ್ಲಿ । ಬೇಸಾಯ
ಹಿರಿಯ ಉದ್ಯೋಗ ಮಾಡುದಕೊ ॥ ॥ ೨ ॥

ಸತ್ಯಜ್ಞನ ವಚನ:

ಪೇರ್‌ಕಟ್ ಬುಶ್‌ಶರ್ಟು ಟೆರಿಕಾಟ್ ಫಿಟಪ್ಯಾಂಟು ।
ನಾರಿ ಎಂದ್ಯಾರು ಅನಬೇಕ । ಗಂಡ ತಾ
ಸೀರಿ ಉಡಬೇಕ । ಸತ್ಯಜ್ಞ ॥ ॥ ೧ ॥

ಕೂಲಿ ಕೆಲಸವು ಸಿಗದೆ ಬಾಳುವುದು ಬಿಗಿಯಾಗಿ ।
ಕೂಳಿಲ್ದೆ ಹಸಿದು ಕಂಗೆಟ್ಟು ಹೆಂಗಸರ
ತಾಳಿ ಮಾರಿದರು । ಸತ್ಯಜ್ಞ ॥ ॥ ೨ ॥

● ●

(ಮುಂದುವರಿಯುವುದು)

ವಡಗಾಂವ್-ಮಾಧವಪುರ ಉತ್ಖನನ : ಇತರ ಕೆಲವು ಮುಖ್ಯ ಶೋಧನೆಗಳು

● ಅ. ಸುಂದರ

ಈಗಾಗಲೇ ಇದೇ ತ್ರೈಮಾಸಿಕ ವಿದ್ವತ್ಪತ್ರಿಕೆ[೧]ಯಲ್ಲಿ ವಡಗಾಂವ್–ಮಾಧವಪುರ (ಬೆಳಗಾಂವ್ ಹೊರವಲಯ) ದಲ್ಲಿ ಪ್ರಾಚೀನ ನೆಲೆಯ ಶೋಧನೆ. ಅದರ ಉತ್ಖನನದ ಅವಶ್ಯಕತೆ ಉದ್ದೇಶಗಳು, ಈ ವಿಶ್ವವಿದ್ಯಾಲಯದ ಪ್ರಾಚೀನ ಭಾರತ ಇತಿಹಾಸ–ಶಾಸನ ವಿಜ್ಞಾನ ವಿಭಾಗವು ಮತ್ತು ಕನ್ನಡ ಸಂಶೋಧನೆ ಸಂಸ್ಥೆಯು ೧೯೭೨–೭೩ರ ವರೆಗೆ ನಡೆಸಿದ ಉತ್ಖನನಗಳಿಂದ ತಿಳಿದು ಬಂದ ಮುಖ್ಯ ಶೋಧನೆಗಳು ಮತ್ತು ಅವುಗಳ ಮಹತ್ವ: ಇವುಗಳ ಬಗ್ಗೆ ಒಂದು ಲೇಖನವನ್ನು ಪ್ರಕಟಿಸಲಾಗಿದೆಯಷ್ಟೆ. ಉತ್ಖನನವನ್ನು ಈ ವರ್ಷ ಏಪ್ರಿಲ್–ಮೇ ತಿಂಗಳಲ್ಲಿ ಮತ್ತೆ ಈ ವಿಭಾಗವು ಮತ್ತು ಸಂಸ್ಥೆಯು ನನ್ನ ನಿರ್ದೇಶನದಲ್ಲಿ[೨] ಮುಂದುವರೆಸಿದವು. ಈ ಉತ್ಖನನದ ಕೆಲವು ಮುಖ್ಯ ಶೋಧನೆಗಳನ್ನು ಮತ್ತು ಇದುವರೆಗೆ ಬೆಳಕಿಗೆ ಬಂದ ಕೆಲವು ಮುಖ್ಯ ನಿರ್ಮಿತಿಗಳೇ ಮೊದಲಾದವುಗಳ ವಿವರಣೆಯನ್ನು ಮತ್ತು ಮಹತ್ವವನ್ನು ಈ ಲೇಖನದಲ್ಲಿ ವಿವೇಚಿಸಲಾಗಿದೆ.


ಈ ನೆಲೆಯು ಸುಮಾರು ೧೫ ಹೆಕ್ಟೇರಿನಷ್ಟು ವಿಶಾಲವಾದ ಬಯಲು. ಇದರ ದಕ್ಷಿಣ ಭಾಗವು ಅತ್ಯಂತ (ಸು. ಸ.[೩] ಮ. ದಿಂದ ೭೫೦ ಮಿ) ಎತ್ತರ. ಒಡೆದೆದ್ದು ಕಾಣುತ್ತದೆ. ಈ ಭಾಗದ ಮಧ್ಯದಲ್ಲಿ ಮಾವಿನ ತೋಪು. ನೆಲೆಯ ಉತ್ತರ ಭಾಗವು ತಗ್ಗು (ಸು. ಸ. ಮ. ದಿಂದ ೭೪೭ ಮಿ.). ಶೋಧನೆಗಳ ಅಭ್ಯಾಸದ ಅನುಕೂಲಕ್ಕೋಸ್ಕರ ಮಾವಿನ ತೋಪಿನ ದಕ್ಷಿಣ ಮತ್ತು ಪಶ್ಚಿಮಕ್ಕಿರುವ ಭಾಗವನ್ನು ಭಾಗ–೧, ಉತ್ತರ ಮತ್ತು ಈಶಾನ್ಯಕ್ಕಿರುವುದನ್ನು ಭಾಗ–೨ ಮತ್ತು ತಗ್ಗಿನ ಭಾಗವನ್ನು ಭಾಗ–೩ ಎಂದು ಗುರುತಿಸಿ ಪ್ರತಿಯೊಂದು ಭಾಗದಲ್ಲೂ ತೆಗೆದ ಗುಂಡಿಗಳಿಗೆ ಪ್ರತ್ಯೇಕ ಅನುಕ್ರಮ ಸಂಖ್ಯೆಗಳನ್ನು ಕೊಡಲಾಗಿದೆ. ಭಾಗ–೧ರಲ್ಲಿ ಅದರಲ್ಲೂ ಮಾವಿನ ತೋಪಿನ ಉತ್ತರ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಹಾಳುಮಣ್ಣು ಅತ್ಯಂತ ಹೆಚ್ಚಾಗಿದೆ. ಮೇಲಿನಿಂದ ಕೆಳಗಿನ ನೈಸರ್ಗಿಕ ಮಣ್ಣಿನ ಪದರದವರೆಗಿನ ಹಾಳುಮಣ್ಣು ಸುಮಾರು ೪–೪½

ಮಿ. ಆಳವಿದ್ದು ಅದರಲ್ಲಿ ೯ ಪದರುಗಳನ್ನು ಗುರುತಿಸಲಾಗಿದೆ. ಈ ಪದರುಗಳನ್ನು ಮೂರು ಹಂತಗಳಾಗಿ ವಿಂಗಡಿಸಲಾಗಿದೆ. ಭಾಗ–೩ರಲ್ಲಿ ನೈಸರ್ಗಿಕ ಗರಸು ಮಣ್ಣಿನ ಪದರಿನ ಮೇಲೆ ಭಾಗ–೧. ೨ರಲ್ಲಿರುವ ಕೊನೆಯ ಹಂತಕ್ಕೆ ಸಾಂಸ್ಕೃತಿಕವಾಗಿ ಕಾಲ ಮಾನದಿಂದ ಸರಿಹೋಲುವಂಥ ಹಾಳುಮಣ್ಣಿನ ಹಂತ ಮಾತ್ರ ಇದೆ. ಅಂದರೆ ಶುರುವಿನಲ್ಲಿ ಕ್ರಿ. ಪೂ. ೩ನೇ ಶತಮಾನದಿಂದ ಭಾಗ–೧, ೨ ರಲ್ಲಿ ಜನವಸತಿ ಆರಂಭ ವಾಗಿ ಸುಮಾರು ೧–೧½ ಶತಮಾನದ ನಂತರ ಜನವಸತಿಯ ಸಾಂದ್ರತೆ ಮತ್ತು ಬೆಳವಣಿಗೆ ಹೆಚ್ಚಾಗುತ್ತಾ ಬಂದಾಗ ಮತ್ತು ನಾಗರಿಕತೆ ಬೆಳೆದಾಗ ಭಾಗ–೩ರಲ್ಲಿ ಜನವಸತಿ ಪ್ರಾರಂಭವಾಯಿತು ಎನ್ನಬಹುದು. ಆದ್ದರಿಂದಲೆ ಭಾಗ–೨. ೨ ಸ್ಫುಟ ವಾಗಿ ಎತ್ತರವಾಗಿವೆ.

ಭಾಗ–೩ರ ಮಧ್ಯದಲ್ಲಿ ಪೂರ್ವಪಶ್ಚಿಮಾಭಿಮುಖವಾಗಿ ಮಾಧವಪುರ–ವಡ ಗಾಂವ್ ಅಸ್‌ಫಾಲ್ಟ್ ರಸ್ತೆಯಿದೆ. ಇದರ ಎಡಬದಿಗೆ ಒಂದು ತಗ್ಗಿನಲ್ಲಿ ಸುಮಾರು ೫ ಮೀ ೦.೫೦–೧.೦೦ ದಷ್ಟು ಉದ್ದಗಲದ ಗಚ್ಚಿನಂತೆ ಕಾಣುವ ಗಟ್ಟಿಯಾಗಿ ಬಡಿದು ಮಾಡಿದ ಗರಸು ಮಣ್ಣು ಮತ್ತು ಸಣ್ಣ ಸಣ್ಣ ಗುಂಡುಗಳ ಮಿಶ್ರಣದ ನೆಲವು ಕಾಣಿ ಸುತ್ತಿತ್ತು. ಇದು ಪೂರ್ವ–ಪಶ್ಚಿಮಾಭಿಮುಖವಾಗಿದ್ದು ಎರಡು ಬದಿಗಳಲ್ಲಿ ಕಾಲಾಂತರದಲ್ಲಿ ಅಗೆದದ್ದರಿಂದ ಮೊದಲು ಇನ್ನು ಅಗಲವಾಗಿದ್ದ ಈ ನೆಲವು ಈಗಿನ ಅಗಲಕ್ಕೆ ಅಡ್ಡಾದಿಡ್ಡಿಯಾಗಿ ಉಳಿದಿದೆ. ನೆಲದ ಒಂದು ಬದಿಯಲ್ಲಿ ಒಂದರ ಮೇಲೊಂದರಂತೆ ೫–೬ ನೆಲದ ಪದರುಗಳು ಕಾಣಿಸುತ್ತಿವೆ. ಅಂದರೆ ಕಾಲಕಾಲಕ್ಕೂ ಮೊದಲಿನ ನೆಲದ ಮೇಲೆ ಮೇಲಿಂದ ಮೇಲೆ ಮಣ್ಣಿನ ಮಿಶ್ರಣವನ್ನು ಹಾಕಿ ದಮ್ಮಸ್ಸು ಮಾಡಿದ್ದರಿಂದ ಈ ರೀತಿ ಪದರುಗಳಾಗಿವೆಯೆಂಬುದು ಸ್ಪಷ್ಟವಾಗಿದೆ. ಪ್ರಾಯಶಃ ಒಂದು ದೊಡ್ಡ ವಿಶಾಲವಾದ ಕಟ್ಟಡ ನೆಲವೇ ಆಗಿದ್ದಿರಬಹುದೆಂದು ಭಾವಿಸಿ ಇದರ ವಿಸ್ತಾರ ಮತ್ತು ಕಟ್ಟಡದ ಭಾಗಗಳನ್ನು ಶೋಧಿಸಲು ಹೋದ ವರ್ಷ ಇದರ ಉದ್ದಕ್ಕೂ ಸುಮಾರು ೪೦ ಮಿ.×೯ ಮಿ. ಅಗಲದ ಒಂದು ಗುಂಡಿಯನ್ನು (ಗುಂಡಿ–೨) ತೋಡ ಲಾಯಿತು. ಸುಮಾರು ೨೦–೬೦ ಸೆ. ಮಿ. ಆಳದಲ್ಲಿ ಗುಂಡಿಯ ಉದ್ದಗಲಕೂ. ಈ ನೆಲವಿದ್ದದ್ದು ಕಂಡು ಬಂತು. ನೆಲದ ಅಗಲ ಅಲ್ಲಲ್ಲಿ ಸ್ವಲ್ಪ ಹೆಚ್ಚು ಕಡಿಮೆ ೭ ಮಿ. ಇದರ ಮೇಲಿದ್ದ ಮಣ್ಣಿನಲ್ಲಿ ೧–೨ನೇ ಶತಮಾನದ ಅಲ್ಪ ಪ್ರಮಾಣದಲ್ಲಿ ಮೃತ್ ಪಾತ್ರೆಯ ಅವಶೇಷಗಳಲ್ಲದೆ. ಒಂದೇ ವಿಧದ ಸುಮಾರು ೫೨ ತುಕ್ಕುಹಿಡಿದ ತಾಮ್ರದ ನಾಣ್ಯಗಳು. ಹಾರಗಳಲ್ಲಿ ಪೋಣಿಸಿದ್ದ ವಿವಿಧ ಆಕಾರಗಳ ಬೇರ ಬೇರೆ ತರಹದ ಉತ್ತಮ ಜಾತಿಯ ಕಲ್ಲುಗಳ ಮತ್ತು ಮಣ್ಣಿನ ಮಣಿಗಳು, ದಂತದ ಪಗಡೆ ದಾಳಗಳು ದೊರೆ ತವು. ನೆಲವು ಎರಡು ದಿಕ್ಕುಗಳಲ್ಲೂ ಇನ್ನೂ ಇರುವುದಾಗಿ ತೋರಿತು. ನೆಲದ ಈಶಾನ್ಯ ದಿಕ್ಕಿಗೆ ಸಮೀಪದ ಮತ್ತೊಂದು ಗುಂಡಿ (–೪) ಒಂದು ಇಟ್ಟಿಗೆ ಕೊಠಡಿಯ ಹಿಂಭಾಗವು ದೊರಕಿತು. ನೆಲದ ಪೂರ್ವದ ತುದಿಯ ಕಡೆ, ನೆಲವು ಸ್ವಲ್ಪ ಕಡಿ

ದಾಗಿದ್ದು ಎತ್ತರದಲ್ಲಿದೆ. ಈ ಕಡಿದಾದ ಭಾಗದಲ್ಲಿ ತೋಡಿದ ಮತ್ತೊಂದು ಗುಂಡಿ (– 2) ಯಲ್ಲಿ ಮೇಲಿಂದ ಸುಮಾರು ೪೦ ಸೆಂ. ಮಿ. ಆಳದಲ್ಲಿ ಒಂದು ಸಣ್ಣ ಇಟ್ಟಿಗೆ ಕಟ್ಟಡದ ಒಂದು ಸಾಲು ಇಟ್ಟಿಗೆ ಗೋಡೆಯ ಭಾಗವಿತ್ತು. ಇದರಿಂದ ಸುಮಾರು ೫೦ ಸೆಂ. ಮಿ. ಕೆಳಗೆ ನೆಲವಿದೆ.

ಈ ವರ್ಷ ೪ನೇ ಗುಂಡಿಯಲ್ಲಿ ದೊರೆತ ಕೊಠಡಿಯ ಹಿಂಭಾಗವನ್ನು ಲಕ್ಷ್ಯದಲ್ಲಿಟ್ಟುಕೊಂಡು ಅದನ್ನು ಪೂರ್ತಿಯಾಗಿ ಶೋಧಿಸಬೇಕೆಂದು ಆ ಗುಂಡಿಯನ್ನು ವಿಸ್ತರಿಸಲಾಯಿತು. ಉತ್ಖನನವು ನಡೆಯುತ್ತಿದ್ದ ಸಮಯದಲ್ಲಿ ಮಾಧವಪುರದ ಭಾಗದ ಈ ಪ್ರಾಚೀನ ನೆಲೆಯಲ್ಲಿ ಮತ್ತೆಲ್ಲಿಯಾದರು ಇಟ್ಟಿಗೆ ಕಟ್ಟಡದ ಭಾಗಗಳು ಜನರು ತೆಗೆದ ತಿಪ್ಪೆಗುಂಡಿಗಳಲ್ಲಿ ಕಂಡುಬಂದಿರಬಹುದೆ ಎಂಬುದನ್ನು ನಾನು ಮತ್ತು ನನ್ನ ಸಹೋದ್ಯೋಗಿ ಶ್ರೀ ಶಂಕರ ಚೌಗುಲೆ ನೆಲೆಯ ಪೂರ್ವ ಬದಿಗಿರುವ ಮಾಧವಪುರದಲ್ಲಿ ಪರೀಕ್ಷಿಸುತ್ತಿದ್ದಾಗ ಒಂದೆರಡು ತಿಪ್ಪೆಗುಂಡಿಗಳಲ್ಲಿ ಮೇಲೆ ಹೇಳಿದ ತರಹದ ಪದರು ಪದರುಗಳುಳ್ಳ ನೆಲದ ಭಾಗಗಳಿರುವುದನ್ನು ಶ್ರೀ ಚೌಗುಲೆಯವರು ನೋಡಿ ಅವುಗಳೆಡೆಗೆ ನನ್ನ ಗಮನವನ್ನು ಸೆಳೆದರು. ಇವು ನನ್ನ ಕುತೂಹಲ ಕೆರಳಿಸಿತು. ಹೆಚ್ಚುಕಡಿಮೆ ಒಂದೇ ಸಾಲಿನಲ್ಲಿರುವ ಉಳಿದ ತಿಪ್ಪೆಗುಂಡಿಗಳನ್ನು ಪರೀಕ್ಷಿಸಿದೆವು. ಮುಂದೆ ಮಾಧವಪುರದ ಪೂರ್ವಬದಿಗಿರುವ ಉತ್ತರ–ದಕ್ಷಿಣಾಭಿಮುಖವಾಗಿರುವ ಅಸ್‌ಫಾಲ್ಟ್ ರಸ್ತೆಯವರೆಗಿನ ತಿಪ್ಪೆಗುಂಡಿಗಳ ಸಾಲು ಹೋದ ವರ್ಷ ೩ನೇ ಗುಂಡಿಯಲ್ಲಿ ಹೊರತೆಗೆದ ೪೦ ಮಿ. ಉದ್ದದ ನೆಲವು ಹೆಚ್ಚು ಕಡಿಮೆ ಒಂದೇ ಅಕ್ಷರೇಖೆಯಲ್ಲಿದ್ದವು. ೪ನೇ ಗುಂಡಿಯಿಂದ ಸುಮಾರು ೧೩೦ ಮಿ. ಅಂತರದಲ್ಲಿ ಈ ತಿಪ್ಪೆಗುಂಡಿಗಳ ಸಾಲು ಇದೆ. ರಸ್ತೆಯವರೆಗಿನ ತಿಪ್ಪೆಗುಂಡಿಗಳ ಸಾಲು ಸುಮಾರು ೧೦೦ ಮಿ. ಉದ್ದವಿದೆ. ಅಂದರೆ ಒಟ್ಟಿನಲ್ಲಿ ಅಲ್ಲಲ್ಲಿ ಕಂಡು ಬಂದಂತೆ ಈ ನೆಲದ ಉದ್ದ ಸುಮಾರು ೨೭೦ ಮಿ.ನಷ್ಟು ದೊರಕಿದಂತಾಯಿತು. ಹೀಗಿರುವಾಗ ಈ ನೆಲವು ಒಂದು ದೊಡ್ಡ ಕಟ್ಟಡದ್ದಾಗಿರದೆ ಬೀದಿಯೋ ಆಗಿರಬೇಕೆಂಬ ಸಂಶಯವುಂಟಾಯಿತು. ಆದ್ದರಿಂದ ಇದು ನಿಜವಾಗಿ ಏನಾಗಿದ್ದಿತ್ತು ಮತ್ತು ಯಾವ ಕಾಲದ್ದು ಎಂದು ತಿಳಿಯುವುದಕ್ಕೋಸ್ಕರ ಈ ನೆಲದ ಅಕ್ಷರೇಖೆಯ ಮೇಲೆ ಹೋದ ವರ್ಷದ ೫ನೇ ಗುಂಡಿಗೆ ಸೇರಿದ ಹಾಗೆ ೧ ಮಿ. ಅಂತರ ಬಿಟ್ಟು ಮತ್ತೊಂದು ಗುಂಡಿಯನ್ನು ಇಲ್ಲಿಂದ ಸುಮಾರು ೧೦೦ ಮಿ. ಅಂತರದಲ್ಲಿ ಒಂದು ಗುಂಡಿಯನ್ನು (೬) ಮತ್ತು ೧೦–೧೨ ಮಿ. ಅಂತರದಲ್ಲಿ ಮತ್ತೊಂದು ಗುಂಡಿಯನ್ನು (೭) ಮುಂದೆ ೫ ಮಿ. ಅಂತರದಲ್ಲಿ ತಿಪ್ಪೆಗುಂಡಿಯ ತನಕ ಒಂದು ಗುಂಡಿ (೮) ಯನ್ನು ಅಗೆಯಲಾಯಿತು. ೩ನೇ ಗುಂಡಿಯ ಪಶ್ಚಿಮದ ತುದಿಯಿಂದ ಆ ಗುಂಡಿಯನ್ನು ಆ ಕಡೆಗೆ ೧೦ ಮಿ. ವಿಸ್ತರಿಸಲಾಯಿತು. ಈಗ ಉತ್ಖನನಗಳಲ್ಲಿ ತೋರಿಬಂದ ಅಂಶಗಳನ್ನು ಮತ್ತು ದೊರೆತ ಅವಶೇಷಗಳ ವೈವಿಧ್ಯ, ಮಹತ್ವವನ್ನು ತಿಳಿಯುವ.



ಚಿತ್ರ ೧ ವಡಗಾಂವ್-ಮಾಧವಪುರ : ೧-೨ನೇ ಶತಮಾನದ ಇಟ್ಟಿಗೆ ಕಟ್ಟಡಗಳು.

ಸಾರ್ವಜನಿಕ ಬೀದಿ (? ಚಿತ್ರ 1:೧)

ಇವೆಲ್ಲ ಗುಂಡಿಗಳಲ್ಲೂ ಒಂದೇರೀತಿಯ ಪದರುಗಳುಳ್ಳ ಅಗಲವಾದ ಗಟ್ಟಿ ನೆಲವು ಸಿಕ್ಕಿತ್ತು. ೭ನೆಯ ಗುಂಡಿಯಲ್ಲಿ ೫೦ ಸೆಂ. ಮಿ. ಕೆಳಗೆ ಈ ಗಟ್ಟಿ ನೆಲವಿದ್ದರೆ ೫ನೇ ಗುಂಡಿಯಲ್ಲಿ ಸುಮಾರು ೧ ಮೀ. ಕೆಳಗಿನಷ್ಟು ಅಂತರದಲ್ಲಿ ಮತ್ತೊಂದು ತುದಿಯಲ್ಲಿ ತಗ್ಗಿನಲ್ಲಿರುವ ೩ನೇ ಗುಂಡಿಯಲ್ಲಿ ೫೦ ಸೆಂ. ಮಿ. ಕೆಳಗೆ ಈ ತರಹದ ನೆಲವಿದೆ. ಆದ್ದರಿಂದ ಇದು ಸಾವಕಾಶವಾಗಿ ಪಶ್ಚಿಮದ ಕಡೆಗೆ ಇಳಿಜಾರಾಗಿದೆ. ಎರಡನೆಯದಾಗಿ ೩. ೭ ಮತ್ತು ೮ನೇ ಗುಂಡಿಗಳಲ್ಲಿ ನಾಲ್ಕೈದು ಪದರುಗಳಿದ್ದವು. ಆದರೆ ೫ ಮತ್ತು ೭ನೇ ಗುಂಡಿಗಳಲ್ಲಿ ೨–೩ ಪದರುಗಳಿದ್ದವು. ೩ನೇ ಗುಂಡಿಯ ನೆಲದ ಒಂದು ತಡೆ ದಕ್ಷಿಣ ಬದಿಯಲ್ಲಿ ಇಟ್ಟಿಗೆ ಕಟ್ಟಡದ ಗೋಡೆಯ ಒಂದು ಭಾಗವು ಇದ್ದಿತ್ತು. ಇದರ ಸಮೀಪದಲ್ಲಿಯೇ ದಕ್ಷಿಣಕ್ಕೆ ೧೯೭೩ರ ಉತ್ಖನನದ ಒಂದು ಗುಂಡಿ (೧) ಯಲ್ಲಿ ಇಟ್ಟಿಗೆ ಕಟ್ಟಡದ ಎರಡು ಕೋಣೆಗಳ ಗೋಡೆಗಳ ಭಾಗಗಳು ಸಿಕ್ಕಿದ್ದವು. ಪ್ರಾಯಶಃ ಇವೆಲ್ಲವು ಒಂದೇ ಕಟ್ಟಡದ್ದೆನ್ನುವ ಹಾಗಿದೆ. ಈ ಗೋಡೆಯಿಂದ ಪೂರ್ವಕ್ಕೆ ನೆಲದ ಎರಡು ಬದಿಗಳಲ್ಲೂ ಕಟ್ಟಡಗಳ ಮಾಡಿನ ಹಂಚುಗಳ ಚೂರುಗಳು ಉದ್ದಕ್ಕೂ ಬಿದ್ದಿದ್ದವು. ಆದರೆ ಕಟ್ಟಡಗಳ ಅವಶೇಷಗಳೇನೂ ಇರಲಿಲ್ಲ. ಕಾರಣ ಈ ಎರಡು ಬದಿಗಳಲ್ಲೂ ಆಗಲೇ ಹಿಂದೆಯೇ ಸ್ಥಳಿಕರು ದೊಡ್ಡ ದೊಡ್ಡ ಗುಂಡಿಗಳನ್ನು ಅಗೆದದ್ದರಿಂದ ಕಟ್ಟಡದ ಅವಶೇಷಗಳೂ ಅಳಿಸಿಹೋಗಿರಬೇಕು. ದೊಡ್ಡದಾದ ೪ನೇ ಗುಂಡಿಯಲ್ಲಿ ಹೋದ ವರ್ಷ ದೊರೆತ ಕೊಠಡಿಯ ಒಂದು ಭಾಗವು ಒಂದು ದೊಡ್ಡ ಕಟ್ಟಡದ್ದೆಂದು ಗೊತ್ತಾದುದಲ್ಲದೆ ಅದರ ದಕ್ಷಿಣ ಬದಿಯಲ್ಲಿ ಮತ್ತೊಂದು ಕಟ್ಟಡವು ಇತ್ತು. ೭ನೆ ಗುಂಡಿಯ ನೆಲದ ದಕ್ಷಿಣ ಬದಿಗೆ ಒಂದು ಕಟ್ಟಡದ ಗೋಡೆಯ ಭಾಗವು ಸಿಕ್ಕಿತು. ೮ನೇ ಗುಂಡಿಯ ಮುಂದೆ ಇದ್ದ ತಿಪ್ಪೆಗುಂಡಿಯ ಮುಂದಿನ ಮತ್ತೊಂದು ತಿಪ್ಪೆಗುಂಡಿಯಲ್ಲಿ ಪದರುಗಳುಳ್ಳ ಗಟ್ಟಿ ನೆಲವಿದ್ದು ಅದರ ದಕ್ಷಿಣ ಬದಿಯಲ್ಲಿ ಒಂದು ಕಟ್ಟಡದ ಭಗ್ನಾವಶೇಷಗಳಿವೆ. ಎರಡನೆಯದಾಗಿ ಪರೀಕ್ಷಿಸಿದ ಈ ಎಲ್ಲ ಗುಂಡಿಗಳಲ್ಲಿ ಎಲ್ಲಿಯೂ ಗಟ್ಟಿನೆಲದ ಕೆಳಗೆ ಅಥವಾ ಮೇಲೆ ಇದೇ ಸಂಸ್ಕೃತಿಯ ಅನಂತರ ಕಾಲದ ಕಟ್ಟಡಗಳ ಅವಶೇಷಗಳಿರಲಿಲ್ಲ. ಮೂರನೆಯದಾಗಿ ಈ ನೆಲದ ಮೇಲೆ ಮೃತ್ ಪಾತ್ರೆಗಳ ಅವಶೇಷಗಳ ಪ್ರಮಾಣದಲ್ಲಿ ಕಡಿಮೆ ಇದ್ದು ಸಂಗಳ ಮಣಿಗಳು ಪಗಡೆ ದಾಳಗಳು ಮಣ್ಣಿನ ಗೊಂಬೆಗಳು ಮತ್ತು ತಾಮ್ರದ ನಾಣ್ಯಗಳು ಹೆಚ್ಚಾಗಿ ಸಿಕ್ಕವು. ಆದ್ದರಿಂದ ಗಚ್ಚಿನ ಹಾಗೆ ಗಟ್ಟಿಯಾಗಿರುವ ಪದರುಗಳುಳ್ಳ ನೆಲದ ಭಾಗಗಳು ಒಂದೇ ಅಕ್ಷರೇಖೆಯಲ್ಲಿದ್ದು ಸುಮಾರು ½ ಕಿ. ಮಿ. ದೂರದಷ್ಟು ಇದುವರೆಗೂ ಬೆಳಕಿಗೆ ಬಂದಿದ್ದು ಇದರ ಎರಡು ಬದಿಗಳಲ್ಲಿ ಕಟ್ಟಡಗಳ ಅವಶೇಷಗಳು, ಮಾಡಿನ ಹಂಚುಗಳು ಇದ್ದುದರಿಂದ ಇವು ನಗರದ ಒಂದು ಪ್ರಮುಖ ಬೀದಿಯೇ ಆಗಿರಬೇಕು. ಈ ಬೀದಿಯನ್ನು ಆಗಾಗ್ಗೆ ಸರಿಪಡಿಸುತ್ತಿದ್ದರಿಂದ ಇದರಲ್ಲಿ ಒಂದರ

ಮೇಲೆ ಒಂದರಂತೆ ಪದರುಗಳಿವೆ. ಈಗ ತಿಳಿದಿರುವಷ್ಟು ಬೀದಿಯ ಭಾಗದ ಎದುರು ಬದರು ತುದಿಗಳಲ್ಲಿರುವ ೩ನೇ ಮತ್ತು ೮ನೇ ಗುಂಡಿಗಳಲ್ಲಿ ಈ ಬೀದಿಯಲ್ಲಿ ೫–೬ ಪದರುಗಳಿದ್ದರೆ ಇವೆರಡರ ನಡುವೆ ೮ನೇ ಗುಂಡಿಯ ಹತ್ತಿರವಿರುವ ೭ನೇ ಗುಂಡಿಯಲ್ಲಿ ಮೇಲಿನ ಎರಡು ಪದರುಗಳು ಮಾತ್ರ ಇವೆ. ೭ನೇ ಗುಂಡಿಯಲ್ಲಿಯ ಬೀದಿಯ ದಕ್ಷಿಣ ಬದಿಯಲ್ಲಿ ನೈಸರ್ಗಿಕ ಗರಸು ಮಣ್ಣು ಸಿಗುವರೆಗೂ ಪರೀಕ್ಷಕ ಗುಂಡಿಯನ್ನು ತೋಡಲಾಯಿತು. ಇದರಿಂದ ಬೀದಿಯಲ್ಲಿ ಒಂದೇ ಪದರು ಇದ್ದುದು ಗೊತ್ತಾಯಿತು. ಹಾಗಾದರೆ ಮೊದಲು ಬೀದಿಯು ಇಷ್ಟು ಉದ್ದವಿರಲಿಲ್ಲ. ಕ್ರಮೇಣ ವಿಸ್ತರಿಸಿದಾಗ ಅಂದರೆ ಮೇಲಿನ ಪದರನ್ನು ಹಾಕುವಾಗ ೭ನೇಗುಂಡಿಯ ಭಾಗದವರೆಗೂ ಬಂದಂತೆ ತಿಳಿಯ ಬೇಕಾಗುತ್ತದೆ. ಆದರೆ ಈ ತಿಳುವಳಿಕೆಗೆ ವಿರುದ್ಧವಾಗಿ ಈ ೭ನೇ ಗುಂಡಿಯ ಮುಂದಿನ ೮ನೇ ಗುಂಡಿಯಲ್ಲಿ ಯಥಾ ಪ್ರಕಾರ ೫–೬ ಪದರುಗಳಿವೆ. ಮತ್ತು ೭ನೇ ಗುಂಡಿಯ ಬೀದಿಯ ಉತ್ತರ ಬದಿಯು ಮೂರು ಪದರುಗಳಿಂದ ಕೂಡಿದೆ. ಆದ್ದ ರಿಂದ ಬೀದಿಯ ಪದರುಗಳ ಅಗಲದಲ್ಲಿ ಹೆಚ್ಚು ಕಡಿಮೆ ಇದ್ದು ಮತ್ತು ಕೆಳಗಿನ ಮಣ್ಣಿನ ಸಡಿಲತೆ ಬಿಗಿತದ ಮೇಲೆ ಪದರುಗಳ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಯಾಗಿ ದ್ದಿರಬೇಕೆಂದು ಸಧ್ಯಕ್ಕೆ ತಿಳಿಯಬೇಕಾಗುತ್ತದೆ. ಈ ಅನುಮಾನವನ್ನು ಪೂರ್ತಿಯಾಗಿ ಬಗೆಹರಿಸಬೇಕಾದರೆ ಇದರುದ್ದಕ್ಕೂ ಅಲ್ಲಲ್ಲಿ ಗುಂಡಿಗಳನ್ನು ತೋಡಿ ಪದರುಗಳನ್ನು ನಿರ್ಧರಿಸಬೇಕು.

ಈ ಬೀದಿಗೆ ಅಲ್ಲಲ್ಲಿ ಅಡ್ಡ ಓಣಿಗಳಿದ್ದುವೆಂದು ೩ನೇ ಗುಂಡಿ ಉತ್ತರ ಬದಿಯಲ್ಲಿ ಮತ್ತು ೬ನೇ ಗುಂಡಿ ದಕ್ಷಿಣ ಬದಿಯಲ್ಲಿ ಅಸ್ಪಷ್ಟ ಗುರುತುಗಳಿವೆ. ಈ ಅಂಶವನ್ನೂ ಮತ್ತೆ ಉತ್ಖನನದಿಂದ ಸ್ಪಷ್ಟಪಡಿಸಬೇಕಾಗಿದೆ.

ಈ ಬೀದಿಯಲ್ಲಿ ಒಳ್ಳೆ ಸ್ಥಿತಿವಂತರು ಇದ್ದರೆಂದು ತಿಳಿಯಲಡ್ಡಿಯಿಲ್ಲ. ಮೇಲೆ ಹೇಳಿದ ಹಾಗೆ ಇದರ ಎರಡು ಬದಿಗಳಲ್ಲಿ ಉತ್ತಮ ತರಗತಿಯ ಇಟ್ಟಿಗೆ ಕಟ್ಟಡ ಗಳಿದ್ದವು. ೩ನೇ ಗುಂಡಿಯಲ್ಲಿ ಈ ವರ್ಷದ್ದೂ ಸೇರಿ ಸುಮಾರು ೧೨೦ ತಾಮ್ರದ ನಾಣ್ಯಗಳು, ಉತ್ತಮ ಜಾತಿಯ ಕಲ್ಲುಗಳಾದ ಲಪಿಜ್–ಲಜೂಲಿ. ಜಾಸ್ಪರ್. ಅಗೇಟ್ ಸ್ಫಟಿಕದ ಹವಳದ ಮಣಿಗಳು. ಐದಾರು ದಂತದ ಪಗಡೆ* ದಾಳಗಳು. ಸೊಗಸಾದ ಮಣ್ಣಿನ ಗೊಂಬೆಗಳು, ೭ನೇ ಗುಂಡಿಯಲ್ಲಿ ಕೆಲವೇ ತಾಮ್ರ ನಾಣ್ಯಗಳು. ಸತು–ತವರ ಮಿಶ್ರಲೋಹದ ನಾಣ್ಯಗಳು. ಒಂದು ದಾಳ. ಮತ್ತು ಮಣಿಗಳು ಸಿಕ್ಕಿವೆ. ೩ನೇ ಗುಂಡಿಯ ಉತ್ತರ ಬದಿಯ ೪ನೇ ಗುಂಡಿಯ ಕಟ್ಟಡಗಳಲ್ಲೂ ಹೆಚ್ಚಾಗಿ (ಸುಮಾರು ೪೦) ತಾಮ್ರದ ನಾಣ್ಯಗಳು ಸತು–ತವರ ಮಿಶ್ರ ಲೋಹದ (ಸುಮಾರು ೨೫) ನಾಣ್ಯ ಗಳು ಒಂದು ಕಂದು ಬೆಳ್ಳಿಯ ಕ್ಷತ್ರಪ ನಾಣ್ಯವು. ನಾಣ್ಯದ ಅಚ್ಚುಗಳು. ಮಣ್ಣಿನ ಗೊಂಬೆಗಳು ಸಿಕ್ಕಿವೆ. ಭಾಗ–೧ ಮತ್ತು ೩ ಗಳಲ್ಲಿ ೧೯೭೨–೭೩ರ ಉತ್ಖನನದ ಗುಂಡಿಗಳಲ್ಲಿ ತಾಮ್ರದ ನಾಣ್ಯಗಳು ಸಿಕ್ಕಿರಲಿಲ್ಲ. ಹೆಚ್ಚಾಗಿ ಶಾತವಾಹನ ಮಾಂಡಲಿಕ

ಅರಸರ ಸತು–ತವರ ಮಿಶ್ರ ಲೋಹದ ನಾಣ್ಯಗಳು ದೊರೆತಿದ್ದವು. ಬೀದಿಯ ಭಗ್ನಾವಶೇಷಗಳು ಸಿಕ್ಕಿರಲಿಲ್ಲ. ಆದ್ದರಿಂದ ಮೇಲೆ ಹೇಳಿದ ಬೀದಿಯಲ್ಲಿ ದೊರೆತ ನಾಣ್ಯಗಳ, ಉತ್ತಮ ತರಗತಿ ಮಣಿಗಳೇ ಮೊದಲಾದ ಅವಶೇಷಗಳ ವಿಪುಲತೆಯನ್ನು ನೋಡಿದರೆ ಇದು **ವ್ಯಾಪಾರಸ್ಥರ ಬೀದಿ**ಯೆಂದೇ ತೋರುತ್ತದೆ. ಮತ್ತು ಇದು ಕೇವಲ ಜನರ ಓಡಾಟಕ್ಕೆಂದೇ ಹೇಳಬಹುದು. ಏಕೆಂದರೆ ಭಾರವಾದ ಗಾಡಿಗಳ ಓಡಾಟದಿಂದ ಉಂಟಾಗುವ ಏರುತಗ್ಗುಗಳ ಗುರುತುಗಳು ಎಲ್ಲಿಯೂ ಕಾಣಿಸುವುದಿಲ್ಲ.


ಬೀದಿಯ ಮೇಲಿದ್ದ ಹಾಳು ಮಣ್ಣಿನಲ್ಲಿ ದೊರೆತ ತಾಮ್ರದ ನಾಣ್ಯಗಳು ಒಂದೇ ತರಹದ್ದು. ಒಂದು ಬದಿಯಲ್ಲಿ ಆನೆಯ ಉಬ್ಬು ಚಿತ್ರ ಮತ್ತೊಂದು ಬದಿಯಲ್ಲಿ "ಉಜ್ಜಯಿನಿ" ಚಿಹ್ನೆ ಇವೆ. ಸಾಮಾನ್ಯವಾಗಿ ಇವು ಶಾತವಾಹನ ರಾಜನಾದ ಒಂದನೇ ಶಾತಕರ್ಣಿ (ಸು. ಕ್ರಿ. ಶ. ಪೂ. ೩–ಕ್ರಿ. ಶ. ೧೫) ಯ ಕಾಲದ್ದೆಂದು ತಜ್ಞರ ಅಭಿಪ್ರಾಯ. ಸತು–ತವರ ಮಿಶ್ರಲೋಹದ ನಾಣ್ಯಗಳು ಗೌತಮಿ ಪುತ್ರ ಶಾತಕರ್ಣಿ (ಸು. ಕ್ರಿ. ಶ. ೮೦–೧೦೪), ವಾಸಿಷ್ಠಿಪುತ್ರ ಪುಳು ಮಾವಿ (ಸು.ಕಿ.ಶ. ೧೦೫–೧೨೯) ಮತ್ತು ಯಜ್ಞಶ್ರೀ ಶಾತಕರ್ಣಿ (ಸು. ಕ್ರಿ. ಶ. ೧೭೦–೯೯) ರಾಜರ ಕಾಲದ್ದು. ೫ನೇ ಗುಂಡಿಯ ಹಾಳು ಮಣ್ಣಿನಲ್ಲಿ ನಾಲ್ಕು ಸಾಂಸ್ಕೃತಿಕ ಪದರುಗಳನ್ನು ಗುರುತಿಸಲಾಯಿತು. ೪ನೇ ಪದರಿನಲ್ಲಿಯೇ ಈ ಬೀದಿಯ ಭಾಗಗಳಿವೆ. ೪ನೇ ಪದರನ್ನು ೧ನೇ ಶತಮಾನದ್ದೆಂದು ಆಯಾಯ ಪದರುಗಳಲ್ಲಿ ದೊರೆತ ಅವಶೇಷಗಳಿಂದ ಹೇಳಬಹುದು. ಆದ್ದರಿಂದ ಈ ಬೀದಿಯ ಸುಮಾರ ೧ನೇ ಶತಮಾನ ದಿಭಾಗದಲ್ಲಿ. ಮಾಡಿದ್ದಾಗಿ ೨ನೇ ಶತಮಾನದ ಅಂತ್ಯದವರೆಗ ಉಪಯೋಗದಲ್ಲಿತ್ತೆಂದು ಹೇಳಬಹುದು. ನನಗೆ ತಿಳಿದ ಮಟ್ಟಿಗೆ **ಇಷ್ಟು ಉದ್ದಗಲದ ಉತ್ತಮ ತರಗತಿಯ ಪ್ರಾಚೀನ ಬೀದಿ ಸಿಕ್ಕಿರುವುದು ದಕ್ಷಿಣ ಭಾರತದಲ್ಲೆ ಇದೆ ಪ್ರಪ್ರಥಮ.**

ಕಟ್ಟಡಗಳು :

೧) ಈ ವರ್ಷದ ಉತ್ಖನನದಲ್ಲಿ ದೊರೆತ ಇಟ್ಟಿಗೆ ಕಟ್ಟಡಗಳು ಎರಡು. ೪ನೇ ಗುಂಡಿಯಲ್ಲಿ ಹೋದ ವರ್ಷ ತೋರಿದ ಕೊಠಡಿಯ ಹಿಂಭಾಗವನ್ನು ಅನುಸರಿಸಿ ಪೂರ್ತಿ ಬಿಡಿಸಿದಾಗ ಅದು ಒಂದು ದೊಡ್ಡ ಕಟ್ಟಡದ ಒಂದು ಭಾಗವಾಗಿತ್ತೆಂಬುದು ಬೆಳಕಿಗೆ ಬಂತು. ಇದರಲ್ಲಿ ಹೆಚ್ಚು ಕಡಿಮೆ ಒಂದೇ ಅಳತೆಯ ಒಂದರ ಪಕ್ಕದಲ್ಲೊಂದು ಇದ್ದ ಎರಡು ಕೊಠಡಿಗಳು ಮುಂದೆ ಇವೆರಡರ ಉದ್ದಕ್ಕೂ ಒಂದ ಮೊಗಸಾಲೆ ಯಿವೆ (ಚಿತ್ರ 1: ೨). ಮೊಗಸಾಲೆಯ ಮುಂಬದಿಯಲ್ಲಿ ಪ್ರವೇಶವಿದ್ದಿರಬೇಕು ಮೂರುಸಾಲಿನ ಇಟ್ಟಿಗೆಯ ಗೋಡೆಯು ೧ ಮಿ. ದಪ್ಪವಿದೆ ಮತ್ತು ತಳಪಾಯದಲ್ಲಿ ಕಲುಗುಂಡುಗಳ ಹಾಸು ಇದೆ. ಇದನ್ನು ೪ನೇ ಪದರದ ಅಂತ್ಯದ ಹಂತದಲ್ಲಿ ಕಟ್ಟಲಾಯಿತು. ಏಕೆಂದರೆ ಕಟ್ಟಡ ಹೊರಬದಿಯಲ್ಲಿ ೪ನೇ ಪದರ ಮೇಲೆ ಮಾಡಿನ

ಹಂಚಿನ ಚೂರುಗಳು ಬಹಳ ಬಿದ್ದಿವೆ. ೩ನೇ ಪದರಿನ ಕೊನೆಯ ಹಂತದಲ್ಲಿ ಈ ಮೊಗಸಾಲೆಯ ಮುಂದೆ ಒಂದು ಸಾಲಿನ ಇಟ್ಟಿಗೆ ಗೋಡೆಯ ಕೊಠಡಿಯನ್ನು ಸೇರಿಸಲಾಯಿತು. ಈ ಕೊಠಡಿಯ ಮಧ್ಯದಲ್ಲಿ ಚೌಕೋನದ ಸು. ೫೦ ಸೆ. ಮಿ. ಚದುರ. ೨೫ ಸೆ. ಮಿ. ಎತ್ತರ ಒಂದು ಸಣ್ಣ ಜಗುಲಿ ಇದೆ ಅದರ ಪಶ್ಚಿಮ ಬದಿಯಲ್ಲಿ ಅದಕ್ಕೆ ಒಂದು ಮೆಟ್ಟಿಲು (೩೦ × ೩೨ ಸೆ. ಮಿ.) ಇದೆ. ಇದಕ್ಕೆ ದಪ್ಪಗೆ ಹಚ್ಚಿದ ಸುಣ್ಣದ ಲೇಪನದ ತುಣುಕುಗಳು ಬಲಭಾಗದಲ್ಲಿ ಇವೆ. ದೇವರಿಡುವ ಕಟ್ಟೆಯೆನ್ನುವ ಹಾಗಿದೆ (ಚಿತ್ರ 2: ೨). ಇವುಗಳ ಮಧ್ಯದಲ್ಲಿ ಪಶ್ಚಿಮ ಗೋಡೆಯ ಹತ್ತಿರ ಒಂದು ದೊಡ್ಡ ಹಾಗೂ ದಪ್ಪನಾದ ಮಣ್ಣಿನ ಕೊಡವಿತ್ತು. ಈ ಕೊಠಡಿಯ ಒಳಭಾಗದಲ್ಲಿ ಮೃತ್ ಪಾತ್ರೆಗಳ ಅವಶೇಷಗಳಿರಲಿಲ್ಲ. ಇದರ ಮೇಲೆ ಹಾಗೂ ಕೊಠಡಿಯ ಉದ್ದಗಲಕ್ಕೂ ಇಟ್ಟಿಗೆ ಮತ್ತು ಮಾಡಿನ ಹಂಚುಗಳು ಬಹಳಷ್ಟು ಬಿದ್ದಿದ್ದವು. ಹೆಚ್ಚಾಗಿ ಇಟ್ಟಿಗೆ ಮತ್ತು ಹಂಚಿನ ತುಂಡುಗಳಿದ್ದವು. ಅಂದರೆ ಕಟ್ಟಡವು ಕುಸಿದುಬಿದ್ದ ಹಾಗಿತ್ತು. ಇದರ ಉತ್ತರ ಬದಿಯ ಗೋಡೆಯ ಹೊರಗಡೆ ದಮ್ಮಸ್ಸು ಮಾಡಿದ ನೆಲವಿದ್ದರಿಂದ ಆ ಭಾಗದಲ್ಲೂ ಈ ಕಟ್ಟಡವು ಹಬ್ಬಿತ್ತು ಎಂಬುದು ಸ್ಪಷ್ಟವಾಗುತ್ತದೆ. ಉತ್ತರ ಬದಿಯ ಗೋಡೆಯು ಪೂರ್ವಾಭಿಮುಖವಾಗಿ ಮುಂದೆ ಹೋಗಿದೆ. ಈ ಕೊಠಡಿಯ ಪೂರ್ಣವಿನ್ಯಾಸವನ್ನು ತಿಳಿಯಲು ೪ನೇ ಗುಂಡಿಯ ಪೂರ್ವ ಬದಿಗೆ ಗುಂಡಿಯನ್ನು ತೋಡಬೇಕು. ಈ ಕೊಠಡಿಯ ದಕ್ಷಿಣ ಬದಿಗೆ ಒಂದೇ ಸಾಲಿನ ಮತ್ತೊಂದು ಇಟ್ಟಿಗೆ ಗೋಡೆಯಿದೆ. ಇದನ್ನು ೨ನೇ ಪದರಿನ ಕೊನೆಯ ಹಂತದಲ್ಲಿ ಕಟ್ಟಲಾಯಿತು. ಇದು ೨ನೇ ಪದರಿನ ಕೊಠಡಿಯನ್ನು ವಿಸ್ತರಿಸಲು ಕಟ್ಟಲಾಯಿತೆ ಎಂಬುದು ಸ್ಪಷ್ಟವಾಗಿಲ್ಲ. ಇದಕ್ಕೆ ಹೊಂದಿಕೊಂಡೇ ದಕ್ಷಿಣ ಬದಿಗೆ ಗಟ್ಟಿನೆಲವಿದೆ. ಆದ್ದರಿಂದ ಈ ಕಟ್ಟಡದ ನಿರ್ಮಾಣದಲ್ಲಿ ಒಟ್ಟು ೨ ಅಥವ ೩ ಹಂತಗಳಿದ್ದು ನಿರ್ಮಿತಿಯ ಕ್ರಮದಲ್ಲಿ ಮೊದಲನೇ ಹಂತದಲ್ಲಿದ್ದ ಭದ್ರತೆ ಉಳಿದ ಹಂತಗಳಲ್ಲಿಲ್ಲ.

೨) ೨ನೇ ಕಟ್ಟಡವು (ಚಿತ್ರ 2: ೧) ಮೇಲೆ ವಿವರಿಸಿದ ಕಟ್ಟಡದ ದಕ್ಷಿಣಕ್ಕೆ ಪಕ್ಕದಲ್ಲಿಯೇ ಇದೆ. ೩ನೇ ಪದರಿನ ಕೊನೆಯ ಭಾಗದಲ್ಲಿ ಕಟ್ಟಲಾಯಿತು. ಆದ್ದರಿಂದ ಇದು ಮೊದಲನೆ ಕಟ್ಟಡದ ಮೊದಲನೆ ಹಂತದ ನಿರ್ಮಿತಿಯ ಅನಂತರದ್ದು ೨ನೇ ಹಂತದ ಪೂರ್ವದ್ದು, ಅಂದರೆ ೧ನೇ ಶತಮಾನದ ಕೊನೆಯ ಭಾಗದ್ದು. ಈ ಕಟ್ಟಡದ ಒಂದು ಭಾಗವನ್ನು ಮಾತ್ರ ಅಗೆದು ಬಿಡಿಸಲಾಗಿದೆ. ಉಳಿದ (ಪೂರ್ವ) ಭಾಗವನ್ನು ಉತ್ಖನನ ಮಾಡಬೇಕಾಗಿದೆ. ತೆರೆದ ಭಾಗದಲ್ಲಿ ಒಂದು ಆಯತಾಕಾರದ ಸಾಲೆಯು ಮತ್ತು ಅದರ ಪಶ್ಚಿಮ ಭಾಗಕ್ಕೆ ಒಂದು ಕೊಠಡಿಯು ಇದೆ. ತಳಪಾಯದಲ್ಲಿ ಅಲ್ಲಲ್ಲಿ ಮಾತ್ರ ಗುಂಡುಕಲ್ಲುಗಳ ಹಾಸು ಇದೆ. ಇದರ ಮೇಲೆ ೧ ಮಿ. ಅಗಲದ ಇಟ್ಟಿಗೆ ಗೋಡೆಯಿದೆ. ಎತ್ತರದಲ್ಲಿ ಇದು ಒಂದು ಸಾಲು ಮಾತ್ರ ಇದೆ. ಇದರ ಮೇಲೆ ಸು. ೫೦ ಸೆಂ. ಮಿ. ಅಗಲದ ಗೋಡೆಯನ್ನು ಏರಿಸಲಾಗಿದೆ. ಕೊಠಡಿಯಲ್ಲಿ



ಚಿತ್ರ ೨. ವಡಗಾಂವ್–ಮಾಧವಪುರ : ೧–೨ನೇ ಶತಮಾನದ ಇಟ್ಟಿಗೆ ಕಟ್ಟಡಗಳು.

ಚೌಕೋನದ ಒಂದು ನೀರಿನ ಭಾವಿ ಮತ್ತು ಅದರ ಪಕ್ಕದಲ್ಲಿ ಒಂದು ಇಟ್ಟಿಗೆಯ ದುಂಡು ಕಣಜ (ಪಗೇವು) ಇವೆ (ಚಿತ್ರ 2: ೧). ಭಾವಿಯು (ಚಿತ್ರ 2: ೪) ಸು. ೧.೨೫ ಆಳದಷ್ಟು ಚೌಕನವಾಗಿ ಇಟ್ಟಿಗೆಯಿಂದ ಕಟ್ಟಲಾಗಿದೆ. ಇದು (ಮತ್ತು ಕಣಜವು) ಮೊದಲು ಇನ್ನು ಸು. ೭೦–೭೫ ಸೆಂ. ಮಿ.ನಷ್ಟು ಎತ್ತರವಿತ್ತು. ಅಂದರೆ ಭಾವಿಯು ಸು. ೨ ಮಿ.ನಷ್ಟು ಆಳದ ಚೌಕೋನದ ಇಟ್ಟಿಗೆ ಕಟ್ಟಡ. ಈ ಮಟ್ಟದಿಂದ ಕೆಳಗೆ ಕೆಂಪು ಮೃದುಗರಸು ಕಲ್ಲು. ಇದರಲ್ಲಿ ದುಂಡಾಗಿ ಭಾವಿಯನ್ನು ನೀರಿನ ಮಟ್ಟದವರೆಗೆ ಕೊರೆಯಲಾಗಿದೆ. ಇದರಲ್ಲಿ ಮತ್ತೊಂದು ಗಮನಾರ್ಹ ವೈಶಿಷ್ಟ್ಯವೆಂದರೆ, ಕೆಳಗೆ ಇಳಿಯಲು ಮೇಲೆ ಹತ್ತಲು ಪೂರ್ವ ಪಶ್ಚಿಮದ ಗೋಡೆಗಳಲ್ಲಿ ಮೇಲಿಂದ ಸುಮಾರು ೩೨–೩೫ ಸೆಂ. ಮಿ. ಸಮಾನಾಂತರದಲ್ಲಿ ಕೈಕಾಲುಗಳನ್ನಿಡಲು ಗೂಡುಗಳಿವೆ. ಈ ಪ್ರಾಚೀನ ನೆಲೆಯ ಬೇರೆ ಭಾಗಗಳಲ್ಲಿ ಹೆಚ್ಚಾಗಿ ವರ್ತುಳಾಕಾರದ ಅಪರೂಪವಾಗಿ ಚೌಕೋನ ಭಾವಿಗಳನ್ನು ಶೋಧಿಸಲಾಗಿದೆ. ಆದರೆ ಪ್ರತಿಯೊಂದು ಪೂರ್ತಿ ಚೌಕೋನವಾಗಿಯೋ ಇಲ್ಲವೆ ದುಂಡಾಗಿಯೋ ಇವೆ. ಮತ್ತು ಏರಿಳಿಯಲು ಅನುಕೂಲತೆ ಇಲ್ಲ.

ಈ ಕಟ್ಟಡದ ದಕ್ಷಿಣ ಪಕ್ಕದಲ್ಲಿಯ ಮೇಲೆ ವರ್ಣಿಸಿದ ವಿಶಾಲವಾದ ದೊಡ್ಡ ಬೀದಿ ಹಾದುಹೋಗಿದೆ.

ಈ ಕಟ್ಟಡವು ಹಾಳಾಗಿ ಹೋಗಿ ಮೇಲೆ ಹಾಳು ಮಣ್ಣು ಬಿದ್ದು ಹಲವಾರು ಶತಮಾನಗಳ ನಂತರ ಸುಮಾರು ೨೦೦–೨೫೦ ವರ್ಷಗಳ ಹಿಂದೆ ಇದರ ಮೇಲೆ ಈಗಿನ ನೆಲೆಯ ಮೇಲಿನ ಮಟ್ಟದಿಂದ ಸುಮಾರು ೫೦ ಸೆಂ. ಮಿ. ಕೆಳಗಿನ ಅಂತರವರೆಗಿನ ಹಂತದಲ್ಲಿ ನೆಲೆಯನ್ನು ಸಮಮಾಡಿ. ಅದರ ಕಲ್ಲುಗುಂಡುಗಳನ್ನು ಹಾಕಿ ಅವರ ಮೇಲೆ ಸುಮಾರು ೨೦ ಸೆಂ. ಮಿ.ನಷ್ಟು ಮಣ್ಣು ಹಾಕಿ ಒಂದೊ ಎರಡು ಸಣ್ಣ ಮನೆಗಳುಳ್ಳ ಜನವಸತಿ ಇತ್ತು. ಈ ಸಣ್ಣ ವಸತಿಯ ಕಾಲದಲ್ಲಿ ವಾಯುವ್ಯ ಮೂಲೆಗೆ ಒಂದು ದೊಡ್ಡ ಗುಂಡಿಯನ್ನು ತೋಡಲಾಗಿತ್ತು. ಈ ಗುಂಡಿಯ ಮೊದಲನೆ ಕಟ್ಟಡದ ಮೊದಲನೆ ಹಂತದ ದಕ್ಷಿಣದ ಗೋಡೆಯನ್ನು ಎರಡನೆ ಕಟ್ಟಡದ ಉತ್ತರದ ಗೋಡೆಯನ್ನು ಕೊರೆದಿದೆ. ಇದರಲ್ಲಿ ೫ ನೀರಿನ ಕೊಡಗಳಂಥ ಗಡಿಗೆಗಳು ಮನುಷ್ಯನ ಅಸ್ಥಿಪಂಜರದ ತಲೆಬುರಡೆ ಪಕ್ಕೆಲಬು ಭಾಗಗಳಿದ್ದವು. ಇವಲ್ಲದೆ ಬೂದಿ ಮಣ್ಣು ಗಡಿಗೆ ಮಡಿಕೆ ಚೂರುಗಳು ಇದ್ದವು. ಅಂದರೆ ಇದು ಕಸದ ಗುಂಡಿಯಾಗಿದ್ದು ಅದರಲ್ಲಿಯೇ ಒಬ್ಬ ವ್ಯಕ್ತಿಯ ಅಸ್ಥಿ ಅವಶೇಷಗಳನ್ನು ಹಾಕಲಾಗಿತ್ತೆಂಬುದು ನಿಸ್ಸಂಶಯ. ಆದ್ದರಿಂದ ೪ನೇ ಗುಂಡಿಯು ಈ ಭಾಗದಲ್ಲಿ ೧–೨ನೇ ಶತಮಾನದ ಸಾಂಸ್ಕೃತಿಕ ಅವಶೇಷಗಳೊಡನೆ ಆಧುನಿಕ ಸುಮಾರು ೨೦೦ ವರ್ಷಗಳ ಹಿಂದಿನ ಮೃತ್ಪಾತ್ರೆಗಳ ಚೂರುಗಳು ತಕ್ಕ ಪ್ರಮಾಣದಲ್ಲಿ ೨ ಮತ್ತು ೩ನೇ ಪದರಿನ ಮೇಲ್ಭಾಗದಲ್ಲಿ

ದೊರೆತವು. ಇದಲ್ಲದೆ ೪ನೇ ಗುಂಡಿಯು ಈ ಭಾಗದ ಪಕ್ಕದಲ್ಲಿದ್ದ ೫ನೇ ಗುಂಡಿಯಲ್ಲಿ ಎರಡು ಕಸದ ಗುಂಡಿಗಳಿದ್ದು ಅವುಗಳಲ್ಲಿ ಈ ಜನವಸತಿಯ ಮೃತ್ ಪಾತ್ರೆಯ ಅವಶೇಷಗಳಿದ್ದವು.

೨ನೆ ಇಟ್ಟಿಗೆ ಕಟ್ಟಡವು ೨ನೇ ಪದರಿನ ಮೇಲ್ಭಾಗದ ಹಂತದಲ್ಲಿ ಕಟ್ಟಲಾಯಿತೆಂದು ಮೇಲೆ ಹೇಳಿದೆಯಷ್ಟೆ. ಕ್ರಮೇಣ ಇದರ ಮೇಲೆ ಬಿದ್ದ ೧, ೨ ಮತ್ತು ಅತ್ಯಂತ ಮೇಲ್ಭಾಗದ ೩ನೇ ಪದರಿನ ಮಣ್ಣು ಈ ಜನವಸತಿಯಿಂದ ಏರುಪೇರಾಗಿ ಈಗ ಕಾಣುವ ೧, ೨ ಮತ್ತು ೩ನೇ ಪದರಿನ ಮೇಲ್ಭಾಗವು ಈ ಭಾಗದ ಅಕ್ಕ ಪಕ್ಕದಲ್ಲಿಯ ೧, ೨ ಮತ್ತು ೩ನೇ ಪದರುಗಳಿಗೆ ಕಾಲಮಾನದಿಂದ ಸರಿ ಹೊಂದುವುದಿಲ್ಲವೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಈ ಪ್ರಾಚೀನ ನೆಲೆಯ ಬೇರೆ ಭಾಗಗಳಲ್ಲಿ ನಡೆಸಿದ ಉತ್ಖನನಗಳಲ್ಲಿ ಆಧುನಿಕ ಕಾಲದ ಅಥವ ಅದರ ಹಿಂದಿನ ವಸತಿಯ ಗುರುತುಗಳು ಇಲ್ಲ.

ಇತರ ಕಟ್ಟಡಗಳು :

ಎಲ್ಲ ಭಾಗಗಳಲ್ಲಿ ತೋಡಿದ ಗುಂಡಿಗಳ ಕೆಲವುದರಲ್ಲಿ ಇಟ್ಟಿಗೆ ಕಟ್ಟಡಗಳ ಭಗ್ನಾವಶೇಷಗಳು ಸಿಕ್ಕಿವೆ. ಇವೆಲ್ಲವು- ದಾಳು ಮಣ್ಣಿನ ಕೊನೆಯ ಹಂತದ ಅಂದರೆ ಮೇಲಿನ ನಾಲ್ಕು ಪದರುಗಳಲ್ಲಿವೆ. ಈ ಹಂತದ ಕಾಲಮಾನ ಸು. ೧–೨ನೇ ಶತಮಾನ. ಮೇಲೆ ವಿವರಿಸಿದ ಭಾಗ–೩ರಲ್ಲಿಯವು. ಉಳಿದೆರಡು ಭಾಗಗಳಲ್ಲಿ ದೊರೆತ ಕಟ್ಟಡಗಳು ವಿವಿಧ ಪ್ರಕಾರಗಳಾಗಿವೆ: ಧಾರ್ಮಿಕ (?). ಸಾರ್ವಜನಿಕ(?) ಕಟ್ಟಡಗಳು, ಮನೆಗಳು, ಭಾವಿಗಳು ಮತ್ತು ಕಣಜಗಳು.

ಕೊನೆಯ ಎರಡು ಪ್ರಕಾರದವುಗಳ ಹೊರತಾಗಿ ಉಳಿದವುಗಳಲ್ಲಿ ಮೂರು ಕಟ್ಟಡಗಳು ಹಿಂದೆ ಇದ್ದ ಕಟ್ಟಡಗಳ ಗೋಡೆಗಳ ಮೇಲೆ ಕಟ್ಟಲಾಗಿವೆ. ಮತ್ತು ಕ್ರಮೇಣ ಅವುಗಳನ್ನು ಅವಶ್ಯವಾದಾಗ ವಿಸ್ತರಿಸಿದ ಗುರುತುಗಳಿವೆ. ಹಿಂದಿನ ಕಟ್ಟಡಗಳ ವಿನ್ಯಾಸ ರಚನೆಯಕ್ರಮ ಅವುಗಳ ಮೇಲಿದ್ದ ಕಟ್ಟಡಗಳನ್ನು ತೆಗೆದ ಹೊರತು ತಿಳಿಯುವುದಿಲ್ಲ. ಅದ್ದರಿಂದ ಇವುಗಳ ಬಗ್ಗೆ ಈಗ ಏನೂ ಹೇಳಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಇವೆಲ್ಲವೂ ೪ನೇ ಪದರಿನಲ್ಲಿವೆ.

ಧಾರ್ಮಿಕ ಕಟ್ಟಡಗಳು :

ಧಾರ್ಮಿಕ ಉಪಯೋಗಕ್ಕಿದ್ದಿರಬಹುದಾದ ಎರಡು ಕಟ್ಟಡಗಳು ಭಾಗ–೧ರ ದಕ್ಷಿಣ ವಲಯದಲ್ಲಿ ಸಿಕ್ಕಿವೆ. ಎರಡು ಒಂದರ ಪಕ್ಕದಲ್ಲೊಂದಿವೆ.

೧. ಒಂದುಳಿ ಸುಮಾರು ೧೪×೧೨ ಮಿ. ವಿಸ್ತಾರವಿದೆ. ಇದು ಇನ್ನೂ ದೊಡ್ಡದಿತ್ತು. ಇದರ ಪಶ್ಚಿಮ ಭಾಗವು ಸ್ಥಳಿಕರು ಅಲ್ಲಿ ದೊಡ್ಡಗುಂಡಿಯನ್ನು ತೆಗೆದದ್ದರಿಂದ ಹಾಳಾಗಿ ಹೋಗಿದೆ. ಇದರಂತೆಯೆ ಉಳಿದ ಕಡೆಗಳ ಗೋಡೆಗಳು ಹೋಗಿವೆ. ಈಗ ಸಿಕ್ಕ ಭಾಗದಲ್ಲಿ ಒಂದರ ಪಕ್ಕದಲ್ಲೊಂದು ಎರಡು ಕೊಠಡಿಗಳು, ಇವುಗಳಿಗೆ ಸರಿಹೊಂದುವ ಹಾಗೆ ಪೂರ್ವ ಬದಿಗೆ ಎರಡು ಭಾಗಗಳಾಗಿ ವಿಭಾಗಿಸಲ್ಪಟ್ಟ ವಿಶಾಲವಾದ ಪಡಸಾಲೆ (೯×೭ ಮಿ.). ಒಂದು ಕೊಠಡಿ (ಸು. ೪ ಮೀ. ಚದುರ), ಮಧ್ಯದಲ್ಲಿ ೩ ಮಿ. ಆಳದ ಇಟ್ಟಿಗೆ ಕಣಜ (ಸು. ೧.೨೦ ಸೆಂ. ಮಿ. ಚದುರ)· ಕೊಠಡಿಯ ಪಶ್ಚಿಮದ ಗೋಡೆಯಲ್ಲಿ ಮತ್ತೊಂದು ಕೊಠಡಿಯಿಂದ ಪ್ರವೇಶದ್ವಾರ (೬೨ ಸೆ. ಮಿ. ಅಗಲ) ವಿದೆ. ಆದರೆ ಈ ಕೊಠಡಿ ಹಾಳಾಗಿ ಹೋಗಿದೆ. ಈ ಕೊಠಡಿಯ ಉತ್ತರ ಮತ್ತು ದಕ್ಷಿಣಬದಿಗಳಿಗೆ ಒಂದೊಂದು ಕೊಠಡಿಯಿದ್ದ ಗುರುತುಗಳಿವೆ. ದಕ್ಷಿಣದ ಕೊಠಡಿಯಿಂದ ಕೊಳಚೆ ನೀರು ಹೋಗುವ ಕಿರುದಾದ ಕಾಲುವೆಗಳಿವೆ. ಪಡಸಾಲೆಯೊಳಗೆ ದಕ್ಷಿಣದ ಗೋಡೆಗೆ ಸೇರಿದ ಹಾಗೆ ಒಂದು ಚೌಕೋನದ ತೊಟ್ಟಿ (೧.೬೦ ಮಿ. ಚದುರ) ಯಿದೆ. ತೊಟ್ಟಿ, ಪಡಸಾಲೆ ಮತ್ತು ಕಣಜವಿರುವ ಕೊಠಡಿಯ ನೆಲಕ್ಕೆ ಇಟ್ಟಿಗೆ ಬಿಲ್ಲೆಗಳನ್ನು ಹಾಸಲಾಗಿದೆ. ಇದರ ಇನ್ನೊಂದು ಭಾಗದ ಈಶಾನ್ಯ ಮೂಲೆಗೆ ಇಟ್ಟಿಗೆಯ ಒಂಗು ಗುಣಿ (೬೦ ಸೆಂ. ಮಿ. ಚದುರು) ಇವೆ. ಪಡಸಾಲೆ ಪೂರ್ವ ಬದಿಗೂ ಒಂದು ದೊಡ್ಡ ಕೊಠಡಿಯಿದ್ದ ಗುರುತುಗಳಿವೆ. ಇದರ ಆಗ್ನೆಯ ಭಾಗದಲ್ಲಿ ಮತ್ತೊಂದು ಆಯತಾಕಾರದ ಕಣಜ (೧×೧.೪೦ ಸೆಂ. ಮಿ.) ಮತ್ತು ಈ ಭಾಗದಲ್ಲಿ ನೆಲಕ್ಕೆ ಇಟ್ಟಿಗೆ ಬಿಲ್ಲೆಗಳನ್ನು ಹಾಸಿದ್ದ ಅವಶೇಷಗಳಿವೆ. ಹೊರಗಿನ ಗೋಡೆಗಳು ಸಾಮಾನ್ಯ ೯೦ ಸೆಂ. ಮಿ. ಮತ್ತು ಒಳಗಿನವುಗಳು ೪೦ ಸೆಂ. ಮಿ. ಅಗಲ ಇವೆ. ಈ ಕಟ್ಟಡವು ೨ನೇ ಪದರಿನಲ್ಲಿದೆ.

ಈ ಕಟ್ಟಡ ಮೊದಲಿದ್ದ ಕಟ್ಟಡದ ಗೋಡೆಗಳ ಮೇಲೆ ಏರಿಸಲಾಗಿದೆ. ಮೊದಲಿದ್ದ ಕಟ್ಟಡದ ಗೋಡೆಗಳ ಭಾಗಗಳು ಅಲ್ಲಲ್ಲಿ ಕಾಣಸುತ್ತವೆ. ಕಣಜವಿದ್ದ ಕೊಠಡಿಯ ಉತ್ತರ ಬದಿಯ ಕೊಠಡಿಯು ಅದರ ಪೂರ್ವ ಬದಿಯ ಕಿರುದಾದ ಮತ್ತೊಂದು ಸಾಲೆ ಬಹುಶಃ ಕ್ರಮೇಣ ಈ ಕಟ್ಟಡಕ್ಕೆ ಸೇರಿಸಿದ್ದು.

೨. ಈ ಕಟ್ಟಡದ ದಕ್ಷಿಣದ ಬದಿಯಲ್ಲಿ ದಕ್ಷಿಣಾಭಿಮುಖವಾದ ಒಂದು ಸರಳ ಗಜಪೃಷ್ಠಾಕೃತಿಯ ಸಾಲೆಯಿತ್ತು. ಇದರ ಗಜ ಪೃಷ್ಠ ಭಾಗದ ಬಲಬದಿಯ ಗೋಡೆ ಮಾತ್ರ ಉಳಿದಿದೆ. ಮೂಲತಃ ಈ ಸಾಲೆ ೭½ ಮಿ. ಅಗಲವಿತ್ತು ಪ್ರಾಯಶಃ ಇದು ಸುಮಾರು ೭–೮ ಮಿ. ಉದ್ದವಿತ್ತೆಂದು ಊಹಿಸಬಹುದು. ಇದರ ತಳಪಾಯ ೩ನೇ ಪದರಿನಲ್ಲಿದ್ದರೂ ತಳಪಾಯವನ್ನು ಯಾವ ಮಟ್ಟದಲ್ಲಿ ತೋಡಲಾಗಿದೆ ಎಂಬುದು ಸ್ಪಷ್ಟವಿಲ್ಲ. ಬಹುಶಃ ಪಕ್ಕದ ಕಟ್ಟಡಕ್ಕಿಂತ ಸ್ವಲ್ಪ ಮುಂಚಿನದೆಂದು ತೋರುತ್ತದೆ. ಇದರಡಿಯಲ್ಲಿ ಹಿಂದಿನ ಕಟ್ಟಡದ ಭಾಗಗಳು ಅಲ್ಲಲ್ಲಿ ಇವೆ. ಈ

ಕಟ್ಟಡವು ಹಾಳಾಗಿದ್ದ ಮೇಲೆ ಇದು ಬಲಬದಿಯ ಗೋಡೆಗೆ ಸೇರಿ ಹಾಗೂ ಉಳಿದಿದ್ದ ಗೋಡೆಯ ಮೇಲೆ ಹಾದು ಹೋಗುವ ಹಾಗೆ ಒಂದು ಸಣ್ಣ ಕಟ್ಟಡವನ್ನು ಕಟ್ಟಲಾಗಿದ್ದು ಗಜಪೃಷ್ಠಾಕೃತಿಯ ಕಟ್ಟಡದ ಗೋಡೆಗೆ ತಾಗಿದ್ದ ಆ ಕಟ್ಟಡ ಗೋಡೆಯ ಒಂದು ತುಣುಕು ಮಾತ್ರ ಉಳಿದಿದೆ.

ಮೇಲೆ ಹೇಳಿದ ಮೊದಲನೆ ಕಟ್ಟಡದ ವಿನ್ಯಾಸವನ್ನು ಇಲ್ಲಿಯ ಇತರ ಜನವಸತಿಯ ಕಟ್ಟಡಗಳದವುಕ್ಕೆ ಹೋಲಿಸಿದರೆ ಇದು ತೀರಾ ಭಿನ್ನವಾಗಿದೆ. ಮತ್ತು ಇತರ ಕಟ್ಟಡಗಳೊಳಗೆ ದೊರೆತಹಾಗೆ ಇದರಲ್ಲಿ ಮೃತ್ ಪಾತ್ರೆಗಳ ಅವಶೇಷಗಳಾಗಲಿ ನಾಣ್ಯಗಳಾಗಲಿ ಬಹಳ ಕಡಿಮೆ ಇದ್ದುವು. ಒಂದೆರಡು ಮಣ್ಣಿನ ಗೊಂಬೆಗಳು ಕೆಲವೆ ನಾಣ್ಯಗಳು ಸಿಕ್ಕಿವೆ. ಹಿಂಗು ಗುಣಿಯಲ್ಲಿ ಮಾತ್ರ ಮಣ್ಣಿನ ಲೋಟಗಳು ಬಹಳ ಇದ್ದುವು. ಈ ಕಟ್ಟಡದ ವಿಶಾಲವಾದ ಪಡಸಾಲೆ ಕೋಣೆಗಳ ತೊಟ್ಟಿಗಳಿರುವುದು ಮತ್ತು ಪಕ್ಕದಲ್ಲಿ ಗಜ ಪೃಷ್ಠಾಕೃತಿಯ ಕಟ್ಟಡವು ಇರುವುದನ್ನು ಗಮನಿಸಿದರೆ ಇವೆರಡು ಧಾರ್ಮಿಕ ಕಟ್ಟಡಗಳೆಂದು ಅನುಮಾನಿಸಬಹುದು. ಈ ವಿಷಯವನ್ನು ಹಿಂದಿನ ಲೇಖನ[೧೦]ದಲ್ಲಿ ಸ್ವಲ್ಪ ಮಟ್ಟಿಗೆ ಚರ್ಚಿಸಿದೆ.

೩. ಸಾರ್ವಜನಿಕ(?) ಸಾಲೆ :

ಭಾಗ–೧ರಲ್ಲಿಯ ಕಟ್ಟಡಗಳು ವಾಯುವ್ಯ ದಿಕ್ಕಿನ ಮಾವಿನ ತೋಟದ ಪಶ್ಚಿಮಕ್ಕೆ ಒಂದು ದೊಡ್ಡ ಕಟ್ಟಡದ ಭಾಗಗಳು ಸಿಕ್ಕಿವೆ. ಪೂರ್ವ ಪಶ್ಚಿಮಾಭಿಮುಖವಾಗಿರುವ ೬೦ ಸೆಂ. ಮಿ. ಅಗಲ ಎರಡು ಸಮಾನಾಂತರ (೯೫ ಸೆಂ. ಮಿ.)ದ ಗೋಡೆಗಳ ಉದ್ದ ಸುಮಾರು ೩೩ ಮಿ. ಇವುಗಳ ಎರಡು ತುದಿಗಳು ಒಡೆದು ಹೋಗಿವೆ. ಅದ್ದರಿಂದ ಇವು ಇನ್ನೂ ಉದ್ದವಿದ್ದುವು. ಇವುಗಳಿಗೆ ತುದಿಗಳ ಹತ್ತಿರ ಮತ್ತು ಸ್ವಲ್ಪ ಹೆಚ್ಚು ಕಡಿಮೆ ಮಧ್ಯದಲ್ಲಿ ಮತ್ತು ಈ ಗೋಡೆಗಳ ಅಡಿಯಲ್ಲಿ ಹಾದುಹೋದ ಅಡ್ಡ ಗೋಡೆಗಳಿವೆ. ಪ್ರಾಯಶಃ ಗೋಡೆಗಳ ಉದ್ದಕ್ಕನುಗುಣವಾಗಿ ಅಲ್ಲಲ್ಲಿ ತಳಪಾಯದ ಭದ್ರತೆಗೋಸ್ಕರ ಈ ರೀತಿ ಅಡ್ಡಗೋಡೆಗಳನ್ನು ನಿರ್ಮಿಸಿರಬೇಕು.

ಉತ್ತರದ ಗೋಡೆಯ ಉತ್ತರ ಬದಿಯಲ್ಲಿ ಇಟ್ಟಿಗೆಗಳನ್ನು ಚೆನ್ನಾಗಿ ಪುಡಿಮಾಡಿ ಹಾಕಿ ದಮ್ಮಸು ಮಾಡಿದ ವಿಶಾಲವಾದ ನೆಲವಿತ್ತು. ಇದರ ದೊಡ್ಡ ಭಾಗವೆ ಸಿಕ್ಕಿದೆ. ಗೋಡೆಯ ತಳದಿಂದ ೫೦ ಸೆ. ಮೀ. ಎತ್ತರದಲ್ಲಿದೆ. ಅದ್ದರಿಂದ ಈ ಕಟ್ಟಡವು ದೊಡ್ಡ ಸಭಾಂಗಣದ ಭಾಗವಾಗಿರಬೇಕೆಂದು ತೋರುವುದು.

೪. ಕೊಠಡಿಗಳು :

ಮೇಲೆ ಹೇಳಿದ ಇಟ್ಟಿಗೆ ಪುಡಿಯ ನೆಲದಿಂದ ೩೦ ಸೆ. ಮಿ. ಕೆಳಗೆ ಪೂರ್ವದ ಕಡೆಗೆ ಎರಡು ಕೊಠಡಿಗಳಿದ್ದುವು. ಒಂದು (೫ × ೪ ಮಿ) ಮೇಲಿನ ಉದ್ದನೆ ಗೋಡೆಯ

ಪಕ್ಕದಲ್ಲಿಯೆ ಇದೆ. ಇದರ ಪಶ್ಚಿಮ ಗೋಡೆಯು ಉದ್ದನೆ ಗೋಡೆಯ ಕೆಳಗೆ ಹೋಗಿದೆ. ಮತ್ತೊಂದು ಇದರ ಉತ್ತರಕ್ಕೆ ೧ ಮಿ. ಅಂತರವಲ್ಲಿದೆ. ಇದರ ಕೆಳಗೆ ಹಿಂದಿನ ಕಟ್ಟಡದ ಒಂದು ಗೋಡೆಯಿದೆ.

೫. ಮನೆಗಳು :

ಭಾಗ–೨ರಲ್ಲಿ ಮಾವಿನ ತೋಪಿನ ಉತ್ತರ ಬದಿಯಲ್ಲಿ ದೊರೆತ ಇಟ್ಟಿಗೆ ಕಟ್ಟಡಗಳ ಅವಶೇಷಗಳಲ್ಲಿ ಎರಡು ಮನೆಗಳನ್ನು ಸರಿಯಾಗಿ ಗುರುತಿಸಬಹುದು. ಒಂದ[೧೧]ರಲ್ಲಿ ಎರಡು ಕೊಠಡಿಗಳಿವೆ. ಎರಡು ಸ್ವಲ್ಪ ಹೆಚ್ಚು ಕಡಿಮೆ ಒಂದು ಅಳತೆಯವು. ಸು. ೪.೨೦ × ೩.೮೦ ಮಿ. ಪೂರ್ವ ಪಶ್ಚಿಮ ಅಕ್ಷರೇಖೆಯಲ್ಲಿ ಒಂದರ ಪಕ್ಕದಲ್ಲೊಂದು ಇವೆ. ಪಶ್ಚಿಮದ ಕೊಠಡಿಯು ಉತ್ತರ ಗೋಡೆಯಲ್ಲಿ ಕಿಂಡಿಯಿದೆ. ಪೂರ್ವ ಕೊಠಡಿಯ ಪೂರ್ವ ಬದಿಯಲ್ಲಿ ಅನಂತರ ಕಟ್ಟಿದ ಮತ್ತೊಂದು ಕೊಠಡಿಯ ಅವಶೇಷವಿದೆ. ಹೊರಗೆ ಸಮೀಪದಲ್ಲಿಯೆ ನೈರುತ್ಯಕ್ಕೆ ವೃತ್ತಾಕಾರದ ಭಾವಿ(? ೧.೨೦ ಮಿ. ವ್ಯಾಸ) ಇದೆ.

ಈ ಮನೆಯ ತಳಪಾಯವನ್ನು ಭದ್ರವಾಗಿ ಕಟ್ಟಲಾಗಿದೆ. ಮೊದಲು ಗುಂಡು ಕಲ್ಲುಗಳನ್ನು ಒತ್ತೊತ್ತಾಗಿ ಹಸರಿಸಿದೆ. ಇದರ ಮೇಲೆ ಕೆಂಪು ಗರಸು ಮಣ್ಣು ಹಾಕಿ ಮೇಲೆ ಇಟ್ಟಿಗೆ ಗೋಡೆಯನ್ನು ಏರಿಸಲಾಗಿದೆ.

ಪಶ್ಚಿಮ ಕೋಣೆಯ ಉತ್ತರ ಬದಿಯ ಗೋಡೆಗೆ ತಾಗಿ ಅನಂತರ ಕಟ್ಟಿದ ಪ್ರತ್ಯೇಕವಾದ ಒಂದು ಕಟ್ಟಡವಿತ್ತು. ಗೋಡೆಗೆ ಹತ್ತಿಕೊಂಡ ಆ ಕಟ್ಟಡದ ಗೋಡೆಯ ಭಾಗ ಮಾತ್ರ ಉಳಿದಿತ್ತು.

ಇವೆರಡು ಕೊಠಡಿಗಳ ಮಧ್ಯ ಅಡ್ಡ ಗೋಡೆಯ ಕೆಳಗೆ ಒಂದು ಮೂಲೆಯಲ್ಲಿ ಹಿಂದಿನ ಕಟ್ಟಡದ ಇಟ್ಟಿಗೆ ಗೋಡೆಯ ಅವಶೇಷವಿದೆ.

ಈ ಕಟ್ಟಡದ ಒಳಭಾಗವನ್ನೆಲ್ಲ ಸ್ಥಳೀಕರು ಹಿಂದೆಯೆ ಅಗೆದದ್ದರಿಂದ ನೆಲದ ಗುರುತು ಸಿಗಲಿಲ್ಲ. ಪೂರ್ವದ ಕೊಠಡಿಯ ಪೂರ್ವ ಭಾಗಕ್ಕೆ ಅನಂತರ ಸೇರಿದ ಕೊಠಡಿಯ ನೆಲದ ಒಂದು ಭಾಗ ಮಾತ್ರ ಉಳಿದಿತ್ತು. ಒಳಗಿದ್ದ ಅವಶೇಷಗಳೆಲ್ಲ ಏರುಪೇರಾಗಿ ಹೋಗಿದ್ದುವು. ಅಷ್ಟು ಅಲ್ಲ ಈಗಿನ ಕಾಲದ ವಸ್ತುಗಳು ಸೇರಿಬಿಟ್ಟಿದ್ದುವು. ಪಶ್ಚಿಮದ ಕೊಠಡಿಯೊಳಗಿನ ಹಾಳು ಮಣ್ಣಿನ ೧ ಮಿ. ಕೆಳಗಿನ ಈಗಿನ ಕಾಲದ ಸಣ್ಣ ಬೀರುಗಳಿಗೆ ಉಪಯೋಗಿಸುವ ಗಾಜಿನ ಹಿಡಿಕೆಯು ಸಿಕ್ಕಿತು.

ಈ ಕಟ್ಟಡದ ಮಧ್ಯ ಅಡ್ಡಗೋಡೆಯ ಹತ್ತಿರ. ಹೊರಗೆ ಕಟ್ಟಡಕ್ಕೆ ಹತ್ತಿಕೊಂಡ ಹಾಗೆ ಒಂದು ಗುಂಡಿಯನ್ನು ನೈಸರ್ಗಿಕ ಗರಸು ಮಣ್ಣಿನ ಪದರಿನವರೆಗೂ ಅಗೆಯು

ಲಾಯಿತು. ಹಿಂದೆ ವಿವರಿಸಿದ[೧೨] ಹಾಗೆ ಇಲ್ಲಿ ಸಾಂಸ್ಕೃತಿಕ ಬೆಳವಣಿಗೆಯ ಮೂರು ಹಂತಗಳನ್ನು ಗುರುತಿಸಲಾಯಿತು. ಕೊನೆಯ ಹಂತದಲ್ಲಿ ಮೃತ್ ಪಾತ್ರೆಗಳು, ಮಣಿಗಳು ಮುಂತಾದವುಗಳಲ್ಲದೆ ಕೆಲವು ಮುದ್ರಾಂಕಿತ (Punch marked) ನಾಣ್ಯಗಳು, ಸತು–ತಾಮ್ರ ಮಿಶ್ರ ಲೋಹದ ನಾಣ್ಯಗಳು ಈ ಗುಂಡಿಯಲ್ಲು ಮತ್ತು ಕೊಠಡಿಗಳೊಳಗು ದೊರೆತವು. ಕಟ್ಟಡವು ಶಿನೇ ಪದರಿನ ಮಟ್ಟದಲ್ಲಿ ಕಟ್ಟಲಾಗಿದೆ. ಮತ್ತೊಂದು ಮನೆಯು ಮೇಲೆ ವಿವರಿಸಿದ ಮನೆಯ ಈಶಾನ್ಯ ದಿಕ್ಕಿಗೆ ಸುಮಾರು ೫೦ ಮಿ. ಅಂತರದಲ್ಲಿದೆ. ಇದರಲ್ಲಿ ಒಂದರಪಕ್ಕದಲ್ಲೊಂದರಂತೆ ಎರಡು ಕೊಠಡಿಗಳು, ಇವೆರಡಕ್ಕೂ ಸೇರಿ ಉತ್ತರ ಬದಿಯಲ್ಲಿ ಮೊಗಸಾಲೆಯಿದೆ (ಚಿತ್ರ 2: ೫). ಹೊರಗಡೆ ಇದರ ಪೂರ್ವ ಬದಿಯಲ್ಲಿ ಇಟ್ಟಿಗೆಯ ಚೌಕೋನದ ಒಂದು ಭಾವಿ. ಮೊಟ್ಟೆಯಾಕಾರದ ಮತ್ತು ವೃತ್ತಾಕಾರದ ಕಣಜ (?) ಗಳು ಒಂದರ ಪಕ್ಕದೊಲ್ಲೊಂದು ಇವೆ. ಇದರ ನಿರ್ಮಾಣ ರೀತಿ ಮೇಲೆ ವಿವರಿಸಿದ ಮನೆಯ ತರಹದ್ದೆ ಇದೆ.

ಭಾವಿಗಳು ಮತ್ತು ಕಣಜಗಳು :

ಈಗಾಗಲೇ ಮೇಲೆ ಅಲ್ಲಲ್ಲಿ ಇದ್ದ ಭಾವಿಗಳು ಮತ್ತು ಕಣಜಗಳ ಉಲ್ಲೇಖ ಮಾಡಿದೆ. ಆದರೂ ನಿರ್ಮಾಣ ಕುಶಲತೆ ದೃಷ್ಟಿಯಿಂದ ಒಂದು ವೃತ್ತಾಕಾರದ ಭಾವಿ (ಚಿತ್ರ 2; ೬) ಯನ್ನು ಸ್ವಲ್ಪದರಲ್ಲಿ ವಿವರಿಸುವೆ. ಈ ಭಾವಿಯು ಭಾಗ–೧ ರಲ್ಲಿಯ ಗಜಪೃಷ್ಠಾಕೃತಿಯ ಕಟ್ಟಡದ ದಕ್ಷಿಣ–ನೈರುತ್ಯ ದಿಕ್ಕಿಗೆ ಸಮೀಪದಲ್ಲಿಯೆ ಇತ್ತು. ಹೆಚ್ಚು ಕಡಿಮೆ ಆ ಕಟ್ಟಡದ ಕಾಲದ್ದೆ. ಹಾಳಾಗಿದ್ದ ಇದರ ಮೇಲ್ಭಾಗ ಕಾಣಿಸುತಿತ್ತು. ಇಲ್ಲಿ ಹಾಳು ಮಣ್ಣು ಸುಮಾರು ೫ ಮಿ. ಆಳದಷ್ಟು ಇದೆ. ಇದರ ಕೆಳಗೆ ಮೃದು ಗರಸು ಕೆಂಪುಕಲ್ಲು. ಮೇಲಿಂದ ಕೆಳಗಿನತನಕ ಭಾವಿಯು ಅರ್ಧ ಭಾಗ ಎದ್ದು ಕಾಣುವ ಹಾಗೆ ಗುಂಡಿಯನ್ನು ಅಗೆಯಲಾಯಿತು. ಇದರಿಂದ ಕಟ್ಟುವ ಕೌಶಲ್ಯ ತಿಳಿಯಿತು. ಮೊದಲು ಭಾವಿಗೋಸ್ಕರ ಸುಮಾರು ೧.೮೦ ಮಿ. ನಷ್ಟು ವ್ಯಾಸದ ಗುಂಡಿಯನ್ನು ಕೆಳಗಿನ ಕಲ್ಲಿನವರೆಗೂ ತೆಗೆಯಲಾಗಿದೆ. ಈ ಗುಂಡಿಯ ಬದಿಯಿಂದ ಸ್ವಲ್ಪ ಹೆಚ್ಚು ಕಡಿಮೆ ೮–೧೦ ಸೆ. ಮಿ. ನಷ್ಟು ಅಂತರ ಬಿಟ್ಟು ವರ್ತುಳಾಕಾರದಲ್ಲಿ ಇಟ್ಟಿಗೆ ಗೋಡೆಯನ್ನು ಕಟ್ಟಲಾಗಿದೆ. ಬಿಟ್ಟ ಅಂತರದಲ್ಲಿ ಸುಣ್ಣಕಲ್ಲಿನ ಹರಳನ್ನು ಒತ್ತೊತ್ತಾಗಿ ಮೇಲಿಂದ ಸು. ೬೫ ಮಿ. ಆಳದಷ್ಟು ತುಂಬಲಾಗಿದೆ. ಇಟ್ಟಿಗೆ ಭಾವಿಯ ಒಳಗಿನ ವ್ಯಾಸ ಸುಮಾರು ೧ ಮಿ. ಕೆಳಗೆ ಗರಸು ಕಲ್ಲಿನಲ್ಲಿ ೧ ಮಿ.ನಷ್ಟು ವ್ಯಾಸದ ಗುಂಡಿಯನ್ನು ನೀರಿನ ಮಟ್ಟದವರೆಗೆ ತೋಡಲಾಗಿದೆ. ಈಗ ಇಲ್ಲಿ ಎರಡು ಪ್ರಶ್ನೆಗಳು ನಮ್ಮನ್ನು ಕಾಡುವುವು. ಇಟ್ಟಿಗೆ ಗೋಡೆಯನ್ನು ಕಟ್ಟುವ ವ್ಯಾಸದಷ್ಟು ಗುಂಡಿ ತೆಗೆದಿದ್ದರೆ ಸಾಕಾಗುತ್ತಿಲ್ಲವೆ ? ಅದರೆ ಇದಕ್ಕೂ ಹೆಚ್ಚಿನ ವ್ಯಾಸದಷ್ಟು ತೆಗೆದು ಇಟ್ಟಿಗೆ ಗೋಡೆಯ ಹೊರಗೆ ಬಿಟ್ಟ ಅಂತರದಲ್ಲಿ ಮತ್ತೆ ಸುಣ್ಣ ಕಲ್ಲಿನ ಹರಳು ತುಂಬಿದ್ದಾದರೂ ಏಕೆ ? ಹೀಗೆ ವಿಚಾರ ಮಾಡಿದಾಗ ಕಟ್ಟಿದ ಚಾತುರ್ಯ ತಿಳಿಯು

ತ್ತದೆ. ಈ ಭಾವಿಯನ್ನು ೫ ಮಿ. ಆಳದಷ್ಟು ಹಾಳು ಮಣ್ಣಿನ ಮೂಲಕ ತೆಗೆಯ ಬೇಕು. ಸಾಮಾನ್ಯವಾಗಿ ಹಾಳುಮಣ್ಣು ಸಡಿಲವಾಗಿ ಇರುತ್ತದೆ. ಇದರ ಸಾಂದ್ರತೆ ಮತ್ತು ಅಷ್ಟು ಒತ್ತಡ ಏಕಪ್ರಕಾರವಾಗಿರುವುದಿಲ್ಲ. ಇಟ್ಟಿಗೆ ಗೋಡೆ ಎಷ್ಟೆ ಗಟ್ಟಿ ಇದ್ದರೂ ಅಸಮ ಒತ್ತಡದಿಂದ ಭಾವಿಯ ಯಾವುದಾದರೂ ಭಾಗಕ್ಕೆ ಧಕ್ಕೆಯಾಗ ಬಹುದು. ಎರಡನೆಯದಾಗಿ ಮೇಲಿಂದ ಮಳೆ ನೀರು ಕೆಳಗಿಳಿದು ಹಾಳುಮಣ್ಣಿನ ಮಲಿನದ ಜೊತೆಗೆ ಭಾವಿಯೊಳಗೆ ಜಿನುಗುವುದು. ಭಾವಿಯ ನೀರು ಕೆಡುತ್ತದೆ. ಇವೆರಡನ್ನು ತಡೆಗಟ್ಟಲು ಗೋಡೆ ಮತ್ತು ಹಾಳುಮಣ್ಣಿನ ನಡುವೆ ಸುಣ್ಣದ ಗಟ್ಟಿ ಪದರುಗಳನ್ನು ಒತ್ತೊತ್ತಾಗಿ ತುಂಬುವುದು ಸುಲಭ ಉಪಾಯ. ಇದು ಹಾಳು ಮಣ್ಣಿನ ಅಸಮ ಒತ್ತಡವನ್ನು ಗೋಡೆಗೆ ಅಷ್ಟೆ ಪ್ರಮಾಣದಲ್ಲಿ ತಾಗದ ಹಾಗೆ ತಡೆ ಹಿಡಿಯುತ್ತದೆ. ಎರಡನೆಯದಾಗಿ ಮೇಲಿನ ನೀರು ಇದರ ಮೂಲಕ ಜಿನುಗಿದರೆ ಅದು ಸ್ವಚ್ಛವಾಗುತ್ತದೆ. ಹೀಗೆ ಭಾವಿಗೆ ಉಂಟಾಗುವ ಧಕ್ಕೆಯನ್ನು ನೀರಿಗಾಗುವ ಮಲಿನತೆಯನ್ನು ಅತ್ಯಂತ ಸರಳ ರೀತಿಯಲ್ಲಿ ತಡೆಗಟ್ಟಿರುವುದು ನಿಜವಾಗಿಯೂ ಮೆಚ್ಚತಕ್ಕದ್ದು. ಆದರೆ ಈ ಉಪಾಯ ಎಲ್ಲ ಭಾವಿಗಳ ನಿರ್ಮಿತಿಯನ್ನು ಕಂಡು ಬಂದಿಲ್ಲ.

ಭಾಗ–೧ರ ಈಶಾನ್ಯ ಭಾಗದಲ್ಲಿ ತೆಗೆದ ಒಂದು ದೊಡ್ಡ ಗುಂಡಿಯಲ್ಲಿ ಒಂದು ಕಟ್ಟಡದ-ಇದರ ಕೇವಲ ಎರಡು ಗೋಡೆಗಳ ಭಾಗಗಳು ಮಾತ್ರ ಉಳಿದಿತ್ತು–ಹೊರಗೆ ದಕ್ಷಿಣ ಬದಿಯಲ್ಲಿ ಒಂದರ ಪಕ್ಕದಲ್ಲಿ ಒಂದರಂತೆ ಮೂರು ವೃತ್ತಾಕಾರದ ಇಟ್ಟಿಗೆ ಕಣಜಗಳಿದ್ದವು. ಸಾಮಾನ್ಯವಾಗಿ ೩–೪ ಮಿ. ಆಳ. ಕೆಳಗೆ ಮಣ್ಣಿನ ಮೇಲೆ ಇಟ್ಟಿಗೆ ಹಾಸಿ ಗಟ್ಟಿಮಾಡಿದ ಗುರುತುಗಳಿವೆ. ಒಂದರಲ್ಲಿ ಕೆಳಗೆ ಸುಮಾರು ೧ ಕಿ.ಲೊ. ದಷ್ಟು ಕಪ್ಪಾಗಿ ಹೋಗಿದ್ದ ಅಕ್ಕಿ ಸಿಕ್ಕಿತು.

ಇಲ್ಲಿ ದೊರೆತ ಮೃತ್ ಪಾತ್ರೆಗಳ ಅವಶೇಷಗಳಲ್ಲಿ ಉತ್ತಮ ತರಗತಿಯ ಹೊಳೆ ಯುವ ಕೆಂಪು ಬಣ್ಣದ ಉದ್ದನೆ ಮೂತಿಯ ಹೂಜಿಗಳ ಚೂರುಗಳು ಬಹಳ ಇದ್ದುವು. ಇಂಥ ಹೂಜಿಯನ್ನು (Red polished sprinkler) ದ್ರಾಕ್ಷಾರಸವನ್ನು ತುಂಬಿದಲು ಬಳಸಲಾಗುತ್ತಿತ್ತೆಂದು ತಿಳಿಯಲಾಗಿದೆ. ಸತು–ತವರದ ನಾಣ್ಯಗಳು, ಮಣಿಗಳು ಹೆಚ್ಚಾಗಿ ಸಿಕ್ಕುವು. ಆದ್ದರಿಂದ ಕಣಜಗಳಿಂದ ಕೂಡಿದ ಈ ಕಟ್ಟಡವು ಒಬ್ಬ ಶ್ರೀಮಂತನ ದಾಗಿರಬೇಕು.

ಈ ಭಾಗದಲ್ಲಿ ಮೇಲೆ ವರ್ಣಿಸಿದ ಎರಡನೇ ಮನೆಹತ್ತಿರ ಒಂದು ಮನೆಯ ಕೇವಲ ಕಲ್ಲುಗುಂಡಿನ ತಳಪಾಯ ಉಳಿದಿದ್ದು ಅದರ ಬದಿಯಲ್ಲಿ ಇಂಥ ಎರಡು ಕಣಜಗಳು. ಇದರ ಪಶ್ಚಿಮಕ್ಕೆ ಸುಮಾರು ೨೦ ಮಿ. ಅಂತರದಲ್ಲಿ ಒಂದು ಹಾಳಾದ ಕಟ್ಟಡದ ಬದಿಯಲ್ಲಿ ೨ ಕಣಜಗಳು ದೊರೆತಿವೆ.

ನಿರ್ಮಾಣದ ವೈಶಿಷ್ಟ್ಯ :

ಮನೆಯ ತಳಪಾಯ ಕಟ್ಟಿದ ಬಗೆಯನ್ನು ಮೇಲೆ ವಿವರಿಸಿದೆ. ಗೋಡೆಯಲ್ಲಿಯ ಇಟ್ಟಿಗ ಜೋಡಣೆಯಲ್ಲಿ ಮುಖ್ಯವಾಗಿ ಎರಡು ಕ್ರಮಗಳಿವೆ. ಒಂದು ಸಾಲಿನಲ್ಲಿ ಒಂದರ ಪಕ್ಕದಲ್ಲೊಂದು ಅಡ್ಡಲಾಗಿ (Headers) ಇದರ ಮೇಲಿನ ಸಾಲಿನಲ್ಲಿ ಜೋಡಿ ಇಟ್ಟಿಗಗಳನ್ನು ಉದ್ದವಾಗಿ (Stretchers) ಜೋಡಿಸುವುದು ಒಂದು ಕ್ರಮ. ಇಲ್ಲವೆ ಒಂದೇ ಪದರಿನಲ್ಲಿ ಉದ್ದವಾಗಿ ಇದರ ಪಕ್ಕದಲ್ಲಿ ಅಡ್ಡಲಾಗಿ ಜೋಡಿಸಿದ ಇಟ್ಟಿಗೆಗಳ ಎರಡು ಸಾಲು. ಇದರ ಮೇಲಿನ ಸಾಲಿನಲ್ಲಿ ಈ ಕ್ರಮವನ್ನು ತಿರುಗು ಮುರುಗು ಮಾಡುವುದು ಇನ್ನೊಂದು ಕ್ರಮ. ಮೊದಲಿನ ಕ್ರಮ ಹಿಂದಿನ ಹರಪ್ಪಾ ಸಂಸ್ಕೃತಿಯ (ಸು. ಕ್ರಿ. ಪೂ. ೨೩೦೦–೧೭೫೦) ಇಟ್ಟಿಗೆ ಕಟ್ಟಡಗಳ ನಿರ್ಮಾಣದಲ್ಲಿಯೂ ಇದೆ. ಈ ಕ್ರಮಕ್ಕೆ ಈಗ "ಇಂಗ್ಲಿಷ್ ಬಾಂಡ್" ಎಂದು ಹೆಸರಿಸಲಾಗಿದೆ. ಕಟ್ಟುವುದಕ್ಕೆ ಕಲಸುಮಣ್ಣನ್ನು ಉಪಯೋಗಿಸಲಾಗಿದೆ.

ವೃತ್ತಾಕಾರದ ಭಾವಿ/ಕಣಜಗಳಿಗೆ. ಆಯತಾಕಾರದ ಇಟ್ಟಿಗೆಗಳಲ್ಲದೆ. ವರ್ತುಳವು ಸರಿಯಾಗಿ ಬರುವಂತೆ ಕಮಾನಿನಂತೆ ಬಾಗಿದ ಇಟ್ಟಿಗೆ. ಟ್ರೆಪಿಜಿಯಮ್ ಇಟ್ಟಿಗೆಗಳನ್ನು ಉಪಯೋಗಿಸಲಾಗಿದೆ. ಈ ಆಕಾರದ ಇಟ್ಟಿಗೆಗಳನ್ನು ದುಂಡು ಭಾವಿ/ಕಣಜಗಳಿಗೋಸ್ಕರವೇ ಸಿದ್ಧಪಡಿಸಿದ್ದು.

ಕೆಲವು ಕಟ್ಟಡಗಳಲ್ಲಿ ಒಂದು ಮಟ್ಟದ ತನಕ ಗೋಡೆಗಳನ್ನು ಏರಿಸಿ ಅನಂತರ ಸಮಾನಾಂತರದಲ್ಲಿ ಕಂಬಗಳನ್ನೂ ಅವುಗಳಲ್ಲಿ ನೆಡಲಾಗುತ್ತಿತ್ತೆಂದು ಅಸ್ಪಷ್ಟವಾಗಿ ಗೋಚರವಾಗಿದೆ. ಕಂಬಗಳ ಮಧ್ಯದಲ್ಲಿ ಕಾಲಾಂತರದಲ್ಲಿ ನಶಿಸಿ ಹೋಗುವಂಥ ಬಲವಾದ ತಟ್ಟಿಗಳನ್ನು ಕಟ್ಟಿಕೊಳ್ಳಲಾಗುತ್ತಿತ್ತೆಂದು ಊಹಿಸಬಹುದು. ಭಾಗ–೩. ೧ ನೆ ಗುಂಡಿಯಲ್ಲಿ ಇದ್ದ ಗೋಡೆಗಳಲ್ಲಿ ಸಮಾನಾಂತರದಲ್ಲಿ ದಪ್ಪ ಗೂಟಗಳನ್ನಿಡುವಷ್ಟು ಗುಂಡಿಗಳಿದ್ದವು. ಸಾಮಾನ್ಯ ಜನರಿಗೆ ಇಡಿಮನೆಯನ್ನು ಇಟ್ಟಿಗೆಯಿಂದ ಕಟ್ಟಿಕೊಳ್ಳಲಾಗದಿದ್ದರಿಂದ ಈ ಕ್ರಮವನ್ನು ಅನುಸರಿಸಿರಬೇಕು. ಈ ಪದ್ಧತಿಯಲ್ಲಿ ಕಟ್ಟಿದ ಮನೆಗಳನ್ನು ಈಗಲೂ ಘಟ್ಟ ಪ್ರದೇಶದ ಗೇರುಸೊಪ್ಪೆ–ಹೊನ್ನಾವರ ಪ್ರದೇಶದಲ್ಲಿ ನೋಡಿದ್ದೇನೆ.

ಬಹಳಷ್ಟು ಮನೆಗಳಿಗೆ ಆಯತಾಕಾರದ ಸಮತಲದ ಹಾಗು ಒಂದಕ್ಕೊಂದು ಜೋಡಿಸಲಾಗುವಂಥ ಕೈಹಂಚಿನ ಮಾಡು ಇತ್ತು. ಐದಾರು ಕಟ್ಟಡಗಳ ಬದಿಗಳಲ್ಲಿ ಹೇರಳವಾಗಿ ಕೈಹಂಚುಗಳು ಬಿದ್ದಿದ್ದವು.

ಇಟ್ಟಿಗೆಗಳು ನಿಯಮಿತ ಅಳತೆಗಳಲ್ಲಿವೆ. ಮೊದಲಿನ ಕಟ್ಟಡಗಳಿಗೆ ಸಾಮಾನ್ಯವಾಗಿ ೪೪ × ೨೨ × ೮ ಸೆ. ಮಿ. ಅಳತೆಯ ಇಟ್ಟಿಗೆಗಳನ್ನೇ ಹೆಚ್ಚಾಗಿ ಉಪಯೋಗಿಸಲಾಗಿದೆ. ಅವಲ್ಲದೆ ೩೪ × ೩೭ × ೧೦, ೨೪ × ೨೪ × ೮ ಸೆ. ಮಿ. ಅಪರೂಪವಾಗಿ



ಚಿತ್ರ ೩. ವಡಗಾಂವ್–ಮಾಧವಪುರ : ೧–೨ನೇ ಶತಮಾನದ ಆಟಿಕೆಗಳು ಮಣ್ಣಿನ ಗೊಂಬೆಗಳು.

೫೨ × ೨೮ × ೧೦ ಸೆ. ಮಿ. ಅಳತೆಗಳ ಇಟ್ಟಿಗೆಗಳೇ ಹೆಚ್ಚಾಗಿ ೨ನೇ ಶತಮಾನದ ಕಟ್ಟಡಗಳಲ್ಲಿ ಉಪಯೋಗಿಸಲಾಗಿದೆ.

ಕೊನೆಯ ಹಂತದ ಕೊನೆಯ ಭಾಗದ ಕಟ್ಟಡಗಳಲ್ಲಿ ಹಿಂದಿನ ಕಟ್ಟಡಗಳ ತುಂಡು ಇಟ್ಟಿಗೆಗಳನ್ನು ಬಳಸಲಾಗಿದೆ. ಇದು ಜನಜೀವನದ ಮಟ್ಟದಲ್ಲಿ ಅವನತಿಯ ಹಂತವನ್ನು ಸೂಚಿಸುತ್ತದೆ.

ಇತರ ಮಹತ್ವದ ಪುರಾತತ್ವ ಅವಶೇಷಗಳು

ಗೊಂಬೆಗಳು :

೧) ಕಲ್ಲಿನ ಒಂದು ವಿಗ್ರಹದ ಚಕ್ಕೆ : ಉಬ್ಬಿದ ಎದೆಯ ಭಾಗ. ಕುತ್ತಿಗೆಗೆ ಪದಕದಸರ. ಯಜ್ಞೋಪವೀತವಿದೆ (ಚಿತ್ರ 3; ೩). ಆದ್ದರಿಂದ ಇದು ಸ್ತ್ರೀ ದೇವತೆ ವಿಗ್ರಹವಿದ್ದು. ಭಾಗ–೩, ೫ನೇ ಗುಂಡಿ ಪೂರ್ವ ಬದಿಯಲ್ಲಿ ನೆಲೆಯ ಮೇಲೆ ಸಿಕ್ಕಿತು. ಆದರೂ ಶಿಲ್ಪ ಲಕ್ಷಣದ ಮೇಲೆ ಸಿಕ್ಕಸ್ಥಳದ ಆಧಾರದ ಮೇಲೆ ಈ ನೆಲೆಯ ಟ್ರ್ಯಾಕ್ಟರ್[೧೨] ಹೊಡೆದಾಗ ಮೇಲೆ ಬಂದಿರಬೇಕೆಂದು ಊಹಿಸಿದರೆ ತಪ್ಪಾಗಲಾರದು. ಆಕಸ್ಮಿಕವಾಗಿ ಕಾಲಾಂತರದಲ್ಲಿ ಈ ನೆಲೆಯಲ್ಲಿ ಸೇರಿ ಹೋಗಿರಬೇಕು. ಇದರ ಕಾಲಮಾನ ಸು. ೮–೯ನೇ ಶತಮಾನದ್ದಿರಬಹುದು.

೨) ಒಂದು ಚೆಲುವಾದ ಹೂವಿನ ಚಿತ್ರದ ಕೆತ್ತನೆಯುಳ್ಳ ಕಲ್ಲಿನ ಚೌಕಟ್ಟು (ಭಾಗ–೩: ಗುಂಡಿ–೪ ಪದರು ೨) ಇದಕ್ಕೆ ಮೂಲೆಯಲ್ಲಿ ಆಯತಾಕಾರದ ತೂತುಗಳಿವೆ. (ಚಿತ್ರ 3: ೨). ಇದು ಒಂದು ಪೂಜಾಮೂರ್ತಿಯ ಹೊರಗಿನ ಚೌಕಟ್ಟು ಎಂದು ಕಾಣುತ್ತದೆ.

೩) ಮನುಷ್ಯನ ರುಂಡ (ಚಿತ್ರ 4; ೩. ೪). ಸುಟ್ಟ ಮಣ್ಣಿನ ಟೊಳ್ಳು ಗೊಂಬೆ. ಕಪ್ಪು ಲೇಪನವಿದೆ. ಲಕ್ಷಣಗಳ ಮೇಲಿಂದ ಬುದ್ಧನ ಮೂರ್ತಿಯದೆಂದು ಗುರುತಿಸಬಹುದು. ೪ನೇ ಗುಂಡಿಯಲ್ಲಿ ಸುಮಾರು ೨೦೦–೨೫೦ ವರ್ಷಗಳ ಹಿಂದೆ ಇದ್ದ ಜನರು ತೋಡಿದ ಕಸದ ಗುಂಡಿಯಲ್ಲಿತ್ತು. ತಲೆಯ ಮೇಲೆ ಉಷ್ಣೀಷ. ಗುಂಗುರು ಕೂದಲು : ರೇಖೆಗಳಿಂದ ಸೂಚಿಸಲಾಗಿದೆ. ಕೂದಲಿನ ಒಪ್ಪ, ಕಿರಿದಾದ ಹಣೆ, ಧ್ಯಾನಸ್ಥ ಕಣ್ಣುಗಳು. ಕಣ್ಣಿನ ಮಧ್ಯದಲ್ಲಿ ಕಣ್ಮಣಿಯನ್ನು ಸೂಚಿಸುವ ಚುಕ್ಕಿಗಳು, ಚೂಪನೆ ಮೂಗು. ಮೂಗಿನ ಸೊಳ್ಳೆಗಳನ್ನು ಸೂಚಿಸುವ ರೇಖೆಗಳು. ದಪ್ಪನೆ ತುಟಿಗಳು. ದುಂಡುಗಲ್ಲ ಉದ್ದನೆ ಸಪಾಟಾದ ಕಿವಿಗಳು : ಇವುಗಳೆಲ್ಲದರ ಮಾಟ ಅಪರೂಪದ ಉತ್ತಮ ಶೈಲಿಯ ನಿದರ್ಶನ. ಇಲ್ಲಿ ಹಾಗೂ ಬೇರೆಡೆಗಳಲ್ಲಿಯ ಸಮಕಾಲೀನ ನೆಲೆಗಳಲ್ಲಿ ದೊರೆತ ಗೊಂಬೆಗಳ ಪೈ ಮಾಟದ ಯಾವ

ಶೈಲಿಗೂ ಹೋಲುವುದಿಲ್ಲ. ಒಂದು ವಿಶಿಷ್ಟ ಶೈಲಿಯು ಪ್ರಭಾವಕ್ಕೊಳಗಾದ ಶೈಲಿಯಾಗಿದ್ದು ಬೇರೆಡೆಯಿಂದ ಬಂದ ಹಾಗೆ ಕಾಣುತ್ತದೆ. ಅಥವ ಒಂದು ಪ್ರತ್ಯೇಕ ಕಲಾಸಂಪ್ರದಾಯಕ್ಕೆ ಸೇರಿದ್ದು. ಈ ದಿಶೆಯಲ್ಲಿ ಶೋಧನೆ ಮುಂದುವರೆಸಬೇಕಾಗಿದೆ. ಇದು ಕಸದ ಗುಂಡಿಗೆ ಕಾರಣರಾದ ಜನರದ್ದಂತೂ ಅಲ್ಲ. ಗುಂಡಿ ತೋಡಿದ ಮಣ್ಣಿನ ಅಥವ ಸುತ್ತಮುತ್ತಲಿನ ಮಣ್ಣಿನಲ್ಲಿದ್ದು ಆಕಸ್ಮಿಕವಾಗಿ ಗುಂಡಿಯೊಳಗೆ ಸೇರಿ ಹೋಗಿದೆ. ಒಟ್ಟಿನಲ್ಲಿ ಬೌದ್ಧ ಧರ್ಮದ ಅನುಯಾಯಿಗಳಿದ್ದರೆಂಬುದಕ್ಕೆ ಇದು ಪ್ರತ್ಯಕ್ಷ ಪ್ರಮಾಣವಾಗಿದ್ದು ಹಿಂದಿನ ಅಭಿಪ್ರಾಯ[೧೩]ವನ್ನು ಸ್ಪಷ್ಟೀಕರಿಸುತ್ತದೆ.

೪) ಮೃತ್ ಪಾತ್ರೆಯ ಮೇಲಿನ ಗಣೇಶನ ಚಿತ್ರ (ಚಿತ್ರ 4: ೫) ಭಾಗ–೩. ೪ನೇ ಗುಂಡಿ ೨ನೇ ಪದರಿನಲ್ಲಿ ದೊರೆತ ದಪ್ಪನೆ ಮೃತ್ ಪಾತ್ರೆಯ ಹೊಟ್ಟೆಯ ಹೊರ ಮೈಯಲ್ಲಿ ಮೂಡಿಸಿದ ಉಬ್ಬು ಚಿತ್ರ ಒಳಭಾಗ ಹೊಳಪಾದ ಕೆಂಪು ಬಣ್ಣ. ನಿಸ್ಸಂಶಯವಾಗಿ ೨–೩ನೇ ಶತಮಾನದ ಮೃತ್ ಪಾತ್ರೆ. ಬೋಳು ತಲೆ. ಆನೆಮುಖ. ಕೋರೆ, ಉಬ್ಬಿದ ಹೊಟ್ಟೆ ತಕ್ಕಮಟ್ಟಿಗೆ ಗುರುತಿಸಲು ಸಾಧ್ಯ ಉಳಿದ ಅಂಗಾಂಗಗಳು ಅಸ್ಪಷ್ಟ. ಒಟ್ಟಿನಲ್ಲಿ ಈ ಭಾಗದ ಇಷ್ಟು ಪ್ರಾಚೀನ ಗಣೇಶನ ಚಿತ್ರ ಇದೇ. ಈ ಚಿತ್ರವಿರುವ ಪಾತ್ರೆಯು ಧಾರ್ಮಿಕ ಆಚರಣೆಯ ಉಪಯೋಗಕ್ಕಿದ್ದಿರಬೇಕು. ಶೈವ ಧರ್ಮವೂ ಒಳ್ಳೆ ಪ್ರಭಾವಶಾಲಿ[೧೪]ಯಾಗಿತ್ತೆಂಬುದಕ್ಕೆ ಇದು ಮತ್ತೊಂದು ನಿದರ್ಶನ

೫) ಮನುಷ್ಯನ ಮುಖ (ಚಿತ್ರ 4; ೨ ಭಾಗ–೩. ಗುಂಡಿ ೪ ಪದರು ೨) ಸುಟ್ಟ ಮಣ್ಣಿನದು ಟೊಳ್ಳಾಗಿದೆ. ಉದ್ದನೆ ಮುಖ ಅಗಲವಾದ ಹಣೆ. ಬೊಗಸೆಗಣ್ಣು. ದೊಡ್ಡ ಮೂಗು. ಸ್ಥಳಿಕ ಶೈಲಿ. ಇದರಲ್ಲಿಯ ಅತ್ಯಂತ ಗಮನಾರ್ಹ ಸಂಗತಿಯೆಂದರೆ ಹಣೆಯ ಮೇಲಿನ ಕೊರೆದ ಮೂರುನಾಮ ಶ್ರೀ ವೈಷ್ಣವರ ವಡಗಲೈ ಸಂಪ್ರದಾಯದವರ ಚಿಹ್ನೆಗೆ ಹೋಲುತ್ತದೆ. ಈ ಹೋಲಿಕೆ ಮೇಲೆ ಆ ಧಾರ್ಮಿಕ ಸಂಪ್ರದಾಯಕ್ಕೂ ಗೊಂಬೆಯ ಚಿಹ್ನೆ ಸೂಚಿತಾರ್ಥ ಸಂಬಂಧ ಕಲ್ಪಿಸಲು ಸಾಧ್ಯವಿಲ್ಲ. ಏಕೆಂದರೆ ಐತಿಹಾಸಿಕವಾಗಿ ಅಸಂಬದ್ಧವಾಗುತ್ತದೆ. ಆದರೆ ಈ ಚಿಹ್ನೆ ಬಹಳ ಪ್ರಾಚೀನ. ಹರಪ್ಪಾ ಮುದ್ರಿಕೆ[೧೫]ಯೊಂದರಲ್ಲಿ ಈ ಚಿಹ್ನೆಯಿದೆ. ಈ ಚಿಹ್ನೆಗೆ ಧಾರ್ಮಿಕ ಅರ್ಥವಿದ್ದು ಅವನ್ನು ಸಂಬಂಧಪಟ್ಟ ವ್ಯಕ್ತಿಗಳು ಉಪಯೋಗಿಸುತ್ತಿದ್ದಿರಬೇಕು. ಪ್ರಾಗೈತಿಹಾಸಿಕ ಅಥವ ಕಾಡು ಜನಾಂಗದವರು ತಮ್ಮ ಧಾರ್ಮಿಕ ಹಬ್ಬ ಕಟ್ಟಳೆಗಳಲ್ಲಿ ಭಾಗವಹಿಸುತ್ತಿದ್ದಾಗ ಹಲವಾರು ಚಿಹ್ನೆಗಳನ್ನು ತಮ್ಮ ದೇಹಗಳ ಮೇಲೆ ಬರೆದುಕೊಳ್ಳುತ್ತಿದ್ದರು. ಈ ಹಿನ್ನೆಲೆಯಲ್ಲಿ ಮೇಲಿನ ಗೊಂಬೆಯ ಚಿಹ್ನೆಯನ್ನು ವಿಮರ್ಶಿಸಬೇಕು.

೬) ಗೂಳಿ (ಚಿತ್ರ 4: ೧. ಭಾಗ–೩. ಗುಂಡಿ ೪ ಪದರು ೨) ಸುಟ್ಟ ಮಣ್ಣಿನ ಗಟ್ಟಿಗೊಂಬೆ. ಬಲವಾದ ಮುಸುಡಿ. ಸಣ್ಣ ಕೊಂಬು. ಎತ್ತರದ ಇಣಿ. ಪುಷ್ಟವಾದ ದೇಹ ತುಂಬು ವಯಸ್ಸಿನ ಬಲಯುತ ಗೂಳಿ. ಆದರೆ ಕಾಲುಗಳನ್ನು



ಚಿತ್ರ ೪. ವಡಗಾಂವ್–ಮಾಧವಪುರ : ೧–೨ನೇ ಶತಮಾನದ ಮಣ್ಣಿನ ಗೊಂಬೆಗಳು.

ಸ್ವಪಕ್ಕ ತಕ್ಕಂತೆ ಸರಿಯಾಗಿ ಬಿಡಿಸಿಲ್ಲ. ಬಾಲವಿಲ್ಲದಿರುವುದು ಮಾಡಿದವನ ಆಕಸ್ಮಿಕ ಅಚಾತುರ್ಯವೆಂದೇ ತಿಳಿಯಬೇಕು. ಮೇಲೆ ಕಪ್ಪು ಬಣ್ಣದ ಲೇಪನವಿದೆ.

೭) ಮನುಷ್ಯನ ಗೊಂಬೆಗಳು (ಚಿತ್ರ 3: ೪ ಭಾಗ–೩) ಬಲದಿಂದ ಎಡಕ್ಕೆ ಮನುಷ್ಯ ತಲೆ ಮುಂಭಾಗ. ಹಿಂಭಾಗ (ಗುಂಡಿ ೪ ಪದರು ೨): ಬಲಗಾಲು (ಗುಂಡಿ ೩. ಪದರು ೨): ಮತ್ತು ಒಬ್ಬ ವ್ಯಕ್ತಿಯ ಕೇಶ ಮಕುಟ. ಮೊದಲನೆಯದರಲ್ಲಿ ದುಂಡು ಮುಖ. ಬಾದಾಮಿಯಾಕಾರದ ಕಣ್ಣು. ಅಗಲ ಮೂಗು. ದಪ್ಪ ತುಟಿ, ಬಾಚಿದ ಕೂದಲು. ಮಣಿ ಖಚಿತ ತಲೆಪಟ್ಟಿ ಎರಡನೆಯದು ಅದೇ ಶೈಲಿ. ಕಿರಿದಾದ ಭುಜ. ಸಪೂರ ಸ್ವಲ್ಪ ಎದ್ದು ಕಾಣುವ ಹೊಟ್ಟೆ. ತಲೆ ಪಟ್ಟಿಯಲ್ಲದೆ, ಕುಂಡಲಗಳು. ಕಂಠಾಭರಣ. ಮತ್ತು ಉತ್ತರೀಯ ಅಲಂಕರಿಸಿವೆ. ಮೂರನೆಯದು, ದೃಢಕಾಯದ ಮನುಷ್ಯನ ಬಲಗಾಲು ಹೊಸೆದಹಗ್ಗ ಮಾದರಿಯ ದಪ್ಪ ಕಾಲು ಬಳೆ ಮತ್ತು ತೆಳ್ಳನೆ ಪಾದರಕ್ಷೆ ಇವೆ. ನಾಲ್ಕನೆಯದು ನೀಳ ಕೇಶವನ್ನು ಮೇಲಕ್ಕೆತ್ತಿ ವಿಶಿಷ್ಟ ರೀತಿಯ ಶೈಲಿಯಲ್ಲಿ ಮಣಿಹಾರದಿಂದ ಅಲಂಕರಿಸಿರುವುದು ಈ ರೀತಿಯ ಕೇಶಾಲಂಕಾರ ಗುಪ್ತರ ಕಾಲದ ಮೂರ್ತಿ ಶಿಲ್ಪದಲ್ಲಿದೆ. ಎಲ್ಲವುದರ ಮೇಲೆ ಸಾಮಾನ್ಯವಾಗಿ ನಸುಗೆಂಪಿನ ಬಣ್ಣದ ತೆಳ್ಳನೆ ಲೇಪನವಿದೆ. ಟೊಳ್ಳು ಗೊಂಬೆಗಳು ೧–೩ನೇ ಶತಮಾನದ ಕುಶಾನ–ಮಥುರಾ ಶೈಲಿಯಲ್ಲಿವೆ.

೮. ತಾಮ್ರದ ಗೊಂಬೆ (ಭಾಗ–೩. ಗುಂಡಿ ೪ ಪದರು ೪)

ಸುಮಾರು ೧೩ ಸೆಂ. ಮಿ. ಎತ್ತರದ ಕುಳಿತ ಸಿಂಹದ ತಾಮ್ರದ ಗಟ್ಟಿಗೊಂಬೆ ಬಲು ಸಣ್ಣದಿದ್ದರೂ ಕುತ್ತಿಗೆ ಸುತ್ತಲಿನ ಕೇಸರಿ. ಬಾಯಿ ಸ್ಪಷ್ಟವಾಗಿ ಬಿಡಿಸಲಾಗಿದೆ.

ಆಟಿಗೆಗಳು :

ಮೇಲೆ ಹೇಳಿದಂತೆ. ಹೆಚ್ಚಾಗಿ ೩, ೪ ಮತ್ತು ಒಂದು ೭ನೇ ಗುಂಡಿಗಳ ೨, ೩ನೇ ಪದರುಗಳಲ್ಲಿ ಪಗಡೆ ಆಟದ ದಂತದ ದಾಳಗಳು ಸುಮಾರು ೫, ೬ ಸಿಕ್ಕಿವೆ. ೨ ಸೆ. ಮಿ. ಯಿಂದ ೭ ಸೆ.ಮಿ. ವರೆಗೆ ಉದ್ದ ಮತ್ತು ೧ ರಿಂದ ೧೩ ಸೆ.ಮಿ. ಚಚ್ಚೌಕವು ಆಗಿವೆ. ನಾಲ್ಕು ಮೈಗಳುಳ್ಳ ಅದು ಕ್ರಮವಾಗಿ ೧. ೨. ೩. ಮತ್ತು ೪ ಏಕ ಕೇಂದ್ರದ ವರ್ತುಲ ವೃತ್ತಗಳನ್ನು ಕೊರೆಯಲಾಗಿದೆ (ಚಿತ್ರ 3: ೧). ಪಗಡೆ ಕಾಯಿ ಸುಟ್ಟ ಮಣ್ಣಿನದು (ಚಿತ್ರ 3; ೧ ಗುಂಡಿ ೪. ಪದರು ೨). ಈಗಲೂ ಉಪಯೋಗದಲ್ಲಿರುವ ಪಗಡೆಕಾಯಿ ತರಹವೇ ಇದೆ. ಸ್ವಲ್ಪ ಮಟ್ಟಿಗೆ ಚಿತ್ರಿತವಾಗಿದೆ. ಈಗ ಪ್ರಚಲಿತ ಪಗಡೆ ಆಟದ ಪ್ರಾಚೀನತೆ ವೇದಗಳ ಕಾಲದವರೆಗೆ ಒಯ್ಯಬಹುದೇನೋ ನಿಜ. ಋಗ್ವೇದದ ಹತ್ತನೇ ಮಂಡಲದಲ್ಲಿಯ ಮನ ಕರಗಿಸುವ ಅಕ್ಷಸೂಕ್ತ ಸುಪ್ರಸಿದ್ಧ. ಆದರೆ ಈ ಆಟದ ಉಪಕರಣಗಳು ಹೇಗಿವೆ ಎಂಬ ಕಲ್ಪನೆ ಈ ಸೂಕ್ತದಿಂದಾಗಲಿ ಮಹಾಭಾರತದಲ್ಲಿ

ಉಲ್ಲೇಖಿಸಿದ ನಳ-ದಮಯಂತಿಯ ಪುರಾತನ ಕಥೆಯಿಂದಾಗಲಿ ಅಥವ ಮಹಾಭಾರತದ ಸರ್ವನಾಶಕಾರಿಯಾದ ಧರ್ಮರಾಯ-ದುರ್ಯೋಧನನ ಪಗಡೆಯಾಟದ ವರ್ಣನೆಯಿಂದಾಗಲಿ ಸರಿಯಾದ ಕಲ್ಪನೆ ಬರುವುದಿಲ್ಲ. ಈ ನೆಲೆಯಲ್ಲಿ ದೊರೆತ ದಾಳ ಮತ್ತು ಕಾಯಿ ಈ ಆಟದ ಉಪಕರಣಗಳು ಹೇಗಿರುತ್ತಿದ್ದವೆಂಬುದನ್ನು ಪ್ರಮಾಣೀಕರಿಸುತ್ತದೆ.

ನಾಣ್ಯಗಳ ಅಚ್ಚುಗಳು ಮತ್ತು ನಾಣ್ಯಗಳು :

ಭಾಗ-೧, ೨ ಮತ್ತು ೪ನೇ ಗುಂಡಿಗಳಲ್ಲಿ ಸಣ್ಣ ನಾಣ್ಯಗಳನ್ನು ತಯಾರಿಸುವ ಸುಟ್ಟ ಮಣ್ಣಿನ ಚಪ್ಪಟೆಯ ದುಂಡು ಅಚ್ಚುಗಳು ನಾಲ್ಕೈದು ಸಿಕ್ಕಿವೆ. ಸದ್ಯಕ್ಕೆ ಅವುಗಳ ಸ್ಥೂಲ ಪರೀಕ್ಷಣದಿಂದ ಕ್ಷತ್ರಪ ನಾಣ್ಯದ ಆಕಾರದ ನಾಣ್ಯಗಳನ್ನು ತಯಾರಿಸುವ ಅಚ್ಚುಗಳೆಂದು ತೋರುವುದು. ಸರಿಯಾಗಿ ಸ್ವಚ್ಛಮಾಡಿದ ನಂತರ ಅಚ್ಚು ಹಾಕಿ ಯಾವ ಪ್ರಕಾರದ ನಾಣ್ಯಗಳ ತಯಾರಿಕೆಗೆ ಉಪಯೋಗಿಸಲಾಗುತ್ತಿತ್ತು ಎಂಬುದನ್ನು ತಿಳಿಯಲು ಸಾಧ್ಯ. ಒಂದೆರಡರಲ್ಲಿ ಅಸ್ಪಷ್ಟವಾಗಿ ಅಕ್ಷರಗಳು ಇವೆ. ಒಂದು ನಾಣ್ಯವನ್ನು ತಯಾರಿಸಲು ಒಂದರ ಮೇಲೊಂದು ಇಡುವಂಥ ಎರಡು ಅಚ್ಚುಗಳು ಬೇಕಾಗುತ್ತಿದ್ದವು. ಪ್ರತಿಯೊಂದು ಅಚ್ಚಿನಲ್ಲೂ ಅಂಚಿನ ನಾಲ್ಕು ಕಡೆಗಳಲ್ಲಿ ಕೊರೆದ ಸಣ್ಣ ಗೆರೆಗಳಿವೆ. ಈ ಗೆರೆಗಳಿಗೆ ಹೊಂದುವ ಹಾಗೆ ಅಚ್ಚುಗಳನ್ನು ಜೋಡಿಸಿದಾಗ ಅವು ಸಣ್ಣ ನಾಳಗಳಾಗುತ್ತವೆ. ಮೊದಲು ಕರಗಿಸಿದ ಲೋಹದ ದ್ರವವನ್ನು ಒಂದು ಅಚ್ಚಿನಲ್ಲಿ ಹಾಕಿ ಮತ್ತೊಂದು ಅಚ್ಚನ್ನು ಅದರ ಮೇಲೆ ಕ್ರಮವಾಗಿ ಮುಚ್ಚಿದಾಗ ಹೆಚ್ಚಾದ ದ್ರವ ಮತ್ತು ಗಾಳಿ ಈ ನಾಳಗಳ ಮೂಲಕ ಹೊರಗೆ ಬರುತ್ತವೆ. ಹೀಗೆ ನಾಣ್ಯ ತಯಾರಿಕೆಯ ತಂತ್ರವನ್ನು ಈ ಅಚ್ಚುಗಳು ತಿಳಿಸುತ್ತವೆ.

ತಾಮ್ರದ ಹಾಗು ಸತು-ತವರ ಮಿಶ್ರಣ ಲೋಹದ ನಾಣ್ಯಗಳ ಜೊತೆಗೆ ಕಂದು ಬೆಳ್ಳಿಯ ಎರಡು ಕ್ಷತ್ರಪ ನಾಣ್ಯಗಳು ಭಾಗ-೩. ೪ನೇ ಗುಂಡಿ ೨ನೇ ಪದರಿನಲ್ಲಿ ಸಿಕ್ಕವು. ಹೋದ ವರ್ಷ ಭಾಗ-೩ ಒಂದು ಗುಂಡಿಯಲ್ಲಿ ಕಂದು ಬೆಳ್ಳಿಯ ಒಂದು ರೋಮನ್ ನಾಣ್ಯವು ಸಿಕ್ಕಿದೆ.

ಮಿಶ್ರ ಲೋಹದ ನಾಣ್ಯಗಳಲ್ಲಿ ಒಂದು ಬದಿಯಲ್ಲಿ ಶಾತವಾಹನ ಅರಸರ ಮತ್ತು ಅವರ ಮಾಂಡಲಿಕ ಅರಸರಾದ "ಮಹಾರಠಿಸ". "ವಿಳಿವಾಯ ಕುರಸ" ಮುಂತಾದ ಹೆಸರುಗಳು ಅಂಚಿನಲ್ಲಿದ್ದು ಮಧ್ಯದಲ್ಲಿ ಹೆದೆಯೇರಿಸಿದ ಬಿಲ್ಲುಬಾಣದ ಚಿತ್ರ ಮತ್ತೊಂದು ಬದಿಯಲ್ಲಿ ಬೇಲಿಯೊಳಗಿನ ಚೈತ್ಯ ವೃಕ್ಷ. ಪಕ್ಕದಲ್ಲಿ ಬೆಟ್ಟ ಮತ್ತು ಅದರ ಬುಡದಲ್ಲಿ ನದಿಯ ಸಂಕೇತ ಚಿತ್ರಗಳಿವೆ. ಬರೆ ಹದೆ ಏರಿಸಿದ ಬಾಣ-ಬಿಲ್ಲಿನ ಚಿತ್ರ ಇರುವ ನಾಣ್ಯಗಳೇ ಹೆಚ್ಚು. ಸು. ೧ ಸೆ.ಮಿ. ನಿಂದ ೩ ಸೆ.ಮಿ.ನ ವ್ಯಾಸವುಳ್ಳ ವಿವಿಧ ಅಳತೆಗಳ ನಾಣ್ಯಗಳಿವೆ. ಒಂದೊಂದು ಅಳತೆಯದು ನಿಗದಿ ಪಡಿಸಿದ ಬೆಲೆಯದೆಂದು ತಿಳಿಯಬಹುದು.

ಮುದ್ರಾಂಕಿತ, ತಾಮ್ರದ ಮಿಶ್ರಲೋಹದ ಬೇರೆ ಬೇರೆ ವಿವಿಧ ಕಾಲದ ನಾಣ್ಯಗಳು. ಕ್ಷತ್ರಪ ನಾಣ್ಯ ಮತ್ತು ರೋಮನ್ ದೀನಾರ ಹೀಗೆ ಇಷ್ಟೊಂದು ವಿಧಗಳ ನಾಣ್ಯಗಳು ಈ ನೆಲೆಯಲ್ಲಿ ದೊರೆತದ್ದರಿಂದ ಇದು ಒಂದು ದೊಡ್ಡ ವ್ಯಾಪಾರ ಕೇಂದ್ರವಾಗಿದ್ದು ಬೇರೆ ಬೇರೆ ದೇಶ ಪ್ರದೇಶಗಳಿಂದ ವ್ಯಾಪಾರಸ್ಥರು ಇಲ್ಲಿಗೆ ಬರುತ್ತಿದ್ದರೆಂದು ಕಾಣುತ್ತದೆ.

ಕೊನೆಯ ಮಾತು : .

ಏಳು ವರ್ಷಗಳ ಉತ್ಖನನಗಳಿಂದ ಇಲ್ಲಿ ಮೊದಲಿದ್ದ ಒಂದು ಸಾಮಾನ್ಯ ಗ್ರಾಮೀಣ ಸಂಸ್ಕೃತಿಯ ವಸತಿ ಕ್ರಿಸ್ತಶಕ ಆರಂಭದಲ್ಲಿ ಈ ನೆಲೆಯಲ್ಲೆಲ್ಲ ಅಂದರೆ ಕನಿಷ್ಠ ೪೦ ಹೆಕ್ಟೇರಿನಷ್ಟು ಬಯಲಿನಲ್ಲಿ ಒಂದು ನಗರವಾಗಿ ಬೆಳೆದ ಸ್ಥೂಲ ಸಾಕ್ಷಿ ಚಿತ್ರ ದೊರಕಿದೆ. ವಿವಿಧ ಪ್ರಕಾರದ ಕಟ್ಟಡಗಳು ವಾಸ್ತು ವೈವಿಧ್ಯವನ್ನು ನಿರ್ಮಾಣ ಕೌಶಲ್ಯವನ್ನು ತಿಳಿಸಿದುದಲ್ಲದೆ ಈ ನಗರ ಸಂಪದ್ಭರಿತವು ದೊಡ್ಡ ವ್ಯಾಪಾರ ಕೇಂದ್ರವೂ ಆಗಿತ್ತೆಂದು ಮತ್ತು ಛಾಪಿಗಳು, ಬೀದಿ, ಕಣಜಗಳು ವಿವಿಧ ಪ್ರಕಾರದ ನಾಣ್ಯಗಳು, ನಾಗರಿಕ ಪ್ರೌಢಿಮೆ ಮತ್ತು ಆರ್ಥಿಕ ವ್ಯವಸ್ಥೆ, ಸಮೃದ್ಧಿಯನ್ನು ಸೂಚಿಸುತ್ತದೆ. ಕಲ್ಲಿನ, ಲೋಹದ ಮತ್ತು ಮಣ್ಣಿನ ಗೊಂಬೆಗಳು ಸ್ಥಳಿಕ ಶೈಲಿಯನ್ನಲ್ಲದೆ ಕುಶಾಣ–ಮಥುರಾ, ಅಮರಾವತಿ[೧೩] ಮತ್ತು ಒಂದು ವಿಶಿಷ್ಟ ಶೈಲಿಗಳ (ಪರದೇಶದ ?) ಪ್ರಭಾವಗಳ ಹಾಗು ಜನರ ಕಲಾಭಿರುಚಿ ಮತ್ತು ಧರ್ಮಗಳ ಬಗ್ಗೆ, ಹಲವಾರು ಪ್ರಕಾರದ ಮಣಿಗಳು ಇವರ ಆಭರಣಗಳ, ಅಲಂಕಾರ ಪ್ರಿಯತೆ ಪಗಡೆ ಕಾಯಿ ದಾಳಗಳು ಇವರ ಮನರಂಜನೆಯ ಬಗ್ಗೆ ಹೆಚ್ಚಿನ ಹಾಗು ಗಮನಾರ್ಹ ಪ್ರಮಾಣದಲ್ಲಿ ತಿಳಿಸಿವೆ. ಕರ್ನಾಟಕದ ಪ್ರಾಚೀನ ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರತ್ಯಕ್ಷ ಪ್ರಮಾಣದ ಒಂದು ಹೊಸ ಅಧ್ಯಾಯವನ್ನೇ ನಿರ್ಮಿಸಿವೆ.

ಅಡಿಟಿಪ್ಪಣೆಗಳು

೧. ಸುಂದರ ಅ: ೧೯೮೬ "ವಡಗಾಂವ–ಮಾಧವಪುರದ ಉತ್ಖನನದಲ್ಲಿ ದೊರೆತ ಮಣ್ಣಿನ ಗೊಂಬೆಗಳು (ಸಂಶೋಧನೆ)". **ಕರ್ನಾಟಕ ಭಾರತಿ,** ಸಂಪುಟ ೧೦, ಸಂಚಿಕೆ–೨.

೨. ಮೊದಲನೆ ವರ್ಷದ ಅಂದರೆ ೧೯೮೨ರಲ್ಲಿ ನನ್ನ ಮತ್ತು ಕರ್ನಾಟಕ ಸರ್ಕಾರದ ಪುರಾತತ್ವ ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯ ಶಾಖೆಯ ಈಗ ನಿರ್ದೇಶಕರಾಗಿರುವ ಡಾ॥ ಎಂ.ಎಸ್. ನಾಗರಾಜರಾವ್‌ರ, ಎರಡು ಮತ್ತು ಮೂರನೆ ವರ್ಷಗಳಲ್ಲಿ ನನ್ನ ಮತ್ತು ನನ್ನ ಸಹೋ

ದ್ಯೋಗಿಗಳಾದ ಡಾ॥ ಬಿ.ಕೆ. ಗುರುರಾಜರಾವ್‌ರವರ ಸಂಯುಕ್ತ ನಿರ್ದೇಶನದಲ್ಲಿ ಉಳಿದ ನಾಲ್ಕು ವರ್ಷಗಳಲ್ಲಿ (೧೯೭೫–೭೮) ಕೇವಲ ನನ್ನ ನಿರ್ದೇಶನದಲ್ಲಿ ಉತ್ಖನನಗಳನ್ನು ನಡೆಸಲಾಯಿತು. ಮೂರನೆ ವರ್ಷ ಉತ್ಖನನದಲ್ಲಿ ನಾನು ಭಾಗ–೩. ೨ನೇ ಗುಂಡಿಯ ಉತ್ಖನನ ಕಾರ್ಯವನ್ನು ಮುಗಿಸಿದ ನಂತರ ಪ್ರಾದೇಶಿಕ ಅನ್ವೇಷಣೆ ಕಾರ್ಯಕ್ಕೆ ಹೋಗಬೇಕಾದ್ದರಿಂದ ಉಳಿದ ಉತ್ಖನನವು ಕಾರ್ಯವು ಡಾ. ಬಿ.ಕೆ. ಗುರುರಾಜರಾವ್ ಅವರ ನಿರ್ದೇಶನದಲ್ಲಿ ನಡೆಯಿತು. ಭಾಗ–೨. ಗುಂಡಿ–೨ರಲ್ಲಿ ಚೌಕೋನದ ಭಾವಿ ಎರಡು ಕೂಜಗಳುಳ್ಳ ಕಟ್ಟಡ (ಚಿತ್ರ 2: ೩) ವನ್ನು ಅವರು ಬೆಳಕಿಗೆ ತಂದರು. ಮೊದಲನೆ ವರ್ಷದಲ್ಲಿ ಉತ್ಖನನದಲ್ಲಿ ಮೊದಲು ಒಂದು ವಾರ ಡಾ. ಬಿ. ಆರ್. ಗೋಪಾಲರವರು ಭಾಗವಹಿಸಿದ್ದರು.

೩. ಸು. ಸು. ಮ = ಸುಮಾರು ಸಮುದ್ರ ಮಟ್ಟದಿಂದ.

೪. ಈ ಜಾತಿಯ ಕಲ್ಲು ಭಾರತದಲ್ಲಿ ಇದುವರೆಗೂ ಭೂವಿಜ್ಞಾನಿಗಳ ಶೋಧನೆಯಲ್ಲಿ ಸಿಕ್ಕಿಲ್ಲ. ಅಫ್‌ಘಾನಿಸ್ಥಾನ ಮತ್ತು ದಕ್ಷಿಣ ಇರಾಣ ಪ್ರದೇಶದಲ್ಲಿ ಸಿಕ್ಕುತ್ತದೆ. ಆದ್ದರಿಂದ ಈ ಜಾತಿ ಕಲ್ಲಿನ ಮಣಿಗಳು ಈ ನೆಲೆ ಮತ್ತು ಇತರ ಸಮಕಾಲಿನ ನೆಲೆಗಳಲ್ಲಿ ದೊರಕುವುದರಿಂದ ಅಫ್‌ಘಾನಿಸ್ಥಾನ ಮತ್ತು ಈ ಪ್ರದೇಶಗಳ ನಡುವಿನ ವ್ಯಾಪಾರ ಸಂಬಂಧವನ್ನು ಸೂಚಿಸುತ್ತದೆ.

೫. ಹೆಸರಾಂತ ಚಂದ್ರವಳ್ಳಿ ನೆಲೆಯಲ್ಲಿ ಈ ವರ್ಷ ಮಾರ್ಚ್–ಏಪ್ರಿಲ್ ತಿಂಗಳುಗಳಲ್ಲಿ ಭಾರತ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಶಾಖೆಯ ದಕ್ಷಿಣ ಮಂಡಲವು ನಡೆಸಿದ ಉತ್ಖನನಗಳಲ್ಲಿ ಇಂಥ ಒಂದು ದಾಳ ಸಿಕ್ಕಿದೆ. ಈ ವಿಷಯವನ್ನು ನನಗೆ ತಿಳಿಸುದುದಕ್ಕೆ ಈ ಮಂಡಲದ ಹಿರಿಯ ಅಧಿಕಾರಿಗಳಾದ ಸೂಪರಿನ್‌ಟೆಂಡಿಂಗ್ ಆರ್ಕಿಯಾಲಜಿಸ್ಟ್‌ರವರಿಗೆ ಕೃತಜ್ಞ.

೬. ಉತ್ತರ ಭಾರತದಲ್ಲಿಯ ಸಮಕಾಲೀನ ಸಾಂಸ್ಕೃತಿಕ ನೆಲೆಗಳ ಉತ್ಖನನಗಳಲ್ಲೂ ಬಹುಶಃ ಇಂಥ ದೊಡ ಬೀದಿ ಸಿಕ್ಕಿರುವ ವಿಷಯ ನನಗೆ ತಿಳಿದು ಬಂದಂಥ ವರದಿಗಳಲ್ಲಿ ಇಲ್ಲ.

೭. ಚಿತ್ರ 2; ೨ರಲ್ಲಿ ಜಗುಲಿಯ ಹಿಂಬದಿಯಲ್ಲಿ ಗುರುತು ಮಾಡಿದ ೩ನೇ ಪದರನ್ನು ನೋಡಿ.

೮ **ಆಲ್ ಇಂಡಿಯ ಓರಿಯಂಟಲ್ ಕಾನ್‌ಫರೆನ್ಸ್, xxviii ಸೆಷನ್ ಸಾವೆನೀರ್,** ೧೯೭೬ ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ ೨೦ನೇ ಪುಟಕ್ಕೆ ಎದುರಿರುವ ಪ್ಲೇಟಿನಲ್ಲಿಯ–ಕೆಳಗಿನ ಚಿತ್ರ. **ಇಂಡಿಯನ್ ಆರ್ಕಿಯಾಲಜಿ, ಎ ರಿವ್ಯೂ** ೧೯೭೧–೭೨.

೯. ಇದಕ್ಕೆ ಬಹುಮಟ್ಟಿಗೆ ಹೋಲುವಂಥ ಗಜ ಪೃಷ್ಠಾಕೃತಿಯ ಇಟ್ಟಿಗೆ ಕಟ್ಟಡವು ಬ್ರಹ್ಮಗಿರಿ (ಮೊಳಕಾಲ್ಮೂರು ತಾ. ಚಿತ್ರದುರ್ಗ ಜಿ.) ಯಲ್ಲಿದೆ. **ಏನ್ಷಿಯೆಂಟ್ ಇಂಡಿಯ** ಸಂಪುಟ ೪. ಸಂಖ್ಯೆ ೪. ಚಿತ್ರ ೨. ಪುಟ ೧೮೬ ನೋಡಿ. ಬನವಾಸಿಯ ಉತ್ಖನನದಲ್ಲಿ ದೊರೆತ ಎರಡು ಗಜಪೃಷ್ಠಾಕೃತಿಯ ಕಟ್ಟಡಗಳು. **ಪುರಾತತ್ತ್ವ,** ೧೯೭೦–೭೧. ನಂ. ೪. ಪ್ಲೇಟ್ IV ಪುಟಗಳು ೫೬–೫೭ ನೋಡಿ.

೧೦. ಸುಂದರ, ಅ: ೧೯೭೭ ಅದೇ ಕಡೆ, ಪುಟ ೧೩.

೧೧. **ಆಲ್ ಇಂಡಿಯ ಓರಿಯೆಂಟಲ್......೧೯೭೬** ಅದೇ ಕಡೆ ಮೇಲಿನ ಚಿತ್ರ ನೋಡಿ.

೧೨. ಸುಂದರ, ಅ: ೧೯೭೭ ಅದೇ ಕಡೆ ಪುಟಗಳು ೩–೪.

೧೩. ಅದೇ ಕಡೆ ಪುಟಗಳು ೧೩, ೧೬.

೧೪. ಅದೇ ಕಡೆ ಪುಟಗಳು ೧೩, ೧೪, ಮತ್ತು ೧೬.

೧೫. ಆನಂದಕುಮಾರಸ್ವಾಮಿ. ಕೆ: ೧೯೭೫ (ಪುನರ್ಮುದ್ರಣ): **ಹಿಸ್ಟರಿ ಆಫ್ ಇಂಡಿಯನ್ ಆ್ಯಂಡ್ ಇಂಡೋನೇಷಿಯನ್ ಆರ್ಟ್,** ಪ್ಲೇಟ್–೨. ೪.

ಬಿಳಿ ಕೂದಲು

● **ಹರಿನಾರಾಯಣ ನಾಡಾವು**

ಪಂಪನ ಆಗಮಿಕ
ಆದಿಪುರಾಣ
ಪಠನ ಮಾಡಿದ್ದಾಗ
ಬಿಳಿಕೂದಲು ವೈರಾಗ್ಯ ಸೂಚನೆ
ನೀಡಿದ್ದನ್ನು – ನಿರ್ಲಿಪ್ತವಾಗಿ – ಕಲಿತಿದ್ದೇನೆ.
ಆದರೆ ಮೊನ್ನೆ……
ಕನ್ನಡಿಯ ಮುಂದೆ ನಿಂತು
ಕೇಶವಿನ್ಯಾಸದಲಿ ಮನವಾಂತು
ಬೆಚ್ಚಿದ್ದೆ ತಟ್ಟನೆ–
ಒಂದೆರಡು ಬಿಳಿ ಕೂದಲು ಕಂಡೊಡನೆ !
ಈಗಿನ್ನೂ ಇಪ್ಪತ್ತೇಳರ ಹರೆಯ……
ಇಷ್ಟರಲೆ ಒತ್ತುವುದೆ ಮುದಿತನದ ಮುದ್ರೆಯು ?
ಹಿಡಿದ ಹುದ್ದೆಯೊ – ಭದ್ರವಾಗಿಲ್ಲ
ಮದುವೆಗಿನ್ನೂ ಕಾಲ ಕೂಡಿಲ್ಲ–
ಸಂಸಾರ ಹೂಡಿಲ್ಲ;
ಇನ್ನು ತಡಮಾಡುವುದಕ್ಕೆ ವೇಳೆಯಿಲ್ಲ ?
ಕಲಿತ ಕಾವ್ಯದಲ್ಲಿ
ಕಾಣಿಸಿ ವಿರಕ್ತಿ ಮೂಡಿಸಿ
ಸಂಸಾರದಿಂದ ದೂರಕ್ಕೆ ಮನವನಟ್ಟಿತು
ಸ್ವಂತ ಬದುಕಿನಲ್ಲಿ
ಅದೇ ಸಂಸಾರಕಳೆವ ಸ್ಫೂರ್ತಿಯಾಗಿ
ಜೀವನಾಸಕ್ತಿಯಲಿ ಅದ್ದಿ ಬಿಟ್ಟಿತು !

● ●

ತೋಟಪಟ್ಟಿ ಕನ್ನಡ ವೃತ್ತಿ ಪದಕೋಶ-೨

● ವಿ. ಶಿವಾನಂದ

ವ್ಯವಸಾಯ ಪದ್ಧತಿಯಲ್ಲಿ ಖುಷ್ಕಿ ಅಥವ ಒಣಬೇಸಾಯ (Cultivation of dry land) ಒಂದು ವಿಧವಾದರೆ ನೀರಾವರಿ ವ್ಯವಸಾಯ (Wet land cultivation) ಮತ್ತೊಂದು ವಿಧ. ಇವೆರಡೂ: ಮಣ್ಣಿನ ರಚನೆ ಮತ್ತು ಸ್ವರೂಪದಲ್ಲಿ (Structure and Texture of Soil) ಭಿನ್ನವಾದುವು. ಹಳ್ಳಿಗಳಲ್ಲಿನ ಅದೆಷ್ಟೋ ರೈತರಿಗೆ ಒಣಬೇಸಾಯ ಮಾಡುವವರಿಗೆ ತೋಟಪಟ್ಟಿಯ ವಿಷಯ ತಿಳಿದಿರುವದಿಲ್ಲ. ತೋಟಿಗರಿದ್ದರೆ ಅವರು ಒಣಬೇಸಾಯದಲ್ಲಿ ಅಲ್ಪಮತಿಗಳು. ಇದರಿಂದ ಇವೆರಡೂ ಭಿನ್ನ ವೃತ್ತಿಗಳೆಂದೂ, ಇಲ್ಲಿನ ಜ್ಞಾನಭಂಡಾರ ವೃತ್ತಿ ಪದಗಳ ಸಂಗ್ರಹಣೆ ಹಾಗೂ ಅವುಗಳ ಅಧ್ಯಯನ ವಿಚಾರ ವಿನೂತನವೆಂದೂ ಭಾವಿಸಬಹುದು.

ಪ್ರಪಂಚದಲ್ಲಿ ಸಂಸ್ಕೃತಿ–ನಾಗರಿಕತೆಗಳ ತೊಟ್ಟಿಲು ತೂಗಿದ್ದು ಮುಖ್ಯವಾಗಿ ನದೀ ತೀರಗಳಲ್ಲಿ. ನೈಲ್ ನದಿ ಸಂಸ್ಕೃತಿ. ಸಿಂಧೂ ಕೊಳ್ಳದ ಸಂಸ್ಕೃತಿಗಳನ್ನಿಲ್ಲಿ ಉಲ್ಲೇಖಿಸಬಹುದು. ಆಹಾರೋತ್ಪಾದನೆಗಾಗಿ ನೆಲವನ್ನು ಉತ್ತಬೇಕು. ಬಿತ್ತಬೇಕು. ಆದರೆ ಸಕಾಲದಲ್ಲಿ. ಮಳೆಯಾಗದಿದ್ದರೆ ರೈತನ ಬಾಳು ಗೋಳಿಗೀಡಾಗುತ್ತದೆ. ರೈತ ಬೆಳೆಯದಿದ್ದರೆ ದೇಶದಲ್ಲಿ ದುರ್ಭಿಕ್ಷೆ ಆವರಿಸುತ್ತದೆ. ಇದರ ಪರಿಹಾರಕ್ಕೆಂದೇ ನಮ್ಮ ಹಿಂದಿನ ಜನತೆ ಮೋಡಗಳಿಂದ ಸುರಿಯುವ ಮಳೆನೀರು. ಹಳ್ಳ–ಹೊಳೆಗಳ ರೂಪದಲ್ಲಿ ವ್ಯರ್ಥವಾಗಿ ಎಷ್ಟೋ ಪಾಲು ಹರಿದು ಹೋಗುವದನ್ನು ತಡೆಗಟ್ಟಿ ಒಡ್ಡುಗಳನ್ನು ನಿರ್ಮಿಸಿ ಕಾಲುವೆಗಳ ಮುಖಾಂತರ ಹೊಲ–ಗದ್ದೆಗಳಿಗೆ ಸಾಗಿಸಿತು. ಕೆರೆ ಕಟ್ಟೆಗಳನ್ನು ಕಟ್ಟಿ ಸುತ್ತಲಿನ ಭೂಮಿಯನ್ನು ಅಚ್ಚ ಹಸುರಾಗಿಸಿತು. ಬಾವಿ–ಬೆಂಚೆಗಳಲ್ಲಿನ ನೀರನ್ನು ಮೊಟ್ಟೆ, ಏತ ಮುಂತಾದ ಉಪಕರಣಗಳಿಂದ ಎತ್ತಿ ಭೂಮಿಯನ್ನು ನಂದನವನವಾಗಿಸಿತು. ಇದು ದೇವಮಾತೃಕ-ನದೀಮಾತೃಕಗಳೆಂದು ಎರಡು ವಿಧದಲ್ಲಿ ನೀರಾವರಿ ನಡೆದು ಬಂದ ದಾರಿ. ಇಂದು ಸರಕಾರ ನಮ್ಮ ದೇಶದಲ್ಲಿ ಹಸಿರುಕ್ರಾಂತಿ (Green revolution) ಗಾಗಿ ಕೋಟ್ಯಾವಧಿ ಹಣವನ್ನು ವೆಚ್ಚ ಮಾಡುತ್ತಿದೆ. 'ಅಣೆಕಟ್ಟುಗಳೇ ಆಧುನಿಕ ದೇವಾಲಯಗಳು' ಎಂಬ ಮಾತೂ ಪ್ರಸಿದ್ಧಿಗೆ ಬಂದಿದೆ.

ಇದು ಯಂತ್ರ ಯುಗ. ಯಂತ್ರೋಪಕರಣಗಳ ಸಹಾಯದಿಂದ ಏನೆಲ್ಲವೂ ಸಾಧ್ಯವಾಗಬಹುದು. ಆದರೆ ನಮ್ಮ ಪ್ರಾಚೀನ ಕೃಷಿಕ ಪದ್ಧತಿ ಇಂದು ಮಾಯವಾಗುತ್ತಿದೆ. ನೀರೆತ್ತುವ ಪಂಪಸೆಟ್ಟುಗಳು ಮಾರುಕಟ್ಟೆಯಲ್ಲಿ ಲೆಕ್ಕವಿಲ್ಲದಷ್ಟು ದೊರಕುತ್ತಿವೆ. ತೋಟಗಳಲ್ಲಿ ಹಿಂದಿನ ಕಾಲದ ಮೊಟ್ಟೆ, ಮೊಟ್ಟೆಯ ಬಾರಿ ಕಾಣುವದು ಅಪರೂಪವಾಗಿದೆ. ಇದರಿಂದ ನಾವು ಆರ್ಥಿಕವಾಗಿ ಮುಂದಾದರೂ ಹಿಂದಿನ ಕಾಲದ ಶಾಂತಿ, ಸಮೃದ್ಧಿಗಳು, ಅಪೂರ್ವವಾದ ಗ್ರಾಮೀಣ ಜೀವನ ಸೌಂದರ್ಯ, ಇದಕ್ಕೆ ಸಂಬಂಧಿಸಿದ ಜಾನಪದ ವಸ್ತು, ಸಾಹಿತ್ಯ ಕಣ್ಮರೆಯಾಗುತ್ತಿರುವದು ವಿಷಾದನೀಯವೇ ಸರಿ. ಈ ಉದ್ದೇಶದಿಂದ ಹಳ್ಳಿಗಳಲ್ಲಿನ ತೋಟಪಟ್ಟಿ ವ್ಯವಸಾಯಕ್ಕೆ ಸಂಬಂಧಿಸಿದ ಪದಗಳ ಸಂಗ್ರಹ ಕಾರ್ಯವನ್ನಿಲ್ಲಿ ಕೈಕೊಂಡಿದೆ. ಪ್ರಾಚೀನ ಕನ್ನಡ ಕಾವ್ಯ, ಶಾಸನಗಳಲ್ಲಿನ ಈ ವಿಷಯಕ್ಕೆ ಸಂಬಂಧಿಸಿದ ಪದಕೋಶವನ್ನು ಪ್ರತ್ಯೇಕವಾಗಿ ಸಂಕಲನಗೊಳಿಸುವ ಉದ್ದೇಶವಿಟ್ಟುಕೊಂಡಿರುವದರಿಂದ ಇಲ್ಲಿ ಅವುಗಳ ಒನ್ನೆಲೆಯನ್ನು ಸಾಕಷ್ಟು ಒದಗಿಸಿಲ್ಲ. ಮುಖ್ಯವಾಗಿ ಆಡುನುಡಿಯಲ್ಲಿನ ಪ್ರಯೋಗ ಅವುಗಳ ಉಚ್ಚಾರಣಭೇದ ಹಾಗೂ ಪ್ರಾದೇಶಿಕತೆಗಳ ಆಧಾರದ ಮೇಲೆ ಈ ಕೋಶ ರಚಿತವಾಗುತ್ತಿರುವದರಿಂದ ಈವರೆಗೆ ಗ್ರಂಥಸ್ಥ ರೂಪದ ಆಧಾರದಲ್ಲಿ ರಚಿತವಾದ ಕನ್ನಡ ಕೋಶಗಳಿಗಿಂತ ಇದು ಭಿನ್ನವಾದುದು.

ಕನ್ನಡವು ದ್ರಾವಿಡ ಭಾಷಾ ಪರಿವಾರಕ್ಕೆ ಸಂಬಂಧಿಸಿರುವದರಿಂದ ಇಲ್ಲಿನ ಪದಗಳ ಮೂಲ ಬೆಳವಣಿಗೆಯನ್ನು ತಿಳಿಯಲು ತಮಿಳು ಮೊದಲಾದ ಭಾಷೆಗಳಿಂದಲೂ ಅಲ್ಲಲ್ಲಿ ವ್ಯುತ್ಪತ್ತಿಯನ್ನು ಕೊಟ್ಟಿದೆ. ಆದರೆ ಅಲ್ಲಿನ ಪದಗಳ ಧ್ವನಿವ್ಯತ್ಯಾಸ, ರೂಪವ್ಯತ್ಯಾಸಗಳು ಭಾಷಾ ವಿಜ್ಞಾನದ ದೃಷ್ಟಿಯಿಂದ ತುಂಬ ಗಮನಾರ್ಹವಾದುವು. ಯಾವುದೊಂದು ಪದ ತಮಿಳಿನಿಂದ ಕನ್ನಡಕ್ಕೆ ಇದಕ್ಕಿದ್ದಂತೆ ಬರುವದಿಲ್ಲ. ಒಂದು ವೇಳೆ ಯಾವ ವ್ಯತ್ಯಾಸವೂ ಇಲ್ಲದೆ ಆ ಪದ ಕನ್ನಡ–ತಮಿಳು ಭಾಷೆಗಳಲ್ಲಿ ದೊರಕುತ್ತಿದ್ದರೆ ಅವೆರಡೂ ಅಷ್ಟೇ ಪ್ರಾಚೀನವಾದುವು ಎಂದು ನಿಷ್ಕರ್ಷಿಸಬಹುದು. ಇಲ್ಲಿ ತೋಟ–ಪಟ್ಟಿಗೆ ಸಂಬಂಧಿಸಿದ ಹಲವೊಂದು ಜಾತಿ ಪದಗಳನ್ನು (Cognate terms) ಉದಾಹರಿಸಿದೆ:

ತಮಿಳು	**ಮಲೆಯಾಳಂ**	**ಕನ್ನಡ**	**ತೆಲುಗು**	**ಇತರ ಭಾಷೆಗಳು**
ಮೂಟ್ಟೈ–	ಮುಟ್ಟೈ	ಮೊಟ್ಟೆ/ಮುಟ್ಟೆ	ಮೋಟ	ಮೋಟ(ಮರಾಠಿ) *c/f* ಮೂಟ್ಟೈ
ಪರ್ಯಾಕಪಿಲ್ಲೈ	ಕಪ್ಪಿ	ಕಪಲಿ	ಕಪಲಿ	—
ವಾೞಿ	ವಾಜಿ	ಬಾರಿ	ಬಾರಿ	ಬಾರಿ(ಮರಾಠಿ) *c/f* ವಾೞಿ

ಕಾಲ್	ಕಾಲ್	ಗಾಲಿ	ಗಾಳಿ	—
ಕದಿಜ್	ಕದಿಜ್	ಕದಿರು	ಕದಿರ	—
ಶಿಜ್ಜೈ/ಚಿಜ್ಜೈ	ಶಿಜ್ಜೈ	ಕೆರೆ	ಚೆರವು	—
ನೀಜು	ನೀಜು	ನೀರು	ನೀಳ್ಳು	ನೀರ್ (ಸಂ) *c/f* ನೀಜ್
ಕಟಿನಿ	ಕಟಿನಿ	ಗಟಿದ್ದಿ/ಗರ್ದೆ/ಗದ್ದೆ	ಕೆಯ್	ಕರ್ದಂ (ಸಂ)
ಕೇಜಿನೀರ್	ಕೆಜಿನೀರ್	ಕೆರೆಯನೀರು	ಚೆಲುವುನೀರ್	—
ಅಣ್ಣೈಕಟ್ಟು	ಅಣ್ಣೈಕಟ್ಟು	ಅಣೆಕಟ್ಟು	ಅನಕಟ್ಟು	—
ಕಾಲ್ವಾಯ್	ಕಾಲ್ವಾಯ್	ಕಾಲುವೆ	ಕಾಲವ	—
ಉಡ್ಡೈ	ಉಡ್ಡೈ	ಒಡ್ಡು	ಒಡ್ಡು	—
ತೂಮ್ಬು	ತೂಮ್ಬು	ತೂಬು	ತೂಮು	—
ಪೋದಿಗೈ	ಪೋದಿಗೆ	ಬೋದು	ಬೋದುಗಾ	—
ಮಡಿ	ಮಡಿ	ಮಡಿ	ಮಡ	—
×	×	ರಾಡಿ	ರಾಡು	ರಾಬಡಾ (ಮರಾಠಿ) *c/f* ರವಡೀ(ಸಂ)

ಮೇಲಿನ ರೂಪ ಪರಿವರ್ತನೆಗೆ ಸಂಬಂಧಿಸಿ ಅನೇಕ ನಿಯಮಗಳು ಈಗಾಗಲೇ ಸ್ಥಾಪಿತವಾಗಿವೆ. ಅವುಗಳಲ್ಲಿ ಇ>ಎ/ಉ>ಒ ಪರಿವರ್ತನೆ ಮುಖ್ಯವಾದುದು.

ಸದ್ಯದ ಇಲ್ಲಿನ ಪರಿವೀಕ್ಷಣೆ (Survey) ಯಲ್ಲಿನ ವಿಷಯ ವಿಭಜನೆ ಇಂತಿದೆ: ಇದರಲ್ಲಿ ಸಂಗ್ರಹಿತವಾದ ಪದಗಳ ಸಂಖ್ಯೆ ೧೩೫. ಪರ್ಯಾಯವಾಚಿ ಪದಗಳ ಸಂಖ್ಯೆ ೩೭.

೧) ನಿರಾವರಿಯ ಮೂಲ ಸೆಲೆಗಳು.

೧. ಕೆರೆಯನೀರು
೨. ಅಣೆಕಟ್ಟಿನ ನೀರು
೩. ಬಾವಿನೀರು

೨) ನೀರೆತ್ತುವ ಉಪಕರಣಗಳು.

ಮೊಟ್ಟೆ, ಬಾರಿವಿಷಯ

೩) ನೀರು ಹರಿದು ಹೋಗುವ ಭಾಗ.

ಕಾಲುವೆ

೪) ನೀರಾವರಿ ನೆಲದ ಸಿದ್ಧತೆ.

೫) ನೀರಾವರಿಯ ಬೆಳೆಗಳು–೧
ಕಾಯಿಪಲ್ಲೆಯ ಹೆಸರುಗಳು

ಸಂಕ್ಷೇಪಗಳ ವಿವರಣೆ :

ಉ – ಉಚ್ಚಾರಣ ಭೇದ
ಪರ್ಯಾ – ಪರ್ಯಾಯ ವಾಚಿ
ಪ್ರ – ಪ್ರಭೇದ
ಪ್ರಯೋ–ಪ್ರಯೋಗ
ರೂ – ರೂಪಾಂತರ
ಸ – ಸಮಾಸ
ನಾ – ನಾಮಪದ
< – ವ್ಯುತ್ಪನ್ನರೂಪ
> – ಅನ್ಯಮೂಲದಿಂದ ರೂಪಾಂತರ
~ – ಅನುನಾಸಿಕ್ಯ
C/f – Corrupted form
ನಾ – ನಾಣ್ನುಡಿ

ತ – ತಮಿಳು
ಮ – ಮಲೆಯಾಳಂ
ತೆ – ತೆಲುಗು
ತು – ತುಳು
ಕೋ – ಕೋಟ
ಸಂ – ಸಂಸ್ಕೃತ
ಮರಾ – ಮರಾಠಿ
ತೋ – ತೋಡ
ಇಂ – ಇಂಗ್ಲೀಷ
ಹಿಂ – ಹಿಂದುಸ್ಥಾನಿ
ಮೈಕ – ಮೈಸೂರು ಕನ್ನಡ

ಕಕ – ಕಲಬುರ್ಗಿ ಕನ್ನಡ
ಬಕ – ಬಿಜಾಪುರ ಕನ್ನಡ
ಬೀಕ – ಬೀದರ ಕನ್ನಡ
ಬಕ – ಬಳ್ಳಾರಿ ಕನ್ನಡ
ಕಸುಕ – ಕಲಬುರ್ಗಿ ಸುರಪುರ ಕನ್ನಡ
ಕಚಿಂಕ – ಕಲಬುರ್ಗಿ ಚಿಂಚೋಳಿ ಕನ್ನಡ
ಕಚಿಕ – ಕಲಬುರ್ಗಿ ಚಿತಾಪುರ ಕನ್ನಡ
ಕಜೇಕ – ಕಲಬುರ್ಗಿ ಜೇವರಗಿ ಕನ್ನಡ

೧. ನೀರಾವರಿಯ ಮೂಲ ಸೆಲೆಗಳು

ಕೆರೆಯ ನೀರು :

ಕೆರೆ ಚಿಱ್ಱು (ತ) ಚಿರೆ (ಮ) (to control) ಸೆರೆಹಿಡಿ, ಬಂಧಿಸು. ಮಡುಗಟ್ಟಿ ನಿಲ್ಲು. ಕಟ್ಟಿದ ನೀರು ಕಿರೆ (ತು)_ಕೃತಕ ನೀರಿನ ಸಂಗ್ರಹಣೆ. ಕೆಱೆ[3] (ಪ.ಗ.) ಹೆಗ್ಗೆರೆ, ಕಿಗ್ಗೆರೆ (ಸಮಾ)

ಕೆರೆಯುಕೋಡಿ (ಸ.ಪು.ದ) ಪ್ರ: ಕೃತಕ ಕೆರೆ: ನೈಸರ್ಗಿಕ ಕೆರೆ–ಆಕಾರದ ಮೇಲಿಂದ–ಸಣ್ಣಕೆರೆ. ದೊಡ್ಡಕೆರೆ. ಹೂಳ್ತು ಕೆರೆ, ಹಾಳಕೆರೆ, ಒಣಗಿದ ಕೆರೆ. ತುಂಬಿದ ಕೆರೆ. ರುಚಿಯ ಮೇಲಿಂದ: ಹಾಲಕೆರೆ. ಹುಳಿಗೆರೆ. ಪ್ರಸಿದ್ಧಿಯ ಮೇಲಿಂದ: ಶರಣಬಸವೇಶ್ವರ ಕೆರೆ. ಉ. ಕೆರಿ ಅಥವ ಶರಣಬಸವೇಶ್ವರ ತಲಾಬ (ಉ), ಭೋಸಗಾ ಕೆರೆ–ತಾವರಗೆರೆ, ಮುಂ. ಕೆರೆಗೆ ಪರ್ಯಾಯಪದಗಳು: **ಸಾಗರ**–ನೀರಸಾಗರ, ದೂಧ ಸಾಗರ. (ಧಾ.ಕ) **ಸಮುದ್ರ** ಉ. ಸಂದ್ರ–ಕೋಡಿ ರಾಮ ಸಂದ್ರ (ಕೋ–ಕ). ಎತ್ತು ಎರಿಗೆ ಎಳೆದರೆ ಕೋಣ ಕೆರಿಗೆ (ನಾ).

ಕೆರೆಯ ಭಾಗಗಳು

ಒಡ್ಡು — ಒಡ್ (ಕೊ) ಒಡ್ಡು(ತೆ) ನೀರು ಕಟ್ಟಲು ಹಾಕಿದ ದೊಡ್ಡ ಒಡ್ಡು ಉ. ವಡ್ಡ. ಪರ್ಯಾ. ಬಾಂದು (<ಬಂಧ, ಸಂ) ಉ. ಬಾಂದ.

ಉ. ಭರೋಳು, ಭರ್ತಿ,ಭರು. ಭರೋವು (ಕ.ಕ.) ಪ್ರ. ಒಡ್ಡಿನ ನೆಲ, ಒಡ್ಡಿನ ಹೊಟ್ಟಿ.

ಕಡಗೋಲು — ನೀರು ಹೊರಚೆಲ್ಲುವ ಭಾಗ. ಪರ್ಯಾ. ಚದ್ದರ (ಹಿಂ). (ಕ.ಕ.)

ಕೋಡಿ — <ಕೋಟ್ಟೈ (ತ) Outlet for Surplus water ತುಂಬಿ ಹೆಚ್ಚಾದ ನೀರನ್ನು ಹೊರಬಿಡಲು ಮಾಡಿದ ಮೋರೆ. ಉ. ಕ್ವಾಡಿ.

ತುಂಬು — ತುಮ್ಬು (ತೆ.ಮ.) ತೂಮು (ತೆ), ಕೆರೆಯ ನೀರನ್ನು ನಿಯಮಿತವಾಗಿ ಬಿಡಲು ಮಾಡಿದ ಬಾಗಿಲು. (flood gate) ಉ. ತೂಬು. ಪ್ರ: ೧) ಹಲಗೆಯ ತೂಬು. ೨) ಚಕ್ರದ ತೂಬು. ನೀರಬಿಡಲು ಹಲಗೆಯ ತೂಬನ್ನು ಮೇಲೆತ್ತುವರು. ಚಕ್ರದ ತೂಬು ಕಬ್ಬಿಣದ್ದಿದ್ದು ಅದನ್ನು ತಿರುಗಿಸಿದರೆ ಕೆಳಗಿನ ಭಾಗ ಮೇಲೇಳುವದು. ಇದನ್ನು ಗಿರಕಿಯ ತೂಬು ಎಂದೂ ಕರೆಯುವರು.

ಹೂಳಿಕೆ — ಹೂಳ್ + ಇಕೆ. (ನಾ) ಮಣ್ಣು ಬಂದು ತುಂಬಿದ ಕೆರೆ. ಇದರಿಂದ ನೀರಿನ ಪ್ರಮಾಣ ಕಡಮೆಯಾಗುವದು. ಆಗ ಒಡ್ಡನ್ನು ಮತ್ತೆ ಹೆಚ್ಚು ಹಾಕುವರು. ಪರ್ಯಾ: ಭರ್ತಿ, ವಂಡು.

ಕೆರೆ ಮಣ್ಣಿನ ಪ್ರಕಾರಗಳು :

ಎರೆಮಣ್ಣು	ಇದು ಫಲವತ್ತಾದ ಹೊಲದ ಮಣ್ಣು.'ಎರಿಯೊ ದೊರಿಯೊ' (ನಾ).
ಕರೆಮಣ್ಣು	ಕಪ್ಪುಮಣ್ಣು
ಕೆಮ್ಮಣ್ಣು	ಕೆಂಪು ಮಣ್ಣು
ಕ್ಯಾಸರಿ	ಕರೆ ಮಣ್ಣು
ಪ್ರ:೧. ಗಂಡಕ್ಯಾಸರಿ	ಜಿಗಟು ಮತ್ತು ಕರಿಯ ಮಣ್ಣು
೨. ಮಡ್ಡಿಗ್ಯಾಸರಿ	ಕೆಂಪು ಜವುಳು
೩. ಹುಂಪಳಿ ಕ್ಯಾಸರಿ	ಮಿದು ಮತ್ತು ಉದುರು ಮಣ್ಣು
ಹಾಳಮಣ್ಣು	ಇದು ಹಸಿಯಿದ್ದಾಗ ಕರಿ ಮತ್ತು ಒಣಗಿದಾಗ ಬಿಳು ಪಾಗುವ ಮಣ್ಣು, ಮನೆಕಟ್ಟಲು ಉಪಯುಕ್ತ.
ವಂಡ	ಒಂಡು (ಮೈ.ಕ.) ಕೆರೆ ದಂಡೆಯ ಮಣ್ಣು ಇದರಲ್ಲಿ ರೇವು ಸೇರಿರುವದರಿಂದ ಹೆಚ್ಚು ಫಲವತ್ತಾಗಿರುತ್ತದೆ.
ಕೆರೆಹೊಲ	ಕೆರೆಯ ದಂಡೆಯ ಮೇಲಿನ ಹೊಲ.
ಕೆರೆನೀರು	ಕೆರೆಯಲ್ಲಿನ ನೀರು. 'ಕೆರೆನೀರು ಕೆರೆಗೆ ಚೆಲ್ಲಿ ವರವ ಪಡೆಯುವದು' (ನಾ).
ಕೆರೆಗೆ ಹಾರ	ಒಂದೆ ಕೆರೆ ಕಟ್ಟಿದ್ದು ನಿಲ್ಲಲು ಬಸುರೆಯರನ್ನು ಆಹುತಿಯಾಗಿ ಕೊಡುವ ನಂಬುಗೆಯಿತ್ತು. 'ಕೆರೆಗೆ ಹಾರ'ವೆಂಬ ಜನಪದ ಕಥೆ ಕನ್ನಡದಲ್ಲಿ ಪ್ರಸಿದ್ಧವಾಗಿದೆ.
ಗದ್ದೆನೆಲ	ಕಟನಿ (ತ.ಮ.) ಕಯ್ಯೆ (ತೆ), ಗಟ್ಟಿ>ಗದ್ದೆ, ಗದ್ದೆ (ಪ.ಗ). ಭತ್ತ ಬೆಳೆವ ನೆಲ. ಉ. ಗದ್ದಿ. ಪ್ರ. ಗದ್ದೆಮಣ್ಣು, ಗದ್ದೆಮಡಿ. ಪರ್ಯಾ. ಜೆದ್ದೆಲ, ನೀರ್ನೆಲ (ಕಾ) ಇದು ಕೆರೆಯ ಕೆಳಗಿರುವ ನೆಲ.

ಅಣೆಕಟ್ಟಿನ ನೀರು

ಅಣೆ	<ಅಣೈ (ತ) (dam) ಅಣ (ಮ)–ಅಣೆಕಟ್ಟು ಅಣ (ಕೊ)–ಹೊಳೆ, ಹಳ್ಳದಿಂದ ಹರಿದುಬಂದ ಕಾಲುವೆ. ಅಣ (ತೆ)–ದಂಡೆ ಅಥವ ಅಣೆಕಟ್ಟು.
ಅಣೆಕಟ್ಟು	ನದಿ ಇಲ್ಲವೆ. ಉಪನದಿಗಳ ನೀರನ್ನು ಬಂಧಿಸಿ ಎರಡು ಗುಡ್ಡಗಳ ಆಯಕಟ್ಟಿನ ಸ್ಥಳದಲ್ಲಿ ದೊಡ್ಡ ಗೋಡೆ ಕಟ್ಟಿ ನಿಲ್ಲಿಸುವದು. ಉ. ಅಣೆಕಟ್ಟು. ಪರ್ಯಾ. ಡ್ಯಾಮ್ (dam

ಇಂ.) ಜಲಾಶಯ (ಸಂ). ಡ್ಯಾಮ್ ಅಥವ ಜಲಾಶಯ ವೆಂದರೆ ದೊಡ್ಡ ನದಿಗಳಿಗೆ ಕಟ್ಟಿದ್ದು. ಅಣೆಕಟ್ಟು ಉಪನದಿ ಇಲ್ಲವೆ ದೊಡ್ಡ ಹಳ್ಳಗಳಿಗೆ ಕಟ್ಟಿದ್ದೆಂಬ ಅರ್ಥ ಈಗ ಬಂದಿದೆ. ಪ್ರ. ಅಮರ್ಜಾ ಅಣೆಕಟ್ಟು, ಬೆಣ್ಣೆತೊರೆ ಅಣೆ ಕಟ್ಟು, ಮುಲ್ಲಾಮರಿ ಅಣೆಕಟ್ಟು, ಹತ್ತಿಗುಣಿ ಚಂದ್ರಂಪಲ್ಲಿ. ಸೌದಾಗರ ಅಣೆಕಟ್ಟುಗಳು.

ಕೆಳದಂಡೆ — ಅಣೆಕಟ್ಟಿನ ಕೆಳಭಾಗದ ಪ್ರದೇಶ..

ಮುಳುಗಡೆ ಪ್ರದೇಶ — ನೀರು ಬಂದು ಸೇರುವ ಪ್ರದೇಶ.

ಮೇಲ್ದಂಡೆ — ಅಣೆಕಟ್ಟಿನ ಮೇಲ್ಭಾಗದ ಪ್ರದೇಶ.

ಸಂಗ್ರಹಗೊಂಡ ನೀರು :

ರಾಡಿ ನೀರು (<ರವಡಿ) (ಸಂ) — ರಾಡು (ತೆ) ರಾಬಡಾ (ಮರಾ) ಮಣ್ಣು ಮಿಶ್ರವಾದ ಹೊಲಸು ನೀರು.

ತಿಳಿ ನೀರು — ಕುಡಿಯಲು ಯೋಗ್ಯವಾದ ನೀರು.

ತೆರೆ — ತಿರೈ (ತ) ನೀರಿನ ಅಲೆ. ಉ. ತೆರಿ, ಥೆರಿ.

ಧಡಿಕಿ — ನೀರು ಬಂದು ಬಡಿಯುವುದು. ಪರ್ಯಾ. ಥಾಪು.

ಸಿಡಿನೀರು — ನೀರು ಹೆಚ್ಚಿದಾಗ ಮೇಲೆ ಸಿಡಿಯುವ ನೀರು. ಉ. ಸಿಡ್ನೀರ• ಪರ್ಯಾ. ತುಂತುರ.

ಭಾವಿ ನೀರು :

ಭಾವಿ — <ವಾಪಿ (ಸಂ). ಭಾವಿ, ಬಾವಿ. ಉ. ಬಾ̃ಯಿ (ಅನು). ಪ್ರ. ಗುಂಡ ಭಾವಿ, ಚೌಕ ಭಾವಿ, ಹೊಕ್ಕು ತುಂಬುವ ಭಾವಿ. ಉ. <ಹೊಕ್ಕರಾಣಿ ತೋಟದ ಭಾವಿ, ಹಾಳ ಭಾವಿ, ಹಳಿಭಾವಿ. ಹೊಸಭಾವಿ, ಸಣ್ಣಭಾವಿ. ದೊಡ್ಡಭಾವಿ, ಗುಂಬಭಾವಿ. ಕಂಬದ ಭಾವಿ. ಕೌರಕಿ ಬಾವಿ. ಒಂಬತ್ತು ಗಿರಿಕಿಭಾವಿ, ಸಿಡ್ಲಭಾವಿ. ಜೋಗಿಭಾವಿ. (ಧಾ.ಕ.) ಭಾ̃ಯಿ (ಬಿ.ಕ.) ಬಾಯಿ (ಕ.ಸು.ಕ.).

ಭಾವಿಯ ನೀರು

ಗುಮ್ಮು ನೀರು — ನೀರು ತಳಕ್ಕಿರುವದು.

ಉಪ್ಪು ನೀರು — ನೀರು ಉಪ್ಪಾಗಿರುವುದು. ಪರ್ಯಾ. ಬಳಕೆನೀರು (ಕ.ಸು.ಕ.)

ಸವಿನೀರು — ನೀರು ಸವಿಯಾಗಿರುವುದು. ಉ. ಸಿಹಿನೀರು. ಸೀನೀರು.

ಸೆಯ್ನೀರು, ಸಿಂವ್ನೀರು, ಸಂಯ್ನೀರು. ಪರ್ಯಾ. ಕುಡಿ ನೀರು,

ಸವಳು ನೀರು — ನೀರು ಸವುಳಾಗಿರುವುದು. ಉ. ಸವ್ಳ ನೀರು.

ಮಟ್ಟಿ ನೀರು — ಮಟ್ಟಿಯಿಂದ ಬರುವ ನೀರು

ಎಂಜಿನ್ ನೀರು — ಪಂಪು ಸೆಟ್ಟಿನ ಮೂಲಕ ಬರುವ ನೀರು.

ಬಿಡ ನೀರು — ಮಡಿಮಾಡದ ಹಾಗೆಯೇ ನೆಲಕ್ಕುಣಿಸುವ ನೀರು.

ಹುಳಿ ನೀರು — ಮಡಿಗಳಲ್ಲಿ ಆಗಿಗೆ ಬಿಡುವ ಮೊದಲ ನೀರು. (ಬಿ.ಕೆ.)

೨. ನೀರೆತ್ತುವ ಉಪಕರಣ :

ಮಟ್ಟೆ–ಬಾರಿ–ವಿಷಯು :

ಮಟ್ಟೆ — <ಮೂಟ್ಟೈ (ತ) ಭಾರವಾದ ಚೀಲ, ಮೂಟ (ಮ) ಭಾರ. ಮುಟ್ (ಕೊ) ಪ್ರಾಣಿಗಳ ಮೇಲೆ ಹೇರುವ ಧಾನ್ಯದ ಗಂಟು. ಮೋಟ (ತೆ) ಮೂಟೆ (ಕ). ಮೊಟ್ಟೆ ಮೋಟ ಮರಾ. (C/f ಮೂಟ್ಟೈ) ಉ. ಮಟ್ಟಿ, ತೊಗಲಿನ ನೀರು ತುಂಬಿದ ಚೀಲ. <ಮೂಟಕ, ಮೂಢಕ (ಸಂ) ಪ್ರ (೧) ತೊಗಲಿನ ಮಟ್ಟೆ. (೨) ಕಬ್ಬಿಣ ಮಟ್ಟಿ. (೩) ಲಗಾಟೆ ಮಟ್ಟಿ. ಪರ್ಯಾ. ಕಪಲಿ. ಪರ್ಯಾ : ಬಕ್ಕಣ, ಘೇರಿ (ಮ) (ಬೀಕ.) ಪ್ರ. ಮಟ್ಟಿಬಾರಿ, ಮಟ್ಟಿಗಂಟ, ರೂ. ಗಂಟಿಮಟ್ಟಿ, ಮಟ್ಟಿಚೀಲ. ಇದೊಂದು ತರದ ಮಟ್ಟೆ. ಬಿದಿರಿಗೆ ಕಲ್ಲುಕಟ್ಟಿ ಬುಟ್ಟಿಯಿಂದ ನೀರೆತ್ತುವ ಉಪಕರಣ, ಪರ್ಯಾ. ಲಗಾಟಿಮಟ್ಟಿ (ಕ.ಕ.)

ಏತ — <ಎತ್ತರ್ (ತೆ)–ಉ. ಯಾತ.

ಮಟ್ಟೆಯ ಭಾಗಗಳು :

ಕಡಗ — ಮಟ್ಟೆಯ ಮೇಲಿನ ಕಬ್ಬಿಣ ಬಳೆ.

ಕಡಾಯಿ — ತೊಗಲಿನಮಟ್ಟೆಯ ಮೇಲಿನ ಕಬ್ಬಿಣದ ಕಡಾಯಿ.

ಕೊಂಡಿ — ಮಿಣಿಯನ್ನು ಮಟ್ಟಿಗೆ ಜೋಡಿಸುವ ಕಬ್ಬಿಣದ ಕೊಂಡಿ.

ಚಿಣಿ — ಮಿಣಿಯನ್ನು ಕೊಂಡಿಯಲ್ಲಿ ಸೇರಿಸುವ ಸಣ್ಣ ಕಟ್ಟಿಗೆ.

ಚೀಲ — ನೀರು ತುಂಬುವ ಮಟ್ಟೆಯ ದುಂಡಾದ ಚೀಲ. ಪರ್ಯಾ. ಘೇರಿ. ಬಕ್ಕೊಣ (ಬೀ.ಕ.).

ಮಟ್ಟಿಕಣ್ಣು — ತೊಗಲಿನ ಮಟ್ಟೆಯ ಕಡಾಯಿಗೆ ಹಗ್ಗ ಸೇರಿಸಿ ಬಿಗಿಯುವ ರಂಧ್ರಗಳು. ಇವು ಒಟ್ಟು ೧೬.

ಸೊಂಡಿ — ಮಟ್ಟೆಯ ಕೆಳಗೆ ಉದ್ದಾಗಿ ಇಳಿಬಿದ್ದ ತೊಗಲಿನ ಬಾಯಿ.

ಮಟ್ಟಿ ಎಳೆಯಲು ಬೇಕಾಗುವ ಉಪಕರಣಗಳು :

ಕೊಳ ಪಟ್ಟಿ — ನೊಗದ ಕೆಳಗಿನ ಪಟ್ಟಿ. ಇದು ಎತ್ತುಗಳ ಕೊರಳ ಕೆಳಗಿರುತ್ತದೆ. ಪರ್ಯಾ. ಜತ್ತಿಗಿ (ಬಿ.ಕ.) ಕೊಳಕಣ್ಣಿ (ಕ.ಸು.ಕ.)

ಜಾಮೀನಿ — ಮಟ್ಟಿ ಭಾವಿಯಲ್ಲಿ ಜಾರಿ ಬೀಳದಂತೆ ಗಾಲಿಯ ಹತ್ತಿರ ಮಿಣಿಗೆ ಕಟ್ಟಿದ ಸಣ್ಣ ಹಗ್ಗ.

ನೊಗ — <ಯುಗ (ಸಂ) ಎತ್ತುಗಳ ಹೆಗಲ ಮೇಲಿರುವ ಕೊರಡು. ಪರ್ಯಾ. ಪತ್ತಿನಗ (ಬೀ.ಕ.) ಇದು ಅಷ್ಟಪೈಲಿ ಆಕಾರದಾಗಿದ್ದು ೬ ಗೇಣು ಉದ್ದಿರುತ್ತದೆ.

ಬದ್ದಿ — ಎತ್ತುಗಳ ಕೊರಳಿಗೆ ಹೂಡುವಾಗ ಬದಿಯಲ್ಲಿರುವ ಉದ್ದಾವ ಕಟ್ಟಿಗೆ ಪರ್ಯಾ. ಕಳಗಿಲ. (ಬಿ.ಕ.) ಪತಗುಣಿಕಿ (ಕ.ಸು.ಕ.)

ಮಿಣಿ — ಮಟ್ಟಿ ಎಳೆಯಲು ಬೇಕಾದ ಮುಖ್ಯ ಹಗ್ಗ.

ಸೊಂಡಿ ಹಗ್ಗ — ಮಟ್ಟಿಯ ಸೊಂಡಿಗೆ ಕಟ್ಟಿರುವ ಹಗ್ಗ. ಉ. ಸೊಂಡೆಗ್ಗ. ಇದು ಕದರಿನ ಮೇಲೆ ಎಳೆಯುತ್ತ ಹೋಗುವುದು.

ಹೂಟಿಹಗ್ಗ — <ಹೂಡುವಹಗ್ಗ, ಉ. ಊಟೆಗ್ಗ, (ಕ.ಸು.ಕ.) ಮಿಣಿ ಮತ್ತು ಸೊಂಡಿ ಹಗ್ಗಗಳ ಕೊನೆಗೆ ಒಂದು ಚಿಣಿಯಲ್ಲಿ ಸೇರಿಸಿರುವ ಹಗ್ಗ. ಇದನ್ನು ನೊಗಕ್ಕೆ ಜೋಡಿಸಿರುವರು.

ಹೀದೋ — ಮಟ್ಟಿ ಹೊಡೆಯುವ ಆಳು ನೀರು ತುಂಬಿ ಬರುವಾಗ ಮಾಡುವ ಧ್ವನಿ.

ಬಾರಿ :

ಬಾರಿ — (<(ತ) ವಾಜ್ಹಿ) ದಾರಿ. ಬಾಜಿ (ತ). ಬಾರಿ. ಎತ್ತುಗಳು ಮಟ್ಟಿಯನ್ನು ಜಗ್ಗಲು ಇಳಿಜಾರಾಗಿ (Slope) ಮಾಡಿದ ನೆಲ. ಇದು ಭಾವಿಯ ನೀರಿನ ಪ್ರಮಾಣದ ಮೇಲಿಂದ ಮಿಣಿ ಎಷ್ಟು ಉದ್ದಾಗಿರುವುದೋ ಅಷ್ಟರಿಂದ ಮಾಡಿದ ಒಂದೇ ಮಗ್ಗುಲಿನ ರಸ್ತೆ. (One way traffic). ಆದರೆ ಬಾರಿ ಎಂಬುದು ಗಾಲಿ ಹಾಗೂ ಅಪರ ಉಪಕರಣಗಳಿರುವ ಎಲ್ಲ ಭಾಗಕ್ಕೂ ಅನ್ವಯಿಸುವ ಒಟ್ಟು ಹೆಸರಾಗಿದೆ.

ಬಾರಿಯ ಪ್ರಭೇದಗಳು ೧. ಗಚ್ಚಿನ ಬಾರಿ – ಗಚ್ಚಿನಿಂದ ಕಟ್ಟಿದ ಬಾರಿ.

೨. ಹಂದರ ಬಾರಿ – ಇದು ತಾತ್ಪೂರ್ತಿಕವಾಗಿ ಮಾಡಿದ ಬಾರಿ.

೩. ಜೋಡ ಬಾರಿ – ಇದು ಒಂದರ ಬಳಿಯಲ್ಲಿ ಮತ್ತೊಂದು ಇರುವ ಎರಡು ಮಟ್ಟೆಯ ಬಾರಿ. ಒಂಬತ್ತು ಗಿರಿಕಿ ಭಾವಿಗೆ ಒಂಬತ್ತು ಮಟ್ಟೆ ಏಕಕಾಲದಲ್ಲಿ ನಡೆಯುವವು.

೪. ಕಲ್ಲಿನ ಬಾರಿ – ಇದು ಸಾಧಾರಣ ಕಲ್ಲುಗಳಿಂದ ಜೋಡಿಸಿ ಕಟ್ಟಿದ ಬಾರಿ.

ಕಂಬರ ಗೋಲ ಬಾರಿಗೆ ಆಚೆ–ಈಚೆ ಇರುವ ಎರಡು ಕಟ್ಟಿಗೆ ಕಂಬಗಳು. ಉ. ಕೊಂಬರಗಾಲಿ. ಪರ್ಯಾ. ಬಾರದೋಲಿ, ಮೇಡಿ (ಬೀ.ಕ.) (ಮ) ಕಳಾಸಕಟಿಗಿ (ಬಿ,ಕ.).

ಕಿವಿಗಲ್ಲು ಕಂಬರ ಗೋಲಿನ ಕಟ್ಟಿಗೆಗಳನ್ನು ಇಡಲು ಮಾಡಿದ ರಂಧ್ರವಿರುವ ಎರಡು ಕಲ್ಲುಗಳು. ಪರ್ಯಾ. ಮೂಗತಿಗಲ್ಲು.(ಬಿ.ಕ)

ಕದರು (<ಖದಿರ (ಸಂ) ಉಪ್ಪನೆಯು ತಿರುಗುವ ಕಟ್ಟಿಗೆಯ ಸರಳು. ಇದರ ಮೇಲೆ ಸೊಂಡಿ ಹಗ್ಗ ಹಾದು ಹೋಗುವದು. ಉ. ಕದಿರು, ಕದರ

ಕದರಿನ ಭಾಗಗಳು :

ಅಚ್ಚು – ಕದರಿನ ಒಳಭಾಗದ ಕಬ್ಬಿಣ ಸಲಾಕೆ.
ಮಣಿ – ಇದು ಕದರಿನ ಕೆಳಗೆ ಹಾಕಿದ ಕಟ್ಟಿಗೆಯ ಹಲಗೆ.
ತಾಳು – ಕದರನ್ನು ಕೂಡಿಸಲು ಬೇಕಾಗುವ ಕೆತ್ತನೆಯ ಎರಡು ಕಟ್ಟಿಗೆಗಳು.
ಬಳಿ – ಕದರಿನ ಎರಡೂ ಕಡೆಯಲ್ಲಿ ಕೂಡಿಸಿದ ಎರಡು ಕಬ್ಬಿಣದ ಬಳಿಗಳು.

ಗಾಲಿ (∠ ಕಾಲ್ (ತ), ಚಕ್ರ, ಗಾಲಿ (ತು)).
ಮಟ್ಟಿಯು ಮೇಲೆ ಹಾಯ್ದು ಹೋಗುವ ಕಟ್ಟಿಗೆಯ ಚಕ್ರ ಅಥವ ಗಾಲಿ; ಪರ್ಯಾ. ಗಿರಕಿ.
ಗಾಲಿಯ ಭಾಗಗಳು :

೧. ಗಾಲಿ ಮಣಿ – ಗಾಲಿಯ ಕೆಳಗಿನ ಅಗಲವಾದ ಕಟ್ಟಿಗೆಯ ಹಲಗೆ.

೨. ಗಾಲಿ ಕಿವಿ – ಗಾಲಿಯ ಎರಡೂ ದಂಡೆಯ ಭಾಗ.

೩. ಕದರು – ಗಾಲಿಯ ಒಳಗೆ ಸೇರಿದ ತಿರುಗುವ ಗುಂಡು ಕಟ್ಟಿಗೆ ಭಾಗ.

೪. ತಾಳು – ಗಾಲಿಯನ್ನು ಕೂಡಿಸಲು ಬೇಕಾದ ಎರಡು ಕೆತ್ತನೆಯ ಕಟ್ಟಿಗೆಗಳು.

ಗಿರಕು — ಗಾಲಿಯ ತಿರುಗುವಿಕೆ, 'ಗಿರುಕು ಗಿರುಕು' ಶಬ್ದ. ಉ. ಚಿರುಕು, ಚಿರುಕು.

ಫಕ್ಕಿ ಕಟ್ಟಿಗೆ — ಬಾರಿ ಮುರಿದು ಬೀಳದಂತೆ ಜೋಲಿ ತಡೆಯಲು ನಿಲ್ಲಿಸಿದ ಎರಡು ಟಿಸಿಲು ಕಟ್ಟಿಗೆಗಳು. ಇವನ್ನು ಹಣೆ ಪಟ್ಟಿಗೆ ಜೋಡಿಸಿರುವರು. ಪರ್ಯಾ. ಕಂಬಾರ ಕಟ್ಟಿಗೆ (ಕ.ಕ.).

ಹಣೆಪಟ್ಟಿ — ಕಟ್ಟಿಗೆಯ ದಿಂಡು. ಇವನ್ನು ಕಂಬರಗೋಲುಗಳ ಮೇಲೆ ಇಟ್ಟಿರುವರು.

ಹಣೆಪಟ್ಟಿ ತಾಳು — ಇವುಗಳ ನಡುವೆ ಮೇಲೆ ಗಾಲಿಯನ್ನಿಡುವರು.

೩. ನೀರು ಹರಿದು ಹೋಗುವ ಭಾಗ :

ಕಾಲುವೆ — (∠ಕಾಲ್ವಾಯ್ > ವಾಯಕ್ಕಾಲ್ (ತ). ರೂ. ಕಾಲವ (ತೆ). ಕಾಲಿವೆ (ತು). ಉ. ಕಾಲಿವಿ ರೂ.ಕಾವಲಿ. ಕಾವ್ಲಿ. ಕಾಲವಾ (ಮರಾ). > ಖಲ್ಲ (ಸಂ) ಖಾಲ (ಪ್ರಾ) c/f ಕಾಲ್ವಾಯ್ ನೀರು ಹರಿದು ಬರುವ ದಾರಿ.

ಪ್ರ :– ೧. ನೀರಗಾವಲಿ – ನೀರು ತುಂಬಿಬರುವ ಯಾವುದೇ ಕಾಲುವೆ.

೨. ಮಡಗಾವಲಿ – ಮಡಿಗಳಿಗೆ ನೀರು ಹರಿದುಹೋಗುವ ಕಾಲುವೆ.

೩. ಬಿಡಗಾವಲಿ – ಮುಖ್ಯಕಾಲುವೆ. ಪರ್ಯಾ. ದುರಗಾವಲಿ (ಬೀ.ಕ.). ಸರಗಾವಲಿ (ಕ.ಕ.).

೪. ಚೀರಗಾವಲಿ – ಉಪಕಾಲುವೆ. ಇದನ್ನು ಉದ್ದನೆಯ ಮಡಿಗಳಿಗೆ ಒಯ್ಯಲಾಗಿರುವುದು.

೫. ಬಸಿಗಾವಲಿ – ನೀರು ಬಸಿದು ಬರುವ ಕಾವಲಿ. (ರಾ.ಕ.).

ಮಡಿ (ಬಚ್ಚಲು)	ಬಾವಿಯಿಂದ ಮಟ್ಟಿಯು ನೀರು ಮೇಲೆ ಬಂದು ಬೀಳುವ ಮೊದಲ ಜಾಗೆ. ಇದನ್ನು ಕಲ್ಲಿನ ಕಟಿಕಟಿಯಿಂದ ಕಟ್ಟಿರಲಾಗುವದು. (ಕ.ಕ.).
ಮಡಿಕಟ್ಟು	ಪರ್ಯಾ. ನೀರುಣ್ಣಿಸು, ನೀರಹಾಯಿಸು, ನೀರು ಹೂಡು (ಕ.ಚಿ.ಕ.), ನೀರು ತಿರುವು.
ಹೌಜು	ನೀರು ಭಾವಿಯಿಂದ ಮೇಲೆ ಬಂದು ಸುರಿಯುವ ಹೌಜು. ಮಟ್ಟಿಯಿಂದ ಬಂದ ನೀರು ಮೊದಲು ಇಲ್ಲಿ ತುಂಬಿದ ಬಳಿಕ ಕಾಲುವೆಗೆ ಹರಿದು ಹೋಗುವುದು. ಪರ್ಯಾ. ಬಚ್ಚಲು (ಬಿಕ.).

೪. ನೀರಾವರಿ ನೆಲದ ಸಿದ್ಧತೆ:

ಅಗತಿ	(∠ಅಗುಟಿಚ್+ತೆ, ಅಗುಟಿತ್ತಿ (ಹ.ಗ.). ಉ. ಅಗತಿ. ನೆಲವನ್ನು ಅಗಿದು ಸಸಿ ಮುಂತಾದುವನ್ನು ನೆಡಲು ಅಣಿಗೊಳಿಸುವುದು.
ಕಟ್ಟಿಬಾಯಿ	ಮಡಿಗೆ ನೀರುಣಿಸಿದ ಬಳಿಕ ಅದನ್ನು ಮಣ್ಣಿನಿಂದ ಕಟ್ಟುವ ಸ್ಥಳ (ಕ.ಕ.).
ಕೊಳಮಡಿ	ಮೂರು ನಾಲ್ಕು ಮಡಿಗಳಾದ ಮೇಲೆ ನೀರು ತುಂಬಿ ನಿಲ್ಲುವ ಒಂದು ಹೆಚ್ಚಿನ ಮಡಿ.
ಗದ್ದಿ	[ಗಟಿಚ್+ದೆ, ಗಟ್ಡಿ∠ಗರ್ದೆ (ಹ.ಗ.)] ಉ. ಗದ್ದೆ, ಗದ್ದಿ. ಕಟನಿ (ತ) (ಮ). ಗದ್ (ಕೊ) ಗಾದೂ (ಕು). >ಕರ್ದಂ (ಸಂ). ಯಾವಾಗಲೂ ಹಸಿಯಿರುವ ಕೆಸರುಳ್ಳ ಒಡ್ಡಿನ ನೆಲ. ಭತ್ತದ ಪೈರಿಗೆ ಬೇಕಾಗುವ ಮುಖ್ಯ ಭೂಮಿ. ಪರ್ಯ. ಬೆದ್ದಲ, ನೀರ್ನೆಲ, (ಶಾ)
ಚೀರಿ	ಭೂಮಿಯ ಆಕಾರದ ಮೇಲಿಂದ ಮಡಿಗಳ ಹಂಚಿಕೆ. ೩, ೬, ೮ರ ವರೆಗಿನ ಮಡಿಗಳುಳ್ಳನೆಲ/ಚೀರಿ. (ಕ.ಕ.). ಒಂದೊಂದು ಚೀರಿಗೆ ಒಂದೊಂದು ನೀರಿನ ಮುಖ್ಯ ಕಾಲುವೆಯಿರುತ್ತದೆ.
ಪಟ್ಟಿ	ಬೋದು ಮಾಡಿದ ಎರಡು ಸಾಲುಗಳ ನಡುವಿನ ಭಾಗ, ಪ್ರಯೋಗ, ಸಾಲುಪಟ್ಟಿ.
ಪಾದ	ಮಡಿಗಳನ್ನು ಅಥವ ಕಟ್ಟೆಗಳನ್ನು ತಯ್ಯಾರಿಸುವಾಗ ಮೂರು, ನಾಲ್ಕು ಕಾಲಿನ ಅಳತೆ ಇರುತ್ತದೆ. ಅದು ಪಾದ. ಪರ್ಯಾ. ಜಾಪು, ಜಾಪುಗಾಲು, ಥಾಪುಗಾಲು.

ಫಳಗುಂಟಿ — ನೆಲ ಸಮತಾಳ ಮಾಡಲು ಉಪಯೋಗಿಸುವ ಉಪಕರಣ.

ಬಿಗಿ — ಸು. ೨೦ ಮಾರು ಚಚ್ಚೌಕು ಇರುವ ಭೂಮಿ. ಬಿಘಾ (ಹಿಂ). ಉ. ಬಿಗೆ, ಬಿಗಿ. (ಬಿ.ಕ.). ಬಿ.ಕ.ದಲ್ಲಿ ನೀರಾವರಿ ಭೂಮಿಯನ್ನು ಬಿಗಿಯ ಲೆಕ್ಕದಿಂದ ಮಾಡಿದರೆ ಕ.ಕ.ದಲ್ಲಿ ಕಟ್ಟಿಗಳ ಲೆಕ್ಕವಿರುತ್ತದೆ. ಸು. ೨೫೦ ಕಟ್ಟಿಗಳಿದ್ದರೆ ಒಂದು ಎಕರೆ.

ಮಡಗುಂಟಿ — ನಾಲ್ಕು ಹಲ್ಲು. ಈಸು. ಮತ್ತು ಕಿರಿದಾದ ದಿಂಡುಳ್ಳ ಮಡಿ ಮಾಡುವ ಉಪಕರಣ ಪರ್ಯಾ. ಚಿಕ್ಕರಾ ಗೋಲು (ಕ.ಕ.).

ಮಡಿ — ತೋಟದ ಬೆಳೆಗೆ ನೀರುಣ್ಣಲು ಅಣಿಗೊಳಿಸುವ ನೆಲ. ಮಣ್ಣನ್ನು ಮಡಿಕೆ ಮಾಡಿ ಅಚ್ಚುಕಟ್ಟಾಗಿಸುವುದು. ಕಟ್ಟಿ (ಕ.ಚಿ.ಕ.).

ಪ್ರ. ೧. ಚೌಕಮಡಿ – ನಾಲ್ಕು ಮೂಲೆಯ ಮಡಿ.
೨. ಉದ್ದನೆಯಮಡಿ– ಹೆಚ್ಚು ಉದ್ದಾಗಿರುವಮಡಿ.
೩. ಉಗು ಮಡಿ – ನೀರು ಹರಿದು ಬರುವ ಮಡಿ.

ಮಡಿಯ ಭಾಗಗಳು :

೧. ಸಾಲು :– ಮಡಿಯ ಸಾಲು.
೨. ಬೋದು :– ಸಾಲಿನ ದಿಬ್ಬ.
೩. ಹರಿ :– ಸಾಲಿನ ತಗ್ಗು. ಇಲ್ಲಿ ನೀರು ಹರಿದು ಬರುವುದು. ಇದರ ಎರಡೂ ಬದಿಯಲ್ಲಿ ಬಳ್ಳಿಯನ್ನು ಬೆಳೆಸುವರು.

ಸಮತಾಳ — (ಸಮ + ಪಾತಳಿ) ನೆಲ ಸಮವಾಗಿರುವದು ಉ. ಸಂಪತಾಳ (ಅನು).

ಸಲಿಕಿ — ∠ ಶಲಾಕಾ (ಸಂ) ಮಡಿಗಳಿಗೆ ನೀರುಣಿಸುವಾಗ.... ಉಪಯೋಗಿಸುವ ಒಂದು ಉಪಕರಣ.

ಸಾಲು — ನೇಗಿಲಿಗೆ ದೊಡ್ಡದಾದ ಹಗ್ಗ ಸುತ್ತಿ ಮಾಡಿದ ಸಾಲು. ಇದು ಬದನೆ. ಟೊಮ್ಯಾಟೊ. ಗೆಣಸುಗಳಿಗಾಗಿ ಮಾಡುವ ನೆಲದ ಉಪಕ್ರಮ. ಸಾಲು ಬಿಡು (ಕ್ರಿ.) (ಕ.ಕ.).

ಹರಿ — ದಿಂಡಿನ ಎರಡೂ ತಾಳುಗಳಿಗೆ ಹಗ್ಗ ಕಟ್ಟಿ ದಿಂಡನ್ನು ಎಳೆಸಿದ ಮೇಲೆ ಎರಡೂ ದಂಡೆಗಳಲ್ಲಿ ಉಂಟಾಗುವ ನೆಲ. ಇದು ಬಳ್ಳಿಯ ದಿನಸುಗಳಿಗೆ ನೆಲವನ್ನು ಸಜ್ಜುಗೊಳಿಸುವ ರೀತಿ. (ಕ.ಚಿ.ಕ.).

V ನೀರಾವರಿಯ ಬೆಳೆಗಳು :

I ಕಾಯಿಪಲ್ಲೆಯ ಹೆಸರುಗಳು :

ಅವರಿ [ಅವರೆ (ಪ.ಗ.)]. ಮುಚ್ಚೈ (ತ). ಅನುಮುಲು (ತೆ). ಮುಚಕೊಟ್ಟ (ಮ). ಒಂದು ದ್ವಿದಲ ಧಾನ್ಯ. ಬಳ್ಳಿಯುಳ್ಳದು. ಪ್ರ:– ಕೆಂಪವರಿ, ಕರಿಯವರಿ, ಬಿಳಿ ಅವರಿ, ಬಟ್ಟವರಿ. ಉ. ಅವ್ರಿ. ಬೀನ್ಸ (ಇಂ). ಚಳ್ಳವರಿ. ಚಿತ್ತ ದಲ್ಲಿ ಬೆಳೆದ ಅವರಿ. ಚೆಟ್ಟೆವರಿ (ಹೊಲದಲ್ಲಿ ಕೂರಿಗೆಯಿಂದ ಬಿತ್ತಿದ ಅವರೆ. ಇದು ಭಟ್ಟಿ ಅಮಾವಸೆಯ ಹೊತ್ತಿಗೆ ಬರುತ್ತದೆ. ಉ. ಚಳಂಬಿ), ಚಟ್ಟೆಂಬ್ರಿ, (ಕ.ಸು.ಕ.).

ಉಳ್ಳಾಗಡ್ಡೆ (Onian) ಉಳ್ಳಿ (ತ.) (ಮ.). ಉಳ್ಳೈ ಉಲ್ಲಿ. ಉಲ್ಲಿಗಡ್ಡ ನೀರುಳ್ಳಿ (ತೆ.) ಕಾಕುಳ್ಳ ನೀರಿರುವಗಡ್ಡೆ. ಉ. ಉಳ್ಳಾಗಡ್ಡಿ (ಬಿ.ಕ.) ಉಳುಗಡ್ಡಿ (ಬೀ.ಕ.). ಉಳ್ಳಿಗಡ್ಡಿ (ಕ.ಕ.).
ಪರ್ಯಾ. ಈರುಳ್ಳಿ (ಮೈ.ಕ.) . ನೀರುಳ್ಳಿ.
ಪ್ರ:– ೧. ಕೇಸ ಉಳ್ಳಾಗಡ್ಡಿ – ಇದಕ್ಕೆ ಗಡ್ಡಿಯಾಗುವುದಿಲ್ಲ. ಕೇವಲ ತೊಪ್ಪಲು ಮಾತ್ರ ಇರುವುದು.
೨. ಕೆಂಪುಳ್ಳಾಗಡ್ಡಿ – ಗಡ್ಡೆ ಕೆಂಪಗಿರುವುದು
೩. ಬಿಳಿಯುಳ್ಳಾಗಡ್ಡಿ – ಗಡ್ಡೆ ಬಿಳಿದಾಗಿರುವುದು.
೪. ಗಂಡುಳ್ಳಗಡ್ಡಿ – ಮೇಲೆ ಹೂಬಿಡುವ ಉಳ್ಳಾಗಡ್ಡಿ.
೫. ಬೀಜದ ಉಳ್ಳಾಗಡ್ಡಿ – ಬೀಜಕ್ಕಾಗಿ ಬಿಟ್ಟುದು
೬. ಜವಾರಿ ಉಳ್ಳಾಗಡ್ಡಿ – ಹೆಚ್ಚು ಕಾಕುಳ್ಳ ಗಡ್ಡೆ.
ಗಾದಿಗೆ–ಉಳ್ಳಾಗಡ್ಡಿ ಕೆಡದಂತೆ ರಕ್ಷಿಸುವ ಹುಲ್ಲಿನ ಗುಡಿಸಲು.

ಕರಿಬೇವು ಕಂಪುಳ್ಳ ಬೇವು. ಉ. ಕರಿಬೇಂವು (ಅನು) ಕರಿಬೆಂವ್.

ಕಿರಕಸಾಲಿ ತಪ್ಪಲು ಪಲ್ಲೆ. ಉ. ಕಿರಸಾಲಿ. ಕಿರಸಂಗ್ಯಾನಪಲ್ಲೆ. ಕಿರಸ್ಯಾನ ಪಲ್ಲೆ. ಕಿರಸೂಳಿಗ್ಯಾನಪಲ್ಲೆ. ಕಿರಕ್ಕಿನಪಲ್ಲೆ (ಕ.ಸು.ಕ.). (ಕ.ಜೀ.ಕ.).

ಕುಂಬಳಕಾಯಿ (Pumpkin) — (∠ಕೂಷ್ಮಾಂಡ (ಸಂ). ಗುಮ್ಮಡಿ (ತೆ). ಸಣ್ಣ ಬಳ್ಳಿಯಲ್ಲಿ ದೊಡ್ಡ ಗಾತ್ರದಿಂದ ಬೆಳೆಯುವ ಕಾಯಿ. 'ಬಳ್ಳಿಗೆ ಕಾಯಿ ದಿಮ್ಮಿತ್ತೇ' (ಬ.ಷ.ಪ.). (ನಾ). ಉ. ಕುಂಬ್ಳ. ಪ್ರಭೇದಗಳು: ೧) ಈಸಗುಂಬಳ – ಪರ್ಯಾ. ಹಸರುಗುಂಬಳ (ಬೀಜ ಉದ್ದ). (ಸ.ಕ./ಗ.).

೨. ಕರಿಗುಂಬಳ
೩. ಗುಂಡಗುಂಬಳ – (ಬೀಜ ಬಿಳಿ).
೪. ಶೆಂಡಿಗುಂಬಳ – ಪರ್ಯಾ. ಸಿಹಿ ಗುಂಬಳ.
೫. ಬಿಳಿಗುಂಬಳ.
೬. ಬೂದುಗುಂಬಳ.
೭. ಹಾಲಗುಂಬಳ
೮. ರಾಮಗುಂಬಳ – (ಬೀಜ ಅಗಲ).

'ಕುಂಬಳಕಾಯಿ ಕಳ್ಳ ಅಂದರೆ ಹೆಗಲ ಮುಟ್ಟಿ ನೋಡಿಕೊಂಡ' (ನಾ).

ಕೋತಂಬರಿ (Coriandrum satirum) — <ಕುಸ್ತುಂಬರ (ಸಂ) >ಕೊತ್ತಿಮಿರ (ತೆ). ಕಂಪುಳ್ಳ ಕೋಮಲ ತೊಪ್ಪಲು. ಉ. ಕೋತಮ್ರಿ, ಕೋತಮಿರಿ. ಇದರ ಹೂವು ಕಾಯಿಯಾದ ಮೇಲೆ ಹವೀಜು ಆಗುತ್ತದೆ. (ಮಸಾಲೆ ಸಾಮಾನು).

ಕೋಬಿಗಡ್ಡಿ — (∠ Cabbage (ಇಂ) ಕ್ಯಾಬೇಜ್) ಪರ್ಯಾ. ಗೋಬಿ.

ಗಜ್ಜರಿ (Carrot) — ನೆಲದಲ್ಲಿ ಬೆಳೆಯುವ ಸಿಹಿಯಾದ ಗಡ್ಡೆ, ಗಾಜರಗಡ್ಡ (ತೆ). ಉ. ಗಜ್ಜ್ರಿ. ಪ್ರ. ಕೆಂಪು ಗಜ್ರಿ, ಬಿಳಿಗಜ್ರಿ.

ಗೆಣಸು (Sweet Patato) — [ಕಿರಂಕು (ತ)]. ಗೆನುಸು (ತೆ). ಕಂದಮೂಲ (ಸಂ) ನೆಲದಲ್ಲಿ ಬೆಳೆಯುವ ಸಿಹಿಯಾದ ಗಡ್ಡೆ.
ಪ್ರಯೋ. ಗಡ್ಡೆಗೆಣಸು. ಉ. ಗೆಣ್ಣು. ಗೆಣ್ಸ. ರಾತೇಲ, (ಬೀ.ಕ.). ಪ್ರ. ಕೆಂಪುಗೆಣಸು. ಬಿಳಿಗೆಣಸು. ಡಬಗಾಯಿ : ಇದು ನೆಲದಲ್ಲಿ ಗಡಿಗೆಯನ್ನು ಹೂಳಿ ಕುದಿಸಿದ ಗೆಣಸು. ಇದರಿಂದ ಮಾಡುವ ಪದಾರ್ಥಗಳು. ಗೆಣಸಿನ ಹೋಳಿಗೆ. ಗೆಣಸಿನ ಸೀಕರಣೆ, ಗೆಣಸಿನ ಚಿಪ್ಸ್.

ಗೋಳಿ — ಒಂದು ವಿಧದ ಹುಳಿಯಾದ ತೊಪ್ಪಲು ಪಲ್ಲೆ. ಉ. ಗೂಳಿ. ಪ್ರ. ಕೆಂಪುಗೋಳಿ. ಸಣ್ಣಗೋಳಿ. ದೊಡ್ಡಗೋಳಿ.

ಚವಳಿಕಾಯಿ (Cympositetragono)	[ಜೌಳಿಕಾಯಲು. (ತೆ)]. ಪರ್ಯಾ. ಗೋರೆಕಾಯಿ (ಮೈ.ಕ.) ಸಣ್ಣ ಗಿಡದಲ್ಲಿ ಬೆಳೆಯುವ ಕಾಯಿಪಲ್ಲೆ. ಪ್ರ. ಜವಾರಿ ಚವಳಿ. ಹೈಬ್ರಿಡ್ ಚವಳಿ. ಅಡವಿ ಚವಳಿ. ಪರ್ಯಾ. ಮಡಿಕಿ ಕಾಯಿ (ಕ.ಕ.).
ಚಂದನ ಬೊಟ್ಟು	ಹಸಿರು ಎಲೆ. ಬಿಳಿ ಸುಂಕವಿರುವ ತಪ್ಪಲು. ಇದನ್ನು ಸಾರಿನಲ್ಲಿ ಉಪಯೋಗಿಸುವರು.
ಟೊಮ್ಯಾಟೊ (Tomato)	ದಕ್ಷಿಣ ಅಮೇರಿಕೆಯಲ್ಲಿ ಹೆಚ್ಚಾಗಿ ಬೆಳೆಯುವರು. ಉ. ಟಮಾಟಿ, ತಮಾಟಿ. ಟೊಮಾಟಿ. ಪರ್ಯಾ. ಚಪ್ಪರ ಬದನಿಕಾಯಿ, ಹಂದ್ರ ಬದ್ನಿಕಾಯಿ (ಕ.ಸು.ಕ.). ಪ್ರ. ಹಸಿ ಟೊಮ್ಯಾಟೊ, ಹಣ್ಣ ಟೊಮ್ಯಾಟೊ, ಗುಂಡ ಟೊಮ್ಯಾಟೊ ಉದ್ದ ಟೊಮ್ಯಾಟೊ. ಚಪ್ಪಟ ಟೊಮ್ಯಾಟೊ. ಪ್ರಯೋ: ಟೊಮ್ಯಾಟೊಸಾರು, ಟೊಮ್ಯಾಟೊ ಹುಳಿ, ಟೊಮ್ಯಾಟೊ ಪಲ್ಲೆ, ಟೊಮ್ಯಾಟೊ ಆಮ್ಲೇಟ್.
ತಿಪರಿಕಾಯಿ	ಹಂದರದ ಬಳ್ಳಿಯಲ್ಲಿ ಬೆಳೆಯುವ ಕಾಯಿ. ಉ. ತಿಪ್ರಿ ಕಾಯಿ. ಪರ್ಯಾ. ತುಪ್ಪದಹೀರಿಕಾಯಿ.
ತೊಂಡಿಕಾಯಿ (Furkin)	ಬೇಲಿಯ ಬಳ್ಳಿಯಲ್ಲಾಗುವ ಕಾಯಿ. ತೊಂಟೈ (ತ). ದೊಂಡ (ತೆ). [>ತುಂಡಿಕ (ಸಂ)]. ಉ. ತೊಂಡೆ, ತೊಂಡಿ. ಪ್ರ. ಹಸಿತೊಂಡಿಕಾಯಿ, ಹಣ್ಣು ತೊಂಡಿಕಾಯಿ. ಪ್ರಯೋ : ಕಾಕತುಂಡಿ–ಕಾಗೆದೊಂಡಿ. (ಶ.ಮು.ದ.).
ನವಿಲಕೋಲು	ಒಂದು ತರಕಾರಿ
ಪಡುವಲಕಾಯಿ (Snake gourd)	ಪಟು–ಕೆಳಕ್ಕಿಳಿ, ಪಟುಕ್ಕೈಯ್ (ತ). ಪೋಟ್ಲಕಾಯಲು (ತೆ). ಪಡು–ಕೆಳಗೆ ಬೀಳು. ಪಡುವ. ಪಡುವಲ್. ಬಳ್ಳಿಗೆ ಕೆಳಗೆ ಇಳಿಬಿದ್ದಿರುವ ಹಾವಿನಾಕೃತಿಯ ಉದ್ದಾದಕಾಯಿ. ಉ. ಪಡೋಲಕಾಯಿ. ಪಡೂಲಕಾಯಿ, ಪಡ್ಲಕಾಯಿ, ಕಲಪಟ್ಲಿಕಾಯಿ. (ಕ.ಸು.ಕ.) ಕಲ್ಲುಕಟ್ಟಿ ಇಳಿಬಿಟ್ಟ ಪಡುವಲ ಕಾಯಿಗೆ ಹೆಸರು.
ಪಾಲಕನ ಪಲ್ಲೆ	ಒಂದು ತರದ ತೊಪ್ಪಲು ಪಲ್ಲೆ. ಇದನ್ನು ಕಾರಬೇಳೆಯಲ್ಲಿ ಉಪಯೋಗಿಸುವರು. ಉ. ಪಾಲಕಪಲ್ಲೆ. ಪಾಲಕಂ ಪಲ್ಲೆ, ಪಾಲ್ಯಕ (ಕ.ಕ.).
ಪುಂಡಿ ಪಲ್ಲೆ	ಪುಳಿಚ್ಚೈ (ತೆ) ಪುಂಡಿ (ತೆ). (<ಪುಳ್ + ಉಡೆ> ಪುಣ್ಣೆ) ಹುಳಿಯಾದ ಪಲ್ಲೆ. ಉ. ಪುಂಡಿ. ಪುಂಡ್ಯ ಪಲ್ಲೆ. ಪ್ರ.. ಫರಂಗಿ ಪುಂಡಿ: ಇದರಿಂದ ನಾರು ಉತ್ಪನ್ನವಾಗುವದು.

ಪುದಿನ (Mint)
ಕಂಪುಳ್ಳ ಸಣ್ಣ ತಪ್ಪಲು. ಚಟ್ನಿ ಕುಟ್ಟುವಾಗ ಉಪಯೋಗಿಸುವರು. ಔಷಧದಲ್ಲಿ ಉಪಯುಕ್ತ. ಪುದೀನ (ತೆ). ಉ. ಪುದಿನಾ.

ಬಟಾಟಿ (Potato)
ನೆಲದಲ್ಲಿ ಬೆಳೆಯುವ ಗಡ್ಡೆ. ತತ್ತಿಯಾಕಾರದ್ದು. ಉರಳೆಕ್ಕಂಜು (ತ). ಉರುಲಗಡ್ಡ (ತೆ). ∠ ಆಲೂ (ಹಿಂ). ಪ್ರ. ಕುಫ್ರಿಸಿಂಧೂರಿ, ಚಂದ್ರಮುಖಿ.
<ವರ್ತುಳ್ಳೈ ವರ್ತುಣ್ಣೈ (ತ)] ವರ್ತುನ (ಮ).
ವಣಕ್ಕಾಯ್–ವಂಗ(ತೆ) > ಬಂಥಾಕಿ (ಸಂ). ವಾಂಗ (ಮ).

ಬದನಿಕಾಯಿ (Bringal)
ಸಣ್ಣಗಿಡದಲ್ಲಿ ಬೆಳೆಯುವ ಕಾಯಿ. ಇದನ್ನು ಹೆಚ್ಚಾಗಿ ಹೋಳಿ ಪಲ್ಲೆ ಮಾಡುವರು. ಉ. ಬದನೆ. ಬದನಿ. ಬದ್ನಿ. ಪರ್ಯಾ. ಮುಳ್ಗಾಯಿ, (ಮೈ.ಕ.) ಪ್ರ. :– ಕರಿಬದನಿಕಾಯಿ. ಇದರ ತುಂಬಿಗೆ ಮುಳ್ಳಿರುತ್ತವೆ. ೨) ಬೂದಬದನಿಕಾಯಿ ೩) ಬಿಳಿಬದನಿಕಾಯಿ–(ತುಂಬಿಗೆ ಮುಳ್ಳಿರುವದಿಲ್ಲ)..

೪) ಭರ್ತದ ಬದನಿಕಾಯಿ (ಮದ್ರಾಸಿ ಬದನಿ) ೫) ಎಣ್ಣೆ ಬದನಿಕಾಯಿ. ೬) ಬೀಜದಕಾಯಿ. ೭) ದುಂಡ ಬದನಿಕಾಯಿ. ೮) ಉದ್ದ ಬದನಿಕಾಯಿ. ೯) ಹೊಳಿಸಾಲ ಬದನಿಕಾಯಿ. ೧೦) ಕುಂಡಚಿ ಬದನಿಕಾಯಿ. ೧೧) ಬೆಂಗಳೂರ ಬದನಿಕಾಯಿ. ೧೨) ರಾಮದುರ್ಗ ಬದನಿಕಾಯಿ. ೧೩) ಮಲಪುರ ಬದನಿ. ೧೪) ಈರನಗೆ ಬದನಿ. ೧೫) ಬಾಳಿ ಬದನಿ (ಉದ್ದಾದುದು ಕ.ಸು.ಕ.). ಶಾಸ್ತ್ರ ಹೇಳು. ವದು ಬದನಿಕಾಯಿ ತಿನ್ನುವದು' (ನಾ).

ಬೆಂಡಿಕಾಯಿ (Ladies finger)
ಮೇಲೆ ಸುಂಕವಿರುವ ಉದ್ದಾದ ಕಾಯಿಪಲ್ಲೆ. ಬೆಂಡಕಾಯ್ (ತೆ). ಉ. ಬೆಂಡೆಕಾಯಿ. ಬೆಂಡಿಕಾಯಿ. ಪ್ರ. ಉದ್ದಕಿರಿ. ಜವಾರಿ ಬೆಂಡಿ. ಪೈಜಿನ್ ಬೆಂಡಿ. ಮುಳಬೆಂಡಿ. ಪಚ್ಚನಬೆಂಡಿ.

ಬೆಳ್ಳೊಳ್ಳಿ (Garlic)
ಕ್ಷಾರವಿರುವ ಫಲಕಗಳನ್ನೊಳಗೊಂಡ ಗಡ್ಡೆ. ಮಡಿಯಲ್ಲಿ ನೀರು ಬಿಟ್ಟು ಇದನ್ನು ಬೆಳೆಯುವರು. ವೆಳ್ಳೈಪ್ಪೂಂಡು–ಉಳ್ಳಿ ಪೂಂಡು (ತ). ವೆಲ್ಲುಳ್ಳಿ. ತೆಲ್ಲಗಡ್ಡ (ತೆ) ವೆಲ್ಲುಳ್ಳಿ (ಮ).ಉ. ಬಳ್ಳೊಳ್ಳಿ. ಬಳ್ಳುಳ್ಳಿ.ಪರ್ಯಾ. ಬೆಳ್ಳಗಡ್ಡೆ (ಘೀ.ಕ.). ಬೆಳ್ಳೊಳ್ಳಿ ಫಲಕಕ್ಕೆ ಎಸಳು ಎನ್ನುವರು (ಕ.ಸು.ಕ.).

ಮೂಲಂಗಿ (Radish) <ಮೂಲ್ಲಿಸ್ಕೈ (ತ.ಮ.) ಮುಲ್ಲಂಗಿ (ತೆ). ಕ್ಷಾರವಿರುವ ನೆಲದಲ್ಲಿ ಬೆಳೆಯುವ ಉದ್ದಾದ ಗಡ್ಡೆ. ಇದರ ಮೇಲೆ ತಪ್ಪಲು ಬೆಳೆಯುತ್ತದೆ. ಪ್ರ. ಕೆಂಪು ಮುಲ್ಲಂಗಿ, ಬಿಳಿ ಮುಲ್ಲಂಗಿ, ಮುಲ್ಲಂಗಿಕಾಯಿ–ಇದರಿಂದ ಕಾಯಿಪಲ್ಲೆ ಮಾಡುವರು.

ಮೆಂತೆ (Fenugreek) <ಮೆಂತಿಯುರ್ವ (ತ). ವೆಂತಾಯುಮ್ (ಮ). ಮೆಂತಿ (ತೆ). ಕಹಿಯಾದರೂ ಆರೋಗ್ಯಕ್ಕೆ ಉತ್ತಮವಾದ ತೊಪ್ಪಲು ಪಲ್ಲೆ, ಉ. ಮೆಂತಿ, ಮೆಂಥ್ಯ,

ಮೆಣಸಿನಕಾಯಿ (Chilly) <ಮರೀಚ (ಸಂ.) ಮಿಳಗೈ (ತ) ಮೊಲಕು (ಮ). ಮಿರ್ಪಕಾಯ್ (ತೆ) ಮಿರ್ಚಿ (ಹಿಂ). ಖಾರವುಳ್ಳ ಸಣ್ಣ ಗಿಡಪಲ್ಲಾಗುವ ಕಾಯಿ. ಉ. ಮೆಣಸಿನಕಾಯಿ. ಮೆಣಸಿನಂತೆ ಖಾರಿರುವದಕ್ಕೆ ಇದನ್ನು ಸಹ ಮೆಣಸಿನಕಾಯಿ ಎಂದೇ ಕರೆಯಲಾಯಿತು. ಮುಖ್ಯವಾಗಿ ಇದು ಅಮೇರಿಕೆಯ ಬೆಳೆ. ಪ್ರ. ಹಸಿಮೆಣಸಿನಕಾಯಿ, ಹಣ್ಣಮೆಣಸಿನಕಾಯಿ, ಒಣಮೆಣಸಿನಕಾಯಿ, ಗಿಡ್ಡಮೆಣಸಿನಕಾಯಿ, ಪರ್ಯಾ. ಲವಂಗ ಮೆಣಸಿನಕಾಯಿ, ಉದ್ದ ಮೆಣಸಿನಕಾಯಿ, (ಕಡ್ಡಿಗಾಯಿ ಕ.ಸು.ಕ.). ಡೊಣ್ಣ ಮೆಣಸಿನಕಾಯಿ. ಬೀಜದ ಮೇಲಿಂದ ಕೆಲವರು ಇದರ ಪ್ರಸಿದ್ಧಿಯನ್ನೆಣಿಸುವರು–ಬ್ಯಾಡಗಿ ಮೆಣಸಿನಕಾಯಿ–ಹೆಚ್ಚು ಉದ್ದ, ಗುಂಟೂರ ಕಾಯಿ–ಬೀಜ ಹೆಚ್ಚು, ಚಿಂಚೋಳಿ ಮೆಣಸಿನಕಾಯಿ, ಬಟ್ಟ ಮೆಣಸಿನಕಾಯಿ–ಹೆಚ್ಚು ಅಗಲ.

ರಾಜಗಿರಿ ಪಲ್ಲೆ ಒಂದು ತೊಪ್ಪಲು ಪಲ್ಲೆ. ಉ. ರಾಜಗರಿ, ರಾಜಗೇರಿ ರಾಜಗಿರಿ. ಪ್ರ. ಮೇಲೆ ಕೆಂಪು ಗೊಂಡೆಯಿರುವುದು ಕೆಂಪು ರಾಜಗಿರಿ, ಹಸಿರು ರಾಜಗಿರಿ. ಇದಕ್ಕೆ ಹೂವು, ಗರಿ ಇರುವುದರಿಂದ ರಾಜಗರಿ>ಉಚ್ಚಾರಣೆಯಲ್ಲಿ ರಾಜಗಿರಿ ಆಗಿರುವಂತೆ ತೋರುತ್ತದೆ.

ಶಾವಿ ಪಲ್ಲೆ ಒಂದು ದಪ್ಪ ಹಸಿರು ತೊಪ್ಪಲು ಪಲ್ಲೆ. ಉ. ಶಾಂವಿ. ಶ್ಯಾಂವಿ. (ಅನು); ಸಾವಿ.

ಸೊಬಸಿ ಪಲ್ಲೆ ಕೋಮಲವಾದ ಕರಿಕೆಯಂತೆ ಬೆಳೆದ ಹಸಿರು ಪಲ್ಲೆ, ಉ. ಸಬಸಿ. ಇದರಲ್ಲಿ ಒಂದು ತರದ 'ಸೊಂಪು' ಇರುವದರಿಂದ ಸುವಾಸಿ>ಸಬಸಿ ಆದಂತಿದೆ.

ಸವಿತೆ ಕಾಯಿ (Cucumber)	ಸವಿಯಾದ ಮತ್ತು ಉದ್ದನೆಯ ಕಾಯಿ. ಚವ್ರತೆ(ಕೊ) ಸೌತೆ: ತೌತ್ರೆ (ತು). ಉ. ಸವ್ರತೆ, ಸೌತೆ, ಸೌಂತಿ, ಸೆಂವತಿ. ಸಂವತಿ. ಪ್ರ. ಎಳೆಯದಾದ ಮತ್ತು ರುಚಿಯಾದ ಕಾಯಿ 'ಸವ್ರತೆ'. ಇದರಲ್ಲಿ ಬಿರುಸು ಹಾಗೂ ದೊಡ್ಡದಾದುದು 'ಕಡಗಾಯಿ'. ಹಣ್ಣಾದುದಕ್ಕೆ 'ಪ್ರುಟ್ಟಿಕಾಯಿ'. ಕಹಿಯಿರುವದು ಪ್ಯಾಂಗಾಯಿ ಪ್ರ. ಬಲರಾಮ ಸೌತಿ.
ಸಿಂಬಿಕಾಯಿ	ಉದ್ದಾದ ಹಸಿರುಬಣ್ಣದ ಕಾಯಿ.
ಹತ್ತರಕಿ ಪಲ್ಲೆ	ಹಸಿರು ಎಲೆಯುಳ್ಳ ಪಲ್ಲೆ. ಎರೆ ಹೊಲದಲ್ಲಿ ಹೆಚ್ಚಾಗಿ ಬೆಳೆಯುವದು. ಕೋಮಲವಾದುದನ್ನು ಊಟದ ಜೊತೆಗೆ ಸೊಪ್ಪಿನಂತೆ ತಿನ್ನುವರು. ಆರೋಗ್ಯಕ್ಕೆ ಹಿತಕರ.
ಹಾಗಲಕಾಯಿ	[<ಪಾಕಲ್ (ತ) ಪಾವಲ್ (ಮ)] ಉ. ಹಾಗ್ಲ, ಮೇಲೆ ಮುಳ್ಳುಮುಳ್ಳಾಗಿದ್ದು ಸ್ವಲ್ಪ ಕಹಿಯಾದ ಕಾಯಿ.
ಹೀರಿ ಕಾಯಿ (Potherb)	[<ಪೀರ್, ಪೀರ್ಕೈ (ತ), ಪೀರಮ್ (ಮ)]. ಬೀರ ಕಾಯ್ (ತೆ) ಹೀರು. ಹೆರಚು, ಜಲ್ಲಡಿ ಹಿಡಿ (Strainer) ಇದರ ಮೇಲಿನ ಪಟ್ಟಿಗಳಲ್ಲಿ ಹೆರಚಿ ಕಾಯಿಪಲ್ಲೆಗೆ ಉಪಯೋಗಿಸುವದರಿಂದ ಇದು ಹೀರಿಕಾಯಿ. ಇದನ್ನು 'ಕೆಲ್ಹೀರಿ ಕಾಯಿ' ಎನ್ನುವರು. (ಕ.ಸು.ಕ.) ಪ್ರ. ಹಜಾರಜೋಡ ಹೀರಿಕಾಯಿ—ಇದು ಬಳ್ಳಿಯಲ್ಲಿ ಗೊಂಚಲು ಗೊಂಚಲಾಗಿ ದೊರಕುತ್ತದೆ. ಬುಷ್ಷ ಹೀರಿಕಾಯಿ (ಕ.ಸು.ಕ.) ಜವಾರಿ ಹೈಬ್ರಿಡ್ ಹೀರಿಕಾಯಿ. ಮುಂ. ಇವರಿಂದ ಎಣ್ಣೆಗಾಯಿ. ಚಟ್ನಿ, ಸಾರು, ಕಾಯಿಪಲ್ಲೆ ಮಾಡುವರು.
ಹುಣಸಿನ ಪಲ್ಲೆ	ಹುಳಿಯಾದ ತೊಪ್ಪಲು ಪಲ್ಲೆ. ಇದನ್ನು ಹಾಕಿ ಸಾರು ಮಾಡುವರು. ಉ. ಹುಣಚಿಕ್ಯಾನ ಪಲ್ಲೆ (ಕ.ಜೇ.ಕ.).

ಕಾಯಿಪಲ್ಲೆಗೆ ಅಂಟುವ ರೋಗಗಳು :

ಕುಂಬಳ	೧. ಎಲಿಚುಕ್ಕಿ ರೋಗ. ಪರ್ಯಾ. ಚಿಬ್ಬುರೋಗ. ೨. ಕೆಂಪು ಮೂತಿ ಹುಳದ ರೋಗ. ೩. ಬೂದಿರೋಗ. ಪರ್ಯಾ. ಬೂಷ್ಟರೋಗ. ೪. ಹಳದಿ ರೋಗ.
ಗೆಣಸು, ಗಜ್ಜರಿ, ಆಲು, ಮೂಲಂಗಿಗಳಿಗೆ.	ಗಡ್ಡೆ ಕೊರೆವ ಹುಳ.

ಟೊಮೇಟೊ	ಕೊಳೆರೋಗ.
ಬದನಿಕಾಯಿ	ಮೂತಿಹುಳ
	ಕೊರಿವೆ ಹುಳ
	ಹಣ್ಣು ಕೊರವ ಹುಳ.
ಬೆಂಡಿ	ಬೂದಿ ರೋಗ
ಮೆಣಸಿನಕಾಯಿ	ಮುರುಡು ರೋಗ
	ಕೊಳೆರೋಗ
	ಮೂತಿ ಹುಳದ ರೋಗ.

• •

ಮಡಿವಾಳೇಶ್ವರ ಲಾವಣಿ

● ಡಾ. ನಿಜಲಿಂಗಮ್ಮ ಕೊಪ್ಪಳ

ಬದುಕನ್ನು ಮೂಲ ತಳಹದಿಯನ್ನಾಗಿರಿಸಿಕೊಂಡು ಅನುಭವಪೂರ್ಣವಾಗಿ ಸ್ವಚ್ಛಂದವಾಗಿ ಸೃಷ್ಟಿಯಾದುದು ಲಾವಣಿಸಾಹಿತ್ಯ. ಗಂಡಸರು ಮಾತ್ರ ಹಾಡಬಹುದಾದ ಇದು ಜನಪದ ಸಾಹಿತ್ಯದ ವಿಶಿಷ್ಟ ಹಾಗೂ ಪ್ರಮುಖ ಅಂಗವಾಗಿದೆ. ಡಪ್ಪು ಎಂಬ ಚರ್ಮವಾದ್ಯದ ಜೊತೆಗೆ ಹಾಡುವ ಕಾರಣ ಇದಕ್ಕೆ ದಪ್ಪಿನ ಹಾಡು ಎನ್ನುತ್ತಾರೆ. ನೋವು–ನಲಿವು, ತ್ಯಾಗ–ಪ್ರೇಮ. ಧೈರ್ಯ–ಸಾಹಸ. ಛಲ–ದ್ವೇಷ. ಸಹಜೀವನ–ಕಷ್ಟ-ಸಹಿಷ್ಣುತೆಗಳೆಂಬ ಮಾನವಜೀವನದ ಸ್ತರಗಳನ್ನೆಲ್ಲ ಒಳಗೊಂಡು ವಿಸ್ತಾರವಾಗಿ ಹಬ್ಬಿದೆ. ಗಂಡು ಹೆಚ್ಚೋ ಹೆಣ್ಣು ಹೆಚ್ಚೋ ಎಂದು ಹಾಡುವಲ್ಲಿ ಹರದೇಶಿ–ನಾಗೇಶಿ ಎಂಬ ಹೆಸರನ್ನು ಪಡೆಯಿತು; ಶೃಂಗಾರ ಲಾವಣಿಯಾಗಿ ಮೆರೆಯಿತು. ಜೀ ಜೀ ಎಂದೋ ಗೀ ಗೀ ಎಂದೋ ಸ್ವರ ಎಳೆದಾಗ ಜೀಪದ ಗೀಪದವಾಯಿತು. ಇತಿಹಾಸ ಪುರಾಣಗಳ ಹಿನ್ನೆಲೆಯಲ್ಲಿ ಹುಟ್ಟಿ ಬೆಳೆದು ಪೌರಾಣಿಕ ಲಾವಣಿಯಾಯಿತು. ಪರಮಾರ್ಥ ತತ್ವವು ಜೀವನದ ಉಸಿರೆಂದು ಹೊಳೆಯಲು ತತ್ವದ ಲಾವಣಿಯು ರೂಪತಳೆಯಿತು. ಪರಮಾರ್ಥತತ್ವಗಳ ಮೂರ್ತಿಮಂತ ಸ್ವರೂಪರು ಮಹಾತ್ಮರಾದ ಕಾರಣ ಅವರ ಜೀವನಾದರ್ಶವನ್ನು ವಿವರಿಸಿ ಜನರಲ್ಲಿ ಭಯ–ಭಕ್ತಿಯನ್ನು ಮೂಡಿಸಲು ಸತ್ಪುರುಷರ ಲಾವಣಿಯೆಂದು ಹೆಸರು ಪಡೆಯಿತು. ಹೀಗೆ ಗ್ರಾಮೀಣ ಪರಿಸರದಲ್ಲಿ ಬೆಳೆದು ಶುದ್ಧ ಜನಪದ ಕಥನಗೀತಗಳಾಗಿ ಮೆರೆದ ಲಾವಣಿಸಾಹಿತ್ಯವನ್ನು ವೈವಿಧ್ಯಪೂರ್ಣವಾಗಿ ಅಭ್ಯಸಿಸಬಹುದಾಗಿದೆ.

ಲಾವಣಿಯಲ್ಲಿ ಮೇಳಲಾವಣಿ ಬಯಲುಲಾವಣಿ ಎಂದು ಎರಡು ಬಗೆಗಳಿವೆ ಅವೆರಡೂ ಬಯಲಿನಲ್ಲಿಯೇ ನಡೆಯುತ್ತವೆ. ಹಾಡುವ ವೈಖರಿಯಿಂದ ಮಾತ್ರ ಅವುಗಳ ಪ್ರಭೇದವನ್ನು ಗುರುತಿಸಬಹುದು. ಮೇಳಲಾವಣಿಯಲ್ಲಿ ಹಾಡುಗಾರರ ಮೇಳವಿರುತ್ತದೆ. ಬಯಲುಲಾವಣಿಯಲ್ಲಿ ಹಿಮ್ಮೇಳವಿರದೆ ಹಾಡುಗಾರನೊಬ್ಬನೇ ದಪ್ಪು ಹಿಡಿದು ತಾಳಬದ್ಧವಾಗಿ ಚಿಟಿಕೆ ಹಾಕುತ್ತಾನೆ. ಕಥೆಯ ಸನ್ನಿವೇಶಕ್ಕೆ ತಕ್ಕಂತೆ ತನ್ನ ಧ್ವನಿಯನ್ನು ಬದಲಿಸುತ್ತ ಅಭಿನಯದೊಡನೆ ಹಾಡುತ್ತಾನೆ; ತನ್ನ ಹಾಡುಗಾರಿಕೆಯ ನೈಪುಣ್ಯವನ್ನೂ ಬೀರುತ್ತಾನೆ. ಈ ಬಗೆಯ ಬಯಲುಲಾವಣಿಯು ಸಾಮಾಜಿಕ

ರಾಜಕೀಯ, ಪೌರಾಣಿಕ, ತಾತ್ವಿಕ, ಮಹಾತ್ಮರ ಜೀವನದರ್ಶನದ ರೂಪವನ್ನು ತಳೆಯಬಹುದಾಗಿದೆ. ಇಂಥ ಕಥನಕಾವ್ಯದ ಒಂದು ಮಾದರಿ – 'ಮಡಿವಾಳೇಶ್ವರ ಲಾವಣಿ' ಇದರ ಕರ್ತೃ ಲಿಂಗಣ್ಣ ಕವಿ. ಹಾಡಿದವನು ಹಂಗರಕಿಯ ಹಂಪಣ್ಣ ಹಡಪದ ಎಂಬ ಎಂಭತ್ತು ವರ್ಷದ ವೃದ್ಧ. ಇದುವರೆಗೂ ಗರಗದ ಜನಜೀವನದಲ್ಲಿ ಸುಪ್ತವಾಗಿದ್ದ ಕಾರಣ ಇದನ್ನು ಪ್ರಕಟಗೊಳಿಸಲಾಗಿದೆ.

'ಮಡಿವಾಳೇಶ್ವರ ಲಾವಣಿ'ಯು ಪಲ್ಲವಿ, ಚೌಕಗಳಲ್ಲಿ ರಚನೆಗೊಂಡಿದ್ದರೂ, ಪ್ರತಿ ಚೌಕದಲ್ಲಿ ನಿರೂಪಣೆಗೆ ತಕ್ಕಂತೆ 'ಇಳುವು' 'ಏರು' ಎಂಬ ಉಪಭಾಗಗಗಳನ್ನು ಪಡೆದು ಧಾಟಿಯ ಗತಿಯನ್ನು ಬದಲಿಸಿದೆ; ಪ್ರಾಸ, ಒಳಪ್ರಾಸ ಅಂತ್ಯಪ್ರಾಸಗಳನ್ನು ಬಳಸಿಕೊಂಡಿದೆ.

ಸೃಷ್ಟಿಯೊಳಗ ಶ್ರೇಷ್ಠ ಸಾಧುವೃಂದ ದರುಶನ ಮಾತ್ರದಿಂದ ।
ಭಕ್ತಿ ಹುಟ್ಟುವದು ಮುಕ್ತಿಯಾಗುವದು ಕೇಳ್ರಿ ಆನಂದ ॥ ॥ ಪಲ್ಲ ॥

ಮಡಿವಾಳ ಸ್ವಾಮಿಯವರು ಕಲ್ಲಮಠದಲ್ಲಿ ಹುಟ್ಟಿ ಬೆಳೆದದ್ದು
ಹೇಳುವೆನು ಒಡದ ಲೀಲಾ ಮಾಡಿದಾ ।
ಪ್ರಥಮ ಗಿಜಗನಹಳ್ಳಿ ಎಂಬ ಊರಿನಲ್ಲಿ ನೀರಿನ ಆಶ್ರಮ ಏನೂ ಇಲ್ಲ ಕಮ್ಮಾ ।
ಜನರು ತಮ್ಮ ತಮ್ಮ ಕೆಲಸದ ಮ್ಯಾಲೆ, ಇರುತಿದ್ರು ಸದಾ ಭಕ್ತಿಪ್ರೇಮಾ ।
ಯಾರು ಹಮ್ಮತಮ ಮಾಡದ್ಹಂಗ ನೇಮ ತಮ್ಮ ಊರಲ್ಲಿ ।

ಇಳುವು: ಮೊದಲಿಗೆ ಬಿರಿಮಲ್ಲ ಚಿಕ್ಕಮಲ್ಲಸರ್ಜರಂತ ವಿಜಾಪುರ ಪ್ರಾಂತದೊಳಗ
ಪ್ರಖ್ಯಾತ, ದಂಡಿನ ಮುಖ್ಯಸ್ಥ ಇಬ್ಬರಿದ್ದರಲ್ಲಿ ।
ಬಿಡವರಲ್ಲ ಹಿಡಿದಂಥ ಪಂಥ, ದುಷ್ಟರ ಮನದಂತ
ಶಕ್ತಿ ಆತು ಮನದಲ್ಲಿ ।

ಏರು: ಬಾಸ್ಯಾಗ ಹೇಳ್ಯಾರ ಚಾಕ್ರಿ ಸಾಕಂತ, ಇನ್ನು ಮೇಲೆ ಸ್ವಂತ ರಾಜ್ಯಬೇಕಂತ ।
ಗಿಜಗನಹಳ್ಳಿಗೆ ಬಂದು ನಿಂತರಲ್ಲಿ ತುರ್ತ ।
ಆನಿ ಒಂಟಿ ಕುದುರಿ ತರಬೇತ ಮಷ್ಯೋಗಾದಿ ಎತ್ತ, ದಂಡಿನ ಕವಾಯ್ತು
ದಿನಂಪ್ರತಿ ನಡೀತ ಬಂತ ಊರಲ್ಲಿ ।
ಆನಿ ಒಂಟಿ ಕುದುರಿಯ ಕಾವಲಾ, ಎತ್ತೆಮ್ಮಿಯ ಸಾಲಾ ।
ಆಕಳಗಳಿಗೆಲ್ಲ ಹಾಕತಿದ್ರು ಝೂಲಾ ।
ಹೀಂಗ ಹುಕುಂ ಅಲ್ಲಿ ಮೀರಿದ ಕೊಯ್ಯುವ ಜನ ಬಂದರ ಆಳತಿಲ್ಲ.
ಪರಜೆಲ್ಲಿದವರೆಲ್ಲ ಉದ್ಯೋಗದ ಮ್ಯಾಲ ಕಟ್ಯಾರ ಮನಿಯ ಮ್ಯಾಲ
ಪಗಡಿಯ ಸಾಲಾ ।

ಆವ್ಯಾಲೆ ಕಿತ್ತೂರಂತ ಹೆಸರ ಆತಿ(ಯ್ತು) ಕಬಲಾ ।
ಏಳೂರ ಎಡಬಲ ಹಂಡಿಸ ಕಾವಲ ಸಡಗರಿನ್ನೇನ್ಹೇಳಲಿ ॥ ॥ ಚೌಕ–೧ ॥

ಹದಿನಾರನೇ ಶತಮಾನದೊಳಗ ಬಾಲಮಲಸರ್ಜ ಹುಟ್ಟಿದಾಗ ।
ನೆಂಪಿಡರಿ ಏನೂ ಮರಿಯದ್ಹಾಂಗ ।
ಮುದಿಮಲ್ಲಪ್ಪನ ಹೊಟ್ಟೆಯಿಂದ ಸಣ್ಣದೇಸಾಯಿ ಮಲ್ಲಸರ್ಜ ಹುಟ್ಟಿ–
ದೊಡ್ಡವರಾದ ಮೇಲೆ ರಾಜ್ಯಕಾರಭಾರ ನಡದಿತೊ ಬಹಳ ಆನಂದದಲ್ಲಿ।
ಭಕ್ತಿವಂತ ದೇಸಾಯಿ ಗುರುಧ್ಯಾನ ಮಾಡತಿದ್ದ ಮನಸಿನಲ್ಲಿ ।
ಇಳುವು: ಆ ವೇಳೆಗೆ ಉತ್ತರದೇಶದಿಂದ ಸಾಧೂರು ಬಂದರು ನಾಲ್ಕುಮಂದಿ ಅಲ್ಲಿ ।
ಮಡಿವಾಳಸ್ವಾಮಿ ಗುರುಸಿದ್ಧಸ್ವಾಮಿ ವಿರೂಪಾಕ್ಷಸ್ವಾಮಿ ಒಬ್ಬರು
ಬಾವಾವನರು ಬಂದರು ಕಿತ್ತೂರ ಕಿಲ್ಲೇದಲ್ಲಿ ।
ಮಲ್ಲಸರ್ಜನದೇಸಾಯಿ ಕಂಡ ಬಿದ್ದನು ಪಾದದ ವ್ಯಾಲೆ ।
ಕರಕೊಂಡು ಹೋದ ಸಾಷ್ಟಾಂಗ ಹಾಕಿ ಸದರಿನ ವ್ಯಾಲೆ ।
ಸಾಧುಸಂತರ ಕತಿ ಕೇಳ್ರಿ ಮುಂದ ಪಾಪ ಇದರಿಂದ ಎಳ್ಳಷ್ಟಿಲ್ಲ–
ಪುಣ್ಯದೊರಕುವದು ಸಂಶಯವಿಲ್ಲದ ।
ಸ್ವಾಮಿ ಮಡಿವಾಳ ಪ್ರಭು. ಹಿರೇಮಡಿವಾಳ ಪ್ರಭು ಗುರುವಿನ ಮಾಡಿಕೊಂಡ
ಮಲ್ಲಸರ್ಜ ಮಹಾಪುಂಡ, ಭಕ್ತಿಯುದ್ದಂಡ
ಮುಕ್ತಿಮಾರ್ಗ ಕಂಡ ಗುರುಚರಣಕ್ಕೆ ।

ಏರು: ಆನಿ ಒಂಟಿ ಕುದುರಿ ಚಲೋ ನೋಡಿರಂತ
ಕವಲ ಹೂಡಿ ನಮಸ್ಕಾರ ಮಾಡಿ. ಸೇರಬಿಟ್ಟ ಗೌಡ. ಕೊಟ್ಟಾನವರ ವಸೇಕ ।
ಪುಣ್ಣೀ ಗಳಸತಿದ್ದ ಮಲಸರ್ಜದೊರಿ. ಮುಂದಿನ ಮಾತ ಕೇಳ್ರಿ.
ಮಡಿವಾಳಪ್ಪನ ಸವಾರಿ. ಅರಮನೆಗೆ ಆನಿ ಏರಿ. ಹೋಗುವರು ಸ್ನಾನಕ್ಕೆ ।
ತಿರುಗಿ ಬರುವಾಗ ಆತಿ(ಯ್ತು) ಒಂದು ಆಶ್ಚರ್ಯ ಬಲಗಣ್ಣ ಅವರದು ಹಾರಿ
ಕಂಡಾರ ಅವರು ನರಿ ಮಾರಿ ಬಂದರ ಅರ್ಥಾದಾರಿ
ಹೂವಿನ ತೋಟದಲ್ಲಿ ಸಮೀಪಕ್ಕೆ ।
ಅಳು ಕೂಸಿನ•ಸಪ್ಪಳಾತಲ್ಲಿ. ಬಾಳಿ ಎಲಿಯ ಮ್ಯಾಲಿ:
ಹೂವಿನ ಮಾಲಿ ಹಾಕಿ ಕೊರಳಲ್ಲಿ. ಮಲಗಿಸಿದ್ರ ನೆಲಕ ।
ಪ್ರಭು ಕೂಸಿನ ತಕ್ಕೊಂಡ ಕೈಯಲ್ಲಿ. ಎತ್ತಿ ಬಗಲಲ್ಲಿ.
ಹತ್ತಿ ಆನಿಯ ಮೇಲೆ. ಬಂದ್ರೊ ಮಠದಲ್ಲಿ. ಹರುಷವಾಗಿ ಮನಕ ।
ಒಂಟೀ ಸ್ವಾರನ (ಸವಾರನ) ಹೆಂಡತಿ ಘೂಘುಜನ ಕೈಯಾಗ.
ಕೂಸ ಕೊಟ್ಟರಾಗ. ಮಲಿಕುಡದ ಮಗಾ ಜೋಪಾನಾದ ಲಗ್ಗ ।

ಅನ್ನಾತಿನ್ನುವತನಕ ಹಿಂದಿನಿಂದ ತಕ್ಕೊಂಡರ ತಮ್ಮ ಕಷೆ.
ಮಗನ ಮುದ್ದಾಡಿ. ಸರ್ವಜನರು ಕೂಡಿ. ಮಡಿವಾಳಪ್ಪನ ಜೋಡಿ,
ಹೆಸರು ಇಟ್ಟರು ಠೀಕ ॥ ॥ ಚಾಕ–೨ ॥

ಮಡಿವಾಳಯ್ಯನ ಮೇಲೆ ಪ್ರಭು ಪ್ರೀತಿ, ಮಾಡಿ ಅಕ್ಕರತಿ,
ಸಾಲಿಗೆ ದಿನಂಪ್ರತಿ. ಕಳಸತಿದ್ದ ಯತಿ ಪೋಷಾಕ ಹಾಕಿ ಚೊಕ್ಕ ।
ಮಲಸರ್ಜ ಬಂದ ಪ್ರಭು ದರ್ಶನಕ ।
ಪ್ರಭು ಮಡಿವಾಳಮರಿನ್ನ ಕರೆದಾಕ್ಷಣಕ ।
ನಿಮ್ಮಪ್ಪಗ ಮಣಿ ಕೊಡೊ ಕೂಡ್ರಾಕ ।
ಇಷ್ಟಮಾತು ಕೇಳಿ ಮರಿದೇವರು ಅಂತಾರು
ನಮ್ಮಪ್ಪ ಅವನೂ ಅವರಪ್ಪ ನಾನೂ ಬಾಬಾ ಅಂತ ನುಡದಾರು ।
ಕುಂತ ದೇಸಾಯಿ ಕೇಳಿದ ಮರಿದೇವರ ಮಾತ. ಕುಲುಕುಲು ನಗತಾನ
ನಮ್ಮಪ್ಪ ನೀನೇ ಅಂತ ಎತ್ತಿ ಮುದ್ದಾಡಿದ ।
ಮಗಾ ಬಾಪೂ ಸುಳ್ಳು ನೀ ಖರೇ ಅಂತ
'ಏನು ಬೇಕು ಹೇಳು ಮಗನೆ ಕೊಡುತೇನಿ ತುರ್ತ' ।
ಮರಿಸ್ವಾಮಿ ಬೇಡಿಕೊಂಡ, ದಿನಾ ಬೊಗಸಿ ರೂಪಾಯಿ ಕೊಡರೆಂತ ।
ವಚನ ಕೊಟ್ಟನೊ ಮಲಸರ್ಜ ದಾತಾ ।

ಇಳುವು: ಜಮದಾರ ಖಾನಿ ಶಿವಲಿಂಗಪ್ಪನ ಕರಿಸಿ. ಮರಿದೇವರನು ಎರಿಸಿ
ಪಂಚಾಮೃತ ಉಣಿಸಿ, 'ರೂಪಾಯಿ ಒಂದ ಬೊಗಸಿ ಕೊಡಿರಿ ಇಂದಿನಿಂದ
ಸ್ವಾಮಿ ಮಡಿವಾಳ ಪ್ರಭುಗ' ।
ಸಂಜೀತನಕ ರೂಪಾಯುಲ್ಲ ಚಟ್, ಬಡಮಂದಿಗೆಲ್ಲ ಕೊಟ್ಟ
ಬರತಿದ್ದರು ಮಠಕೆ ಹೊಂಟ ।
ಮರಿ ಮಡಿವಾಳಪ್ಪಗ ಆಟ, ಬಾಲ ವಯಾದಾಗ, ಸಾಲಿ ಅಭ್ಯಾಸದಾಗ
ಎಲ್ಲಾರಿಗಿಂತ ಶ್ರೇಷ್ಠ. ಬಡದಾಷಾಕ ಬಂಟ, ಹುಡಗರಿಗೊಂದು ಕೊಟ್ಟ.
ಬರುವರು ಅವರ ಮನಿಗೆ ಹೊರಟ ಸಂಜಿ ಆದಾಗ ।
ಕೇಶ್ರಿ ಬಾಪು ಸಾ (ಹೇ) ಬರು ಮರಿದೇವರು ಕೂಡಿ ಆಡಿ
ಜಗಿವರು ಓಡಿ ಓಡಿ ಹೊಂಡಿದ್ದ ನೀರ ನೋಡಿ.
ಬಲ್ಲಿಂಗ ಈಸ್ಯಾಡಿ ಕೂಡ್ರುವರು ರಥದಾಗ ।
ಬೊಗಸಿ ಹೊನ್ನ ತೀರುವತನಕ ತಿರಿಗ್ಯಾಡಿ ಸಾಲಿಗೆ ಹೋಗುವರು ಜೋಡಿ,
ಮಲಗಬೇಕೂ ಕೂಡಿ. ತಾಯಿ ರುದ್ರವ್ವ ನೋಡಿ, ಆನಂದ ಮನದಾಗ।
ಹಾವಿಗಾವಿ ವಂಗೀಶಾಸ್ತ್ರಿ ಚನ್ನಬಸಪ್ಪನವರಲ್ಲಿ ವಿದ್ಯೆ ಕಲಿತರವರಲ್ಲಿ.
ಥೋಡೇ ದಿವಸದಲ್ಲಿ ಮರಿದೇವರು ಶಾಸ್ತ್ರದಲ್ಲಿ ತೈಯ್ಯಾರಾದರಾಗ

ಇಟ್ಟಂಗ ನಾಲಿಗೆಯ ಮೇಲೆ ಆದರು ಪ್ರಬಲಾ ।
ವಾರಿಗೆ ಹುಡಗರಾಗ ಇರಇರತ ಆತಿ (ಆಯ್ತು) ಹೀಂಗ ಒಂದು ತರ.
ಸಾಲಿ ಹುಡುಗರ; ಬಾಪುಸಾಹೇಬಗ ಜರ.
ಚಾಡಾ ಹೇಳೂದು ಜೋರಾತ್ಯವಾಗ ।

ಏರು: ಬಾಪ್ಯಾ ಬಾಪ್ಯಾ ಅಂತ ಕರಿತಾರ ಮರಿದೇವರು. ಎಂಥವರು
ಮಹಾ ಸೊಕ್ಕಿನವರು. ಸದರಿನಾಗ ಇವರಿದ್ದರ ಶೋಭಾ ಹ್ಯಾಂಗ?।
ಮತ್ತ ಹುಡುಗರು ಹೇಳತಾರ ಬಾಪು ಸಾಹೇಬರ ಮುಂದ ।
ಸೆಗಣಿ ಉಂಡಿ ಒಗೆದ ಸ್ವಾಮಿ ನಿಮ್ಮ ಮಾರಿಗೆಂದ ।
ಕೇಳ್ರಿ ಸಿಟ್ಟು ಬಂತು ಬಾಪು ಸಾಹೇಬಗ ಜಲದ ।
ಕೇಳ್ರಿ ಬಾಪುಸಾಹೇಬ – ಮರಿದೇವರು. ಸಾಲಿಯೊಳಗ ಕಡದಾಡಿ
ಮಾತ ಬಿಟ್ಟರು ಸುಮ್ಮಸುಮ್ಮನ ।
ಸುದ್ದಿ ಕೇಳಿ ಮಲಸರ್ಜದೇಸಾಯಿ. ಮುದ್ದು ಮಗ ಬಾಪ್ಪನ್ನ.
ಕರೆದು ಬುದ್ಧಿ ಹೇಳತಾನ ಕಡದಾಡದಂತೆ ತಾನ ।
ಸಮಂತ (ಸನುಮಂತ) ಕೊಟ್ಟರು ಇಬ್ಬರೂ ನಡಸತೇವಂತಾರ ನಿಮ್ಮ ವಚನ
ಜಗಳ ಬರದಂತೆ ನಡೆವಾರ. ಮಾಡಲಿಲ್ಲ ಮಥನ ॥ ॥ ಚೌಕ–೩ ॥

ಗುರಪ್ಪಜ್ಜ ಹಲಿಸಿಗಿ ಇವರಲ್ಲಿ. ಬಿನ್ನಾಯಕ ಹೋಗತಿದ್ರು ಮರಿದೇವರು
ದಿನಾ ಅವರು ಮಾಡತಿದ್ರು ಎಷ್ಟೊ ತೀರ್ಥ ಯಾತ್ರೆಗಳನ ।
ಮುಂದ ತೀರಿಕೊಂಡ ಮಲ್ಲಸರ್ಜ ದೊರಿ. ಪ್ರಭು ಗುರುವಿನ ಸವಾರಿ
ಶಿವಲೋಕದೊಡನೇರಿ. ಮುಕ್ತಿದಾರಿ ಹಿಡಿದ ರಾಜ್ಯದಿಂದ ।
ಮಡಿವಾಳಪ್ರಭು. ಗುರುಹಿರಿಯರಿಬ್ಬರು ತೀರಿಕೊಂಡ ಬಳಿಕ
ಬಾಪ್ರ ಆದ ಗಾದಿಮಾಲಕ ಕೇಳವರ ಇನ್ನ್ಯಾರ ನಿಂತ ಹಿರೇತನಕ ।
ಪಟ್ಟಚರಮೂರ್ತಿಮಂದಿಗಳ ಕೂಡಿಸಿ ಮಡಿವಾಳಯ್ಯನ ಕರಿಸಿ.
ಬಾಳಿ ಎಲಿ ತರಿಸಿ. ಸರಕಾರಕ್ಕ ಜೋಡಿಸಿ ಅವರಿಗೆ ಹೇಳತಾರ ।
ಬಾಳಿ ಎಲಿ ಲಂಗಟ ಹಾಕಸ್ಯಾರ. ಮಂತ್ರಿ ಕೂಡಿಸ್ಯಾರ. ಪಟ್ಟನೇಸಾಯುರ.
ಅಂಜಿ ನಡುಗಿದರ. ಹಾಕಿದರ ಉಸುರು ।
ಮಡಿವಾಳಸ್ವಾಮಿಯವರು ಕಳಿತಾರ ನಟ್ಟನಡಕ.
ದಿಗಂಬರಾಕ್ಷಣಕ, ಹುಕುಮಿನ ಪ್ರಕಾರಕ.
‘ಶಿಷ್ಯರೆಡಬಲಕ ಕುಂತಕೊಂಡಾರು ।
ಲಿಂಗಪೂಜಾ ಮಾಡ್ಯಾರಾಕ್ಷಣಕ, ಕರುಣಪ್ರಸಾದವನು ತಕ್ಕೊಂಡ್ರು ಎಲ್ಲ ಜನ
ಭಕ್ತಿಸಂಪೂರ್ಣ ಶಿವಮಂತ್ರ ನುಡದಾರು ।

ಊಟಕ್ಕ ಬಡಿಸುವಂಥ ಸ್ತ್ರೀಯರು ಊರ್ವಸಿಯಂಥವರು ।
ಉಟ್ಟಿದ್ದರ ಪೀತಾಂಬರ. ನೀಡುತ ಬಂದಾರ ಪಂಚಭಕ್ಷಸಾರು ।
ಮಾತಾಡಿ ಮಾಡುವರು ಬಹಳ ಪ್ರೀತಿ. ಮಾತಿನಲ್ಲಿ ಅಕ್ಕರತಿ,
ಬನಪಿನಲ್ಲಿ ಜಾಸ್ತಿ. ಬಾಪುಸಾಹೇಬನ ತಸ್ತಿ. ಅವರೇನು ಮಾಡ್ತಾರು ।
ಯಾರದು ನಡದೀತರಿ ಸಾಧುಸಂತರ ಮ್ಯಾಲೆ ?
ಹಿಂದಿನಿಂದ ಆದರು ಪ್ಯಾಲಿ, ಸಂ(ಚಂ)ಚಲವಾಗುವದು ಎಲ್ಲಿ ?
ಮಡಿವಾಳಪ್ಪನ ನೆಲಿ ತಿಳಿಯದೆಂದಾರು ।
ಬರುಗುಂಡಿ ಮಡಿವಾಳಪ್ಪಂತಾಕ್ಷಣಕ ಹೆಸರು ಬಿತ್ತನ್ನವರನೇಕ ।
ಅವರ ಪಾದ ಕಂಡವರ ಜನ್ಮ ಸಾರ್ಥಕ ।

ಇಳುವು: ಕೇಳ್ರಿ ಎಷ್ಟೋ ಕಾಕಬುದ್ಧಿ ಕುಲನಾಶಕ ಜನರು,
ಪ್ರಧಾನಿ ಸಹಿತ ಹೇಳತಾನ ಬಾಪುಸಾಹೇಬರ ಮುಂದ
ನಿಮ್ಮ ಸಂಸ್ಥಾನ ಕಲ್ಲುಮಠದಲ್ಲಿರುವ ಮಡಿವಾಳಸ್ವಾಮಿ–
ನಿಮಗ ಒಪ್ಪುವದಿಲ್ಲ ಚಂದ ।
ಕರೆದರ ಆ ಖಳಪುರುಷ ನಿಮ್ಮ ಮಾತಕೇಳವಲ್ಲ ಬಂದ ।
ಪಟ್ಟಿಕ ಕೂಡ್ರಿಸಬೇಕೊ ಸಲಕ್ಷಣ ಸುಮೂರ್ತಿ ಒಂದ ಬ್ಯಾರೆ ತಂದ ।
ಕಬಲ ಮಾಡ್ಯಾನ ಬಾಪುಸಾಹೇಬ ಮಹಾರಾಜ; ಅಷ್ಟ್ಯಾರ ಮಾತ
ಕಾಶಿಗೆ ಕಳಸೋಣಂದರು. ಮಡಿವಾಳಪ್ಪನವರಿಗೆ ಹಾಕ್ಯಾರ ಬೇತ ।
ಆಸಿಮ್ಯಾಗ ಮಡಿವಾಳಸ್ವಾಮಿಯವರನ ಕರದ ಹೇಳತಾರ
ಕಾಶಿಗೆ ಹೋಗಿ ಭಾಗೀರಥೀ ತರಬೇಕಂತ ।
ತಥಾಸ್ತು ಅಂತ ತಯ್ಯಾರಾಗಿ ನಿಂತ ।

ಏರು: ಒಬ್ಬರನ ಕಳಸೋದು ಮರ್ಯಾದಿ ಅವರಿಗೆ ಸಾಲದ್ಹಂಗ ಆಗಿ
ಬಳ್ಳೊಂಡಿ ಶಿವಪೂಜಿ ಮಲ್ಲಪ್ಪನ್ನ ಸಂಗತಿ ಮಾಡಿ
ಮಡಿವಾಳಪ್ಪನ ಜೋಡಿ. ಕಳಿಸ್ಯಾರ ಎಲ್ಲರೂ ಕೂಡಿ;
ಹೊಂಟಾರೊ ಲಗು ಮಾಡಿ. ಕಿತ್ತೂರ ಕಿಲ್ಲೆದಿಂದ ।
ಮಡಿವಾಳ ಸ್ವಾಮಿಯವರು ಹೇಳತಾರ ಎಲ್ಲರಿಗಿ ।
ಮಠಕ್ಕೆ ಹೋಗಿ ಹೋಗಿ. ವ್ಯವಸ್ಥೆ ಚೆನ್ನಾಗಿ. ಮಾಡಿರಿ ನಮಗಾಗಿ.
ಪ್ರೇಮ ನಿಮ್ಮದಿರಲಿ ॥ ॥ ಚೌಕ–೪ ॥

ಬರತೇಪಂತ ದಾರಿ ಹಿಡದರಾಗ. ತ್ರಿಶೂಲ ಕೈಯಾಗ.
ಅರಿವಿಲ್ಲ ಮೈಯಾಗ, ರುದ್ರಾಕ್ಷಿ ಕೊರಳಾಗ. ಹಾಕಿದ್ರು ಮಾಲಿ ಮಾಲಿ।

ಏಷ್ಟೋ ದಿವಸಕ ಹ್ವಾದರ ಕಾಶಿಯ ಯಾತ್ರಾಕ ತಿರುಗಿ,
ಸ್ನಾನ ಗಂಗಾನದಿಗಿ, ಮಾಡಿದರ ಶಿವಯೋಗಿ, ಇದ್ದರ ಕಾಶಿಯಾಗ್ಲಿ ।
ಇತ್ತ ಕೇಳ್ರಿ ಕಿತ್ತೂರ ಸರಕಾರ ಇಲ್ಲದಾಗ, ಕಲ್ಲುಮಠದಾಗ.
ಮಡಿವಾಳಪ್ಪನವರು ಇಲ್ಲದಾಗ, ಅಧಿಕಾರ ಗುರುಸಿದ್ಧಪ್ಪಗ
ಕೊಟ್ಟರಾವಾಗ ।

ಇಳುವು: ಇನ್ನಮೇಲೆ ಕೇಳ್ರಿ ಕಾಶಿಯಿಂದ ಬಂತ ಮಡಿವಾಳಪ್ಪನವರ ಸವಾರಿ,
ಅಷ್ಟೊತ್ತಿಗ ಗುರುಸಿದ್ಧಮರಿ. ಮಠಕ್ಕ ಅಧಿಕಾರಿ
ಮಾಡಿದ್ದ ಬಾಪು ದೊರಿ, ಮಸಲತ್ತಿನ ಮ್ಯಾಲೆ ।

ಏರು: ಕೇಳ್ರಿ ಸಿಟ್ಟಬಂತ ಮಡಿವಾಳಸ್ವಾಮಿಗಾಗ,
ಹತಿಯಾರ ಕೈಯಾಗ, ತೊಗೊಂಡ ಜೀರ್ಯಾನಾಗ,
ಗುರುಸಿದ್ಧಪ್ಪನ ಮ್ಯಾಗ, ಬೆಂಕಿ ಕಾರುತಲಿ ।
ನೋಡಿ ಗುರುಸಿದ್ಧಪ್ಪಂತಾನ ಹೌಹಾರಿ ।
ಜೀವದಾನಾ ಕೊಡಿರಿ ನಾನು ನಿಮ್ಮ ಮಗನ ಸರಿ ।
ಬಾಪು ಸಾಹೇಬರ ಜೋರ ಆಜ್ಞೆ ನನ್ನ ಮ್ಯಾಗ ಮಾರಬೇಕ ಹ್ಯಾಂಗ್ರಿ ?
ಸರಕಾರದವರ ಮಾತ ಕೇಳದಿದ್ರ ಒಂದು ಘಾತ.
ನಿಮ್ಮ ಹೊರತ ನಾ ಇದ್ರ ಹಾಳಾಗಲಿ ಅಂತ ಬಿದ್ದಪಾದದ ಮ್ಯಾಲೆ ।
॥ ಚೌಕ–೫ ॥

ಬಿಟ್ಟ ನಡೆದರೊ ಬಾಪುಸಾಹೇಬನ ಕಡೆ. ಸಿಟ್ಟು ಇಮ್ಮಡಿ
ಕಟ್ಟ್ಯಾರ ಹಲ್ಲದವಡಿ, ಸಿಕ್ಕರೆ ಎರಡು ತುಕಡಿ, ಮಾಡುವ ಮನದಾಗ।

ಇಳುವು: ಕೂಗ ಹೊಡದ ಬಂದ್ರೊ ಕಿಲ್ಲೆದೊಳು,
ಬಂದಾದವು ಅರಮನಿ ಬಾಗಿಲಗಳು,
ಸ್ತಬ್ಧವಾಗಿ ನಿಂತರು ರಾಜಾಂಗಳದೊಳು ।

ಏರು: ಕೇಳ್ರಿ ಉಗ್ರಮೂರ್ತಿ ಸಾಧು ಮಡಿವಾಳಪ್ಪನವರ ಬಾಯಾಲೆ
ಬಂತ ಹಿಂಗ ಶಾಪಕೊಟ್ಟ್ರಾಗಿಂದಾಗ ।
ಎಲೊ. ಕಳ್ಳ ಸೂಳೀಮಗನೆ ಬಾಪು. ನಿನ್ನ ವಂಶ ಹಾಳಾಗಲಿ
ಅರಮನಿಯೊಳಗ ಅಳ್ಳಿ (ಅರಳಿ) ಗಿಡ ಹುಟ್ಟಿ ಮುಳಗಳ್ಳಿ ಬೆಳೆಯಲಿ ।
ನನ್ನಂಥ ಯೋಗಿಬಾರಿ (ಜೊತೆಗ) ಕಾಡಬ್ಯಾಡಂತ ಹೇಳಿ.
ಮೂರು ಬೊಗಸಿ ಮಣ್ಣ ತೂರಿ ಬಿಟ್ಟು ನಿಂತ
ದಿಗಂಬರ ಮೂರ್ತಿ ।

ಹೊರಳಿ ನೋಡಲಿಲ್ಲ ಹ್ವಾವರ. ಸೋಂವಾರ ಸ್ವಾಮಿ ಮನಸಿನಲ್ಲಿ ।
ಸಿಟ್ಟಿಗೆದ್ದು ಹುಕುಂ ಕೊಟ್ಟಾನ ಬಾಪು ಸಾಹೇಬ,
ಮಡಿವಾಳಪ್ಪನ ಹಿಡಿದು ತರಬೇಕ ಜಲ್ದ,
ಪೋಲೀಸ ಫೌಂದಿಗೆ ಕರದ ಹೇಳ್ಯಾರ ಅವರ ಮುಂದ ।
ಆನಿಕಾಲಿಗೆ ಕಟ್ಟಬೇಕು ಅವನ ತಂದ ।
ಸವಾರರು ಕುದರಿ ಜಿಗದ ಹತ್ತಿದಾರ ಬಂದ ।
ಎಷ್ಟೋ ಮಂದಿ ನಡೆದು ಹೋದರ ಹುಡುಕುವಕ್ಕ ।
ನಂದಿಹಳ್ಳಿ ಗುಡ್ಡಕಲ್ಲ ಮಡಿವಾಳಮುನಿನ್ನ ನೋಡಿದರವರು–
ಕುದರಿ ಜಿಗದಾರ ಒಂದು ಸಾರಿ,
ಹಿಡಿಗಲ್ಲ ಶಂಬುರಿ ತಕ್ಕೊಂಡು ಸಮರಕ್ಕ ।
ಕಲ್ಲತೂರಿ ಹೊಡೆದ ಮಂದಿಗೊಂದೊಂದ ಸಮಾ.
ಬಡಬಡದ ಒಬ್ಬೊಬ್ಬವ, ಬಿಟ್ಟಾರ ತಮ್ಮ ಹ್ಯಾವ,
ಅನ್ನುತ ಶಿವಶಿವ ಬಿದ್ದರ ನೆಲಕ್ಕ ।
ಜಿಗದ ನಡೆದರೊ ಸಿಶಿಂಬರಹಳ್ಳ ದಾಟಿ,
ಬಳ್ಳೋಡಿ ಕೆರಿಯ ಕಡೆಗೆ ಕೂತಿತ್ತೊ ಪೋಲೀಸ ಪಾರ್ಟಿ,
ಹಿಡಿದಾರೊ ಸುತ್ತಗಟ್ಟಿ ಸಂಜೀ ವ್ಯಾಳ್ಯೇಕ ।
ಕಾಶಿಯೊಳಗ ಇತ್ತ ಅವರ ಊಟ, ಎಂಥ ಸಂಕಟ,
ಮಹಾತ್ಮರಿಗೆ ಇದು ಜಾಟ; ಪರಮಾತ್ಮನ ಆಟ
ತಿಳಿಯದೊ ಜನಕ್ಕ ।
ಮಡಿವಾಳಪ್ಪನವ್ರನ ಒಯ್ದು ಗುಡಿಯಲ್ಲಿ ಹಾಕಿದರ ಕೀಲಿ ।
ಬಂದೊಬಸ್ತಿನಲಿ ಕೂತಿದ್ರು ರಾತ್ರಿಯಲ್ಲಿ ।
(ಸ್ವಪ್ನ?) ಸಚ್ಚ ಕೌತುಕಾತ್ರಿ ರಾತ್ರೀ ವ್ಯಾಳೇದಾಗ, ಪ್ರಭು ಕರವ್ಹಾಂಗ
ಗರ್ಭಗುಡಿಯಾಗ, ಎದ್ದು ಕುಳಿತರಾಗ ನೋಡಿದ ವ್ಯಾಲಕ್ಕ ।
ಮನಿಸ್ಯಾ (ಮನುಷ್ಯ) ಹಾಯುವಷ್ಟು ಕಲ್ಸಂದಿತ್ತಾಗ.
ದಾಟಿದರದರಾಗ, ಸಪ್ಪಳಿಲ್ಲದ್ಹಾಂಗ ಜಿಗಿದ ಮುಳಗೊಳಿಕ್ಯಾಗ
ಹ್ವಾದರ ಸೊಗಲಕ್ಕ ।
ಗುಪ್ತ ಇದ್ರು ತಪಸ್ಸು ಮಾಡುತ
ಹಣ್ಣು ಕಾಯಿ ತಿಂದು ಮಾಡಿಕೊಂಡ್ರು ಅವರ ವ್ರತಾ ।
ಚಿತ್ತಿಟ್ಟು ಕೇಳ್ರಿ ಪಾಪನಾಶಕಥಾ ॥ ॥ ಚೌಕ–೨ ॥

ಹನ್ನೊಂದು ದಿವಸ ಸೊಗಲದಲ್ಲಿದ್ದು ಮಡಿವಾಳ ಸ್ವಾಮಿಯವರು
ಬಂದರು ಬಳ್ಳೋಡಿಗೆ

ಜಕಾತಿ ಬಸಲಿಂಗಪ್ಪನ ಕರೆದು ಹೇಳತಾರ
‘ಕೊಡಾ ರೂಪಾಯಿ ಬೇಕ ಮಗನೆ ನಮಗೆ’ ।
ತಥಾಸ್ತು ಅಂತ ತಂದು ಕೊಟ್ಟ ಆಗಿಂದಾಗ್ಗ ।
ಚನ್ನಬಸಪ್ಪ ರೊಟ್ಟಿ ಗುಡಿ ದುರಸ್ತ ಮಾಡಂತ ಹೇಳ್ಯಾರವಗೆ ।
ಚೋದರಿ ಮ್ಯಾಲೆ ನಿಂತು ರೂಪಾಯಿ ತೂರ್ಯಾರ ।
ಹೊಲಿಯುರಷ್ಟು ತಕ್ಕೊಳ್ಳಿ, ಬಾಕಿ ಮುಂದಿ ಓಡಿಯುಬಾರದಂತ ಹೇಳಿ,
ಗುಡಿಯೊಳಗೆ ಹೊಕ್ಕು
ಹೂವಿನ ಮಾಲಿ ಕಟಗೊಂಡ ಕಾಲಿಗೆ ಕುಲುಪ ಹಾಕಿ ।
ಕಾವಲ ಮಾಡಿರೆಂತ ಹೇಳಿ ಕೂತಾನ ಗುಡಿಯು ಒಳಗ ಹೋಗಿ ।
ಹನ್ನೆರಡು ದಿವಸ ಕಾವಲ ಮಾಡಿ
ಬಳ್ಳೋಡಿ ಜನರು ಬಾಗಿಲ ತೆರೆದರ
ಸ್ವಾಮಿ ಇದ್ದಿದ್ದಿಲ್ಲ, ನೋಡಿ ಬೆರಗಾದರವರು ।
ಯೋಗಸಮಾಧೀ ಪ್ರಸ್ತಾ ಮಾಡಿದರು
ಸಣ್ಣ ದೊಡ್ಡವರು ಭಜನೀ ಮಾಡಿದರು ।
ಕೇಳಿರಿನ್ನ ಮುಂದ ।

ಇಳುವು: ಪ್ರಸ್ತವಾದ ಮೇಲೆ ಪತ್ರವೊಂದು ಬಂತು,
ಬಳ್ಳೋಡಿ ಜನರು ಬೆರೆತು ಓದತಾರ ಕುಂತ,
ಸ್ವಾಮಿ ಅದಾನಂತ ಕಾಶಿಯಲ್ಲೀಗ ।
ಭೆಟ್ಟಿಯಾದರು ಎಷ್ಟೋಮುಂದಿ ಹೋಗಿ. ಆರು ತಿಂಗಳಿಗಿ.
ನೋಡಿ ಮಡಿವಾಳಯೋಗಿ, ಆನಂದ ಮನಸಿಗಾಗಿ,
ಹೊರಳಿ ಬರುವದರೊಳಗ ।

ಏರು: ಬಾಪ್ರುಸಾಹೇಬ ಸತ್ತ. ಕಿತ್ತೂರ ಸಂಸ್ಥಾನ ಹಾಳಾಯ್ತು.
ಇಂಗ್ಲೀಷರ ಶವವಾಯ್ತು, ಕಾಶಿಗೆ ಸುದ್ದಿ ಹೋಯ್ತು.
ಹೇಳುವೆ ನಾ ನಿಮಗ ।
ಕಾಶಿಯ ಪಂಡಿತ ಶಾಸ್ತ್ರಿಗಳ ಜಯಿಸಿ, ಭಸ್ಮ ಮೈಗ ಧರಿಸಿ.
ಪ್ರಭು ಗುರುವಿನ ಸ್ಮರಿಸಿ, ಪಂಚಾಕ್ಷರಿ ಜಪಿಸಿ.
ಇದ್ದರು ಕಾಶಿಯೊಳಗ ॥ ॥ ಚೌಕ–೭ ॥

ಸಣ್ಣದಾಸ ಮಡಿವಾಳಪ್ಪಂತ ಹೇಳಿ.
ಮೂರ್ಖ ಜನರು ಮಾತ ಹುಟ್ಟಿಸ್ಯಾರು ನಗನಗತ.
ಕಾಶಿಯೊಳಗ ಸುದ್ದಿಯಾಯ್ತು. ತಿಳಕೊಂಡ ಯೋಗಿ ಒಳಗ ।

ಇಳುವು: ಮಹಾಸಭಾ ಕೂಡಿಸ್ತಾರ ಒಂದು ದಿನ ಲಕ್ಷಾವಧಿ ಜನ.
ದಿಗಂಬರ ಮೂರ್ತಿನ ನೋಡುವ ತಾಣ ಬನ್ನಿರೀಗ ।

ಏರು: ಬೆಳ್ಳಿತಾಟ ಇತ್ತೊ ಸ್ವಾಮಿ ಕೈಯಾಗ, ತೊಡಿ ಬಡಕೊಂಡಾನಾಗ.
ನಾಗರಹಾವಿನಂಗ. ಬೋರ್ಯಾಡಿ ಶೇಷನಾಗ ಬಿಂದು ಬಿಟ್ಟಿತ ಹೊರಗ ।
ತಾಟುತುಂಬಿ ಹೆಚ್ಚಾಗಿ ಕೆಳಗಬಿತ್ತ ಅಗ್ನಿ ಪುಟವಾಯ್ತು
ನೋಡಿದವರು ಬೆದರಿ ತಪ್ಪಾತಂತ ಶರಣ ಮಾಡ್ಯಾರವಾಗ ।
ಅದೇ ದ್ವಾರದಿಂದ ಬಿಂದು ಮ್ಯಾಲಕ್ಕ
ಸೇರಿಕೊಂಡು ಜಯಘೋಷಾಕ್ಷಣಕ
ಸಾಷ್ಟಾಂಗ ಬಿದ್ದರು ಸರ್ವಜನ ನೆಲಕ ।
ಕಾಶೀ ಬೆಟ್ಟವಮ್ಯಾಲೆ ಕಂಡಾರ ನಾಶೀಕ. ಬದರಿ. ನಾರಾಯಣ. ಗಂಗೋತ್ರಿ.
ಬಾವಡಿ. ನಾಗನಾಥ. ಕಂಚಿಕಾಮಾಕ್ಷಿ. ಮಧುರೆಮೀನಾಕ್ಷಿ.
ವಿಷ್ಣುಕಂಚಿ. ಶಿವಕಂಚಿ. ಸೇತುಬಂಧ. ರಾಮನಾಥ. ಒಡ್ಡಿ ಜಗನ್ನಾಥ.
ಪರಳೀ ವೈಜನಾಥ ನೋಡಿಕೊಂತ ನಡೆದಾರ ಕ್ಷೇತ್ರ ಮತ್ತ।
ಹೇಳುತ್ತ ಹ್ವಾದರ ತೀರದವರ ಮಾತ ॥ ॥ ಚೌಕ–೮ ॥

ನೇಪಾಳಕ ಸ್ವಾಮಿ ನಡೆದರು, ಆ ಊರ ಅರಸ ಬಂದರು
ಸಾಷ್ಟಾಂಗ ಮಾಡಿದರು. ಉದ್ಧಾರಾದೆವೆಂದರು ನಿಮ್ಮ ದರ್ಶನದಿಂದ ।
ಮಹೋತ್ಸವದಿಂದ ಊರಾಗ ಕರಕೊಂಡು ಹೋಗಿ.
ಸೇವಾತತ್ಪರರಾಗಿ. ಅರಸನ ಭಕ್ತಿಗಾಗಿ,
ಇದ್ದರು ಆನಂದವಾಗಿ ।
ಎಷ್ಟೊ ದಿವಸ ಇರುತಿರಲಿಕ್ಕ ಹೊರಳಿ ನೇಪಾಳದರಸ ಕರಕೊಂಡು ಹ್ವಾದ.
ಭಕ್ತಿಭಾವದಿಂದ ಮಂಚಾಮಾಡಿಸಿದ್ದಲ್ಲಿ ।

ಇಳುವು: ಸುವರ್ಣದ ಮಂಚ ರಾಜ ಕೊಟ್ಟನು.
ನೀರು ಬಿಟ್ಟನು, ಪಾದಕ್ಕೆರಗ್ಯಾನು.
ಮೃಷ್ಟಾನ್ನಭೋಜನವನು ಕೂಡಿ ಮಾಡಿದರಲ್ಲಿ ।

ಏರು: ಕೇಳ್ರಿ ಸುವರ್ಣಮಂಚಾ ಕಡಿದು ಬಡಮಂದಿನ್ನೆಲ್ಲ ಕರೆದು
ಬಂಗಾರ ಆಶೀರ್ವಾದ ಕೊಟ್ಟು. ಹರುಷನಾದ ಯೋಗಿ ಮನದಲ್ಲಿ ।
ಅಲ್ಲಿಂದ ಅವರ ಮನಸ್ಸು ತಿರುಗಿ ಶ್ರೀಶೈಲ ಮೈಸೂರಿಗೆ ಹೋಗಿ
ಚಿದಂಬರನ ಭೆಟ್ಯಾಗಿ. ಬಂದ್ರು ಮುರಗೋಡಿಗೆ ।
ವಿಚಿತ್ರ ಕೇಳ್ರಿ ಅಲ್ಲಿ ಶಾಂತವೀರಸೆಟ್ಟಿ ಮನಿಪ್ರಸ್ತ ನಡೆದಿತ್ತ

ಒಳೆಸಿಸ್ತ. ಜನರು ಕೂಡಿ ಮಸ್ತ ಮಾತಾಡಿದರು ಹಲ್ಲಿ ಕಿಸ್ತ.
ಯೋಗಿಯ ನಿಂದಾ ಮಾಡಿದರಲ್ಲಿ ।
ಮಡಿವಾಳಪ್ಪ ತಿಳಕೊಂಡ್ರಾಕ್ಷಣಕ ।
ಹೋಗಿ ಕುಂತರ ಚಳ್ಳ–ಹಳ್ಳ ಎಂಬುವ ಸ್ಥಳಕ ।
ಆದದ್ದು ಕೇಳ್ರಿ ಹೇಳುವೆ ಕೌತುಕ ॥ ॥ ಚೌಕ–೯ ॥

ಪಟ್ಟಚರಮೂರ್ತಿ ಅಷ್ಟೂ ಜಂಗಮರೆಲ್ಲ
ಇಷ್ಟಲಿಂಗಪೂಜೆ ಮಾಡುವದಕ್ಕ ಇಟ್ಟುಕೊಂಡಾರ ಗಂಧಾಕ್ಷತಿ ।
ಚೌಕಾಬಿಚ್ಚಿ ನೋಡತಾರ ಒಳಗ ಲಿಂಗವಿಲ್ಲದ್ಹಂಗಾತಿ ।
ಗಾಬರಿಯಾದರೊ ಅಷ್ಟೂರು ಬಾಯಿ ಕಿಸದ ಕಿಸದ್ಹಂಗಾಗಿ ।
ಇಳುವು: ಬಡಜಂಗಮರು ನೋಡತಾರ ವಸ್ತ್ರಬಿಚ್ಚಿ,
ಲಿಂಗವಿಲ್ಲಂತ ಒಬ್ಬರಿಗೊಬ್ಬರು ಹೇಳವಲ್ಲರು ನಾಚಿ ।

ಏರು: ನಿಂದಾಫಲ ಕಂಡೇವೆಂದು ಹಿಂದಿಸಿಂದ ನೆನಪಾಗಿ
ವಂದಿಸ್ಯಾರು ಮಡಿವಾಳಪ್ಪಸ್ವಾಮಿಯವರಿದ್ದೆಡೆಗೆ ಹೋಗಿ
ಲಿಂಗಾಕೊಟ್ಟು ಉದ್ಧಾರ ಮಾಡ್ಯಾರ ಅಷ್ಟೂ ಜಂಗಮರಿಗಿ॥ ॥ ಚೌಕ–೧೦

ಮುರಗೋಡ ಬಿಟ್ಟಮ್ಯಾಲೆ. ಪುಷ್ಕಳ ಊರಾಗಿದ್ದ
ಶಿಷ್ಯಾರು ಕರೆತಂದ್ರು, ಒಕ್ಕುಂದಕ ಅವರು ಬಂದ್ರು.
ನಾಯಕರ ಮನಿಯಾಗ ಇದ್ರು ಕೇಳ್ರಿ ಆದದ್ದ ।
ಒಕ್ಕುಂದ ಊರೊಳಗಾದ ಚಮತ್ಕಾರ ಕೇಳ್ರಿ ಅಂದಾಗ
ಕೆಲವ್ರು ನಿಂದಕರು ಕಾಸ್ಯಾರ ಬಿಸಿನೀರು ಉಕ್ಕಿ ಬೀಳುವಾಂಗ ।
ಮಸಲತ್ತ ಮಾಡಿದರೊ ಮೈಸುಡಬೇಕಂತ. ಎಣ್ಣಿ ಹಚ್ಚಿ ತುರ್ತ ।
ನಿಂತಾರ ಸುತ್ತಮುತ್ತ ಕೂಕಮಂದಿ ಬೇತ.
ನೀರ ಹಣಿಸುವಾಗ ಏಕದಮ್ ಮನಿಗೆ ಬೆಂಕಿ ಹತ್ತಿ
ಚೀರ್ಯಾಟ ನಡೀತಿ, ಊರ ಜನರು ಕೂಡ್ಯೈತಿ,
ಬಂದಾರ ಸ್ವಾಮಿ ಹಂತೇಲೆ ಅವರು ಇರು ಜಾಗಾದಾಗ ।

ಇಳುವು: ಹಲ್ಕಿ ಮುಂದುಕಪ್ಪ ಹೇಳತಾನ ಸ್ವಾಮಿಗಾಗ
ಹತ್ತಿ ತುಂಬೈತಿ ಒಳಗ ಮನಿಯಾಗ ಸುಟ್ಟಿದ್ಯಾಗ
ಇರಲ್ಬೆಂಗ ಭೂಮಿಯ ವ್ಯಾಗ ।

ಏರು: ತಿಳಿದವರು ಸ್ವಾಮಿಗೋಳ, 'ಸೂಳಿಮಕ್ಕಳಿರಾ
ತಣ್ಣೀರ ಹಾಕರಿ ಜಳಕದ ನೀರಾಗ' ।

ಕೇಳಿದವರು ಲಗ್ಗ ಬೆರಕಿ ಮಾಡ್ಯಾರಾಗಲ್ಲಿಂದಲ್ಲೆ ।
ಬೆಂಕಿಗಿಂಕಿ ಹೋತ. ಜನರಿಗೆ ಬುದ್ಧಿ ಬಂತ, ಭಕ್ತಿಪುಟ್ಟಿತಾವಾಗ ।
ಮಠ ಕಟ್ಟಿಸಿ ಶಿಷ್ಯ ಭಜನಿ ಮಾಡ್ಯಾರಾವಾಗ ॥ ॥ ಚೌಕ–೧೧ ॥

ಒಕ್ಕುಂದ ಬಿಟ್ಟ ಮೇಲೆ ಗರಗದ ಚೀರಲದಲ್ಲಿ
ಅಲ್ಲಿಂದ ನೇಗಿನಹಾಳದಲ್ಲಿ ಥೋಡೆ ದಿನದ ಮೇಲೆ
ನಿಚ್ಚಣಿಕಿದೈವ ಕರಕೊಂಡು ಬಂದ್ರು
ಮಾಳಸೆಟ್ಟಿ ಶಿವಲಿಂಗಪ್ಪ. ಪಾಟೀಲ ಗುರುಸಿದ್ಧಪ್ಪ
ದಳವಾಯಿ ಬೈಲಪ್ಪ, ಗಿರಜಿ ತಮ್ಮಪ್ಪ ಕೂಡಿ ರೈತರಾಗ ।
ಮಠ ಕಟ್ಟಸ್ಯಾರ ರಮ್ಯಸ್ಥಳನೋಡಿ,
ಎಡಕ ರಾಮಲಿಂಗ ಮಾರುತಿ ಗುಡಿ,
ಇಟಕೊಂಡು ಸೇವಾ ಮಾಡ್ಯಾರೆಲ್ಲ ಭಕ್ತರು ಕೂಡಿ ।
ಅಲ್ಲಿಂದ ಅವರ ಮನಸ್ಸು ದೇಗುಲ್ಹಳ್ಳಿಗೆ ಹೋಗಿತ್ತು ಎಷ್ಟೊ ದಿನ ।
ಶಿವಶಂಕರ ಸಣ್ಣಮರಿಗಳನ್ನು ಇವರಿಗೆ ಸ್ವಾಧೀನ ಮಾಡ್ಯಾರ
ದೇಗುಲ್ಹಳ್ಳಿ ಸರ್ವಜನ ।
ಆ ಮೇಲೆ ಗರಗದ ಭಕ್ತರು ಕರಕೊಂಡು ಬಂದ್ರು
ಸ್ವಾಮಿ ಮಡಿವಾಳಪ್ಪನವರನ್ನು ।
ಮಹೋತ್ಸವದಿಂದ ಮಠಕ್ಕೆ ಬಂದ್ರು,
ಷೋಡಶೋಪಚಾರದಿಂದ ಪೂಜಿಮಾಡುತ್ತ,
ಸ್ಥಿರವಾಗಿಟ್ಟುಕೊಂಡರವರನ್ನ ।
ಗರಗ ಸ್ವರ್ಗ ಅಂಬುವದು ಸುಳ್ಳಲ್ಲ, ಮಹಾತ್ಮರ ಸ್ಥಳ.
ಅವರಿಗಾಯ್ತು ಒಳ್ಳೆ ನಿವಳ ।
ಹಳ್ಳದ ದಂಡಿಯ ಮೇಲೆ ಬಂದ ನಿಂತ ಸುತ್ತೆಲ್ಲ ನೋಡಿದರು ।
ಇದು ಯಾರ ಭೂಮಿ ಅಂತ ಕೇಳಿದರು:
ಹಂಗರಕಿ ದೇಸಾಯರದಂತ ಹೇಳಿದರು ।
ಭಕ್ತರು ಅವರು ಕೂಡಿಕೊಂಡು ವಾಡೇಕ ಬಂದ್ರು,
ಅಯ್ಯಪ್ಪ ದೇಸಾಯಿಯವರು ಕುಂತಿದ್ರು,
ಇವರನ್ನು ನೋಡಿ. ಸಾಷ್ಟಾಂಗನಮಸ್ಕಾರ ಮಾಡಿ,
ಸದರಿನಮ್ಯಾಲೆ ಕೂಡ್ರಿಸಿದರು ।

ಇಳುವು: ಕುಂತ ಕ್ಷಣಹೊತ್ತಿನಮೇಲೆ ಅಯ್ಯಪ್ಪ ದೇಸಾಯಿ
ನಮಗಷ್ಟು ಭೂಮಿ ಬೇಕಂತ ಕೇಳಿದರು ।

ಕೊಡತೇವಂತ ಇವರು ಹೇಳಿದರು ।
ಅದರ ಮ್ಯಾಲೆ ಭಕ್ತರು ಅವರೂ ಕೂಡಿಕೊಂಡು
ಹಳ್ಳಾ ದಾಟಿ ಹೋಗಿ ದಂಡಿಯ ಮೇಲೆ ನಿಂತರು ।

ಏರು : ನೀರು ತುಂಬಿದ ಹೂಜಿ ಅಯ್ಯಪ್ಪದೇಸಾಯಿ ಕೈಯಲ್ಲಿ ಕೊಟ್ರು ।
ಮುಂದ ಮುಂದ ಹೋದ್ಹಂಗ ನೀರ ಬಿಡಂತ ಹೇಳಿದರು ।
ಇವರು ಮುಂದ ಮುಂದಕ ಹೋದಂಗ ನೀರು ಬಿಟ್ಟು
ಸಾಷ್ಟಾಂಗ ನಮಸ್ಕಾರ ಮಾಡಿದರು ।
ಅವರ ಮನಸ್ಸಿಗಾನಂದವಾಗಿ ಆಶೀರ್ವಾದ ಮಾಡಿದರು ॥ ॥ ಚೌಕ–೧೨ ॥

ಹಳ್ಳದ ದಂಡಿಯವ್ಯಾಲೆ ತಿಳಿದವರ ಬಲ್ಲರು ಕೇಳ್ರಿ ಆನಂದ ।
ಪರದೇಶದ ಸಾಧುಗಳು ಬಂದು ಬಂದು
ಶಾಸ್ತ್ರಗಳ ವಾದ ಮಾಡುವರು ಹಗಲಿರುಳು ।
ದರ್ಶನ ಮಾಡಿಕೊಂಬುವಂಥ ಜನ ಬಂದು. ಕಾಯಿ ಕರ್ಪೂರ ತಂದು
ಸ್ವಾಮಿಯವರ ಮುಂದ ಇಡುವರು ನೇಮದಿಂದ ।
ಎಷ್ಟೋ ದಿವಸ ಹೋದ ಮ್ಯಾಲೆ ಸಾಧುಶ್ರೇಷ್ಠನಾಗ.
ಶಿವತತ್ವ ಜ್ಞಾನದೊಳಗ, ಪರಿಪೂರ್ಣ ಒಳಗ ಹೊರಗ.
ಬಂದಾನ ಯೋಗಿ ಬದಿಯಲಿ ।
ಮಡಿವಾಳಪ್ಪನವರು ಮಾಡಿದರು ಪ್ರೀತಿ ಕೇಳಿದರು ಅವರ ಸ್ಥಿತಿ.
ಎಲ್ಲಿಂದ ಬರೋಣಾತ ಹೇಳಂದ್ರರ್ಥಿಯಲಿ ।
ನಾವು ಹುಬ್ಬಳ್ಳಿ ಆರೂಢಸ್ವಾಮಿ ಅಂತ ಹೇಳಿದಾನ ತುರ್ತ
ನಮನ ಮಾಡಿ ನಿಂತ ।
ಮಡಿವಾಳ ಸ್ವಾಮಿಯವರು ಕೂತ ಮಾತ ಹೇಳ್ಯಾರಲ್ಲಿ ।
ಅವರ ಮಾತ ಅವರು ತಿಳಕೊಂಡು, ಕರುಣ ಪಡಕೊಂಡು
ಅಪ್ಪಣೆ ತಕ್ಕೊಂಡು, ಶಿಷ್ಯರ ಕರಕೊಂಡು,
ಹೋದಾರಾಜ್ಞೆಯಲಿ ।

ಇಳಿವು: ಎಷ್ಟೋ ದಿವಸದ ಮ್ಯಾಲೆ ಶಿಷ್ಯಮಂಡಲಿ ಕರದ
ಹೇಳತಾರ ಮನದಾದು ।
ಪರಲೋಕ ಪ್ರಭುವಿಂದ, ಪತ್ರ ಬಂತು ಇಂದ
ಹೋಗುವೆವು ಇನ್ನಮ್ಯಾಲೆ. ಓಂ ನಮಃ ಶಿವಾಯ.
ಭಜನಿ ಮಾಡ್ರಿ ತನಮಯ,
ಗರಗದಲ್ಲಿ ಬಿಟ್ಟಾರು ಕಾಯ,
ಹ್ವಾದರು ಪ್ರಭುವಿನ ಹಂತೇಲಿ ।

ಏರು: ಮಹೋತ್ಸವದಿಂದ ಸಮಾಧಿಯನು ಮಾಡಿ,
ಗದ್ದಗಿ ಹಾಕ್ಸಿ ಕಟ್ಟಿದಾರ ಗುಡಿ,
ಜಾತ್ರಿ ಮಾಡತಾರ ವರ್ಷ ತಿಥಿ ನೋಡಿ ॥ ॥ ಚೌಕ–೧೩ ॥

ಕೇಳ್ರಿ ಶಾಲಿವಾಹನ ಶಕೆ ವಿಕ್ರಮನಾಮ ಸಂವತ್ಸರ
ಹದಿನೆಂಟನೂರಾ ಎರಡು. ಮಾಘ ಬಹುಳ ಪ್ರತಿಪದ,
ಶುಕ್ರವಾರ ಬೆಳಗಿನ ಮೂರು ತಾಸು ರಾತ್ರಿರ್ತ,
ಬಿಟ್ಟಾರು ಶರೀರ ।

ಇಳುವು: ಆ ಮೇಲೆ ಮಠದಲ್ಲಿ ನಿಂತಾರ ರಾಮನಗೌಡ
ಸಿದ್ಧಲಿಂಗ ಮರಿ, ವೀರಯ್ಯಸ್ವಾಮಿಯವರ ।
ಈಗ ಇರುವಂಥವರು ಶ್ರೀ ಸಣ್ಣಬಸವ ಮರಿದೇವ ।

ಏರು: ಮಾಘಶುದ್ಧ ಏಕಾದಶಿ ಮುಂಜಾನೆ ಸಪ್ತಾಹ ಸುರುವಾಗು ಕರಾರ ।
ಹೀಂಗ ನೇಮ ಮಾಡ್ಯಾರ ಎಲ್ಲ ಭಕ್ತ ಜನರ ।
ಮಾಘ ಬಹುಳ ತೃತೀಯಾ ದಿವಸ ಮಹಾಪ್ರಸ್ತಮಾಡಿ
ಮಹೋತ್ಸವದಿಂದ ಎಳೆಯುವರು ತೇರ ।
ದೇಶದೊಳಗ ಕಿತ್ತೂರವಿಖ್ಯಾತ, ಗುರುಮಲ್ಲಿನಾಥ–
ಅವರ ಪಾದಭಕ್ತ ಲಿಂಗಣ್ಣಕವಿ ಮಾಡಿದ । ಚೌಕ–೧೪ ॥

ಕರಿಕೆ-ಕಣಿಗಿಲು : ಒಂದು ಸಮಾಲೋಚನೆ

● ಗುರುಲಿಂಗ ಕಾಪಸೆ

'ಕರಿಕೆ–ಕಣಿಗಿಲು' ಡಾ. ಡಿ. ಎಸ್. ಕರ್ಕಿಯವರ ನಾಲ್ಕನೆಯ ಕವನ ಸಂಗ್ರಹ. ಏಳು ಗುಂಪುಗಳಲ್ಲಿ ಮೇಳಯಿಸಲ್ಪಟ್ಟ ಈ ಕವಿತೆಗಳಿಗೆ ಹಲವು ಬಗೆಯ ಬಣ್ಣ–ಬೆಡಗುಗಳಿವೆ. ಕವಿ ಕರ್ಕಿಯವರ ಪರಿಣತ ವಯಸ್ಸಿನಲ್ಲಿ ಬರೆಯಲ್ಪಟ್ಟ ಇಲ್ಲಿಯ ಕವಿತೆಗಳಲ್ಲಿ ಅವರ ಮಾಗಿದ ಅನುಭವವಿರುವುದನ್ನು ಯಾರೂ ಗುರುತಿಸಬಹುದು. ನವ್ಯ, ನವ್ಯೋನವ್ಯ, ಅತಿನವ್ಯ ಎಂದು ಕಾವ್ಯ ಬದಲಾಗುತ್ತಲೇ ನಡೆದ ಕಾಲಾವಧಿಯಲ್ಲಿಯೂ ಕರ್ಕಿಯವರು ಭಾವಗೀತದ ಪ್ರವಾಹವನ್ನು ಹಂಗಡಿಯದಂತೆ ರಕ್ಷಿಸಿಕೊಂಡು ಬಂದಿರುವುದು ಒಂದು ವಿಶೇಷ. ಕಾವ್ಯದ ದೃಷ್ಟಿ, ಧೋರಣೆಗಳು ತೀವ್ರ ಬದಲಾವಣೆಗೆ ಒಳಗಾದ ಈ ದಶಕದಲ್ಲಿ–ಅದೂ ೧೯೭೭ರಲ್ಲಿ–ಸರಸವಾದ ಭಾವಗೀತ ಸಂಕಲನವನ್ನು ಪ್ರಕಟಗೊಳಿಸುವುದು ಒಂದು ಅಚ್ಚರಿಯ ಮಾತಾಗಿ ಕಾಣಿಸಿರದು. ಅಷ್ಟಲ್ಲದೆ ಗತ ಕಾಲದ ಕಡೆಗೇ ಮತ್ತೆ ಹೊರಳಿದಂತಹ ಅನುಭವವು ಕರ್ಕಿಯವರ ಕಾವ್ಯದಿಂದ ಉಂಟಾಗದಿರದು. ಹಾಗಿದ್ದರೂ ಅವರ ಕಾವ್ಯ ತನ್ನ ನಾದಮಾಧುರ್ಯದಿಂದ, ನಯಗಾರಿಕೆಯಿಂದ, ಭಾವಪೂರ್ಣವಾದ ವರ್ಣನೆಗಳಿಂದ, ಸುಂದರವಾದ ಕಲ್ಪನೆಗಳಿಂದ, ಜೀವನದ ವಿವಿಧ ಬಗೆಯ ಅನುಭವಗಳ ರಸಪಾಕದಿಂದ ಸಹೃದಯರ ಮನಸ್ಸನ್ನು ಸೂರೆಗೊಳ್ಳುವ ಶಕ್ತಿಯುಳ್ಳದ್ದಾಗಿದೆ. ಭಾವಪೂರ್ಣವಾದ ಗೀತಗಳು ಎಂಥ ಬದಲಾವಣೆಯ ಕಾಲದಲ್ಲಿಯೂ ಓದುಗರ ಇಲ್ಲವೆ ಕೇಳುಗರ ಹೃನ್ಮನಗಳನ್ನು ತಣಿಸುವ ಗುಣವುಳ್ಳವುಗಳಾಗಿರುತ್ತವೆ. ಅವುಗಳ ಆ ಗುಣ ಕೇವಲ ವಾಚನೀಯವಾದ ಅಥವಾ ಗದ್ಯ ಸ್ಪಂದಿಯಾದ ನವ್ಯ ಕಾವ್ಯಕ್ಕೆ ಇಲ್ಲ. ನವ್ಯ ಕಾವ್ಯ ಜನಜೀವನದ ಹತ್ತಿರಕ್ಕೆ ಬಾರದಿರುವುದಕ್ಕೆ, ಒಂದು ವೇಳೆ ಬಂದರೂ ಅವರ ಸ್ಮೃತಿಪಟಲದಿಂದ ಬೇಗನೇ ಜಾರಿ ಹೋಗುವುದಕ್ಕೆ ಭಾವಗೀತದ ಪ್ರಮುಖ ಗುಣಗಳಾದ ಭಾವನಿಷ್ಠತೆ ಮತ್ತು ಗೀತ ಮಾಧುರ್ಯ ಇವು ಇಲ್ಲದಿರುವುದೇ ಮುಖ್ಯಕಾರಣ ಎಂದು ಹೇಳಬಹುದು. ಕೆಲವು ಭಾವಗೀತಗಳಲ್ಲಿ ಕಾವ್ಯಾಂಶ ಕಡಿಮೆಯಿದ್ದರೂ ಅವುಗಳಲ್ಲಿಯ ಪದಪ್ರಯೋಗ

'ಕರಿಕೆ–ಕಣಿಗಿಲು' : ಕವಿ ಡಾ. ಡಿ. ಎಸ್. ಕರ್ಕಿ. ಪ್ರಕಾಶಕರು : ಆನಂದ ಪಬ್ಲಿಕೇಶನ್ಸ್, ಧಾರವಾಡ ಬೆಲೆ : ೫–೦೦ ರೂ. ಪುಟ : ೧೩೦

ಪ್ರಾಸಾನುಪ್ರಾಸ ಇವು ಸೆರೆಹಿಡಿಯುವುದುಂಟು. ಈ ಅಂಶಗಳು ಎಲ್ಲ ಬಗೆಯ ಒಳ್ಳೆಯ ಕಾವ್ಯದಲ್ಲಿ ಇರಬೇಕಾದ ಅಗತ್ಯವಿಲ್ಲದಿಲ್ಲ. ಕರ್ಕಿಯವರು ಮೊದಲಿನಿಂದಲೂ ಭಾವ ಮತ್ತು ಛಂದೋಬಂಧದಲ್ಲಿಯೇ ತಮ್ಮ ಶ್ರೇಯಸ್ಸನ್ನು ಕಂಡುಕೊಂಡವರು. ಇದೀಗ ನವ್ಯೋದಯ ಕಾವ್ಯದ ಸಿದ್ಧಿಯ ಹಂತದಲ್ಲಿರುವ ಅವರು ಮರೆತುಹೋಗುವ ಸ್ಥಿತಿಯಲ್ಲಿರುವ ಭಾವಗೀತವನ್ನು ಈ ಸಂಗ್ರಹದ ಮೂಲಕ ಮತ್ತೆ ಕನ್ನಡ ರಸಿಕರೆದುರು ಸಾಕ್ಷಾತ್ತಾಗಿ ನಿಲ್ಲಿಸಿ, ಅದಕ್ಕೆ ಮರುಹುಟ್ಟು ತಂದುಕೊಟ್ಟಿದ್ದಾರೆಂದು ಹೇಳಬೇಕು. ಈ 'ಕರಿಕೆ–ಕಣಗಿಲು' ಕರ್ಕಿಯವರ ಕಾವ್ಯದ ಕೆನೆಯೂ ಹೌದು. ಭಾವಗೀತ ಪೈರಿನ ಒಂದು ಮಾಗಿದ ತೆನೆಯೂ ಹೌದು.

ಕವಿಯ ಕವನವದೊಂದು ಕನ್ನಡಿ
    'ಪ್ರಕೃತಿ ಫಲಿಸುವುದದರಲಿ
ಕಲ್ಪನೆಯ ಕಳೆಯಿಡಲು ನೆನಸೇ
    ಕನಸಹುದು ಮಾನಸದಲಿ

ಕವಿಯ ಕವನವದೊಂದು ತಿಳಿಗೊಳ
    ತುಳುಕಿ ತೊಳಗುವ ಜಲದಲಿ
ಭಾವ ಮೇಣನುಭಾವಗಳು ಪ್ರತಿ
    ಫಲಿಸುವವು ಅನುನಯದಲಿ

ಹೀಗೆ ಕರ್ಕಿಯವರು ಒಂದು ಕವನದಲ್ಲಿ ಕಾವ್ಯಕ್ಕೆ ವ್ಯಾಖ್ಯಾನ ನೀಡಿದ್ದಾರೆ. ಇಲ್ಲಿಯ ಯಾವ ವರ್ಣನೆಯೂ ಭಾವಗೀತದ ದೃಷ್ಟಿಯಿಂದ ಹುಸಿಯಾದುದಲ್ಲ; ಕರ್ಕಿಯವರ ಒಟ್ಟು ರಚನೆಗೂ ಇದು ವ್ಯಾಖ್ಯಾನವಾಗಬಲ್ಲುದು. ಈ ಹಿನ್ನೆಲೆಯಲ್ಲಿಯೇ ಅವರ ಕಾವ್ಯವನ್ನು ಆಸ್ವಾದಿಸುವುದು ಸೂಕ್ತವೆನಿಸುತ್ತದೆ.

ಪ್ರಸ್ತುತ ಸಂಕಲನದಲ್ಲಿ ಪ್ರಕೃತಿಯ ಸುಂದರವಾದ ಚಿತ್ರಣಗಳಿಗೆ ಕೊರತೆಯಿಲ್ಲ. 'ಜೋಳದ ಬೆಳೆ' 'ಕುಂಬಳ ಬಳ್ಳಿ' 'ಎರೆಯ ಕರೆ' 'ಹಳ್ಳಿಯ ಹೂಗಳಿಗೆ' ಈ ಮುಂತಾದವುಗಳನ್ನು ಪ್ರಕೃತಿ ಚಿತ್ರಣಕ್ಕೆ ಸಾಲಾಗಿ ಉದಾಹರಣೆ ಕೊಡುತ್ತ ಹೋಗಬಹುದು. ಈ ಕವಿತೆಗಳಲ್ಲಿಯ ಗಮನಾರ್ಹವಾದ ಸಂಗತಿಯೆಂದರೆ ಕಣ್ಣಿಗೆ ಕಟ್ಟುವಂತೆ ಶಬ್ದಗಳಲ್ಲಿ ಸೃಷ್ಟಿಯ ಚಿತ್ರವನ್ನು ಬಿಡಿಸುತ್ತ ಹೋಗುವುದು. ವಿಶೇಷವಾಗಿ ಹಳ್ಳಿಯ ಸಹಜ ಸೌಂದರ್ಯವನ್ನು ಕಂಡರಿಸಲು ಮೀಸಲಾಗಿರುವ ಈ ಕವಿತೆಗಳು ಹೊಸ ರುಚಿಯನ್ನು ಕೊಡುತ್ತವೆ. ಉದಾಹರಣೆಗಾಗಿ ಈ ಕೆಳಗಿನ ಪದ್ಯ ಭಾಗವನ್ನು ನೋಡಬಹುದು:

ಕಣ್ಣಿಗೆ ಸುಣ್ಣಗೆ ಹೊಳೆಯುವ ಬೆಳೆಯಲಿ
    ಸುಳಿದರೆನಿತು ಸೊಂಪು !

ಸೂಸಿ ನಾಸಿಕಕೋ ತೋಷ ನೀಡುವುದು
ತಾಯಿ ನೆಲದ ಕಂಪು.

ತೆನೆಗಳಲಿ ಮಿಗಿಲಿದು ಜೋಳದ ತೆನೆ
ಬಲ್ಲೆಯ ನೀ ಬೆಳೆಸಿ
ಬೆಂದ ಬಳಿಕ ತಿಂದು ನೋಡು
ಬೇಯಿಸಿದೆಡೆಯಲ್ಲಿ.

ಬಯಲು ನಾಡಿನ ಜೋಳದ ಬೆಳೆಯಲ್ಲಿ ಸುಳಿದಾಡಿ. ಅದರ ಬೆಳಸಿಯ ಸವಿಯನ್ನು ಉಂಡವರು ಮಾತ್ರ ಈ ಪದ್ಯದ ಅರ್ಥವನ್ನು ಗ್ರಹಿಸಬಲ್ಲರು; ಅದರ ಸೊಬಗಿಗೆ ತಲೆದೂಗಬಲ್ಲರು.

ಇಳಿವುದಿಲ್ಲಿ ನೆಲಗಡಲೆ
ಬೆಳೆವುದು ಕಡುಬಿನ ಕಡಲೆ
ಬಲ್ಲೆಯ ಗೋದಿಯು ಉಮ್ಮಿಗೆ ತಾಯಿಯು ಕರುಣೆ
ನಮ್ಮೀ ಬರಿ ಮೈ ಸುತ್ತಿ
ಪೊರೆಯುವ ಮೆರೆಯುವ ಹತ್ತಿ
ಎರೆನಾಡಿನ ಮಮತೆಯು ಶ್ರುತಿ; ಇರಲೀ ಪ್ರಜ್ಞೆ.

ಕರುನಾಡಿನ ಎರೆಯ ನೆಲದಲ್ಲಿ ಹುಟ್ಟಿ, ಬೆಳೆಯುವ ವಿವಿಧ ಬೆಳೆಗಳು ಇಲ್ಲಿ ಪಟ್ಟಿ ಮಾಡಿಟ್ಟಂತಿದ್ದರೂ ಕಾವ್ಯ ಗುಣಕ್ಕೆ ಕೊರತೆಯಿಲ್ಲ.

ಹಳ್ಳಿಯ ಬಗೆ ಬಗೆಯ ಹೂವುಗಳ ಸೊಬಗು–ಸೌಂದರ್ಯಗಳನ್ನು ಚಿತ್ರಿಸುವ 'ಹಳ್ಳಿಯ ಹೂಗಳಿಗೆ' ಎಂಬ ಕವಿತೆಯ ಕೊನೆಯಲ್ಲಿ :

ಪಚ್ಚೆ ಪದಕವ ಹೋಲ್ವ
ದಳ ದಳದಿ ಬಂಗಾರ
ನಗೆ ಮುಗುಳ ತೆರೆವ
ಹಾಗಲದ ಹೂವೇ
ಹಳ್ಳಿ ಹಳ್ಳಿಯ ಹದುಳ–
ವಾದ ವಾತಾವರಣ
ದಲ್ಲಿ ನೆಲಸಿಹೆ, ನಗರ
ಕೆಂದು ಬರುವೆ ?

ಎಂಬ ಆತ್ಮೀಯವಾದ ಆಹ್ವಾನದ ಪ್ರಶ್ನೆಯೊಂದಿದೆ. ಇದು ಒಂದರ್ಥದಲ್ಲಿ ನಗರದಲ್ಲಿ ಕಾಣದೇ ಇರುವ ಹಳ್ಳಿಯ ಸೌಂದರ್ಯವನ್ನು ಪ್ರತಿಬಿಂಬಿಸುತ್ತದೆ. ಹಾಗೆಯೇ ಅಂಥ

ಸೌಂದರ್ಯ ನಾಗರಿಕ ಜೀವನಕ್ಕೂ ಬೇಕೆಂಬ ಭಾವವನ್ನೂ ಸ್ಫುರಿಸುತ್ತದೆ. ನಗರದ ಕುಂಡದ ಹಾಗೂ ಪರದೇಶಿಯ ಹೂವುಗಳಿಗಿಂತ ಈ ಹಳ್ಳಿಯ ಹೂಗಳ ಸೊಗಸು ಮಿಗಿಲಾದದ್ದೆಂದು ಬೇರೆ ಹೇಳಬೇಕಾಗಿಲ್ಲ. ಕರ್ಕಿಯವರು ಹಳ್ಳಿಯ ಚೆಲುವಿನ ಗಾಢ ಸಂಬಂಧವಿರಿಸಿಕೊಂಡು ಇಂಥ ಹಲವಾರು ಚಿತ್ರಗಳನ್ನು ಈ ಸಂಕಲನದಲ್ಲಿ ಕೊಟ್ಟಿದ್ದುದು ಎತ್ತಿ ಹೇಳಬಹುದಾದ ಒಂದು ವೈಶಿಷ್ಟ್ಯವಾಗಿದೆ.

'ಮೂಡಬಿದರೆ' 'ನಾನೇರಿದಾಗುಂಬೆ'ಯಂಥ ಕವಿತೆಗಳಲ್ಲಿ ಸ್ಥಳಪರಿಚಯದೊಂದಿಗೆ ಅಲ್ಲಿಯ ಸಾಂಸ್ಕೃತಿಕ ಜೀವನವೂ ಕಾವ್ಯವಾಗಿ ಮೂಡಿಬಂದಿದೆ. ಕರ್ಕಿಯವರು ತಾವು ಕೇಳಿದ ಹೆಸರಿಗೂ ಕಾವ್ಯಾರ್ಥವನ್ನು ಕೊಡಬಲ್ಲವರು. ಕಂಡ ದೃಶ್ಯವನ್ನು ಕಾವ್ಯದಲ್ಲಿ ಕಟೆದು ನಿಲ್ಲಿಸಬಲ್ಲವರು.

ಈ ಸಂಕಲದಲ್ಲಿ ಚಿಂತನಶೀಲ ಹಾಗೂ ಅನುಭಾವ ಜೀವನಕ್ಕೆ ಸಂಬಂಧಿಸಿದ ಕವಿತೆಗಳೂ ಇವೆ. To some extent every poet is a philosopher ಎಂಬೊಂದು ಅಭಿಪ್ರಾಯವಿದೆ. ಕನ್ನಡದ ನವೋದಯ ಕವಿಗಳಲ್ಲಿ ಬಹುಪಾಲು ಕವಿಗಳು ಚಿಂತನಶೀಲರು. ಅಧ್ಯಾತ್ಮವಾದಿಗಳು. ಕರ್ಕಿಯವರು ಈ ಮಾತಿಗೆ ಹೊರತಾಗಲಾರರು. ಅವರ ಅನೇಕ ಕವಿತೆಗಳ ಒಳದನಿಯಾಗಿ ಚಿಂತನೆ ಮಿಡಿಯುತ್ತಿರುವುದನ್ನು ಕಾಣಬಹುದು. ಕೆಲವು ಕವಿತೆಗಳಲ್ಲಿ ಚಿಂತನೀಯ ಅಂಶ ವಿಶೇಷವಾಗಿಯೇ ಬಂದಿರುವುದುಂಟು.

ಕಿರುದನಿ ಬಾರದೊಲು
　　ಬಾರಿಸು ನೀ ಕೊಳಲ
ಲಯದ ಜತಿ ಜಾರದೊಲು
　　ಮೇಳಿಸು ಒಳಹೊಳಲ

ಎಂಬಲ್ಲಿ ಕಾವ್ಯಸೃಷ್ಟಿಯ ಬಗ್ಗೆ ಕವಿ ತನ್ನೊಡನೆ ತಾನೇ ನಡಿಸಿದ ಆಲೋಚನೆ ವಿಶಿಷ್ಟ ರೀತಿಯದು. ಈ ಕವಿತೆಯ ಮುಂದಿನ ಭಾಗದಲ್ಲಿ ಬರುವ 'ಉರಿ ಬರಲಿ, ಸಿರಿ ಬರಲಿ. ಸಾಗಲಿ ಸಮಯೋಗ' ಎಂಬುದು ಆಧ್ಯಾತ್ಮಿಕ ಭಾವವನ್ನು ಸ್ಫುರಿಸಿ ಚಿಂತನೆಗೆ ಹೆಚ್ಚಿನ ಮಹತ್ವವನ್ನು ತಂದುಕೊಡುತ್ತದೆ. ವಚನಕಾರರ ಅನುಭಾವ ನಿಷ್ಠೆ ಇಲ್ಲಿ ಕಾವ್ಯನಿಷ್ಠೆಯಾಗಿ ಅಧ್ಯಾತ್ಮಿಕ ಎತ್ತರವನ್ನು ಕವಿತೆ ಪಡೆಯುತ್ತದೆ. ಹಾಗಿದ್ದರೂ ಈ ಕವಿಯ ತಾತ್ತ್ವಿಕ ಚಿಂತನೆ ಈ ಲೋಕದಿಂದ ದೂರಸರಿಯುವುದಿಲ್ಲ.

ಜೀವನವಿದು ಪರಮಕಲೆ
ಅನುರಾಗವೆ ಮೂಲ–ಸೆಲೆ
ಪುಟಿದ ಹಾಗೆ ಹಾಡಿ ನಡೆ
　　ತನನ ತನನ ತೋಂ
　　ಬಂದ ಬದುಕೆ ಓಂ

ಎಂಬುದು ಜೀವನದ. ಅದರ ಅನುರಾಗದ. ಬದುಕಿನ ವಿಶೇಷ ಅರ್ಥವನ್ನು ಸ್ಫುರಿಸಿ ಬಾಳುವ ಕಲೆಗೇ ಒತ್ತುಕೊಡುತ್ತದೆ. 'ಅವನಾವ ಗಾರುಡಿಗ' ಎಂಬ ಕವಿತೆ ಮಾತ್ರ ದೇವರ ಬಗೆಗೆ. ಆತನ ಸೃಷ್ಟಿಯ ಬಗೆಗೆ ಅಚ್ಚರಿಯನ್ನು ವ್ಯಕ್ತಪಡಿಸಿ. ದೇವನ ಅಸ್ತಿತ್ವವನ್ನು ಶ್ರದ್ಧೆಯಿಂದ ಒಪ್ಪಿಕೊಳ್ಳುತ್ತದೆ. 'ಮಧುರಿಸು ಪ್ರಭು ಮನವನು' ಎಂಬ ಕವಿತೆಯಲ್ಲಿ ಕವಿಯ ಶ್ರದ್ಧಾಪೂರ್ಣ ಪ್ರಾರ್ಥನೆಯೇ ವ್ಯಕ್ತಗೊಂಡಿದೆ. ಈ ಬಗೆಯ ಕವಿತೆಗಳು ತಾತ್ವಿಕ ಹಾಗೂ ಆಧ್ಯಾತ್ಮಿಕ ಚಿಂತನೆಯಲ್ಲಿಯೇ ಸಮಾವೇಶಗೊಳ್ಳುತ್ತವೆಂದು ಬೇರೆ ಹೇಳಬೇಕಾಗಿಲ್ಲ.

ಕರ್ಕಿಯವರು ಕೆಲವು ವ್ಯಕ್ತಿಗಳನ್ನು ಕುರಿತು ಬರೆದ ಕವಿತೆಗಳು ಈ ಸಂಕಲನದಲ್ಲಿ ಇವೆ. 'ಗಾನದಲಿ ಮಲ್ಲಿಕಾರ್ಜುನರೆ ನೀವು' ಎಂಬ ಭಾರತೀಯ ಶ್ರೇಷ್ಠ ಗಾನಯೋಗಿಗಳಲ್ಲೊಬ್ಬರಾದ ಶ್ರೀ ಮಲ್ಲಿಕಾರ್ಜುನ ಮನ್ಸೂರ ಅವರನ್ನು ಕುರಿತು ಬರೆದ ಕವಿತೆ. 'ಜಚನಿ ರಚನ' ಎಂಬ ಡಾ॥ ಜ.ಚ.ನಿ. ಅವರ ಸಾಹಿತ್ಯ ಸಾಧನೆಯನ್ನು ಬಣ್ಣಿಸುವ ಕವಿತೆ, 'ಹೆಸರಿನಂತೆ ಹೃದಯ ಪದ್ಮ' ಎಂಬ ಅಂಗಡಿ ಪದ್ಮಾವತಿಯವರನ್ನು ಕುರಿತು ಬರೆದ ಕವಿತೆ ಇವು ಆಯಾ ವ್ಯಕ್ತಿಯ ವಿಶೇಷತೆಗಳನ್ನು ಸಾರ್ಥಕವಾಗಿ ಪ್ರತಿಬಿಂಬಿಸುತ್ತವೆ. ಚೆನ್ನವೀರ ಕಣವಿಯವರು ಸುನೀತಗಳಲ್ಲಿ ವ್ಯಕ್ತಿಚಿತ್ರಗಳನ್ನು ಕಟೆದು ನಿಲ್ಲಿಸುವುದರಲ್ಲಿ ಅಸಾಧಾರಣ ಕಲಾವಂತಿಕೆಯನ್ನು ತೋರಿಸಿರುವುದುಂಟು. ಕರ್ಕಿಯವರಲ್ಲಿ ಅಂಥ ಕಲೆ ಕಾಣುತ್ತಿಲ್ಲವಾದರೂ ಅವರು ತಮ್ಮ ರೀತಿಯಲ್ಲಿ ಒಂದು ಸಹಜ ಶಬ್ದಪ್ರತಿಮೆಯನ್ನು ನಿಲ್ಲಿಸಬಲ್ಲವರು.

ತಮ್ಮ ಆತ್ಮೀಯ ಬಳಗಕ್ಕೆ ಸಂಬಂಧಿಸಿದಂತೆ ಒಂದೆರಡು ಕವಿತೆಗಳನ್ನು ಕರ್ಕಿಯವರು ಬರೆದಿದ್ದು. ಅವುಗಳಲ್ಲಿ ಅವರ ಮಗು ಶೈಲಜಾಳನ್ನು ಕುರಿತು ಬರೆದ 'ಶೈಲನಂದಿನಿ' ಗಮನಾರ್ಹವಾದದ್ದಾಗಿದೆ. ಇಲ್ಲಿಯ ಕಲ್ಪನಾವಿನ್ಯಾಸ. ಪ್ರತಿಮಾ ಸಂವಿಧಾನ ಬೆರಗುಗೊಳಿಸುವಂತಹವು.

ಮೂಡಿದಳು ಬಾಲೆ ಕಲ್ಪನೆಯ ಗಿರಿಶೃಂಗದಲಿ
ಶೈಲಯೋಗಿಯ ಧವಳ ಧ್ಯಾನಜಾತೆ
ಮೇಲೆ ಹರಡಿದ ನೀಲನಭದಭವಸಂಗವನು
ಮೀಸಿದಳು ಹಾಸದಲಿ ವಿಶ್ವಮಾತೆ

....

ಹಿಮಗಿರಿಯ ಸುತ್ತಿದ ಅನಂತ ಅನುಪಮ ಶಾಂತ
ಶೂನ್ಯಕೆ ಸುಚೈತನ್ಯವೀಯಲೆಂದೇ
ಶೈಲದಲಿ ಎದ್ದು ಶುಭ್ರಾಭ್ರಶೋಭಿತ ಬಾಲೆ
ಎತ್ತಿದಳು ಜಗದ ಚಿತ್ತವನು ಬಾಂಗೆ.

ಒಂದು ಮಗುವಿನ ಜನನವನ್ನು ಇಷ್ಟು ಉದಾತ್ತವಾಗಿ ಹಾಗೂ ಕಲ್ಪನೆಯ ಪರಮೋಚ್ಚ ಶಿಖರವಾಗಿ ಬಣ್ಣಿಸುವ ಕವಿತೆಗಳು ಕನ್ನಡದಲ್ಲಿ ವಿರಳವೆಂದೇ ಹೇಳಬೇಕು. ನಮ್ಮ ಪಾರಂಪರಿಕ ಹಾಗೂ ಸಾಂಸ್ಕೃತಿಕ ಪ್ರಗಲ್ಭ ಜ್ಞಾನವಿಲ್ಲದೆ ಇಂಥ ಕವಿತೆ ಹುಟ್ಟಲಾರದು. ಇಲ್ಲಿಯ ಹಾಸು ಮತ್ತು ಬೀಸು, ಪದ–ಪದಗಳಲ್ಲಿ ತುಂಬಿತುಳುಕುವ ಅರ್ಥವ್ಯಾಪ್ತಿ ಅಗಾಧವಾದವು. ಕರ್ಕಿಯವರ ಈ ಬಗೆಯ ಕಾವ್ಯಸೃಷ್ಟಿ ಕನ್ನಡದ ಭಾವಗೀತ ಪ್ರಕಾರದ ಕಾವ್ಯಕ್ಕೇ ಒಂದು ಅನುಪಮ ಕೊಡುಗೆಯಾಗುವುದರಲ್ಲಿ ಸಂದೇಹವಿಲ್ಲ.

ಹೀಗೆ ಸಾಂಸ್ಕೃತಿಕ ಎತ್ತರದಲ್ಲಿ ನಿಂತು ಕಾವ್ಯ ರಚಿಸುವ ಕರ್ಕಿಯವರು ವಾಸ್ತವ ಬದುಕನ್ನೂ ಅಲಕ್ಷಿಸಿದವರಲ್ಲ, ನಾಗರಿಕ ಬದಲಾವಣೆಗಳನ್ನೂ ನಿರ್ಲಕ್ಷಿಸಿದವರಲ್ಲ. ಅಂಥ ಜೀವನವನ್ನು ಕುರಿತೂ ಅವರು ಕವಿತೆ ಬರೆದಿದ್ದಾರೆ. ವಾಸ್ತವ ಬದುಕಿಗೆ ಸಂಬಂಧಿಸಿದ ಒಂದೆರಡು ಕವಿತೆಗಳು ಪ್ರಗತಿಶೀಲ ಧೋರಣೆಯನ್ನೂ ಒಳಗೊಂಡಿರುವುದುಂಟು. ಧೋ ಧೋ ಧೋ ಎಂದು ಸುರಿವ ಮಳೆಯಲ್ಲಿ ದುಡಿಯುತ್ತಲೇ ಇರುವ ರೈತನ ಚಿತ್ರ 'ಕರ್ಮಯೋಗಿ' ಕವಿತೆಯಲ್ಲಿ ಮೂಡಿಬಂದಿದ್ದರೆ, ನಟ್ಟು ನಡು ಬೇಸಗೆಯ ನಡುಹಗಲಿನಲ್ಲಿ ಕಟ್ಟಿಗೆ ಒಡೆಯುತ್ತಿರುವ ಒಬ್ಬ ಬಡಮನುಷ್ಯನ ಸ್ಥಿತಿ–ಗತಿಗಳು 'ಇದೂ ಬಾಳು' ಎಂಬ ಕವಿತೆಯಲ್ಲಿ ಚಿತ್ರಿತವಾಗಿವೆ. ಈ ಕವಿತೆಗಳು ಬಡವರ ಬಗೆಗೆ ಸಹಾನುಭೂತಿ, ಅನುಕಂಪಗಳನ್ನು ನಿಶ್ಚಿತವಾಗಿ ಹುಟ್ಟಿಸುತ್ತವೆ. ಕವಿಯ ಕಾವ್ಯ ರಚನೆಯ ಉದ್ದೇಶವೂ ಅದೇ ಆಗಿದೆ. ಒಂದು ಮಾತು ಮಾತ್ರ ನಿಜ, ಯಾವುದೋ ಒಂದು ವಾದಕ್ಕೆ ಕಟ್ಟುಬಿದ್ದು ಬರೆದ ಕವಿತೆಗಳು ಇವಲ್ಲ. ಕಂಡ ದೃಶ್ಯವನ್ನು ಭಾವಪೂರ್ಣವಾಗಿ ಚಿತ್ರಿಸಬೇಕೆನ್ನುವ ಆಶಯವೇ ಇಲ್ಲಿ ಮುಖ್ಯವಾದುದು.

ನಾಗರಿಕತೆಯ ಹಾಗೂ ವೈಜ್ಞಾನಿಕ ಬದಲಾವಣೆಗಳನ್ನು ಚಿತ್ರಿಸುವ ಕವಿತೆಗಳೂ ಒಂದೊಂದು ದೃಷ್ಟಿಯಿಂದ ಮಹತ್ವದವಾಗಿವೆ. 'ಮುಗಿಲ ಸೋಗಿ'ಯಲ್ಲಿ ವಿಮಾನದ ಹಾರಾಟವನ್ನು ಗಮನಿಸಿ, ಈ ನೆಲದ ಬದುಕೇ ಅದಕ್ಕಿಂತ ಮಿಗಿಲಾದದ್ದೆಂದು ತೀರ್ಮಾನಿಸಲಾಗಿದೆ. ಇದು ಪರ್ಯಾಯವಾಗಿ ಎರಡು ವರ್ಗಗಳ (ವಿಮಾನದಲ್ಲಿ ಕುಳಿತು ಹಾರಾಡುವವರ, ಮಣ್ಣಿನ ಮಕ್ಕಳ) ಜನರ ಜೀವನದ ಅಂತರವನ್ನು ಸೂಚಿಸುತ್ತದೆ.

ಮುಂದೆ ಹೋಗಿಹೆವೆಂದು ಜಂಭಕೊಚ್ಚುವ ಜನರ
ಬೆಡಗು ಬಿನ್ನಾಣ ಬರಿ ಚಾಕಚಕ್ಯ
ನಂಬಿರುವ ನೆಲದಲ್ಲಿ ತುಂಬಿದಾರೋಗ್ಯದಲಿ
ಬಯಲನಾಳುವ ಜನರ ಬಯಕೆ ಸೌಖ್ಯ.

ಈ ನುಡಿಯಲ್ಲಿ ಬಣ್ಣಿಸಲಾದ ಪರಸ್ಪರರ ವ್ಯತ್ಯಾಸದಲ್ಲಿ ಕವಿಯ ಧೋರಣೆ ಏನೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. 'ಎರಡು ಗಾಲಿ ಮೂರು ಜೀವ' ಎಂಬುದು ಇಂದಿನ

ನಾಗರಿಕ ಜೀವನದ ಇನ್ನೊಂದು ಬದಲಾವಣೆಯನ್ನು ಚಿತ್ರಿಸುತ್ತದೆ. ಇದು ಸರಸ ಭಾವದಿಂದ ಪ್ರೇರಿತವಾದದ್ದು ಅಷ್ಟೆ :

ಎರಡು ಗಾಲಿ, ಮೇಲೆ ನೋಡು
ಮೂರು ಜೀವದಾಟ

....

ಮುಂದೆ ಪತಿ, ಹಿಂದೆ ಸತಿ
ನಡುವೆ ನಗುವ ಕಂದ

....

ನವ್ಯಯುಗದ ನಗರಗಳಲಿ
ಕಣ್ ಸೆಳೆಯುವ ಚಿತ್ರ
ನಾಳೆ ಎಂಬ ಭ್ರಾಂತಿ ಏಕೆ
ತಾ ಸ್ಕೂಟರ್ ಇತ್ತ
ಬಾಳಿದು ಸವಿ, ಸತ್ಯ

ಓದಿದೊಡನೆ ರಂಜಿಸಿ, ಖುಷಿಕೊಡುವ ಗುಣ ಈ ಕವಿತೆಗುಂಟು. ಇಂಥ ಕವಿತೆಗಳು ಕರ್ಕಿಯವರ ಕಾವ್ಯಸೃಷ್ಟಿಯಲ್ಲಿ ಬಹಳಷ್ಟಿಲ್ಲ.

ನವೋದಯದ ಎಲ್ಲ ಕವಿಗಳಂತೆ ಕರ್ಕಿಯವರು ಮೊದಲಿನಿಂದ ನಾಡಿನ. ರಾಷ್ಟ್ರದ ಘನತೆಯನ್ನು ಬಣ್ಣಿಸುತ್ತ ಬಂದವರು. ಮಹಾಪುರುಷರ ಬಗ್ಗೆಯೂ ಗೌರವದಿಂದ ಶ್ರದ್ಧಾಗೀತೆಗಳನ್ನು ಬರೆದವರು. ಪ್ರಸ್ತುತ ಸಂಕಲನದಲ್ಲಿ ಬಸವಣ್ಣ, ನೀಲಾಂಬಿಕೆ. ಕಿತ್ತೂರ ಚೆನ್ನಮ್ಮ, ಬಾಪು–ನೆಹರು (ಚಿತ್ರಪ್ರೇರಿತ) ಅವರನ್ನು ಕುರಿತಾದ ಕವಿತೆಗಳಿವೆ. ಈ ಎಲ್ಲ ಕವಿತೆಗಳು ತಮ್ಮ ತಮ್ಮ ರೀತಿಯಲ್ಲಿ ಅರ್ಥಪೂರ್ಣವಾದವು. ಗಾಂಧೀಜಿ ಮತ್ತು ನೆಹರು ಅವರ ವ್ಯಕ್ತಿತ್ವದ ವಿಶೇಷತೆಗಳನ್ನು ಸ್ವಲ್ಪದರಲ್ಲಿಯೇ ಸ್ವಾರಸ್ಯಕರವಾಗಿ ಚಿತ್ರಿಸುವ 'ಯುಗ ಅಮೋಘ' ಕವಿತೆಯ ಕೆಲವು ಚರಣಗಳನ್ನು ಇಲ್ಲಿ ಉದಾಹರಣೆಗಾಗಿ ನೋಡಬಹುದು :

ಸತ್ಯದಲಿ ಕರುಣೆ ಕಿರಣಿಸಿದ ರೀತಿ
ಇದು ಬಾಪು ಬಾಳ ಮಹತಿ
ಹಸನಾದ ನಗೆಗೆ ಬಗೆ ತೆರೆಯ ನೆಹರು
ಮುಖಮುಖದೊಳಮಿತ ಶಾಂತಿ
....

ಗಾಂಧೀಜಿ ಇವರು, ಬಳಿ ಇವರು ನೆಹರು
ನಮಗಿರುವ ನೆನಪು ನವಿರು !
ಸತ್ಯಕ್ಕೆ ಮತ್ತು ಸಾಹಸಕೆ ಸ್ನೇಹ
ಕೂಡಿದರೆ ಜಗಕೆ ಹೊಗರು.

ಇಂಥ ಕವಿತೆಯನ್ನು ಓದುವಾಗ ಆ ಆ ವ್ಯಕ್ತಿಗಳ ಜೀವನಾದರ್ಶಗಳು ನಮ್ಮ ಕಣ್ಣ ಮುಂದೆ ಬಂದು ಹೋಗುತ್ತವೆ. ಯಾವ ಆಡಂಬರವೂ ಇಲ್ಲದ ಇಂಥ ಸರಳ ಹಾಗೂ ಪಾದರ್ಶಕ ಕವಿತೆಗಳು ಪಂಡಿತರಲ್ಲದವರನ್ನೂ ಸಹಜವಾಗಿಯೇ ತಣಿಸುತ್ತವೆ. ಆ ದೃಷ್ಟಿಯಿಂದ ಕರ್ಕಿಯವರ ಈ ಬಗೆಯ ಕಾವ್ಯಸೃಷ್ಟಿಗೂ ಮಹತ್ವದ ಬೆಲೆಯುಂಟು.

'ಕರಿಕೆ–ಕಣಗಿಲು' ಸಂಗ್ರಹದಲ್ಲಿ ಇನ್ನೂ ಹಲಾವರು ವಸ್ತುಗಳನ್ನು ಪ್ರತಿಬಿಂಬಿಸುವ ಕವಿತೆಗಳಿವೆ. ಆ ಎಲ್ಲ ಕವಿತೆಗಳಲ್ಲಿಯೂ ಕರ್ಕಿಯವರ ಕುಸುರಿನ ಕೆಲಸವಿರುವುದನ್ನು ಕಾಣಬಹುದು.

ಹಲವು ಬಗೆಯ ವಸ್ತುಗಳನ್ನು ಕಾವ್ಯವಾಗಿಸುವ ಕರ್ಕಿಯವರು ಸ್ವಭಾವತಃ ಕೋಮಲ ಪ್ರಕೃತಿಯವರೆಂಬುದನ್ನು ಇಲ್ಲಿಯ ಕವಿತೆಗಳು ತೋರಿಸಿಕೊಡುತ್ತವೆ. ನಯವಾದ, ಮೃದುವಾದ ಪದಗಳು ಕರ್ಕಿಯವರ ಸೊತ್ತಾಗಿದ್ದು, ಅವರು ಅವುಗಳನ್ನು ಲೀಲಾಜಾಲವಾಗಿ ಬಳಸಿಕೊಳ್ಳುತ್ತಾರೆ. ದ್ವಿತ್ವ ಪದಗಳನ್ನು ಅವರು ಸಾಧ್ಯವಿದ್ದಷ್ಟೂ ಬಿಟ್ಟುಬಿಡುತ್ತಾರೆ. ಕಾವ್ಯದ ಬಂಧದಲ್ಲಿ ವೈವಿಧ್ಯವಿರುವುದರೊಂದಿಗೆ ರೇಶಿಮೆಯಂಥ ನಯಗಾರಿಕೆಯೂ ಇದೆ. ಒರಟು, ಕಟುತ್ವ, ರೊಚ್ಚು, ರೋಷ ಇವು ಅವರ ಸಮೀಪಕ್ಕೆ ಸುಳಿಯಲಾರವು. ಸುಲಿದ ಬಾಳೆಯ ಹಣ್ಣಿನಂಥ, ಅಳಿದ ಉಷ್ಣದ ಹಾಲಿನಂಥ ಮಾಧುರ್ಯ ಅವರ ಕಾವ್ಯಕ್ಕಿದೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗದು. ರಮ್ಯ ಸಂಪ್ರದಾಯದ ಸುಸಂಸ್ಕೃತ ಹಿರಿಯ ಕವಿಯ ಮನಸ್ಸು ಎಷ್ಟು ಪಕ್ವವಾದದ್ದು ಎಂಬುದನ್ನು ನೋಡಬಯಸುವವರು ಕರ್ಕಿಯವರ ಕವಿತೆಗಳನ್ನು ಒಮ್ಮೆ ಓದಬೇಕು ಎಂದು ಬೆರಳಿಟ್ಟು ತೋರಿಸುವಷ್ಟು ಅವರ ಕವಿತೆಗಳ ವೈಶಿಷ್ಟ್ಯವಿದೆ. ಕಾಲಮಾನದ ಹಾಗೂ ಕಾವ್ಯದ ಬದಲಾವಣೆ ಏನೇ ಇರಲಿ, ಕರ್ಕಿಯವರ ಕವಿತೆಗಳಿಗೆ ಅವುಗಳದೇ ಆದ ಶುಚಿ, ರುಚಿ ಇರುವುದನ್ನು ಕಾವ್ಯ ರಸಿಕರು ಗುರುತಿಸದೇ ಇರಲಾರರು.

● ●

ವೀರಶೈವ ಸಾಹಿತ್ಯ ಮತ್ತು ಶಾಸ್ತ್ರಸಾಹಿತ್ಯ

● ವಿ. ಎಸ್. ಕಂಬಿ

೧. ಸಾಹಿತ್ಯ ಮತ್ತು ಶಾಸ್ತ್ರಸಾಹಿತ್ಯ :

ಲಾಕ್ಷಣಿಕರು ಸಾಹಿತ್ಯ ಮತ್ತು ಶಾಸ್ತ್ರಸಾಹಿತ್ಯವನ್ನು ಪ್ರತ್ಯೇಕವಾಗಿಯೇ ಲಕ್ಷಣಿಸಿದ್ದಾರೆ. ಸಾಹಿತ್ಯವು ಕಾಂತಾಸಮ್ಮಿತವೆಂದು ಲಕ್ಷಣಿಸಿದರೆ ಶಾಸ್ತ್ರಸಾಹಿತ್ಯವು ಗುರುಸಮ್ಮಿತವೆಂದು ಲಕ್ಷಣಿಸುತ್ತಾರೆ. ಆದುದರಿಂದ ಒಂದು ಇನ್ನೊಂದರಿಂದ ಬೇರೆ ಎಂಬುದು ಸ್ಪಷ್ಟವಾಗುತ್ತದೆ. ಸಾಹಿತ್ಯದ ಒಂದಿಲ್ಲೊಂದಂಗವನ್ನು ಅಕ್ಷರಸ್ಥರು ಓದಬಲ್ಲರು· ಸಂತೋಷಪಡಬಲ್ಲರು. ಗುರುಸಮ್ಮಿತವಾದ ಶಾಸ್ತ್ರಸಾಹಿತ್ಯದಲ್ಲಿ ಕೂಡ ನಾನಾ ಪ್ರಕಾರಗಳಿವೆ: ಸೂತ್ರಗಳು. ಕಾರಿಕಾ ಅಥವಾ ವೃತ್ತಿ ಇಲ್ಲವೆ ಕಾಳಿಕಾ, ಭಾಷ್ಯ, ವ್ಯಾಖ್ಯಾನ. ವಾರ್ತಿಕ ಮತ್ತು ಪ್ರಕರಣ ಎಂದು. ಸಾಹಿತ್ಯಾಂಗಗಳನ್ನು ಲಕ್ಷಣಿಸಿರುವಂತೆ ಶಾಸ್ತ್ರಾಂಗಗಳನ್ನೂ ಲಕ್ಷಣಿಸಿದ್ದಾರೆ. ಶಾಸ್ತ್ರ ಸಾಹಿತ್ಯಾಂಗಗಳನ್ನು ಅಕ್ಷರಸ್ಥರಾದಮಾತ್ರಕ್ಕೆ ಓದುವದು ಸುಲಭವಲ್ಲ. ಇವುಗಳ ಅಧ್ಯಯನಕ್ಕೆ ವಿಶೇಷವಾದ ತರಬೇತಿ ಅವಶ್ಯವಿರುತ್ತದೆ· ಇದಕ್ಕೆ ಸಾಕ್ಷಿಯಾಗಿ ಒಂದು ಉದಾಹರಣೆಯನ್ನು ಇಲ್ಲಿ ಕೊಡಬಹುದು.

> ನಾ ನೀನೆಂಬ ಭೇದ ಅಂದೂ ಇಲ್ಲ. ಇಂದೂ ಇಲ್ಲ;
> ಸಾಲೋಕ್ಯನಲ್ಲ, ಸಾಮೀಪ್ಯನಲ್ಲ ಶರಣ;
> ಸಾರೂಪ್ಯನಲ್ಲ ಶರಣ, ಸಾಯುಜ್ಯನಲ್ಲ ಶರಣ;
> ಸಕಾಯನಲ್ಲ. ಅಕಾಯನಲ್ಲ ಗುಹೇಶ್ವರಲಿಂಗ ತಾನೆಯಾಗಿ[೧].

ಇದು ಕನ್ನಡಭಾಷೆಯಲ್ಲಿರುವ ವಚನ. ಕನ್ನಡ ಸಾಹಿತ್ಯಾಂಗಗಳ ಪರಿಜ್ಞಾನವಿದೆಯೆಂದ ಮಾತ್ರಕ್ಕೆ ಈ ವಚನದ ವಿವರಣೆ ಸಾಧ್ಯವೆಂದು ಹೇಳಬೇಕಿಲ್ಲ. ಇದರ ವಿಶ್ಲೇಷಣೆ. ಸಂಶ್ಲೇಷಣೆಗಳಿಗೆ ಬೇಕಾದ ಸಲಕರಣೆಗಳೇ ಬೇರೆ. ಮೊದಲನೆಯ ಸಾಲಿನ ವಿವರಣೆಗೆ ಹಾಗೂ ತೌಲನಿಕ ಪ್ರತಿಪಾದನೆಗೆ ಆಸ್ತಿಕ ದರ್ಶನಗಳ, ನಾಸ್ತಿಕ ದರ್ಶನಗಳ ವಸ್ತುಸಿದ್ಧಾಂತ. ಸೃಷ್ಟಿಸಿದ್ಧಾಂತಗಳ ಚಿಂತನ. ಮಂಥನ ಬೇಕು. ಎರಡನೆಯ ಸಾಲಿನ ವಿವರಣೆಗೆ

೧. ಎಂ. ಎಲ್. ಬಸವರಾಜು : ಅಲ್ಲಮನ ವಚನಚಂದ್ರಿಕೆ. ಪು. ೧೫೦. ವ. ೬೪೯

ಆಸ್ತಿಕ ದರ್ಶನಗಳು ಪ್ರತಿಪಾದಿಸುವ ಮುಕ್ತಿಯ ಸಿದ್ಧಾಂತಗಳ ಪ್ರಭೇದಗಳು ಹಾಗೂ ಅವುಗಳ ದೃಷ್ಟಿಕೋನದಲ್ಲಿರುವ ಅಂತರಕ್ಕೆ ಕಾರಣವಾದ ವಸ್ತುಸಿದ್ಧಾಂತದ ಪರಿಜ್ಞಾನವೂ ಇರಬೇಕು. ಅನೇರೀತಿ ನಾಸ್ತಿಕ ದರ್ಶನಗಳು ಇವುಗಳ ಬಗ್ಗೆ ತಳೆದ ನಿಲುವಿನ ಮತ್ತು ಅವು ಪ್ರತಿಪಾದಿಸುವ ಸಿದ್ಧಾಂತಗಳ ಜ್ಞಾನವಿರಬೇಕು. ಕೊನೆಯ ಸಾಲಿನ ವಿವರಣೆಗೆ ಭಾರತೀಯ ದರ್ಶನದಲ್ಲಿ ಬರುವ ಕಾಯಸಿದ್ಧಾಂತದ ಜ್ಞಾನಬೇಕು. ಇಂಥವೇ ವಿಚಾರಗಳನ್ನು ಪಾಶ್ಚಿಮಾತ್ಯ ದಾರ್ಶನಿಕರು ಮಾಡಿದ್ದಾರೆಯೆ ? ಹಾಗಿದ್ದರೆ ಅವರ ಪ್ರಣಾಲಿಗಳಿಗೂ ಭಾರತೀಯರ ಪ್ರಣಾಲಿಗಳಿಗೂ ಇರುವ ಸಾಮ್ಯವೈಷಮ್ಯಗಳೇನು ? ಎಂಬ ಪರಿಜ್ಞಾನಬೇಕು. ಅಂದರೇನೇ ಈ ವಚನದ ವಿಚಾರವೈಶಾಲ್ಯ ಹಾಗೂ ಅಲ್ಲಿಯ ತೌಲನಿಕ ದಾರ್ಶನಿಕ ಕೋನದ ಪರಿಚಯ ಮಾಡಿಕೊಡುವುದು ಸಾಧ್ಯ. ಇಲ್ಲವಾದರೆ ಈ ವಚನವು ಭದ್ರವಾಗಿ ಮುದ್ರೆಗೊಂಡ ಭಂಡಾರವು. ಆದ ಕಾರಣ, ಸಾಹಿತ್ಯ ಪರಿಣತನಿಗಿರುವ ಸಲಕರಣೆಗಳು, ಶಾಸ್ತ್ರಸಾಹಿತ್ಯಪರಿಣತನಿಗಿರುವ ಸಲಕರಣೆಗಳು ಬೇರೆ ಬೇರೆ.

ಸಾಹಿತ್ಯಪರಿಣತರು ಮತಶಾಸ್ತ್ರ ಸಾಹಿತ್ಯವನ್ನು ವಿವರಿಸಲು ಹೋದಾಗ ಅವರಿಗೆ ಆಯಾ ಮತಶಾಸ್ತ್ರ ಸಿದ್ಧಾಂತಗಳ ಸೂಕ್ಷ್ಮಪ್ರಭೇದಗಳ ಪರಿಜ್ಞಾನವಿಲ್ಲದೆ ಇರುವುದು ಸ್ವಾಭಾವಿಕವಾಗಿರುವುದರಿಂದ ದೋಷಪೂರ್ಣವಾದ ವಿವರಣೆ ಕೊಡುವ ಸಂಭವ ಹೆಚ್ಚು. ವೀರಶೈವ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿಯ ಒಂದು ಅಂಗವಹುದು. ಆ ಸಾಹಿತ್ಯದಲ್ಲಿ ಬರುವ ಲಿಂಗ ಮತ್ತು ಅಂಗವೆಂಬ ಪದಗಳನ್ನು ಸಾಂಖ್ಯಶಾಸ್ತ್ರದಲ್ಲಿಯ ಪುರುಷ ಮತ್ತು ಪ್ರಕೃತಿಗಳು ಎಂದು ಸುಲಭವಾಗಿ, ಸಂಕೋಚವಿಲ್ಲದೆ ಹೇಳುವರು (ಹೇಳಿದವರೂ ಇದ್ದಾರೆ). ಇದು ದೋಷಪೂರ್ಣ ವಿವರಣೆ. ಇದು ಸಾಹಿತ್ಯ ಪರಿಣತಿ, ಶಾಸ್ತ್ರ ಸಾಹಿತ್ಯ ಪರಿಣತಿಗಳು ಭಿನ್ನ ಭಿನ್ನವೆಂಬುದನ್ನು ತೋರಿಸುತ್ತದೆ.

೨. ವೀರಶೈವ ಸಾಹಿತ್ಯಲಕ್ಷಣ, ವೀರಶೈವ ಶಾಸ್ತ್ರಸಾಹಿತ್ಯಲಕ್ಷಣ :

ಹರಿಹರಾದಿ ಮಹಾಕವಿಗಳು ಕನ್ನಡ ಸಾಹಿತ್ಯದಲ್ಲಿ ಕ್ರಾಂತಿ ಕವಿಗಳೆಂದು ಸುಪ್ರಸಿದ್ಧ. ಅವರು ವೀರಶೈವ ಸಾಹಿತ್ಯದ ವಿಶಿಷ್ಟ ಲಕ್ಷಣವನ್ನು, ಕಾವ್ಯಪ್ರತಿಭೆಯ ಸಾರ್ಥಕತೆಯನ್ನು ಅನುಕ್ರಮವಾಗಿ ಹೀಗೆ ಲಕ್ಷಿಸುತ್ತಾರೆ :

ಮನುಜರಮೇಲೆ ಸಾವವರಮೇಲೆ ಕಸಿಷ್ಟರಮೇಲೆ ಪದ್ಯಮಂ
ತನತನಗಿಂದ್ರ ಚಂದ್ರ ರವಿ ಕರ್ಣ ದಧೀಚಿ ಬಲೀಂದ್ರರೆಂದು ತಾ
ನನವೆರತಂ ಪೊಗಳ್ದು ಕೆಡಬೇಡೆಲೆ ಮಾನವ ನೀನಹರ್ನಿಶಂ
ನೆನೆ ಪೊಗಳರ್ಚಿಸೆಮ್ಮ ಕಡು ಸೊಂಪಿನ ಪೆಂಪಿನ ಹಂಪೆಯಾಳ್ದನಂ[೨]

---

೨. ಎಸ್. ಎಸ್. ಮಾಳವಾಡ : ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ. ಪು. ೭೩.

ಈ ಪದ್ಯವು ಕಾವ್ಯವಸ್ತುವು ಯಾವುದಾಗಿರಬಾರದು ಎಂದು ತಿಳಿಸುವದಲ್ಲದೆ ಅದರ ವಸ್ತುವು ಯಾವುದಾಗಿರಬೇಕು ಎಂಬುದನ್ನೂ ಪ್ರತಿಪಾದಿಸುತ್ತದೆ. ವೀರಶೈವ ಸಾಹಿತಿಯಾದವನು ಪರಿಪಾಲಿಸಬೇಕಾದ ಬೇಡ ಹಾಗೂ ಬೇಕುಗಳು ಇಲ್ಲಿ ಶಾಸನದಂತೆ ಇವೆ. ಇವನ ನಂತರದ ವೀರಶೈವ ಕವಿಗಳು ಈ ಶಾಸನಕಾರನ ಆಜ್ಞೆಯಂತೆ ವರ್ತಿಸಿದ್ದಾರೆ. ಇವೇ ವಿಚಾರ ಪರಿಪೋಷಕವಾಗಿ, ಕವಿಯು ತನಗಿರುವ ಪ್ರತಿಭೆಯ ಸಾರ್ಥಕತೆ ಎಲ್ಲಿದೆ ಎಂಬುದನ್ನು ಅರಿತುಕೊಂಡವನಾಗಿರಬೇಕು ಎಂಬುದನ್ನು ಮುಂದಿನ ಪದ್ಯವು ಚಿತ್ರಿಸುತ್ತದೆ.

ರಸೆಯೊಳ್ ರಸವತ್ಕವಿತೆಯ
ನುಸುರಲ್ಪಡೆದಸಮಸಯನಸಂ ಪೊಗಳದೆ ಮಾ
ನಿಸರಂ ಸುರರಂ ಪೊಗಳ್ವುದು
ಕಸವರಮಂ ಕಳೆದು ಕಸವನಾಂತವೊಲಕ್ಕುಂ[೩]

ವೀರಶೈವ ಸಾಹಿತ್ಯ ವಿದ್ಯಾರ್ಥಿಗಳು ಈ ಎರಡು ಪದ್ಯಗಳಿಂದ ವೀರಶೈವ ಸಾಹಿತ್ಯವು ಜೈನ ಮತ್ತು ವೈಷ್ಣವ ಸಾಹಿತ್ಯಗಳಿಂದ ಯಾಕೆ ಭಿನ್ನವಾಗಿದೆಯೆಂಬುದನ್ನು ತಿಳಿದುಕೊಳ್ಳಬಹುದು. ಈ ಮೂರೂ ಪ್ರಕಾರದ ಕನ್ನಡ ಸಾಹಿತ್ಯವನ್ನು ಸಾಹಿತ್ಯ ವಿದ್ಯಾರ್ಥಿಗಳು ಛಂದಸ್ಸು, ಅಲಂಕಾರ, ಪಾತ್ರಸೃಷ್ಟಿ, ಶೈಲಿ ಮುಂತಾದ ದೃಷ್ಟಿಯಿಂದ ಅಧ್ಯಯನ. ಬೋಧನ ಹಾಗೂ ಸಂಶೋಧನ ಮಾಡಬಹುದು.

ವೀರಶೈವ ಶಾಸ್ತ್ರ ಸಾಹಿತ್ಯವೆಂದಾಗ ಅದರ ಲಕ್ಷಣ, ಅದರ ಅಧ್ಯಯನ ಮೇಲಿನ ರೀತಿಯಿಂದ ಭಿನ್ನ. ಶಿವಶರಣರು ಶಾಸ್ತ್ರಸಾಹಿತ್ಯದ ಬಗ್ಗೆ ಒಂದೊಂದು ಮಾತುಗಳನ್ನು ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಅವರ ಮಾತುಗಳಿಂದ ಅವರಿಗಿರುವ ಅಗಾಧವಾದ ಶಾಸ್ತ್ರಜ್ಞಾನದ ಪರಿಚಯವು ನಮಗಾಗುತ್ತದೆ. ಬಸವಣ್ಣನವರು. ಪ್ರಭುದೇವರು. ಜೇಡರ ದಾಸಿಮಯ್ಯಗಳು ಮುಂತಾದವರ ಮಾತುಗಳನ್ನು ಇಲ್ಲಿ ಉದ್ಧರಿಸಬಹುದು:

(೧) ಮಾತೆಂಬುದು ಜ್ಯೋತಿರ್ಲಿಂಗ.

(೨) ಶಬ್ದ ಸೋಪಾನವ ಕಟ್ಟಿ ನಡೆಸಿದರು ಪುರಾತನರು ದೇವಲೋಕಕ್ಕೆ ಬಟ್ಟೆ ಕಾಣಿರೋ.

(೩) ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು.

(೪) ಒಡಲೆಂಬ ಬಂಡಿಗೆ ಶರಣರ ನುಡಿಗಡಣವೆ ಕಡೆಗೀಲು.

೩ ಸಂ. ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ: ರಾಜಶೇಖರ ವಿಳಾಸ, ಪು. ೯

ಮೊದಲನೆಯ ಮಾತು ಪ್ರಭುದೇವರದು. ಇದು ಅಧ್ಯಾತ್ಮ ತತ್ವಪ್ರತಿಪಾದನೆ ಮಾಡುತ್ತದೆ. ಇದು ಪ್ರಭುದೇವರು ಪ್ರತಿಪಾದಿಸುವ ದಾರ್ಶನಿಕ ದೃಷ್ಟಿಕೋನಗಳಲ್ಲಿ ಒಂದಾಗಿರುವದೆಂಬುದನ್ನು ತಿಳಿಸುವದು. ವಚನಕಾರರಲ್ಲಿ ಬಸವಣ್ಣನವರು ಮೊದಲಾದವರು ಇದನ್ನು ಪ್ರತಿಪಾದಿಸಿದ್ದಾರೆಂಬುದನ್ನು ಇಲ್ಲಿ ಸ್ಮರಿಸಿಕೊಂಡಾಗ ಬಹುತೇಕ ವಚನಕಾರರ ದಾರ್ಶನಿಕ ದೃಷ್ಟಿಕೋನವಿದಾಗಿದೆಯೆಂಬುದು ಖಚಿತವಾಗುತ್ತದೆ. ಎರಡನೆಯದು ಚನ್ನಬಸವಣ್ಣನವರ ಮಾತು. ಇವರು ಶಬ್ದವೆಂಬುದು ಸೋಪಾನ ಅಂದರೆ ಮುಕ್ತಿಯ ಉಪಾಯವೆಂದು ತಿಳಿಸಿದ್ದಾರೆ. ಮೊದಲಿನ ಮಾತಿಗೆ ಅನುಗುಣವಾಗಿಯೇ ಈ ವಿಚಾರವಿದೆ. ಅಧ್ಯಾತ್ಮ ತತ್ವ ಮತ್ತು ಅದರ ಸಿದ್ಧಿಯ ಉಪಾಯಗಳು ಒಂದನ್ನೊಂದು ಅರ್ಥಮಾಡಿಕೊಳ್ಳಲು ಸಹಾಯಕವಾಗಿವೆ ಶಾಸ್ತ್ರಾರ್ಥದಲ್ಲಿ ಎಂಬುದನು ಚೆನ್ನಬಸವಣ್ಣನವರ ಮಾತು ತಿಳಿಸುತ್ತದೆ. ಮೂರನೆಯ ಮಾತು ಬಸವಣ್ಣನವರದು. ಈ ಮಾತಿನ ಪ್ರಕಾರ, ಶಬ್ದವು ಅಂತರ್ವಾಣಿ ಇಲ್ಲವೆ ಆತ್ಮವೆಂಬ ಲಿಂಗ ಸಮ್ಮತವಾಗಿರಬೇಕು ಎಂಬುದು. ಶಬ್ದವು ಜ್ಯೋತಿರ್ಲಿಂಗವೆಂದು ಪ್ರಭುಸಮ್ಮಿತವಿಲ್ಲಿ ಇನ್ನೊಂದು ರೂಪ ತಾಳಿ ಬಂದಿದೆ. ಲಿಂಗ ಮೆಚ್ಚಬೇಕು ಮಾತನ್ನು ಅಂದರೆ, ಮಾತು ಜ್ಯೋತಿರ್ಲಿಂಗವಾಗದೆ ಅದೆಂತು ಮೆಚ್ಚುವುದು? ಇದನ್ನು ನಾವು ಸ್ವತಃ ಪ್ರಾಮಾಣ್ಯವೆಂದು ಪ್ರಮಾಣ ಪರಿಭಾಷೆಯಲ್ಲಿ ಹೇಳಬಹುದು. ವಚನಕಾರರ ಈ ಏಕೇಶ್ವರವಾದವು ಅದ್ವೈತಾತ್ಮಕವಾಗಿರುವುದರಿಂದ ಇದರ ಪ್ರಮಾಣ ವಿಚಾರವು ಸ್ವತಃ ಪ್ರಾಮಾಣ್ಯವನ್ನೇ ಒಪ್ಪುತ್ತದೆ ಎಂಬ ಮೇಲಿನ ವಿವರಣೆಯನ್ನು ಎತ್ತಿ ಹಿಡಿಯುತ್ತದೆ. ನಾಲ್ಕನೆಯ ಮಾತು ಜೇಡರ ದಾಸಿಮಾರ್ಯರದು. ಜೀವನವು ಸರಿಯಾದ ದಾರಿಯಲ್ಲಿ ಕ್ರಮಿಸುವಾಗ ಸುರಕ್ಷಿತವಾಗಿ ಕ್ರಮಿಸಬೇಕೆಂದರೆ ಶರಣರ ಮಾತೆಂಬ ಕಡೆಗೋಲಿನ ಅವಶ್ಯಕತೆಯಿದೆ ಎಂಬುದನ್ನು ಎತ್ತಿ ತೋರಿಸುವದು. ಇದು ಶಾಸನ ಹಾಗೂ ತ್ರಾಣಗಳು ಎರಡೂ ಆಗಿರುವದನ್ನು ತಿಳಿಸುತ್ತದೆ. ಹೀಗೆ ವಚನಕಾರರು ಶಾಸ್ತ್ರದ ವಸ್ತು, ಆ ವಸ್ತುವಿನ ಸಿದ್ಧಿಯ ಉಪಾಯ ಹಾಗೂ ಅದು ಸ್ವತಃ ಪ್ರಾಮಾಣ್ಯವಾಗಿದ್ದು ಶಾಸನಾತ್ಮಕವೆಂಬ ವಿವಿಧ ವಿವರಣೆಗಳನ್ನು ಕೊಟ್ಟು ತಿಳಿಸಿದ್ದಾರೆ. ಅದರ ವಿವಿಧ ಮುಖಗಳ ಅಧ್ಯಯನ, ಶೋಧನ ಮತ್ತು ಸಂಶೋಧನ ಮಾಡುವದರ ಕ್ಷೇತ್ರಗಳ ಎಲ್ಲೆಗಳನ್ನು ಗುರುತಿಸಿ ಮಾರ್ಗದರ್ಶನ ಮಾಡಿದ್ದಾರೆ.

೩ ವೀರಶೈವ ಶಾಸ್ತ್ರ ಸಾಹಿತ್ಯದ ಪ್ರಕಾರಗಳು :

ಶ್ರೀ ವಿಶುದ್ಧ ಪ್ರಕರಣಂಗಳನೆಸಗಿ ವೇದ
ಶೈವ ತಂತ್ರಾವಳಿಗೆ ಭಾಷ್ಯಮಂ ಟೀಕೆಯು
ನಾವೃತ್ತಿಯುಂ ವ್ಯಾಖ್ಯೆಯುಮಂ ಬರೆದ ಬೋಧಾಯನಾಯನೂರು
ಶಂಕರಾರ್ಯರ್ಗಂ ।

> ವೋವೊ ಹರದತ್ತರ್ ತ್ರಿಲೋಚನಾಘೋರಶಿವ
> ದೇವಗುಣನಿಲಯ ಸರ್ವಾತ್ಮ ಶಂಭುಗಳಾನ
> ತಾವನರ್ ಭೂತಿಕಂಠಾದಿ ಪೂರ್ವಾಚಾರ್ಯರೀವುದೆಮಗಮಲ
> ಮತಿಯುಮ್ ॥[೪]

ಎಂಬ ಪದ್ಯವನ್ನು ಬರೆದ ಪದ್ಮಣಾಂಕ ಕವಿಯು ವೀರಶೈವ ಶಾಸ್ತ್ರಸಾಹಿತ್ಯ ಪ್ರಭೇದಗಳನ್ನು ಉಲ್ಲೇಖಿಸಿದ್ದಾನೆ. ಆ ಪ್ರಭೇದಗಳಲ್ಲಿ ಕೃಷಿ ಮಾಡಿದವರ ಹೆಸರುಗಳನ್ನೂ ಉಲ್ಲೇಖಿಸಿದ್ದಾನೆ. ಶ್ರೀಪತಿಪಂಡಿತನು ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆಯುವಾಗ ಅಗಸ್ತ್ಯ ಮುನಿಯು ಬ್ರಹ್ಮಸೂತ್ರಗಳಿಗೆ ವೃತ್ತಿಯನ್ನು ಬರೆದಿದ್ದುದನ್ನು ತಿಳಿಸುತ್ತಾನೆ.[೫] ಋಷಭ ಪಂಡಿತರು ತೈತ್ತಿರೀಯ ಭಾಷ್ಯದ ಆರಂಭದಲ್ಲಿ "ದೂರ್ವಾಸಃ ವೃತ್ತಿಕಾರಕಃ" ಎಂದು ತಿಳಿಸಿದ್ದಾರೆ.[೬] ಡಾ. ಎಸ್. ಶ್ರೀಕಂಠಶಾಸ್ತ್ರೀ ಅವರು ಭಾರತೀಯ ಸಂಸ್ಕೃತಿ ಎಂಬ ಗ್ರಂಥದಲ್ಲಿ ಶೈವ ವಿಶೇಷಾದ್ವೈತ ಎಂಬ ತಲೆಬರಹದಲ್ಲಿ ಬರೆಯುವಾಗ ವೀರಶೈವ ಮತಾಚಾರ್ಯರ ವಿಷಯ ತಿಳಿಸಿ ವೀರಶೈವ ಪರ ಭಾಷ್ಯ ಹಾಗೂ ವೃತ್ತಿಗಳ ಉಲ್ಲೇಖ ಮಾಡುತ್ತ, "ಅಗಸ್ತ್ಯ ಮತ್ತು ದುರ್ವಾಸರು ಬ್ರಹ್ಮಸೂತ್ರಗಳಿಗೆ ವೃತ್ತಿಗಳನ್ನು ಬರೆದರು. ಶ್ರೀಪತಿಪಂಡಿತನು ಶ್ರೀಕರಭಾಷ್ಯದಲ್ಲಿ ವೀರಶೈವ ಮತದ ತತ್ವಗಳನ್ನು ಸಂಕ್ಷೇಪವಾಗಿ ಹೀಗೆ ಸೂಚಿಸಿರುವನು"[೭] ಎಂದು ತಿಳಿಸುತ್ತಾರೆ. ಕರ್ನಾಟಕ ಕವಿಚರಿತಕಾರರು ಗುಬ್ಬಿಯ ಮಲ್ಲಣ್ಣರು ತಂತ್ರಕ್ಕೆ ವ್ಯಾಖ್ಯಾನವನ್ನೂ ಮರಿತೋಂಟದಾರ್ಯರು ಸಿದ್ಧಾಂತ ಶಿಖಾಮಣಿಗೆ ವ್ಯಾಖ್ಯಾನವನ್ನೂ. ಬರೆದಿರುವರೆಂದೂ ಅಲ್ಲದೆ ಸಾಸಲ ಚಿಕ್ಕಣಾರಾಧ್ಯರು ಬರೆದ ಪಂಚಬ್ರಹ್ಮೋದಯವೆಂಬುದು ಶ್ರೀಪತಿ ಪಂಡಿತರು ಬರೆದ ವೇದ ಮಂತ್ರ ಭಾಷ್ಯಕ್ಕೆ ಬರೆದ ಕನ್ನಡ ಭಾಷ್ಯವೆಂದೂ. ಭಟ್ಟ ಭಾಸ್ಕರನ ಯಜುರ್ವೇದ ಭಾಷ್ಯಕ್ಕೆ ಕನ್ನಡ ಟೀಕೆಯನ್ನು ಗುರುನಂಜದೇವನು ಬರೆದನೆಂದೂ, ದಶಗ್ರಂಥಿಗೆ ವೀರಣಾರಾಧ್ಯರು ಕನ್ನಡ ವ್ಯಾಖ್ಯಾನ ರೂಪದಲ್ಲಿ ಶಿವಜ್ಞಾನ ಪ್ರದೀಪಿಕೆ ಎಂಬ ಗ್ರಂಥವನ್ನೂ ಚೆನ್ನವೀರನೆಂಬ ಪಂಡಿತನು ವೀರಮಾಹೇಶ್ವರ ಟೀಕೆ ಪುರುಷಸೂಕ್ತ ಟೀಕೆ ಎಂಬ ಗ್ರಂಥಗಳನ್ನು ರಚಿಸಿದರೆಂದೂ ತಿಳಿಸುತ್ತಾರೆ ಡಾ. ಹೆಂಡಿಯವರು ದೀಕ್ಷಾ ಬೋಧೆಯ ಮುನ್ನುಡಿಯಲ್ಲಿ. ಮಲ್ಲಿಯಾರ್ಯನು 'ಶಿವಜ್ಞಾನ ಪ್ರದೀಪಿಕೆ'ಯನ್ನೂ, ಲಕ್ಷ್ಮೀದೇವನು ವೇದ ಶಾಸ್ತ್ರ. ಪುರಾಣಗಳ ಸಾರವನ್ನು ಉದ್ಧರಿಸಿ 'ಸಾರೋದ್ಧಾರ' ಎಂಬ ಗ್ರಂಥವನ್ನು ಜ್ಯೋತಿರ್ನಾಥನು 'ಶೈವ ರತ್ನಾಕರ'ವನ್ನೂ ಜಗದಾರಾಧ್ಯ ನಾಗೇಶನು 'ಶಿವಜ್ಞಾನ ಸಮುಚ್ಚಯ'ವನ್ನೂ[೮] ರಚಿಸಿದ್ದನ್ನು ತಿಳಿಸಿ ಇವೆಲ್ಲ

೪ ಸಂ. ಆರ್. ಸಿ. ಹಿರೇಮಠ: ಪದ್ಮರಾಜ ಪುರಾಣ. ಪು. ೪ ಪ. ೧೧

೫ ಸಂ. ಎ. ಜಿ. ಸಿದ್ಧಪ್ಪಾರಾಧ್ಯ : ಶ್ರೀಕರ ಭಾಷ್ಯಂ. ಸಂ. ೧. ಪು. ೫. ಶ್ಲೋಕ. ೧೬.

೬ ಕಾಶೀನಾಥ ಶಾಸ್ತ್ರೀ : ವೀರಶೈವ ಮಹಾತ್ಮರು. ಪು. ೬೯.

೭ ಎಸ್. ಶ್ರೀಕಂಠಶಾಸ್ತ್ರೀ : ಭಾರತೀಯ ಸಂಸ್ಕೃತಿ. ಪು. ೧೫೬

ಸಂಸ್ಕೃತದಲ್ಲಿ ರಚಿತವಾದ ವೀರಶೈವ ಶಾಸ್ತ್ರ ಗ್ರಂಥಗಳು'[೮] ಎಂದು ಬರೆಯುತ್ತಾರೆ. ನಂದಿಕೇಶ್ವರ ಶಿವಾಚಾರ್ಯರ ಲಿಂಗಧಾರಣ ಚಂದ್ರಿಕೆ, ಕೆರೆಯ ಪದ್ಮರಸರ ದೀಕ್ಷಾ ಬೋಧೆಗಳು ಪ್ರಕರಣ ರೂಪದ ಸಾಹಿತ್ಯಕ್ಕೆ ಸೇರಿದ ಕೃತಿಗಳಾಗಿವೆ. ಮರಿತೋಂಟ ದಾರ್ಯರ ವೀರಶೈವಾನಂದ ಚಂದ್ರಿಕೆಯು ವಾರ್ತಿಕ ಪ್ರಕಾರದ ಸಾಹಿತ್ಯಕ್ಕೆ ಸೇರಿದ ಕೃತಿಯಾಗಿದೆ. ಮೊಗ್ಗೆಯ ಮಾಯಿದೇವರು ಸೂತ್ರಗಳನ್ನು, ಪ್ರಕಾಶಿಕೆಯನ್ನು ರಚಿಸಿದ್ದಾರೆ. ಇದರಿಂದ ವೀರಶೈವ ಶಾಸ್ತ್ರಸಾಹಿತ್ಯವು ಭಾರತೀಯ ದಾರ್ಶನಿಕರು ತಿಳಿಸಿದ ಶಾಸ್ತ್ರ ಸಾಹಿತ್ಯ ಪ್ರಭೇದಗಳಲ್ಲಿ ಸಾಕಷ್ಟು ಕೃಷಿ ಮಾಡಿರುವುದು ಕಂಡುಬರುತ್ತದೆ. ಮೇಲೆ ಉಲ್ಲೇಖಿಸಿದ ಸೂತ್ರ, ಕಾರಿಕಾ ಇಲ್ಲವೆ ಕಾಶಿಕಾ ಅಥವಾ ವೃತ್ತಿ, ಭಾಷ್ಯ, ವ್ಯಾಖ್ಯಾನ, ವಾರ್ತಿಕ ಮತ್ತು ಪ್ರಕರಣ ಎಂಬ ಪ್ರಭೇದಗಳ ಲಕ್ಷಣಗಳನ್ನು ಶಾಸ್ತ್ರ ಕೋವಿದರು ತಿಳಿಸಿದ್ದಾರೆ.

೪. ಶಾಸ್ತ್ರಸಾಹಿತ್ಯ ಹಾಗೂ ಅದರ ಪ್ರಕಾರಗಳ ಲಕ್ಷಣಗಳು :

ಶಾಸ್ತ್ರಸಾಹಿತ್ಯವನ್ನು ಲಾಕ್ಷಣಿಕರು ಲಕ್ಷಣಿಸಿದ್ದಾರೆ:

೧) ಶಾಸನಾತ್ತ್ರಾಣಗುಣಾಚ್ಚ ಶಾಸ್ತ್ರಮ್।

ಶಾಸನ ಮಾಡುವದು ಹಾಗೂ ತ್ರಾಣವನ್ನು ಕೊಡುವುದು ಶಾಸ್ತ್ರವು. ಈ ವ್ಯಾಖ್ಯೆಯು ಧರ್ಮಪರವಾಗಿರುವದು.

೨) ಪ್ರವೃತ್ತಿರ್ವಾ ನಿವೃತ್ತಿರ್ವಾ ನಿತ್ಯೇನ ಕೃತಕೇನವಾ।
ಪುಂ ಸಾಂ ಯೇನೋಪದಿಶ್ಯೇತ ತಚ್ಛಾಸ್ತ್ರಮಿತಿ ಕಥ್ಯತೇ॥[೯]

ಪ್ರವೃತ್ತಿ ನಿವೃತ್ತಿ ಮಾರ್ಗಗಳನ್ನು, ನಿತ್ಯಾನಿತ್ಯ ವಿವೇಕವನ್ನು ಬೋಧಿಸುವುದೇ ಶಾಸ್ತ್ರವು ಎಂದು ಹೇಳಲಾಗುತ್ತದೆ. ಈ ವ್ಯಾಖ್ಯೆಯು ಪಾರಮಾರ್ಥಿಕ ವಿಷಯ ವಿವೇಕ ಪರವಾಗಿರುತ್ತದೆ. ಒಟ್ಟಿನಲ್ಲಿ ಶಾಸ್ತ್ರವು ಆಚಾರ, ಅರಿವು, ಪರವಸ್ತು ಮತ್ತು ಸಿದ್ಧಿಗಳ ವಿವರಣೆಯನ್ನು ಕೊಡುವ ಸಾಹಿತ್ಯವಾಗಿದೆ. ಭಾರತೀಯ ಪ್ರತಿಯೊಂದು ಮತಧರ್ಮದವರೂ ಈ ಕಾರ್ಯವನ್ನು ಮಾಡುತ್ತಲೇ ಬಂದಿರುತ್ತಾರೆ. ಇಂಥ ಕಾರ್ಯವನ್ನು ವೀರಶೈವಮತಧರ್ಮದ ಪರವಾಗಿಯೂ ಮಾಡಿರುವುದು ಸ್ವಾಭಾವಿಕ. ಆತ್ಮಶಕ್ತಿ ಮತ್ತು ದೃಷ್ಟಿ ಸಂವರ್ಧನಾಪರವಾದ ಶಾಸ್ತ್ರಸಾಹಿತ್ಯವು ಜೀವನದ ಅವಶ್ಯಕತೆಗಳಿಗನುಗುಣವಾಗಿ ಬೆಳೆಯುತ್ತಲೇ ನಡೆದಿದೆ. ದೈಹಿಕ ಹಸಿವಿಗೆ ನಾನಾ ಮುಖಗಳಿರುವಂತೆ ವೈಚಾರಿಕ ಹಸಿವೆಗೂ ನಾನಾ ಮುಖಗಳಿರುತ್ತವೆ ಎಂಬುದಕ್ಕೆ ಶಾಸ್ತ್ರಸಾಹಿತ್ಯ ಪ್ರಕಾರಗಳೇ ಸಾಕ್ಷಿ.

---

೮. (ಸಂ) ಬಿ. ಬಿ. ಹೆಂಡಿ : ದೀಕ್ಷಾಬೋಧೆ, ಪು. ೧೪.

೯. ಶ್ರೀಕಂಠಶಾಸ್ತ್ರೀ, ಭಾರತೀಯ ಸಂಸ್ಕೃತಿ ಅಡಿಟಿಪ್ಪಣಿ ಪು. ೬೬–೬೮ ಮೈಸೂರು ವಿಶ್ವವಿದ್ಯಾಲಯ

ಭಾರತದಲ್ಲಿ ಈ ಸಾಹಿತ್ಯವು ಮೊದಮೊದಲು ಆತ್ಮಸಾಕ್ಷಾತ್ಕಾರಿಗಳ ಮಾತಿನ ರೂಪದಲ್ಲಿದ್ದು ಅದು ಮಂತ್ರ ಇಲ್ಲವೆ ವಚನ ಎಂಬ ಹೆಸರಿನಿಂದ ಸುಪ್ರಸಿದ್ಧವಾಗಿರುತ್ತದೆ. ನಂತರ ಆ ಮಂತ್ರ ಮತ್ತು ಮಾತುಗಳಲ್ಲಿಯ ವಿಚಾರಸಾಮ್ಯ ಹಾಗೂ ಆ ಸಾಮ್ಯ ವಿಚಾರಧಾರೆಯ ಬೆಳವಣಿಗೆಗಳ ದೃಷ್ಟಿಯಿಂದ ಪ್ರಾಜ್ಞರು ಆ ಸಾಹಿತ್ಯಕ್ಕೆ ಒಂದು ಸುವ್ಯವಸ್ಥಿತ ರೂಪವನ್ನು ಕೊಟ್ಟರು. ಆಗ ಅದನ್ನು ಜೀವನದ ಹಂತಗಳಿಗೆ ಅನುಗುಣವಾಗಿ ಬಳಸಿಕೊಂಡರು. ಇದು ಆಶ್ರಮಸಾಹಿತ್ಯವೆಂದು ಹೇಳಲಾಗುತ್ತದೆ.[೧೦] ಇದರಿಂದ ವಿಚಾರವಾದಿಯಾದ ಮಾನವನು ತನ್ನ ಬೌದ್ಧಿಕ ಪ್ರಗತಿಗನುಗುಣವಾಗಿ ಪರಾಮರ್ಶೆ ಮಾಡತೊಡಗಿದನು. ಒಳಗಣ್ಣಿನಿಂದ ಈ ಸಾಹಿತ್ಯದ ಒಳಗನ್ನು ಪರಿಶೀಲಿಸ ತೊಡಗಿದನಾಗಿ ಆತನು ದಾರ್ಶನಿಕನಾದ. ಇವನ ಕಾರ್ಯದಿಂದ ಆಶ್ರಮ ಸಾಹಿತ್ಯವು ದಾರ್ಶನಿಕಸಾಹಿತ್ಯವಾಗಿ ರೂಪುಗೊಂಡಿತು. ಇದು ಎರಡನೇ ರೀತಿ. ದಾರ್ಶನಿಕರ ದಾರ್ಶನಿಕ ಕ್ರಿಯಾ ಪ್ರಾರಂಭದ ಪರಿಣಾಮವಾಗಿ ಸೂತ್ರಸಾಹಿತ್ಯವು ಅಸ್ತಿತ್ವದಲ್ಲಿ ಬಂತು. ಇದು ಶಾಸ್ತ್ರಸಾಹಿತ್ಯದ ಒಂದು ವಿಶೇಷ ಪ್ರಕಾರವಾಗಿರುತ್ತದೆ. ಲಾಕ್ಷಣಿಕರು ಇದನ್ನು ಹೀಗೆ ಲಕ್ಷಣಿಸುತ್ತಾರೆ :

ಲಘೂನಿ ಸೂಚಿತಾರ್ಥಾನಿ ಸ್ವಲ್ಪಾಕ್ಷರಪದಾನಿ ಚ ।
ಸರ್ವತಃ ಸಾರಭೂತಾನಿ ಸೂತ್ರಾಣ್ಯಾಹುರ್ಮನೀಷಿಣಃ ॥[೧೧]

ಸಂಕ್ಷಿಪ್ತವಾಗಿರುವ ಅರ್ಥವನ್ನು ಸೂಚಿಸುವ, ಮಿತವಾದ ಅಕ್ಷರಗಳಿಂದಲೂ ಪದಗಳಿಂದಲೂ ರಚಿಸಲ್ಪಟ್ಟಿರುವ, ಸರ್ವತಃ ಸಾರಭೂತವಾಗಿರುವ ಚಿಕ್ಕ ಪದ ಅಥವಾ ಪದಪುಂಜವು ಸೂತ್ರವು ಎಂದು ಮನೀಷಿಗಳು ಹೇಳುತ್ತಾರೆ

ನಿಗಮಾಗಮಗಳ ಹೇರಳವಾದ ಮಂತ್ರರಾಶಿಯನ್ನು ಸಾರರೂಪದಲ್ಲಿ ಇಡುವ ವಿಶಿಷ್ಟವಾದ ವಿಧಾನವೇ ಸೂತ್ರಶೈಲಿ. ಮಂತ್ರಸಾಹಿತ್ಯದಲ್ಲಿ ಸುವ್ಯವಸ್ಥೆಯನ್ನು, ತರ್ಕಬದ್ಧತೆಯನ್ನು ತಂದುದು ಸೂತ್ರಸಾಹಿತ್ಯವು. ಈ ಸೂತ್ರಗಳ ಸೃಷ್ಟಿಯು ಎಷ್ಟು ಕ್ಲಿಷ್ಟವಾಗಿದೆಯೋ ಅವುಗಳ ಅರ್ಥವನ್ನು ಮಾಡಿಕೊಳ್ಳುವದೂ ಅಷ್ಟೇ ಕಠಿಣ ಕಾರ್ಯವಾಗಿರುತ್ತದೆ. ಈ ಸಮಸ್ಯೆಯ ಪರಿಹಾರಾರ್ಥವಾಗಿ ಮತ್ತು ತಮ್ಮದೇ ಆದ ದೃಷ್ಟಿಕೋನವನ್ನು ಪ್ರತಿಪಾದಿಸುವದರ ಸಲುವಾಗಿ ಈ ಸೂತ್ರಗಳಿಗೆ ವೃತ್ತಿ ಇಲ್ಲವೆ ಕಾರಿಕೆಗಳನ್ನು ಬರೆದರು. ಲಾಕ್ಷಣಿಕರು ಅದನ್ನು ಹೀಗೆ ಲಕ್ಷಣಿಸುತ್ತಾರೆ:

---

೧೦. S. Radhakrishnan: Indian Philosophy vol. I. p. ?
(Kegon & Raltudg)

೧೧. ಸ್ವಾ. ಆದಿದೇವಾನಂದ: ಬ್ರಹ್ಮಸೂತ್ರಗಳು ಶ್ರೀ ರಾಮಕೃಷ್ಣಾಶ್ರಮ ಮೈಸೂರು ೧೯೬೪
ಪು. ೫ ಅ. ೩. ೧.

ಕಾರಿಕಾ ತು ಸ್ವಲ್ಪವೃತ್ತಿ ಬಹೋರರ್ಥಸ್ಯ ಸೂಚನೀ ।[೧೨]

ಕಾರಿಕೆಯು ಸೂತ್ರದಂತೆ ಗದ್ಯಶೈಲಿಯಲ್ಲಿರದೆ ಪದ್ಯಶೈಲಿಯಲ್ಲಿರುತ್ತದೆ. ಕಾರಿಕಾವು ಅಲ್ಪ ಶಬ್ದಗಳಿಂದ ಬಹುವಾದ ಅರ್ಥವನ್ನು ಸೂಚಿಸುತ್ತದೆ. "ಕಾರಿಕೆಗಳು ಒಂದು ದೃಷ್ಟಿಯಿಂದ ವಿವರಣೆಯಾಗಿದ್ದರೂ ವಾರ್ತಿಕೆಯ ಅರ್ಥದಂತೆ ಭಾಷ್ಯವೆಂದು ಹೇಳಲಾಗುವದಿಲ್ಲ. ಯಾವುದೋ ಒಂದು ವಿಷಯವನ್ನೋ ಅಥವಾ ಉಪದೇಶವನ್ನೋ ನೆನಪಿನಲ್ಲಿ ಇಟ್ಟುಕೊಳ್ಳಲು ರಚಿಸಿದ ಶ್ಲೋಕಗಳಾಗಿವೆ. ಕಾರಿಕೆಗಳು ಮಂತ್ರಾರ್ಥ ಇಲ್ಲವೆ ಸೂತ್ರಾರ್ಥಗಳ ವಿವರಣೆಗೆ ಅಲ್ಲಿಯ ಭಾವಗಳಿಗೆ ಅನುಸರಿಸಿ ಯುಕ್ತಿಗಳನ್ನು ಬಳಸುತ್ತವೆ ವಿಚಾರ ಪ್ರಕಾಶನಕ್ಕೆ ಪ್ರತಿಷ್ಠಾಪನೆಗೆ."

ಭಾಷ್ಯವು ಶಾಸ್ತ್ರಸಾಹಿತ್ಯದ ಬೇರೊಂದು ಪ್ರಕಾರವಾಗಿರುತ್ತದೆ. ಭಾಷ್ಯವು ಗದ್ಯಶೈಲಿಯಲ್ಲೇ ಇರುತ್ತವೆ. ಭಾಷ್ಯವು ಸೂತ್ರಗಳನ್ನು ಅಥವ ಮಂತ್ರಗಳನ್ನು ವಿವರ ವಿವರವಾಗಿ ವಿವರಿಸುವದು. ಹೀಗೆ ವಿವರಿಸುವಲ್ಲಿ ಅದು ಆಯಾ ಭಾಷ್ಯಕಾರರ ದಾರ್ಶನಿಕ ದೃಷ್ಟಿಕೋನವನ್ನು ಪ್ರತಿಪಾದಿಸುತ್ತದೆ. ಲಾಕ್ಷಣಿಕರು ಭಾಷ್ಯವನ್ನು ಹೀಗೆ ಲಕ್ಷಣಿಸುತ್ತಾರೆ :

ಸೂತ್ರಾರ್ಥೋ ವರ್ಣ್ಯತೇ ಯತ್ರ ವಾಕ್ಯೈಃ ಸೂತ್ರಾನುಸಾರಿಭಿಃ ।
ಸ್ವ ಪದಾನಿ ಚ ವರ್ಣ್ಯಂತೇ ಭಾಷ್ಯಂ ಭಾಷ್ಯವಿದೋ ವಿದುಃ ॥[೧೩]

ಮೂಲಸೂತ್ರಗಳ ಅಕ್ಷರಗಳ ಅನುಸಾರವಾಗಿ ವಿಷಯ, ವಿಶಯ (ಸಂಶಯ), ಪೂರ್ವ ಪಕ್ಷ, ಉತ್ತರ (ಸಿದ್ಧಾಂತ) ಮತ್ತು ಸಂಗತಿಗಳನ್ನಧಿಕರಿಸಿ ವಿವರಿಸುವ ಗ್ರಂಥಕ್ಕೆ ಭಾಷ್ಯವೆಂದು ಬಲ್ಲಿದರು ತಿಳಿಸುತ್ತಾರೆ." ಷಡ್ದರ್ಶನಗಳಲ್ಲಿ ಸೂತ್ರಗಳಿರುವಂತೆ ಆ ಸೂತ್ರಗಳಿಗೆ ಭಾಷ್ಯಗಳೂ ಇರುತ್ತವೆ. ಜಿಜ್ಞಾಸುಗಳಿಗೆ ತಕ್ಕಂತೆ ಶಾಸ್ತ್ರಸಾಹಿತ್ಯ ಸೃಷ್ಟಿ. ಭಾಷ್ಯಗಳಿಂದ ದೊರೆಯುವ ತೃಪ್ತಿಯನ್ನು ಅವರು ಬೇರೊಂದು ಪ್ರಕಾರದ ಶಾಸ್ತ್ರಸಾಹಿತ್ಯದಿಂದ ಪಡೆದರು. ಅದಕ್ಕೆ ವ್ಯಾಖ್ಯಾನವೆಂದು ಹೆಸರು. ವ್ಯಾಖ್ಯಾನದ ಲಕ್ಷಣವು ಈ ಪ್ರಕಾರವಿರುತ್ತದೆ :

ಪದಚ್ಛೇದಃ ಪದಾರ್ಥೋಕ್ತಿಃ ವಿಗ್ರಹೋ ವಾಕ್ಯಯೋಜನಾ ।
ಆಕ್ಷೇಪಸ್ಯ ಸಮಾಧಾನಂ ವ್ಯಾಖ್ಯಾನಂ ಪಂಚಲಕ್ಷಣಮ್ ॥[೧೪]

ಇದರಿಂದ ವ್ಯಾಖ್ಯಾನವು ಪಂಚಲಕ್ಷಣಾತ್ಮಕವಾಗಿರುತ್ತದೆಯೆಂದು ತಿಳಿದುಬರುತ್ತದೆ. ಪದಚ್ಛೇದ ಪದಾರ್ಥೋಕ್ತಿ, ವಿಗ್ರಹ, ವಾಕ್ಯಯೋಜನೆ, ಆಕ್ಷೇಪ ಮತ್ತು ಸಮಾಧಾನ

---

೧೨. ಸ್ವಾ. ಆದಿದೇವಾನಂದ : ಮಾಂಡೂಕ್ಯೋಪನಿಷತ್, ಶ್ರೀ ರಾಮಕೃಷ್ಣಾಶ್ರಮ, ಮೈಸೂರು ಪು. ೫ ಅ. ಟಿ. ೨.

೧೩. ಶ್ರೀಕಂಠಶಾಸ್ತ್ರೀ : ಭಾರತೀಯ ಸಂಸ್ಕೃತಿ, ಪು. ೬೬–೬೮ ಅಡಿ ಟಿ.

೧೪. ಅದೇ.

ಎಂಬುವೇ ಆ ಪಂಚಲಕ್ಷಣಗಳು. ವ್ಯಾಖ್ಯಾನಕ್ಕೆ ಟೀಕೆ ಇಲ್ಲವೆ ಟಿಪ್ಪಣಿ ಎಂಬಭಿಧಾನಗಳೂ ಇರುತ್ತವೆ. ಸುಪ್ರಸಿದ್ಧ ಭಾಷ್ಯಕಾರರಿರುವಂತೆ ಸುಪ್ರಸಿದ್ಧ ಟೀಕಾಚಾರ್ಯರೂ ಇರುತ್ತಾರೆ. ವ್ಯಾಖ್ಯಾನದ ಪಂಚಲಕ್ಷಣಗಳನ್ನು ನೋಡಿದಾಗ ಇದು ಭಾಷಾಶಾಸ್ತ್ರ ದೃಷ್ಟಿಕೋನಪರ ವಿವರಣೆಯೆಂದು ತಿಳಿದುಬರುತ್ತದೆ.

ಸೂತ್ರ, ಕಾರಿಕಾ, ಭಾಷ್ಯ ಮತ್ತು ವ್ಯಾಖ್ಯಾನಗಳು ಪೂರೈಸದ ಕಾರ್ಯವನ್ನು ಶಾಸ್ತ್ರಸಾಹಿತ್ಯದ ಇನ್ನೊಂದು ಪ್ರಕಾರವು ಪೂರೈಸುವದು. ಅದನ್ನು ವಾರ್ತಿಕವೆಂದು ಹೇಳುತ್ತಾರೆ. ಶಾಸ್ತ್ರಗ್ರಂಥಗಳಲ್ಲಿ ಅಂದರೆ ಸೂತ್ರಗಳಲ್ಲಿ ಕೆಲವು ಸಲ ಕೆಲವು ವಿಷಯಗಳನ್ನು ಬಿಟ್ಟಿರುತ್ತಾರೆ, ಒಂದೇ ಮಾತಿನಲ್ಲಿ ತಿಳಿಸಿರುತ್ತಾರೆ. ಇಂಥ ಕೊರತೆ ತುಂಬಿ ಕೊಡಲು ಈ ಪ್ರಕಾರದ ಸಾಹಿತ್ಯ ಸೃಷ್ಟಿಯಾದಂತೆ ಕಾಣುತ್ತದೆ. ವಾರ್ತಿಕವನ್ನು ಲಾಕ್ಷಣಿಕರು ಹೀಗೆ ಲಕ್ಷಣಿಸುತ್ತಾರೆ :

ಉಕ್ತಾನುಕ್ತದುರುಕ್ತಾನಾಂ ಚಿನ್ತಾ ಯತ್ರ ಪ್ರವರ್ತತೇ।
ತಂ ಗ್ರನ್ಥಂ ವಾರ್ತಿಕಂ ಪ್ರಾಹುಃ ವಾರ್ತಿಕಜ್ಞಾ ಮನೀಷಿಣಃ॥[೧೫]

ವಾರ್ತಿಕದ ಲಕ್ಷಣವನ್ನು ತಿಳಿಸುವ ಈ ಶ್ಲೋಕವು ಮೂಲ ಶಾಸ್ತ್ರಕೃತಿಯಲ್ಲಿ ಹೇಳಿರುವುದನ್ನೂ, ಬಿಟ್ಟುದನ್ನೂ, ದುರ್ಗಮ್ಯವಾದುದನ್ನೂ ಚಿಂತನಮಾಡುವಂಥ ವಿಧಾನಕೃತಿಯು ವಾರ್ತಿಕವೆಂದು ಕರೆಯಿಸಿಕೊಳ್ಳುವದೆಂಬಭಿಪ್ರಾಯವನ್ನು ತಿಳಿಸುತ್ತದೆ. ವಾರ್ತಿಕ ಪರಂಪರೆಯು ಉತ್ತರಭಾರತದಲ್ಲಿ ಲುಪ್ತವಾದಾಗ ಕರ್ನಾಟಕದಿಂದ ಏಳನೆಯ ಶತಮಾನದ ಆದಿಯಲ್ಲಿ ಮಿಥಿಲಾಕ್ಕೆ ಹೋದ ತ್ರಿಲೋಚನನು ಪುನರುಜ್ಜೀವನಗೊಳಿಸಿದನೆಂದು ಆತನ ಶಿಷ್ಯನಾದ ವಾಚಸ್ಪತಿ ಮಿಶ್ರ ತಿಳಿಸಿರುವುದನ್ನು ನವ್ಯನ್ಯಾಯ ಚರಿತ್ರಕಾರನು[೧೬] ಉಲ್ಲೇಖಿಸಿರುವುದು, ಕರ್ನಾಟಕದ ವಿದ್ಯಾಕೇಂದ್ರಗಳಲ್ಲಿ ಈ ಪರಂಪರೆಯು ಪ್ರಸಿದ್ಧವಾಗಿ ಬೋಧಿಸಲ್ಪಡುತ್ತಿತ್ತು, ಪ್ರಚಾರದಲ್ಲಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ವಾರ್ತಿಕದ ವಿಧಾನವು ನವ್ಯನ್ಯಾಯದ ಆವಿರ್ಭಾವಕ್ಕೆ ವಿಶೇಷ ಅವಕಾಶಕೊಟ್ಟಿದೆ ಎಂಬುದು ಏಳನೇ ಶತಮಾನದಿಂದ ಹನ್ನೊಂದನೆಯ ಶತಮಾನದ ವರೆಗೆ ಇದ್ದ ನೈಯ್ಯಾಯಿಕರ ಕೃತಿಗಳಿಂದ ಸ್ಪಷ್ಟವಾಗುತ್ತದೆ. ದಾರ್ಶನಿಕರ ದೃಷ್ಟಿಕೋನ ಬದಲಾವಣೆಗೆ ವಾರ್ತಿಕ ಪದ್ಧತಿಯು ಕಾರಣವಾಗಿರುವದರಿಂದ ಅದರ ಮಹತ್ವವು ಇನ್ನೂ ಹೆಚ್ಚುತ್ತದೆ.

ಶಾಸ್ತ್ರಸಾಹಿತ್ಯದ ಬೇರೊಂದು ಪ್ರಕಾರವು ಇದರ ಜತೆಜತೆಯಲ್ಲಿಯೇ ಬೆಳೆದು ಬಂದಿರುತ್ತದೆ. ಇದರಿಂದ ಶಾಸ್ತ್ರದ ಒಂದುಭಾಗದ ವಿಶೇಷ ವಿವರಣೆಯು ನಡೆಯುತ್ತದೆ. ಲಾಕ್ಷಣಿಕರು ಅದನ್ನು ಲಕ್ಷಣಿಸಿದ್ದು ಹೀಗೆ :

---

೧೫. ಅದೇ.

೧೬. Dineshchandra Bhattacharya: History of Navya-Nyāya in Mithila, p 16.

ನನ್ವೇವಂ ಶಾಸ್ತ್ರಪ್ರಕರಣಯೋಃ ಕೋ ಭೇದ ಇತಿ ಚೇತ್ ।
ಶಾಸ್ತ್ರೈಕದೇಶಸಂಬದ್ಧಂ ಶಾಸ್ತ್ರಕಾರ್ಯಾಂತರೇ ಸ್ಥಿತಂ ।
ಆಹುಃ ಪ್ರಕರಣಂ ನಾಮ ಗ್ರಂಥಭೇದಂ ವಿಪಶ್ಚಿತಃ ॥[೧೭]

ಶಾಸ್ತ್ರ ಮತ್ತು ಪ್ರಕರಣಗಳಲ್ಲಿ ಯಾವ ಭೇದವಿದೆಯೆಂದು ಕೇಳಿದ್ದಾದರೆ (ಉತ್ತರರೂಪ ವಾಗಿ ಹೀಗೆ ಹೇಳಬಹುದು) ಶಾಸ್ತ್ರದ ಒಂದು ವಿಷಯಕ್ಕೆ ಸಂಬಂಧಿಸಿದ ಮತ್ತು ಶಾಸ್ತ್ರ ದಲ್ಲಿರುವ ವಿಷಯವನ್ನು ಪ್ರತಿಪಾದಿಸುವ ಗ್ರಂಥಭೇದಕ್ಕೆ ಪ್ರಕರಣವೆಂದು ಪಂಡಿತರು ಹೇಳುತ್ತಾರೆ.

ಹೀಗೆ ಒಟ್ಟಿನಲ್ಲಿ ಶಾಸ್ತ್ರದ ವಿವಿಧ ಮುಖದ ಬೋಧೆಯು ಸೂತ್ರ, ಕಾರಿಕಾ. ಭಾಷ್ಯ. ವ್ಯಾಖ್ಯಾನ. ವಾರ್ತಿಕ ಮತ್ತು ಪ್ರಕರಣ ಎಂಬ ಆರು ಪ್ರಕಾರದ ಶಾಸ್ತ್ರಸಾಹಿತ್ಯ ದಿಂದ ನಡೆಯುತ್ತದೆ. ಇದು ಭಾರತೀಯ ದರ್ಶನಸಾಹಿತ್ಯದ ವಿಶಿಷ್ಟವಾದ ಕೊಡುಗೆ ಯಾಗಿರುತ್ತದೆ.

ಕನ್ನಡದಲ್ಲಿ ಸೃಷ್ಟಿಗೊಂಡ ಮಂತ್ರರೂಪವಾದ ವಚನಸಾಹಿತ್ಯವು ಭಾರತೀಯ ಷಟ್‌ಪ್ರಕಾರವೆಂದು ಮೇಲೆ ಉಲ್ಲೇಖಿಸಿದಂಥ ಹೊಸ ತೆರನಾದ ಶಾಸ್ತ್ರಸಾಹಿತ್ಯಪ್ರಕಾರದ ಸೃಷ್ಟಿಗೆ ಆದಿಯಾಗಿರುತ್ತದೆ. ವಚನಸಾಹಿತ್ಯವು ವಿಶಿಷ್ಟ ವಿಚಾರಪ್ರಣಾಲಿ ಶಾಸ್ತ್ರವಾಗಿ ರುತ್ತದೆ. ಅದನ್ನು 'ಸ್ಥಲಕಟ್ಟು' ಸಾಹಿತ್ಯವೆಂದು ಹೆಸರಿಸಲಾಗಿದೆ. ಇದು ನವೀನ ಪ್ರಕಾರ. ಈ ಹೊಸ ಹೆಸರಿನಲ್ಲಿರುವ 'ಕಟ್ಟು' ಎಂಬುದು 'ಸೂತ್ರ'ವೆಂಬ ಪದವು ಮಾಡುವ ಕಾರ್ಯಾರ್ಥಸೂಚಕವಾಗಿರುತ್ತದೆ. 'ಬ್ರಹ್ಮಸೂತ್ರ'ವೆಂಬ ಪದದಲ್ಲಿಯ 'ಬ್ರಹ್ಮ' ಎಂಬ ಪದವೂ, 'ಸ್ಥಲಕಟ್ಟು' ಎಂಬ ಪದದಲ್ಲಿಯ 'ಸ್ಥಲ'ವೆಂಬ ಪದವೂ ಒಂದೇ ಬಗೆಯ ಅರ್ಥಬೋಧಕಗಳಾಗಿವೆ. ತೈತ್ತರೀಯ ಉಪನಿಷತ್ತು ಬ್ರಹ್ಮವನ್ನು ಲಕ್ಷಣಿಸುವದು :

ಯತೋ ವಾ ಇಮಾನಿ ಭೂತಾನಿ ಜಾಯಂತೇ। ಯೇನ ಜಾತಾನಿ ಜೀವಂತಿ।
ಯತ್ ಪ್ರಯಂತ್ಯಭಿಸಂವಿಶಂತಿ। ತದ್ವಿಜಿಜ್ಞಾಸಸ್ವ। ತದ್ಬ್ರಹ್ಮೇತಿ।[೧೮]

(ಯಾವುದರಿಂದ ಈ ಪ್ರಾಣಿಗಳು ಹುಟ್ಟುವುವೊ. ಹಾಗೆಯೇ ಹುಟ್ಟಿರುವುವುಗಳು ಯಾವುದರಿಂದ ಜೀವಿಸುತ್ತವೆಯೊ ಮತ್ತು ಯಾವುದನ್ನು ಕುರಿತು ಹೋಗಿ ಪ್ರವೇಶಿಸು

೧೭. S. C. Vibhushana: **A** History of Indian Logic, Motilal Banarasidas, p. 356 fn.

೧೮. ಸಂ. ಆದಿದೇವಾನಂದ: ತೈತ್ತಿರೀಯೋಪನಿಷತ್ ಭೃಗುವಲ್ಲೀ. ಮೊದಲನೆಯ ಅನುವಾಕ (ಶ್ರೀ ರಾಮಕೃಷ್ಣಾಶ್ರಮ, ೧೯೬೮).

ವುವೋ ಅದನ್ನು ತಿಳಿದುಕೋ; ಅದು (ಬ್ರಹ್ಮ) ಎಂಬ ಮಂತ್ರವು ಬ್ರಹ್ಮ ಪದದ ವಿವರಣೆ ಕೊಟ್ಟಿದ್ದು "ಬ್ರಹ್ಮಸೂತ್ರ" ಪದದಲ್ಲಿಯ 'ಬ್ರಹ್ಮ' ಪದದ ಅರ್ಥವಾಗಿರುತ್ತದೆ. ಇದರ ಜಿಜ್ಞಾಸೆಯೇ ಬ್ರಹ್ಮಸೂತ್ರಗಳ ವಿಷಯ. ಅದೇ ರೀತಿ 'ಸ್ಥಲಕಟ್ಟು' ಎಂಬ ಪದ ದಲ್ಲಿಯ 'ಸ್ಥಲ' ಎಂಬ ಪದವನ್ನೂ ಶಾಸ್ತ್ರವು ಲಕ್ಷಣಿಸಿರುತ್ತದೆ :

> ಯತ್ರಾದೌ ಸ್ಥೀಯತೇ ವಿಶ್ವಂ ಪ್ರಾಕೃತಂ ಪೌರುಷಂ ಯತಃ
> ಲೀಯತೇ ಪುನರಂತೇ ಚ ಸ್ಥಲಂ ತತ್ಪ್ರೋಚ್ಯತೇ ತತಃ[೧೯]

(ಚೇತನಾಚೇತನಾತ್ಮಕವಾದ ಪ್ರಪಂಚವು ಮೊದಲು ಸ್ಥಿತಿಯನ್ನೂ ಅಂತ್ಯದಲ್ಲಿ ಲಯ ವನ್ನೂ ಯಾವ ತತ್ವದಲ್ಲಿ ಹೊಂದುವುದೋ ಅದೇ ಸ್ಥಲವೆಂದು ಹೇಳಲ್ಪಡುತ್ತದೆ.)

ಬ್ರಹ್ಮದ ನಾನಾ ವಿಚಾರದ ಕುರಿತಿರುವ ಉಪನಿಷನ್ಮಂತ್ರ ವಿಚಾರವನ್ನು ಮಾಲಿ ಯಾಗಿ ಸೂತ್ರಕಾರನು ರಚಿಸಿದ್ದಾನೆ ಎಂದು ಶಂಕರರು ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ ಹೇಳಿರುವಂತೆ, ಸ್ಥಲದ ನಾನಾ ವಿಚಾರ ಕುರಿತಿರುವ ವಚನ ವಿಚಾರವನ್ನು ವ್ಯವಸ್ಥಿತ ರೀತಿಯಲ್ಲಿ ತರ್ಕಬದ್ಧವಾಗಿ ಶಾಸ್ತ್ರಕಾರನು ಇಟ್ಟಿದ್ದಾನೆ. 'ಸೂತ್ರ'ವು ನಾಮಪದವಾಗಿರು ವಂತೆ 'ಕಟ್ಟು' ಎಂಬುದೂ ನಾಮಪದವಾಗಿದೆ. ಅದೇ ಪದವು ಕ್ರಿಯಾಪದವೂ ಆಗಿದೆ. 'ಕಟ್ಟು' ಪದವು ವ್ಯವಸ್ಥೆ ಹಾಗೂ ವ್ಯವಸ್ಥೆಗೊಳಿಸು ಎಂಬೆರಡೂ ಅರ್ಥಕೊಡುವದು. ಆದುದರಿಂದ ಬ್ರಹ್ಮಸೂತ್ರ ಎಂಬಂತೆ ಸ್ಥಲಕಟ್ಟು ಎಂಬ ಪದವು ಇರುತ್ತದೆ.

'ಸ್ಥಲಕಟ್ಟು' ಸಾಹಿತ್ಯದಲ್ಲಿ ಷಟ್‌ಸ್ಥಲ ವಚನಗಳ ಕಟ್ಟು ಮತ್ತು ಏಕೋತ್ತರ ಸ್ಥಲ ವಚನಗಳ ಕಟ್ಟು ಎಂಬ ವಿಶಿಷ್ಟ ಪ್ರಭೇದಗಳು ಶಾಸ್ತ್ರದೃಷ್ಟಿಯಿಂದ ಮಹತ್ವದ ಪದಗಳಾಗಿವೆ. 'ಷಟ್‌ಸ್ಥಲ ಕಟ್ಟು' ಶಾಸ್ತ್ರಸಾಹಿತ್ಯಪ್ರಭೇದವಾದ ಮೂಲಶಾಸ್ತ್ರಕೃತಿ. ಇದರಲ್ಲಿಯೇ ಸಂಪಾದನಾಶಾಸ್ತ್ರಸಾಹಿತ್ಯ ವಿಶಿಷ್ಟ ಪ್ರಕಾರವು ಹುಟ್ಟಲು ಅವಕಾಶವಿರು ತ್ತದೆ.

'ಸಂಪಾದನೆ' ಶಾಸ್ತ್ರಸಾಹಿತ್ಯಪ್ರಕಾರದಲ್ಲಿ 'ಶೂನ್ಯಸಂಪಾದನೆ'ಗಳೆಂಬವುಗಳು. 'ಶೀಲಸಂಪಾದನೆಯ ವಚನಗಳು' ಎಂಬ ಮುಂತಾದ ಕೃತಿಗಳು ಸಮಾವೇಶಗೊಳ್ಳು ತ್ತವೆ. 'ಶೂನ್ಯಸಂಪಾದನೆ'ಗಳು 'ಸ್ಥಲಕಟ್ಟು' ಸಾಹಿತ್ಯದಲ್ಲಿ ಅನುಕ್ತವಾದ, ಉಕ್ತವಾದ ವಿಷಯಗಳನ್ನು ಚರ್ಚೆಯ ರೂಪದಲ್ಲಿ ವಚನಗಳಿಂದ ಸುವ್ಯವಸ್ಥೆಗೊಳಿಸಿದ ಕೃತಿಗಳಾಗಿರು ತ್ತವೆ. ಶಾಸ್ತ್ರಸಾಹಿತ್ಯದಲ್ಲಿ ಇದು ನವೀನಪ್ರಕಾರದ ಶಾಸ್ತ್ರಸಾಹಿತ್ಯವಾಗಿರುತ್ತದೆ.

---

೧೯. ಸಂ. ವೈ. ನಾಗೇಶ ಶಾಸ್ತ್ರಿಗಳು: ಶಿವಾನುಭವ ಸೂತ್ರಂ, ಮುರುಘಾಮಠ, ಧಾರವಾಡ. ಪು. ೧೭. ಶ್ಲೋ. ೪.

ವೀರಶೈವ ಶಾಸ್ತ್ರಸಾಹಿತ್ಯಜ್ಞರು ಭಾರತೀಯ ಶಾಸ್ತ್ರಸಾಹಿತ್ಯಪ್ರಕಾರ ಭಾಂಡಾರಕ್ಕೆ ಸಲ್ಲಿಸಿದ ಒಂದು ಉತ್ತಮ ಕಾಣಿಕೆಯಾಗಿರುತ್ತದೆ.

ಭಾಷ್ಯ, ವ್ಯಾಖ್ಯಾನ ಇಲ್ಲವೆ ಟೀಕಾರೂಪದಲ್ಲಿ ಸಂಸ್ಕೃತ ಹಾಗೂ ಕನ್ನಡದಲ್ಲಿಯ ಶಾಸ್ತ್ರಗ್ರಂಥಗಳಿಗೆ ಬರೆದ ಸಾಹಿತ್ಯವು ಹೇರಳವಾಗಿದೆ. ಆಗಮ, ವೇದಮಂತ್ರ, ಉಪನಿಷತ್ತು, ಬ್ರಹ್ಮಸೂತ್ರಗಳಿಗೆ ಭಾಷ್ಯ, ಟೀಕೆಗಳಿರುವಂತೆ ಬಸವಣ್ಣ ಪ್ರಭುದೇವರ ವಚನಗಳಿಗೆ, ಏಕೋತ್ತರ ಶತಸ್ಥಲ, ಬೆಡಗಿನ ವಚನ, ಮಂತ್ರಗೋಪ್ಯ, ಪದಮಂತ್ರಗೋಪ್ಯ, ಹಿರಿಯ ಮಂತ್ರಗೋಪ್ಯ, ಶಿವಯೋಗಪ್ರದೀಪಿಕೆ ಮುಂತಾದವುಗಳಿಗೆ ಟೀಕು ಬರೆದುದು ಸುಪ್ರಸಿದ್ಧವಿದೆ. ದರ್ಶನಸಾಹಿತ್ಯಪ್ರಭೇದದಂತೆ ನಡೆದ ದಾರ್ಶನಿಕ ಕಾರ್ಯವು ವೀರಶೈವ ಶಾಸ್ತ್ರಸಾಹಿತ್ಯದಲ್ಲಿ ನಡೆದಿದೆ ಎಂಬುದನ್ನು ಸಿದ್ಧಗೊಳಿಸುತ್ತದೆ. ವೀರಶೈವ ಶಾಸ್ತ್ರಸಾಹಿತ್ಯಕಾರರು ಪ್ರಾಚೀನ ಪರಂಪರೆಯ ಶಾಸ್ತ್ರಸಾಹಿತ್ಯಪ್ರಕಾರದ ಕಾರ್ಯವಮಾಡಿ ನವೀನಶಾಸ್ತ್ರಸಾಹಿತ್ಯ ಸೃಷ್ಟಿಕರ್ತರೂ ಆಗಿದ್ದಾರೆ, ದಾರ್ಶನಿಕ ಸಾಹಿತ್ಯದಲ್ಲಿ ವಿಶಿಷ್ಟಸ್ಥಾನ ಸಂಪಾದಿಸಿದ್ದಾರೆ. ಈ ನಿಟ್ಟಿನಲ್ಲಿ ಇನ್ನೂ ವಿಶೇಷ ಕಾರ್ಯ ನಡೆಯಬೇಕು.

ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಜೈನಮಠದ ಹಸ್ತಪ್ರತಿಭಾಂಡಾರ

● ಬಿ. ಆರ್. ಹಿರೇಮಠ

ಶ್ರೀಮಂತ ಪರಂಪರೆಯ ಪಥದಲ್ಲಿ ನಡೆದುಬಂದ ಜೈನಮಠಗಳಲ್ಲಿ ಕರವೀರಪುರ (ಕೊಲ್ಲಾಪುರ)ದ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಜೈನಮಠಕ್ಕೆ ಅಗ್ರಸ್ಥಾನ ಸಲ್ಲುತ್ತದೆ. ಕಾಲಕಾಲಕ್ಕೆ ಸಮರ್ಥ ಶ್ರೀಗಳವರು ಆ ಭವ್ಯ ಪರಂಪರೆಯ ರಕ್ಷಣೆ ಹೊಣೆಹೊತ್ತು ಅದನ್ನು ಬೆಳೆಸುತ್ತ ಬಂದಿದ್ದು ನಿಜವಾಗಿಯೂ ನೆನೆಯಬೇಕಾದ ಸಂಗತಿ. ಸದ್ಯದ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮಿಗಳವರು ಈ ಪರಂಪರೆಯನ್ನು ಸಮರ್ಥವಾಗಿ ನಡೆಸಿಕೊಂಡು ಬರುತ್ತಲಿದ್ದಾರೆ. ಅನೇಕ ಸಂಘ-ಸಂಸ್ಥೆಗಳು. ಜೈನಮಠಗಳು ಮಾಡಬೇಕಾದ ಕಾರ್ಯವನ್ನು ಲಕ್ಷ್ಮೀಸೇನ ಭಟ್ಟಾರಕ ಜೈನಮಠ ಸಾಧಿಸಿತೋರಿಸಿದೆ. ಅಲ್ಲಿ ತುಂಬಿನಿಂತಿರುವ ಹಸ್ತಪ್ರತಿಭಾಂಡಾರವೇ ಅಂಥ ಪ್ರಮಾಣವನ್ನು ಒದಗಿಸುತ್ತಿದೆ.

ಜೈನಧರ್ಮದ 'ಶಾಸ್ತ್ರದಾನ' ಕಾರಣವಾಗಿ ಕರ್ನಾಟಕದಲ್ಲಿ ಜೈನ ಹಸ್ತಪ್ರತಿ ಭಂಡಾರಗಳು ದಿನದಿಂದ ದಿನಕ್ಕೆ ಬೆಳೆದು. ಸಾಗರ ಸದೃಶವಾದುವು. ಹತ್ತನೆಯ ಶತಮಾನದಲ್ಲಿ ಅತ್ತಿಮಬ್ಬೆ ಮಾಡಿದ ಪೊನ್ನನ 'ಶಾಂತಿಪುರಾಣ'ದ 1000 ಹಸ್ತಪ್ರತಿಗಳ ಶಾಸ್ತ್ರದಾನ ಅವಿಸ್ಮರಣೀಯವಾದುದಾಗಿದೆ. ಇಂಥ ಆದರ್ಶದ ತಪಸ್ಸಿನ ಫಲವೇ ಕೊಲ್ಲಾಪುರದ ಜೈನಮಠದ ಹಸ್ತಪ್ರತಿಭಾಂಡಾರ. ವೇಣುಪುರ. ಸಂಗೀತಪುರ. ಸೋಂದಾಪುರ. ಹನಗಂಡಿ. ಚಿಕ್ಕೋಡಿ. ತಾಡೋಲಿ. ಸವಲಿಗೆ. ಲಕ್ಷ್ಮೇಶ್ವರ. ಅಮ್ಮಿನಭಾವಿ. ಬಿದಾರೆ. ಕಾರ್ಕಳ ಮೊದಲಾದ ಗ್ರಾಮಗಳ ಜೈನಮಠೀಯರು ಈ ಭಾಂಡಾರಕ್ಕೆ ಮಾಡಿದ ಶಾಸ್ತ್ರದಾನ ಮತ್ತು ಪ್ರಾಕೃತ-ಸಂಸ್ಕೃತ-ಕನ್ನಡದಲ್ಲಿ ಅಪಾರ ಪಾಂಡಿತ್ಯ-ಪ್ರತಿಭೆ-ಪರಿಶ್ರಮ ಪಡೆದ ಜಿನಾಚಾರ್ಯರು ಕೈಕೊಂಡ ಅಸಂಖ್ಯ ಕೃತಿಗಳ ರಚನಾಕಾರ್ಯಗಳಿಂದ ಇಲ್ಲಿಯ ಹಸ್ತಪ್ರತಿ ಭಾಂಡಾರ ಹೆಮ್ಮರವಾಗಿ ಬೆಳೆಯಿತು. ವಿವಿಧ ಪ್ರದೇಶಗಳಿಂದ ಇಲ್ಲಿಗೆ ದಾನವಾಗಿ ಬಂದ ಹಸ್ತಪ್ರತಿಗಳ ಮಾರ್ಗಕ್ರಮವನ್ನು ನಕಾಶೆಯ ಮೂಲಕ ತೋರಿಸಲೂ ಸಾಧ್ಯವಿದೆ. ಇದರಿಂದ ಹಸ್ತಪ್ರತಿ ಭಾಂಡಾರದ ನಿರ್ಮಾಣಕಾರ್ಯದ ಚಿತ್ರ ಕಣ್ಮುಂದೆ ನಿಲ್ಲುವಂತಾಗುತ್ತದೆ. ಒಟ್ಟಿನಲ್ಲಿ ಹಲವು ಜನರ ಕೈಯಿಂದ ನಿರ್ಮಾಣವಾದ ಈ ಹಸ್ತಪ್ರತಿ ಭಾಂಡಾರ. ಕರ್ನಾಟಕದ ಅಪೂರ್ವ ಹಸ್ತಪ್ರತಿ ಭಾಂಡಾರಗಳಲ್ಲಿ ಒಂದಾಗಿದೆ.

ಹಸ್ತಪ್ರತಿಗಳು ಹುಳುಗಳ ಬಾಯಿಗೆ ತುತ್ತಾಗದೆ, ಅಲಕ್ಷ್ಯತನಕ್ಕೆ ಬಲಿಯಾಗದೆ ತಮ್ಮ ಮೂಲ ಸ್ವರೂಪವನ್ನು ಹೇಳುತ್ತ ನಿಂತಿವೆ. ಇಲ್ಲಿಯ ಶ್ರೀಗಳವರ ಶಾಸ್ತ್ರ ಪ್ರೇಮ ಕಾರಣವಾಗಿ ಕಟ್ಟುಗಳ ವ್ಯವಸ್ಥೆ, ಅಚ್ಚುಕಟ್ಟುತನ, ಹೊಂದಾಣಿಕೆ ಮೆಚ್ಚುವಂಥವು ಗಳಾಗಿವೆ. ಹೀಗೆ ಅನುಪಮ ಸಂಪತ್ತಿನಿಂದ ಲಕ್ಷಣವಾಗಿರುವ ಈ ಹಸ್ತಪ್ರತಿಭಂಡಾರದ ಗರ್ಭದಲ್ಲಿ ಒಟ್ಟು ೭೪೬ ಕಟ್ಟುಗಳಿವೆ (ತಾಳೆಗರಿ : ೩೫೭. ಕಾಗದ ಪ್ರತಿ : ೩೮೯).

ಇಲ್ಲಿಯ ಹಸ್ತಪ್ರತಿಗಳನ್ನು ೧. ಪದ್ಯಸಾಹಿತ್ಯ ೨. ಗದ್ಯಸಾಹಿತ್ಯ ೩. ಶಾಸ್ತ್ರ ಸಾಹಿತ್ಯ ೪. ಟೀಕಾಸಾಹಿತ್ಯ ಎಂದು ವರ್ಗೀಕರಿಸಬಹುದು.

ಪ್ರಾಚೀನ ಸಂಸ್ಕೃತ-ಕನ್ನಡ ಕೃತಿಗಳ ನಕಲು ಪ್ರತಿಗಳು (ಉದಾ : ಪೂರ್ವಪುರಾಣ (ಸಂ). ಆದಿಪುರಾಣ, ಚಾವುಂಡರಾಯ ಪುರಾಣ. ಧರ್ಮಾಮೃತ, ಯೋಗಾಮೃತ, ನೇಮಿ ಜಿನೇಶ ಸಂಗತಿ ಇತ್ಯಾದಿ): ಅನೇಕ ಹೊಸ ಕೃತಿಗಳು (ಉದಾ : ಶಾಂತಿಜಿನೇಶ್ವರ ಉದ್ಭವಿಸಿದ ಪ್ರಸಂಗ, ವಜ್ರಭಟ್ಟನ ವೀರಾವಳಿ ಇತ್ಯಾದಿ) ಕಂಡುಬಂದರೂ ಸಾಂಗತ್ಯ, ಹಾಡು ಹಾಗೂ ಸ್ತೋತ್ರ ಸಾಹಿತ್ಯಗಳದು ಸಿಂಹಪಾಲು. ಇದಲ್ಲದೆ ಈವರೆಗೆ ಅಪೂರ್ಣ ರೂಪದಲ್ಲಿ ಸಿಕ್ಕ ರತ್ನ ನಿಘಂಟು, ಹಸ್ತಿಮಲ್ಲನ ಪೂರ್ವಪುರಾಣಗಳ ಪೂರ್ಣಪ್ರತಿಗಳು ಸಿಗುವುದೊಂದು ಭಾಗ್ಯವಿಶೇಷ.

ಪದ್ಯ ಸಾಹಿತ್ಯಕ್ಕೆ ಸಮವಾಗಿ ಗದ್ಯ-ಸಾಹಿತ್ಯ ಕೃತಿಗಳೂ ಹೆಣೆದುಕೊಂಡಿವೆ. ಲೋಕಸ್ವರೂಪ, ಪರಮಾಗಮಸಾರ ಮೊದಲಾದ ಗದ್ಯ ಕೃತಿಗಳ ಜೊತೆಯಲ್ಲಿ ರತ್ನ ಕರಂಡಕದ ಕಥೆಗಳು, ಉಪಸರ್ಗಕೇವಲಿ ಕಥೆ (ವಡ್ಡಾರಾಧನೆ) ಹಾಗೂ ನೋಂಪಿ ಕಥೆಗಳು ಹಂದರದ ಬಳ್ಳಿಯಂತೆ ಹಬ್ಬಿರುವುದು ಕಂಡುಬರುತ್ತದೆ.

ಶಾಸ್ತ್ರಸಾಹಿತ್ಯವಂತೂ ಜೈನಾಚಾರ್ಯರ ಶಾಸ್ತ್ರ ತಪಸ್ಸನ್ನು ನೆನಪಿಗೆ ತರುವಂತಿದೆ. ಜೈನಶಾಸ್ತ್ರ, ವೈದ್ಯಶಾಸ್ತ್ರ. ಜ್ಯೋತಿಷ್ಯಶಾಸ್ತ್ರ, ಕೋಶಶಾಸ್ತ್ರ ಗ್ರಂಥಗಳ ರಾಶಿಯೇ ಒಟ್ಟಿ ನಿಂತಿದೆ.

ಸಂಸ್ಕೃತ ಕನ್ನಡ ಕೋಶಗಳಲ್ಲಿ ಅಮರಕೋಶ, ಚತುರಾಸ್ಯ ನಿಘಂಟು. ರತ್ನ ನಿಘಂಟು, ಕರ್ನಾಟಕ ಶಬ್ದಮಂಜರಿ, ಶಬ್ದರತ್ನಾಕರ. ಪದ್ಯನಾನಾರ್ಥ, ಕರ್ನಾಟಕ ಶಬ್ದಸಾರ, ಅಭಿನವ ನಿಘಂಟು. ಧನಂಜಯ ನಿಘಂಟು ಮುಖ್ಯವಾದವುಗಳು.

ಪ್ರಾಕೃತ, ಸಂಸ್ಕೃತ [ರಯಣಸಾರ(ಪ್ರಾ) ಗೊಮ್ಮಟಸಾರ(ಸಂ) ಸಮಯಸಾರ(ಸಂ), ಪಂಚಾಸ್ತಿಕಾಯ (ಸಂ), ರತ್ನಕರಂಡಕ ಶ್ರಾವಕಾಚಾರ (ಸಂ) ಇತ್ಯಾದಿ] ಕೃತಿಗಳಿಗೆ ಬರೆದ ಸಂಸ್ಕೃತ, ಕನ್ನಡ ಟೀಕೆಗಳು ನೋಡುವವರನ್ನು ಕಣ್ಣು ಕುಕ್ಕಿಸುವಂತಿವೆ. ಭಾಂಡಾರದಲ್ಲಿ ನೂರಾರು ಕೈಗಳು ದುಡಿದರೂ ಪೂರ್ಣವಾಗದಂತಹ ಟೀಕಾಸಾಹಿತ್ಯ ಬೆಟ್ಟದಂತೆ ಎದುರು ಒಟ್ಟಿ ನಿಂತಿದೆ.

ಇಲ್ಲಿ, ನಡೆಯಬೇಕಾದ ಮೊದಲನೆಯ ಕಾರ್ಯ, ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಪ್ರಕಟನೆ. ಎರಡನೆಯದಾಗಿ ಕೈಗೆತ್ತಿಕೊಳ್ಳಬೇಕಾದುದು ಅಪೂರ್ವವಾಗಿರುವ ರತ್ನಾಕರವರ್ಣಿಯ ಹಾಡುಗಳ, ಕಥಾಸಾಹಿತ್ಯ ಮತ್ತು ಟೀಕಾಸಾಹಿತ್ಯಗಳ ಪ್ರಕಟನ ಕಾರ್ಯ. ಇವುಗಳ ಪ್ರಕಟನೆಯಿಂದ ಅನೇಕ ಹೊಸ ಕವಿ–ಕೃತಿಗಳು ಹೊರಬಂದು. ಸಾಹಿತಿ-ಸಂಶೋಧಕರ ಅಧ್ಯಯನ ವ್ಯಾಪ್ತಿಗೆ ಹೊಸ ಆಯಾಮ ಪ್ರಾಪ್ತವಾಗುತ್ತದೆ.

● ●

ಒರೆಗಲ್ಲು

ಅಂಬಲಿ

ಸೂಪಶಾಸ್ತ್ರದಲ್ಲಿ ೩ ನೇ ಮಂಗರಸನು ಶುದ್ಧ ಅಂಬಲಿ (೩–೨೬) ಸಿಹಿಅಂಬಲಿ (೩–೩೪) ಹಾಲುಗೋದುವೆ ಅಂಬಲಿ (೩–೪೦) ಎಂದು ಮೂರು ವಿಧವಾದ ಅಂಬಲಿಯ ಪಾಕವಿಧಾನವನ್ನು ಹೇಳಿದ್ದಾನೆ. ಮೊದಲ ಎರಡನ್ನು ಅಕ್ಕಿಯಿಂದಲೂ ಮೂರನೆಯದನ್ನು ಗೋದಿಯಿಂದಲೂ ತಯಾರಿಸಿದೆ. ಮೂರನೆಯದಂತೂ ಹಾಲು ಸಕ್ಕರೆ ಪನ್ನೀರು ಕರ್ಪೂರಗಳಿಂದ ಕಂಗೊಳಿಸುತ್ತ ಶ್ರೀಮಂತ ಆಹಾರವಾಗಿದೆ. ಮೊದಲ ಎರಡರ ಪಾಕವಿಧಾನದಲ್ಲೂ ಸರಳತೆ ಇಲ್ಲ. ಒಟ್ಟಿನಲ್ಲಿ ಸೂಪಶಾಸ್ತ್ರದ ಪ್ರಕಾರ ಅಂಬಲಿ ಎಂದರೆ ಅದೊಂದು ಬಗೆಯ ಶ್ರೀಮಂತ ಅಡುಗೆ. ಆದರೆ ಅಂಬಲಿ ಸಾಮಾನ್ಯ ಮನುಷ್ಯನ ಒಂದು ಕನಿಷ್ಠ ಆಹಾರವಾಗಿತ್ತು ಎಂಬುದನ್ನು ಅನೇಕ ಸಾಹಿತ್ಯ ಕೃತಿಗಳೂ ಗಾದೆಗಳೂ ಸ್ಪಷ್ಟಪಡಿಸುತ್ತವೆ. "ಆಯ್ದಕ್ಕಿ ಮಾರಯ್ಯ ತಂದೆ ಭಕ್ತರ ಮನೆಯೊಳಾಯ್ದು ತಂದಾ ಧಾನ್ಯದಿಂದಂಬಲಿ ಮಾಡಿ" (ಶಿ. ತ. ಚಿಂ. ೩೭–೧೨೩); ಭಿನ್ನರುಚಿಯಿಂ ಸವೆದ ಭಕ್ಷ್ಯಂ ಭೋಜ್ಯಂ, ಲೇಹ್ಯ, ಪಾನಾದಿಗಳನೊಲ್ಲದೆ……ಮಾದಾರ ಚೆನ್ನಯ್ಯನಂಬರಳ ಪೆಸ್ನ (ಅಂಬರಳ = ಅಂಬಲಿ)[1] ಗುರುಲಿಂಗಕ್ಕೆ ಸಂದುದೆನೆ" (ಶಿ. ತ. ಚಿಂ ೩೭–೭೯) ಅಂಬಲಿ ಎಂದರೆ ಸಾಮಾನ್ಯ ಪ್ರಯೋಗಾರ್ಥದಲ್ಲಿ ಜನಸಾಮಾನ್ಯರ (ಬಡವರ) ಸರಳ ಆಹಾರ. ರಾಗಿ, ಜೋಳ, ಅಥವಾ ಅಕ್ಕಿಯ ಹಿಟ್ಟನ್ನು ನೀರು ಹಾಕಿ ಬೇಯಿಸಿ ಸ್ವಲ್ಪ ನೀರುನೀರಾಗಿ ಮಾಡಿಕೊಂಡು ಅದಕ್ಕೆ ಉಪ್ಪು ಸಾಧ್ಯವಾದರೆ ಮಜ್ಜಿಗೆ ಸೇರಿಸಿ ಕುಡಿಯುವುದು[2]. ಇದರಲ್ಲಿ ಯಾವ ತರಹದ ಪಾಕಕ್ಲೇಶವಾಗಲೀ ವಿಶೇಷವಾಗಲೀ

---

೧. ಅಂಬಲಿ ಎಂಬುದಕ್ಕೆ ಅಂಬಲ, ಅಂಬಿಲ, ಅಂಜಲಿ ಎಂಬ ಪ್ರಯೋಗಗಳೂ ಇವೆ. (ಕ. ನಿ. ಸಂ, ಪು. ೪೫).

೨. ಇದು ಕಿಟ್ಟೆಲ್‌ರವರು ಕೊಡುವ ವಿವರಣೆ (ಕಿ. ನಿ, ಪು. ೯೦): ಕನ್ನಡ–ಕನ್ನಡ ನಿಘಂಟು ರಾಗಿಯ ಹಿಟ್ಟು, ಜೋಳದ ಹಿಟ್ಟು, ಗೋದಿಯ ಹಿಟ್ಟು, ಅಕ್ಕಿ ಮುಂತಾದವುಗಳಿಂದ ಮಾಡಿದ ಗಂಜಿ; ಅನ್ನವನ್ನು ಬೇಯಿಸುವಾಗ ಬಸಿದ ಗಂಜಿ ಎಂದು ವಿವರಣೆ ಕೊಡುತ್ತದೆ. (ಕ. ನಿ. ೧–೪೫) ಶಿವತತ್ವಚಿಂತಾಮಣಿಯಲ್ಲಿ (೩೯–೨೮) ಭಕ್ಷ್ಯ, ಭೋಜ್ಯ, ಪೇಯ, ಲೇಹ್ಯ, ಚೋಷ್ಯ–ಎಂಬ ೫ ಹೆಸರುಗಳನ್ನು ಹೇಳಿ ಬಿಬ್ಬಲಿ (ಅಕ್ಕಿ ಗಂಜಿ)ವನ್ನು ಸೇವಿಸಿ ಷಡ್ರಸಗಳೆಂದು ಹೇಳಿದೆ. ಆದರೆ ವಾಸ್ತವವಾಗಿ ಷಡ್ರಸಗಳು (ಮಧುರ, ಆಮ್ಲ, ಕಟು, ತಿಕ್ತ, ಕಷಾಯ, ಲವಣ). ಒಟ್ಟಿನಲ್ಲಿ ಅನ್ನದ ಗಂಜಿಗೂ ವಿವಿಧ ಪಾಕಗಳ ಜೊತೆಯಲ್ಲಿ ಒಂದು ಉನ್ನತ ಸ್ಥಾನವನ್ನು ಕೊಟ್ಟಿದೆ ಎಂದು ಹೇಳಬಹುದು.

ಇಲ್ಲ. ಅಂಬಲಿ ಬಡವರ ಆಹಾರ ಎಂಬುದರಲ್ಲಿ ಉತ್ಪ್ರೇಕ್ಷೆ ಇಲ್ಲ. 'ಅಂಬಲಿ ಕುಡಿಯುವವನಿಗೆ ಮೀಸೆ ತಿಕ್ಕುವವನೊಬ್ಬ' 'ಅಂಬಲಿಗೆ ಗತಿಯಿಲ್ಲದವನಿಗೆ ಹಂಬಲಿಸುವುದು ಯಾಕೆ?' ಎಂಬ ಗಾದೆ ಮಾತುಗಳೂ; 'ಅಂಬಲಿಯನುಂಬವಗೆ ಅಮೃತಾನ್ನವೇಕೆ' (ಪ್ರ ತೀ ೨–೬೨), 'ಕ್ಷೀರವಿರಲಂಬಿಲವ ಕುಡಿವಂತೆ' (ಯಾದವ ೯–೧೫) 'ಶಿಲೆಯೊಳುಂಟೇ ಮೃದುವಜಿಸಲಂಬಿಲದೊಳುಂಟೇ ಬೆಣ್ಣೆ ಕರುಣಾ ಸುಲಭ ಹೊಲಗೇರಿಯೊಳಗುಂಟೇ ವೇದಘೋಷಣವು '(ಬಸವು ೩೦–೨೮) ಬಯಸಿದಮೃತವಿದ್ದಂತೆ ಅಂಬಿಲವನಟ್ಟಿದುಂಬ ಭ್ರಮಿತ ಮಾನವ ನೀನು ಕೇಳಾ' (ಗಣಭಾ ೭೪–೧) ಪಾಲಿರೆವಸಂ ಬಿಸುಟಂಬಿಲವನೆರೆವವನ ಬಯಸಿದಂತಾಯ್ತಲಾ' (ರಾಘಬಾ ೯–೪೪)–ಎಂಬ ಈ ಕೆಲವು ಕವಿಕಾವ್ಯ ಪ್ರಯೋಗಗಳು ಅಂಬಲಿ ಜನಸಾಮಾನ್ಯರ ಒಂದು ಅತಿಸಾಧಾರಣ ಆಹಾರ ಎಂಬುದನ್ನು ಧ್ವನಿಸುತ್ತದ. 'ಅಂಬಿಕಾಪತಿ ಚೆನ್ನಯ್ಯನ ಮನೆಯ ಅಂಬಲಿಯನ್ ಉಂಬಾಗಲ್ (ಬಸಪು. ೫೭–೫೦)–ಅಂಬಿಕಾಪತಿಯಂತಹವನು ಚೆನ್ನಯ್ಯನ ಮನೆಯ ಅಂಬಲಿಯನ್ನು ಉಂಡನು ಎಂದು ಹೇಳುವ ಸಂದರ್ಭ ಇದು. ಬಡವನ, ಸಾಮಾನ್ಯ ಮನುಷ್ಯನ ಮನೆಯಲ್ಲಿನ ಊಟ, ಅಂಬಲಿ ಎಂಬ ಭಾವನೆ ಇಲ್ಲಿದೆ. ಅಂದರೆ ಬಡವರ ಮನೆಯಲ್ಲಿ ಅಂಬಲಿಯನ್ನು ಆಹಾರವಾಗಿ ಉಪಯೋಗಿಸುತ್ತಿದ್ದರು ಎಂದು ಊಹಿಸಬಹುದು. ಇವತ್ತಿಗೂ ಬರಗಾಲದಲ್ಲಿ 'ಜನರಿಗೆ ಅಂಬಲಿ ಕಾಸಿ ಹುಯ್ಯುತ್ತಾರೆ'. ಎಂಬ ಮಾತುಗಳನ್ನು ನಾವು ಆಗಾಗ ಕೇಳುತ್ತಿರುತ್ತೇವೆ. ಆದರೆ ಪ್ರಭುಲಿಂಗಲೀಲೆಯಲ್ಲಿ ಪ್ರಭುದೇವರು ಆರೋಗಣೆ ಮಾಡಿದಾಗ ಬಡಿಸಿದ ನಾನಾವಿಧವಾದ ಭಕ್ಷ್ಯ ಭೋಜ್ಯಗಳ ಒಂದು ದೀರ್ಘ ವಿವರಣೆಯನ್ನು ನೀಡಿದ ಕವಿ 'ನೀಡುತಿರ್ದರು ಗಂಜಿಯಂಬಲಿ ತೌಡು ನುರುಗವಲಿಕ್ಕಿಗಜ್ಜನು' (ಪ್ರಲೀ ೨೩–೩೯. ನೋಡಿ ಮಿಅಪ್ರ ೧೯–೫೯) ಎಂದು ಹೇಳಿ ಗಂಜಿಯಂಬಲಿಯ ಹೆಸರನ್ನೂ ಹೇಳುವನು. ಪ್ರಭುವಿನ ಮಹಾಕ್ಷುಧಾಗ್ನಿಗೆ ಎಷ್ಟೇ ವಿಧವಾದ ಭಕ್ಷ್ಯ ಭೋಜ್ಯಗಳನ್ನು ಒದಗಿಸಿದರೂ ತಣಿಯದಿದ್ದಾಗ ಕಡೆಗೆ ಇವುಗಳನ್ನೂ ಬಡಿಸಿದರೆಂದು ಅರ್ಥಮಾಡಬಹುದು.(?) ಗಂಜಿಯಂಬಲಿ ಕೇವಲ ಜೀವ ಹಿಡಿದು ಕೊಂಡಿರುವುದಕ್ಕೇ ಹೊರತು, ಬಲಿಷ್ಠರಿಗಲ್ಲ ಎಂಬ ಭಾವನೆಯೂ ಇದೆ. "ಧುರಧೀರರ್ಗರೆ ಗಂಜಿ ಹೇಡಿಗಳಿಗಂ ಮೃಷ್ಟಾನ್ನಂ" (ಸೋ ಶ. ಪ. ೬೦)

— **ಕೆ. ಶ್ರೀಕಂಠಯ್ಯಾ,**

ವರದ ಮೂಲದ ಗುಂಡಬ್ರಹ್ಮಯ್ಯಗಳ ವಿಗ್ರಹ

ನುಡಿದ ಸತ್ಯವನ್ನು ನಡೆಯಲ್ಲಿ ಪಾಲಿಸಿ ಶಿವನಿಗಾಗಿ ಪ್ರಾಣತೆತ್ತು ಹತ್ತಾರು ಕಾವ್ಯಗಳಲ್ಲಿ ಜೀವಂತವಾಗಿ ಬದುಕಿರುವ ಗುಂಡಬ್ರಹ್ಮಯ್ಯಗಳ ಚರಿತ್ರೆಗೆ ದಟ್ಟಿನ ಆಕರವೆನಿಸಿವೆ ಶಾಸನ ಮತ್ತು ಮೂರ್ತಿಗಳು. ಗಣ ಸಹಸ್ರ ನಾಮಾವಳಿ, ಬಸವಪುರಾಣ, ಕುಮಾರ ರಾಮನ ಸಾಂಗತ್ಯಗಳು, ಗುಂಡಬ್ರಹ್ಮಯ್ಯನ ಚರಿತ್ರೆಗಳಂತೆ ಗುಂಡಬ್ರಹ್ಮಯ್ಯಗಳ



ವರದ ಮೂಲದ ಗುಂಡಬ್ರಹ್ಮಯ್ಯಗಳ ವಿಗ್ರಹ.

ಚರಿತ್ರೆಯ ಮೇಲೆ ಇಲ್ಲಿಯವರೆಗೆ ದೊರೆತ ಕೆಲವು ಅಪರೂಪದ ವಿಗ್ರಹಗಳು ಹೆಚ್ಚಿನ ಬೆಳಕನ್ನು ಬೀರಿವೆ.

ಬನವಾಸಿಯ ಮಧುಕೇಶ್ವರ ದೇವಲಾಯದ ಗುಂಡಬ್ರಹ್ಮಯ್ಯಗಳ ವಿಗ್ರಹವನ್ನು ಡಾ. ಬಿ. ಎಸ್. ಗದ್ದಗಿಮಠ,[೧] ಚಿತ್ರದುರ್ಗದ ಸಂಪಿಗೆ ಸಿದ್ಧೇಶ್ವರ ದೇವಾಲಯ,[೨] ಮತ್ತು ಈಗ ಕನ್ನಡ ಸಂಶೋಧನ ಸಂಸ್ಥೆಯಲ್ಲಿರುವ (ಹಾವೇರಿಯ ವೀರಭದ್ರ ದೇವಾಲಯದಲ್ಲಿದ್ದ) ಗುಂಡಬ್ರಹ್ಮಯ್ಯಗಳ ವಿಗ್ರಹವನ್ನು ಡಾ. ಎಮ್. ಎಮ್. ಕಲಬುರ್ಗಿಯವರು[೩] ಗುಂಡೇನಹಳ್ಳಿಯ ಗುಂಡಬ್ರಹ್ಮಯ್ಯಗಳ ವಿಗ್ರಹವನ್ನು ಡಾ. ಶಿವಾನಂದರವರು,[೪] ಡಾ. ಚಿದಾನಂದ ಮೂರ್ತಿಗಳ ಸೂಚನೆಯನ್ನು ಹಿಡಿದು ನೀತಿಗೆರೆಯ ಗುಂಡಬ್ರಹ್ಮಯ್ಯಗಳ ವಿಗ್ರಹವನ್ನು ಪ್ರೊ. ಬಿ. ಆರ್. ಹಿರೇಮಠ,[೫] ಕುಸ್ನೂರಿನ ವಿಗ್ರಹವನ್ನು ಡಾ. ಚಿದಾನಂದ ಮೂರ್ತಿಗಳು[೬] ಬಳ್ಳಾರಿಯ ಮಲ್ಲಿಕಾರ್ಜುನ ದೇವಾಲಯದ ಗುಂಡಬ್ರಹ್ಮಯ್ಯಗಳ ವಿಗ್ರಹವನ್ನು ಹನುಮಾಕ್ಷಿ ಗೋಗಿ[೭]– ಹೀಗೆ ಇಲ್ಲಿಯವರೆಗೆ ಶಿಲ್ಪರೂಪದಲ್ಲಿ ಪ್ರಕಟವಾದ ಗುಂಡಬ್ರಹ್ಮಯ್ಯಗಳ ವಿಗ್ರಹಗಳನ್ನು ಬೆಳಕಿಗೆ ತಂದಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ವರದಮೂಲ ಗ್ರಾಮಕ್ಕೆ ಸಂಬಂಧಿಸಿದ ಒಂದು ವಿಗ್ರಹ[೮] ಈ ಮಾಲಿಕೆಗೆ ಎಂಟನೆಯದಾಗಿ ಸೇರುವ ಸಂಭವವಿದೆ.

M. A. R. 1945ರ ಚಿತ್ರ ಪಟ್ಟಿಕೆಗಳನ್ನು ನೋಡುತ್ತಿದ್ದಂತೆ ಈ ವಿಗ್ರಹ ನನ್ನ ಮನಸೆಳೆಯಿತು. ಎರಡು ಶೂಲಗಳ ಎಡಬಲಗಳಲ್ಲಿ ಇಬ್ಬರು ವ್ಯಕ್ತಿಗಳ ಚಿತ್ರವಿರುವುದರಿಂದ ಇದನ್ನು ಸಂಪಾದಕರು 'ಶೂಲಬ್ರಹ್ಮ' ಎಂದು ಕರೆದಿದ್ದಾರೆ.

ಚೌಕೋನಾಕಾರದ ತಳಗಟ್ಟಿನ ಮೇಲೆ ಈ ಜೋಡು ವಿಗ್ರಹ ನಿಂತಿದೆ. ಇವರಲ್ಲಿ ಒಬ್ಬ ತನ್ನ ಬಲಗೈಯಿಂದ ಬಲದ ಶೂಲವನ್ನು, ಮತ್ತೊಬ್ಬ ತನ್ನ ಎಡದ ಕೈಯಿಂದ ಎಡದ ಶೂಲವನ್ನು ಹಿಡಿದು ನಿಂತಿದ್ದು ಬಲಭಾಗದವನ ಬಲಗಾಲು, ಎಡಭಾಗದವನ ಎಡಗಾಲು ಮಧ್ಯದ ಎರಡೂ ಶೂಲಗಳ ಕೆಳಭಾಗವನ್ನು ಮೆಟ್ಟಿ ನಿಂತಿವೆ. ಸೌಮ್ಯ ಮುಖ ಮಂಡಲ, ಕೊರಳು. ರಟ್ಟೆ, ಮುಂಗೈ, ಧರಿಸಿದ ಕೈಯ ಕಂಕಣ, ಕಡಗ, ನಡುಪಟ್ಟಿ,

---

೧ ವೀರಶೈವ ಶಿವಶರಣರು ವಿಭೂತಿ, ೧೯೬೧.

೨ ಕರ್ನಾಟಕ ಭಾರತಿ. ೬.೪. ಪು. ೧೫೬.೧೫೭.

೩ ಕರ್ನಾಟಕ ಭಾರತಿ. ೭.೨. ಪು. ೧೫೮,೧೫೯.

೪ ಗುಂಡಬ್ರಹ್ಮಯ್ಯಗಳ ಚರಿತ್ರೆ. ಪೀಠಿಕೆ ಪು. ೨೩.

೫ ಕರ್ನಾಟಕ ಭಾರತಿ. ೯.೪. ಪು. ೧೫೧.೧೫೩.

೬ ಶೂಲದ ಹಬ್ಬ. ಗ್ರಾಮೀಣ. ಪು. ೫೪.೭೨.

೭ ಕರ್ನಾಟಕ ಭಾರತಿ. ೧೦.೪. ಪು. ೧೭೦.೧೭೧.

೮ M.A.R. 1945 ಸಾಗರ ತಾ. Plate IV ವರದಮೂಲಗ್ರಾಮ.

ಕಾಲ್ಪೆಂಡೆ, ಕೇಶಾಲಂಕಾರಗಳ ವಿಶೇಷತೆ, ಎದ್ದು ಕಾಣುತ್ತದೆ. ಇವುಗಳನ್ನು 'ಗುಂಡ ಬ್ರಹ್ಮಯ್ಯಗಳ ವಿಗ್ರಹ'ವೆಂದು ಕರೆಯಲು ಮನಸ್ಸಾಗುತ್ತದೆ. ಕೈಯಲ್ಲಿ ಲಿಂಗವಿಲ್ಲದು ದೊಂದು ಆತಂಕವನ್ನೊಡ್ಡಬಹುದಾದರೂ ಬನವಾಸಿಯ ಗುಂಡಬ್ರಹ್ಮಯ್ಯ ವಿಗ್ರಹಗಳ ಕೈಯಲ್ಲಿಯೂ ಲಿಂಗವಿಲ್ಲವೆಂಬುದನ್ನು ಆಧಾರವಾಗಿಟ್ಟುಕೊಳ್ಳಬಹುದಾಗಿದೆ.

ಶಿಲ್ಪಕಲೆಯ ದೃಷ್ಟಿಯಿಂದ ಈ ವಿಗ್ರಹವನ್ನು ಪರಿಶೀಲಿಸಿದಾಗ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ, ಗುಂಡೇನಹಳ್ಳಿ, ಕುಸ್ನೂರು ಮತ್ತು ಬಳ್ಳಾರಿ ಗುಂಡಬ್ರಹ್ಮಯ್ಯಗಳ ವಿಗ್ರಹ ಒಂದು ವರ್ಗಕ್ಕೆ ಸೇರಿದರೆ, ಬನವಾಸಿ ವಿಗ್ರಹ ಮತ್ತೊಂದು ವರ್ಗಕ್ಕೆ ಸೇರುತ್ತದೆ. ಒಂದೇ ಹೋಲಿಕೆಯುಳ್ಳ ಚಿತ್ರದುರ್ಗ, ನೀತಿಗೆರೆಯ ಗುಂಡಬ್ರಹ್ಮಯ್ಯಗಳ ವಿಗ್ರಹಗಳನ್ನು ಹೋಲುತ್ತದೆ ಈ ವರದ ಮೂಲದ ವಿಗ್ರಹ. ಒಟ್ಟಿನಲ್ಲಿ ಇದನ್ನು ಗುಂಡ ಬ್ರಹ್ಮಯ್ಯಗಳ ಲನೆಯ ವಿಗ್ರಹವೆಂದು ಹೇಳಬಹುದಾಗಿದೆ.

—ಚೆನ್ನಕ್ಕ ಎಲಿಗಾರ

ಗ್ರಂಥಾವಲೋಕನ

(ಕಮಿಟೆಡ್ ಕವಿತೆಗಳು) ಬಿ. ಎಂ. ರಮೇಶ್ ಪುಟ: ೩೨ ಬೆಲೆ: ೪ ರೂ. ಪರಿಸರ ಸಾಹಿತ್ಯ: ಗುಲ್ಬರ್ಗಾ

ಬಿ. ಎಂ. ರಮೇಶ್ ಅವರ 'ಕಮಿಟೆಡ್ ಕವಿತೆಗಳು' ಸಂಗ್ರಹದಲ್ಲಿ ಅರಿಕೆಯಿಂದ–ಪೀಠಿಕೆಯವರೆಗೆ ಹದಿನೆಂಟು ಕವಿತೆಗಳಿದ್ದು–ಪರ್ವಗೀತೆ, ಕನಸುಗಳು, ನೆನಪು, ಧ್ಯಾನ–ಮುಂತಾದ ಪದ್ಯಗಳಲ್ಲಿ ಮನಸ್ಸಿಗೆ ಹಿಡಿಸಿದ ಭಾವ ಪದ್ಯರೂಪವನ್ನು ಪಡೆಯುವುದರಲ್ಲಿದ್ದು–

ಇದ್ದಷ್ಟು ಕಾಲ ಕೊಠಡಿಯ ಏಕಾಕಿತನದಲ್ಲಿ
ಅಂಗತ್ತಲಾಗಿ, ಬೋರಲಾಗಿ, ಮಗ್ಗುಲಾಗಿ
ಹೇಗೆಂದರೆ ಹಾಸಿ ಹೊರಳಿ ತುಯ್ಯಬೇಕೆಂದರೆ
ಸುತ್ತು ಮುತ್ತು ಭಯ ಬಾಂಬು ದಾಳಿ
ಯ ನೆಟ್ಟಿರುಳು

ಇಂಥ ಅಭಿವ್ಯಕ್ತಿ ಕವಿ ಬೆಳೆಯುವ ಸೂಚನೆಯನ್ನು ಕೊಡುವಂತಿದೆ, ಆದರೆ ಅನುಭವದ ಮೊತ್ತ ಕಡಿಮೆಯೆನ್ನಿಸಿ 'ತೆಕ್ಕೆಗೊಗ್ಗದ ಗಾಳಿಯಲ್ಲಿ' ಸಿಕ್ಕು ಪದ್ಯಗಳು ಗಟ್ಟಿಯಾಗುವುದಿಲ್ಲವೆನ್ನಿಸುತ್ತದೆ.

ಕಮಿಟೆಡ್ ಕವಿತೆಗಳ ರಮೇಶ್ ಒಂದು ವಿಶಿಷ್ಟ ಧೋರಣೆಗೆ ಪಕ್ಕಾಗದೆ ತನ್ನ ಪದ್ಯಗಳ ಬಗ್ಗೆ ತಾನೇ ಹೇಳಿಕೊಳ್ಳುವ ಧ್ವನಿ ಉದ್ಭವಾಗುವುದರಿಂದ ಕಾವ್ಯದ ಶಿಲ್ಪ ಸಡಿಲುಗೊಳ್ಳುತ್ತ ಹೋಗುವುದು. ಒಳ್ಳೆಯ ಪದ್ಯಗಳನ್ನು ಬರೆಯುವ ಮನಸ್ಸು, ಎಚ್ಚರ ಇದ್ದರೂ 'ಆರ್ಥಿಕ ನೀತಿಗೊಂದು ಹೊಸ ತಿರುವು'ದಂಥ ಪದ್ಯ ಶಬ್ದಾರ್ಥಗಳ ಕಾಲನಿಯಾಗಿ ಬಿಡುತ್ತದೆ.

ಕ್ವಾಲಿಟಿ ಕ್ವಾಂಟಿಟಿಗನುಗುಣ। ಮುತ್ತಿನ ಚಲಾವಣೆ ತಂದರೆ। ಎಷ್ಟು ಅನುಕೂಲ ಮಾತು ಮೊನಚನ್ನು ಪಡೆಯದೆ ಸಾಮಾನ್ಯ ಮಾತುಗಳಾಗಿ ಅಭಿರುಚಿಯನ್ನು ತಗ್ಗಿಸುತ್ತವೆ.

‘ನನ್ನ ರಕ್ತವನ್ನೇ ಹೀರಿ ಹೀರಿ ಹಿಪ್ಪಿಯಾಗಿದ್ದೇನೆ’ ಕನಸುಗಳ ಅಗ್ಗಿಷ್ಟಿಕೆಯಿಂದ ಹೊರಬಂದಲ್ಲಿ ಇವರ ಕಾವ್ಯ ರಕ್ತಮಾಂಸ ಪಡೆದೀತೆಂಬ ಸೂಚನೆಗಳು ಈ ಪುಟ್ಟ ಸಂಕಲನದಲ್ಲಿವೆ.

‘ಧಾರವಾಡದ ಸಂಜೆ ದೃಶ್ಯ’-ಎನ್ನುವ ಪದ್ಯ ಓದಿದರೆ ಅಂಥ ಯಾವ ಅನುಭವವೂ ಆಗುವುದಿಲ್ಲ.’ ಜ, ಮತ್ತು ಬವಣೆ’ಯಂಥ ಪದ್ಯಗಳಲ್ಲಿ ಸಮೆಕಲು ಸಾಮಗ್ರಿ ಇರುವುದನ್ನು ನೋಡಬಹುದು. ‘ಚುನಾವಣೆ ಮತ್ತು ಪ್ರಜಾಪ್ರಭುತ್ವ’ದಂಥ ಪದ್ಯ ಭರವಸೆಯನ್ನು ಹುಟ್ಟಿಸಿದರೂ ಭಾಷೆ ಹಾಗೂ ಅಭಿವ್ಯಕ್ತಿ ಶಕ್ತಿಯುತವಾಗದಿರುವುದರಿಂದ ನಿರಾಶೆಯನ್ನು ಹುಟ್ಟಿಸುತ್ತದೆ. ‘ಅಮೂರ್ತಕ್ಕೆ ಮೂರ್ತರೂಪ’ ಕೊಡುವ ಕಷ್ಟವನ್ನು ರಮೇಶ್ ಅನುಭವಿಸಿದರೆ ‘ಕವನಗಳು ಶಬ್ದಗಳ ಕಾಲಸಿ’ ಯಲ್ಲವೆನ್ನುವುದು ಅನುಭವಕ್ಕೆ ಬಂದೀತು.

— **ಬುದ್ದಣ್ಣ ಹಿಂಗಮಿರೆ**

● ●

ಸಂಪಾದಕೀಯ

ಹಂಪನಾ ಹಿಡಿದ ಚುಕ್ಕಾಣಿ

ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕದ ರಾಜಧಾನಿಯಲ್ಲಿದ್ದು ಕನ್ನಡ ನುಡಿ, ಸಾಹಿತ್ಯಗಳ ಅಭಿವೃದ್ಧಿಯ ಚಟುವಟಿಕೆಗಳನ್ನು ಸಂಘಟಿಸಿ, ಸಂಯೋಜಿಸುವ ಕೇಂದ್ರ ಸಂಸ್ಥೆ. ಅದರ ಕಾರ್ಯಕ್ರಮಗಳೂ, ಸಾಧನೆಗಳೂ ವಿಸ್ತಾರವನ್ನು ಬೆಳಸಿಕೊಂಡರೂ ಆಳ, ಮೌಲ್ಯಗಳಲ್ಲಿ ಅಲ್ಪವೇ ಎಂದೂ ಆ ಕಾರಣದಿಂದಲೇ ನ್ಯಾಯವಾಗಿ ಸೃಜನಶೀಲ ಬುದ್ಧಿ ಜೀವಿಗಳಿಗೆ ಹತ್ತಿರವಾಗಬೇಕಿದ್ದ ಅದು ದೂರವಾಗಿದೆಯೆಂದೂ ದೂರು ಇತ್ತು. ಆದ್ದರಿಂದ ಅದರ ಸಾಧನೆಯ ದಿಕ್ಕು, ದೃಢತೆಗಳನ್ನು ಬದಲಿಸಲು ಹೊಸ ಕರ್ಣಧಾರತ್ವ ಬೇಕೆಂಬ ಬಯಕೆಯೂ ವ್ಯಕ್ತವಾಗುತ್ತಿತ್ತು. ಇಂಥ ಸನ್ನಿವೇಶದಲ್ಲಿ ಸರ್ವಾನುಮತದಿಂದ ಆಯ್ಕೆಯಾಗಿ ಪ್ರೊ. ಹಂ. ಪ. ನಾಗರಾಜಯ್ಯ ಅವರು ಇದೇ ಜುಲೈ ೨೩ ರಿಂದ ಪರಿಷತ್ತಿನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. 'ಹಂಪನಾ' ಎಂಬ ಕಾವ್ಯನಾಮದಿಂದಲೇ ಪ್ರಸಿದ್ಧರಾದ ಅವರು ಗಣ್ಯ ಸಾಹಿತಿ ಹಾಗೂ ವಾಗ್ಮಿಗಳು. ಸದ್ಯ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಅಧ್ಯಾಪಕರಾಗಿದ್ದಾರೆ. ೩೦ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿರುವ ಅವರು ಸಂಶೋಧನಾತ್ಮಕ ಪ್ರಬಂಧ, ಗ್ರಂಥ ಸಂಪಾದನ ಹಾಗೂ ಕಾದಂಬರೀ ಲೇಖನ ಹೀಗೆ ವೈವಿಧ್ಯಪೂರ್ಣ ಬರಹಗಳನ್ನು ಸಾಧಿಸಿದವರು. ಅವರ 'ದ್ರಾವಿಡ ಭಾಷಾವಿಜ್ಞಾನ'ಕ್ಕೆ ರಾಜ್ಯಸಾಹಿತ್ಯ ಅಕಾಡೆಮಿಯ ಪುರಸ್ಕಾರ ಲಭಿಸಿದೆ. ಪರಿಷತ್ತಿನ ೧೫ನೇ ಅಧ್ಯಕ್ಷರಾಗಿ ಅಧಿಕಾರಕ್ಕೆ ಬಂದಿರುವ ಅವರು ಇದುವರೆಗೂ ಆ ಸ್ಥಾನವನ್ನಲಂಕರಿಸಿರುವವರಲ್ಲೇ ಅತಿ ಕಿರಿಯರು. ತರುಣರಾದ ಅವರು ಪರಿಷತ್ತಿನೊಡನೆ ಹತ್ತಿಪ್ಪತ್ತು ವರ್ಷಗಳ ನಿಕಟಸಂಪರ್ಕದಲ್ಲಿದ್ದು ಉತ್ಸಾಹದಿಂದ ದುಡಿದ ಕ್ರಿಯಾಶೀಲ ವ್ಯಕ್ತಿ. ಹೀಗೆ ಅದರ ಅಂತರಂಗವನ್ನು ಬಲ್ಲ ಅವರ ಕೈಯಲ್ಲಿ ಚುಕ್ಕಾಣಿ ಸೇರಿದ್ದರಿಂದ ಪ್ರಗತಿಪರ ಮನೋಧರ್ಮದ ಹಾಗೂ ದಕ್ಷ ಸಂಘಟನಕಾರರೆನಿಸಿಕೊಂಡಿರುವ ಅವರಿಂದ ಪರಿಷತ್ತಿನ ಚಟುವಟಿಕೆಗಳಿಗೆ ಹೊಸರೂಪ, ಹೊಸ ತಿರುವು ದೊರಕೀತೆಂದು ಕನ್ನಡ ಸಾಹಿತ್ಯದ ಅಭಿವೃದ್ಧಿಯಲ್ಲಿ ಆಸ್ಥೆಯುಳ್ಳವರೆಲ್ಲರೂ ಅಪೇಕ್ಷಿಸುವುದು ಸಹಜವಾಗಿದೆ.

ಡಾ. ಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ

ಕನ್ನಡದ ಖ್ಯಾತ ಸಾಹಿತಿ, ಕಾದಂಬರಿಕಾರ ಡಾ. ಶಿವರಾಮ ಕಾರಂತರಿಗೆ ಈ ವರುಷದ ಜ್ಞಾನಪೀಠ ಪ್ರಶಸ್ತಿ ದೊರೆತಿದ್ದು ಇಡಿಯ ಕರ್ನಾಟಕಕ್ಕೇ ಸಂತೋಷ ಮತ್ತು

ಹೆಮ್ಮೆಯ ವಿಷಯ. ಸಾಹಿತ್ಯ, ಕಲೆ, ವಿಜ್ಞಾನ ಕ್ಷೇತ್ರಗಳಲ್ಲಿ ಡಾ. ಕಾರಂತರು ಮಾಡಿದ ಕೆಲಸ, ಪಡೆದ ಸಾಧನೆಗಳನ್ನು ಗಮನಿಸಿದರೆ ಈ ಪ್ರಶಸ್ತಿಯೂ ಅವರಿಗೆ ಬಹಳ ದೊಡ್ಡ ದಲ್ಲ .ಲೋಕವನ್ನೇ ಬೆರಗುಗೊಳಿಸುವ ಅವರ ವ್ಯಕ್ತಿತ್ವದಿಂದಾಗಿ ಅನೇಕ ಸಂಸ್ಥೆಗಳೂ ಹವಣಿಸಲು ಹಿಂಜರಿಯುವ ಪರಿಶ್ರಮಸಾಧ್ಯವಾದ ಕೆಲಸವನ್ನು ಒಬ್ಬರೇ ಸಾಧಿಸಿ ತೋರಿಸಿದ್ದಾರೆ. ಯೋಗ್ಯತೆ ಪ್ರಶಸ್ತಿಯನ್ನು ಹುಡುಕಿಕೊಂಡು ಹೋಗದೆ ಪ್ರಶಸ್ತಿಯೇ ಯೋಗ್ಯತೆಯನ್ನು ಅರಸಿಕೊಂಡು ಬಂದ ನಿದರ್ಶನಗಳಲ್ಲಿ ಇದು ಒಂದು. ಭಾರತದ ಸಾಹಿತ್ಯಕ್ಷೇತ್ರದ , ಸರ್ವೋಚ್ಚ ಮನ್ನಣೆಯಾದ ಜ್ಞಾನಪೀಠದ ಗೌರವ ಈ ಮಹಾ ಸಾಹಿತಿಯ "ಮೂಕಜ್ಜಿಯ ಕನಸುಗಳು" ಕಾದಂಬರಿಗೆ ಲಭ್ಯವಾಗಿದೆ. ಇದು ಜ್ಞಾನ ಪೀಠದ ಹದಿಮೂರನೆಯ ಪ್ರಶಸ್ತಿ. ಈ ಹಿಂದೆ ಕನ್ನಡದ ಹಿರಿಯ ಕವಿಗಳಾದ ಕುವೆಂಪು ಅವರ "ರಾಮಾಯಣ ದರ್ಶನಂ" ಹಾಗೂ ದ. ರಾ. ಬೇಂದ್ರೆ ಅವರ "ನಾಲ್ಕು ತಂತಿ" ಕೃತಿಗಳಿಗೆ ಈ ಪ್ರಶಸ್ತಿ ದೊರಕಿದ್ದರೂ ಅವು ಇತರರೊಡನೆ ಪಾಲುಗೊಂಡು ಬಂದವು. ಈಗ ಅದನ್ನು ಇಡಿಯಾಗಿ ಪಡೆಯುವ ಭಾಗ್ಯ ಡಾ. ಕಾರಂತರಿಗೆ ಬಂದುದಕ್ಕೆ 'ಭಾರತಿ' ಅವರಿಗೆ ಅಭಿವಂದನೆಗಳನ್ನು ಅರ್ಪಿಸುತ್ತದೆ.

ಡಾ. ಕಲಬುರ್ಗಿಯವರ ಸೇವೆಯ ನೆನಕೆ

ನವ್ಹೆಂಬರ ೧೯೬೮, ರಾಜ್ಯೋದಯ ದಿನದಂದು ಅಯನ ಪತ್ರಿಕೆಯಾಗಿ ಪ್ರಕಟವಾದ ಈ 'ಕರ್ನಾಟಕ ಭಾರತಿ' ಎರಡೇ ವರುಷಗಳಲ್ಲಿ ತ್ರೈಮಾಸಿಕವಾಗಿ ಪರಿವರ್ತಿತವಾಗಿ ಇಂದಿಗೆ ಹತ್ತುವರ್ಷಗಳ ಪೂರ್ತಿ ಸೇವೆಯನ್ನು ಸಲ್ಲಿಸಿದೆಯಷ್ಟೇ ? ಈ ಅವಧಿಯಲ್ಲಿ ಬಾಹ್ಯದ ಅಂದದಲ್ಲಿ ಹೇಗೋ ಹಾಗೆ ಅಂತರಂಗದ ವಿಷಯ ವೈವಿಧ್ಯವನ್ನೂ, ಮಟ್ಟವನ್ನೂ ಕೂಡ ಅದು ಹೆಚ್ಚಿಸಿಕೊಂಡಿದ್ದು ಎಲ್ಲರಿಗೂ ವಿದಿತ. ಈ ಬಗೆಯಾಗಿ ಅದನ್ನು ರೂಪಿಸಲು ಶ್ರಮಿಸಿದವರಲ್ಲಿ 'ಭಾರತಿ'ಯ ೪ನೇ ಸಂಚಿಕೆ ಅಗಸ್ಟ ೧೯೭೧ರಿಂದ ಏಳು ವರ್ಷಗಳ ಕಾಲ ಸಹಾಯಕ ಸಂಪಾದಕರಾಗಿದ್ದ ಡಾ. ಎಂ. ಎಂ. ಕಲಬುರ್ಗಿಯವರ ಸೇವೆ ಹಿರಿದಾಗಿದೆ. ಸ್ವತಃ ವಿದ್ವತ್‌ಪ್ರೇಮಿಗಳೂ, ಸಂಶೋಧಕರೂ ಆಗಿರುವ ಅವರು ವಿಶ್ವವಿದ್ಯಾಲಯ ಮಟ್ಟದ ಪತ್ರಿಕೆಯು ಕಾಮಕೊಳ್ಳಬೇಕಾದ ಮಟ್ಟದ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿದ್ದರು. ಪತ್ರಿಕೆಗೆ ಬರುತ್ತಿದ್ದ ಲೇಖನಗಳನ್ನು ಬಹು ಪರಿಶ್ರಮ ಪೂರ್ವಕವಾಗಿ ಪರಿಶೀಲಿಸುತ್ತಿದ್ದರು. ಹೀಗಾಗಿ 'ಕರ್ನಾಟಕ ಭಾರತಿ'ಯ ಖ್ಯಾತಿಯಲ್ಲಿ ಅವರಿಗೆ ಸಲ್ಲಬೇಕಾದ ಪಾಲು ಅಗಣ್ಯವಲ್ಲ. ಅಂತೆಯೇ ವೈಯಕ್ತಿಕ ಕಾರಣಗಳಿಗಾಗಿ ೧೭-೭-೧೯೭೮ ರಿಂದ ಈ ಹೊಣೆಯಿಂದ ಬಿಡುಗಡೆ ಪಡೆದಿರುವ ಅವರ ಹಿರಿದಾದ ಸೇವೆಯನ್ನು ಪ್ರಕೃತ ಸಂಪಾದಕ ಮಂಡಲಿಯು ಕೃತಜ್ಞತೆಯಿಂದ ನೆನಸಿದೆ.

ಸಾದರ ಸ್ವೀಕಾರ

೧. **ಪ್ರಾಚೀನ ಭಾರತೀಯ ನಾಟಕ (ವಿಮರ್ಶೆ)**
ಮೂಲ : ಎಚ್. ಡಬ್ಲ್ಯು. ವೆಲ್ಸ್ ಅನು : ಎಚ್. ಎಚ್, ಅಣ್ಣಯ್ಯಗೌಡ.
ಪ್ರ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೮
ಪುಟ : ೨೧೭, ಬೆಲೆ : ರೂ. ೯–೦೦.

೨. **ಶರತ್ ಚಂದ್ರ (ಪ್ರಬಂಧ ಸಂಗ್ರಹಗಳು)**
ಪ್ರ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೮
ಪುಟ : ೮೦, ಬೆಲೆ : ರೂ. ೩–೫೦.

೩. **ಸೌಂದರ್ಯ ಪ್ರಜ್ಞೆಯನ್ನು ಬೆಳೆಯಿಸಲು (ಉಪನ್ಯಾಸಗಳು)**
ಡಾ. ಕೆ. ಶಿವರಾಮ ಕಾರಂತ, ಪ್ರ : ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೭೮
ಪುಟ : ೪೫, ಬೆಲೆ : ರೂ. ೫–೦೦.

೪. **ಬ್ರೆಕ್ಟ್ (ವಿಮರ್ಶೆ)**
ಎಚ್. ಕೆ. ರಾಮಚಂದ್ರಮೂರ್ತಿ, ಗೃಹ ಸರಸ್ವತೀ ಗ್ರಂಥಮಾಲೆ,
ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೭೮,
ಪುಟ : ೧೫೯+೪, ಬೆಲೆ : ರೂ. ೫–೦೦.

೫. **ವಿದೇಶಗಳಲ್ಲಿ ಗಣಪತಿ (ಸಮೀಕ್ಷೆ)**
ಎಚ್. ಆರ್. ರಘುನಾಥ ಭಟ್
ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೭೮
ಪುಟ : ೧೦೦, ಬೆಲೆ : ೨೫ ಪೈಸೆ.

ಪತ್ರಿಕೆಗಳು

೧. ಪರಂಜ್ಯೋತಿ
೨. ಜೀವನವಿಕಾಸ
೩. ಹೊಸಹುಟ್ಟು

ಈ ಸಂಚಿಕೆಯ ಲೇಖಕರು

೧. **ಶ್ರೀ ದೇವೇಂದ್ರಕುಮಾರ ಹಕಾರಿ :**
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ.

೨. **ಶ್ರೀ ಎಸ್. ಕೆ. ಕೊಪ್ಪಾ :**
ಸಂಶೋಧನಾಧ್ಯಾಪಕರು, ಇತಿಹಾಸ ವಿಭಾಗ, ಕ. ವಿ. ವಿ. ಧಾರವಾಡ.

೩. **ಪಂ|| ಷಣ್ಮುಖಯ್ಯ ಅಕ್ಕೂರಮಠ :**
ಅಧ್ಯಾಪಕರು, ಜಿ. ರೇಣುಕಾಚಾರ್ಯ ಕಾಲೇಜ್, ಬೆಂಗಳೂರು-೯.

೪. **ಡಾ. ವಿಲ್ಯಂ ಮಾಡ್ತ :**
ಪ್ರವಾಚಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೫. **ಶ್ರೀ ಎಚ್. ಎಸ್. ಸಿದ್ದಗಂಗಪ್ಪ :**
ಸಂಚಾಲಕ, ಜಾನಪದವಿಭಾಗ, ಕ. ಸಾ. ಪರಿಷತ್ತು, ಚಾಮರಾಜಪೇಟೆ,
ಬೆಂಗಳೂರು-೫೬೦೦೧೮.

೬. **ಶ್ರೀ ಎಸ್. ಪಿ. ಪಾಟೀಲ :**
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೭. **ಶ್ರೀ ಡಾ. ಎಂ. ಎಸ್. ಲಠ್ಠೆ :**
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೮. **ಡಾ. ಅ. ಸುಂದರ :**
ಪ್ರವಾಚಕರು, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ,
ಕ. ವಿ. ವಿ. ಧಾರವಾಡ.

೯. **ಶ್ರೀ ಹರಿನಾರಾಯಣ ಮಾಡಾವು (ಎಂ. ಹರಿನಾರಾಯಣ ಭಟ್) :**
ಉಪನ್ಯಾಸಕರು, ಸೈಂಟ್ ಫಿಲೋಮಿನಾ ಕಾಲೇಜು, ದರ್ಬೆ, ಪುತ್ತೂರು (ದ.ಕ.)

೧೦. **ಡಾ. ವಿ. ಶಿವಾನಂದ :**
ಸಂಶೋಧಕ ಫೆಲೊ, ಕನ್ನಡ ವಿಭಾಗ, ಮದ್ರಾಸ ವಿಶ್ವವಿದ್ಯಾಲಯ, ಮದ್ರಾಸ.

೧೧. **ಡಾ. ನಿಜಲಿಂಗಮ್ಮ ಕೊಪ್ಪಳ :**
ಸಂಶೋಧನಾಧ್ಯಾಪಕಿ, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೧೨. **ಡಾ. ಗುರುಲಿಂಗ ಕಾಪಸೆ :**
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೧೩. **ಡಾ. ವಿ. ಎಸ್. ಕಂಬಿ :**
ಸಂಶೋಧನಾಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೧೪. **ಡಾ. ಕೆ. ಶ್ರೀಕಂಠಯ್ಯ :**
ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲು, ಬೆಂಗಳೂರು.

೧೫. **ಕು. ಚನ್ನಕ್ಕ ಎಲಿಗಾರ :**
ಕನ್ನಡ ಅಧ್ಯಾಪಕಿ, ಮೃತ್ಯುಂಜಯ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ.

೧೬. **ಶ್ರೀ ಬಿ ಆರ್. ಹಿರೇಮಠ :**
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೧೭. **ಡಾ. ಬಿ. ಬಿ. ಹಿಂಗಮಿರೆ :**
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.